ಉಕ್ರೈನಿನ
ಜಾನಪದ
ಕಥೆಗಳು

NAVAKARNATAKA
60.00

ಉಕ್ರೈನಿನ ಜಾನಪದ ಕಥೆಗಳು

ರಾದುಗ ಪ್ರಕಾಶನ
ಮಾಸ್ಕೋ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ.
ಬೆಂಗಳೂರು

ಸಂಕಲನಕರ್ತ: ವಿ. ಬೊಯ್ಕೊ, ಡಿ. ಎಸ್‌ಸಿ. (ಭಾಷಾಶಾಸ್ತ್ರ)
ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್
ಚಿತ್ರಕಾರ: ವಿ. ಗೊರ್ದಿಯಯ್‌ಚೂಕ್

УКРАИНСКИЕ НАРОДНЫЕ СКАЗКИ

на языке каннада

UKRAINIAN FOLK TALES

in Kannada

© ಕನ್ನಡ ಅನುವಾದ, ರಾದುಗ ಪ್ರಕಾಶನ 1988

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

ISBN 5-05-001861-7

ಪರಿವಿಡಿ

ಮುನ್ನುಡಿ 7
ಮೋಸದ ಮೇಕೆ 11
ಮಾಂತ್ರಿಕ ಕೈಗವಸು 19
ನರಿಯಕ್ಕ ಹಾಗೂ ತೋಳಣ್ಣ 23
ಡಾಂಬರು ಬೆನ್ನಿನ ಹುಲ್ಲಿನ ಹೋರಿ 31
ಬೆಕ್ಕು ಹಾಗೂ ಹುಂಜ 36
ಮಾರ್ಜಾಲ ಮಹಾಶಯ 41
ಹೋತ ಹಾಗೂ ಟಗರು 46
ತಂತ್ರಗಾರ ನರಿ 51
ಸೇರ್ಕೋ 59
ಬಾವಿಗೆ ಬಿದ್ದ ಮೃಗರಾಜ 64
ಹಂಸ, ಮುಳ್ಳುನಳ್ಳಿ ಹಾಗೂ ಪೈಕ್ ಮೀನು 71
ಸಿಂಹದ ಆಡಳಿತ 75
ತೆಲೇಸಿಕ್ 91
ಮಾಂತ್ರಿಕ ಮೊಟ್ಟೆ 102
ಕುರುಬ ಹುಡುಗ 118
ಚರ್ಮ ಹದಮಾಡುವ ಕಿರೀಲ್ 123

ಓಹ್ 129
ಉರುಳುಕಾಳು 143
ವಿಜಯಿಾ ಇವಾನ್ 162
ಹಾರುವ ಹಡಗು 169
ರೈತನ ಮಗ ಇವಾನ್ 183
ಲಿಂಡನ್ ಮರ ಹಾಗೂ ದುರಾಶೆಯ ಮುದುಕಿ 204
ಮುದುಕನ ಮಗಳು ಹಾಗೂ ಮುದುಕಿಯ ಮಗಳು 208
ಸಾಕು ತಂದೆ 222
ಬುದ್ಧಿವಂತ ಹುಡುಗಿ 229
ಸತ್ಯ ಹಾಗೂ ಅಸತ್ಯ 237

ಮುನ್ನುಡಿ

ಜಾನಪದ ಕಥೆಗಳು ತುಂಬ ಪೂರ್ವ ಕಾಲದಿಂದ ನಮಗೆ ಬಂದಂಥವುಗಳು. ಪೀಳಿಗೆಯಿಂದ ಪೀಳಿಗೆಗೆ ಬಾಯಿಮಾತಿನ ಮೂಲಕ ಹೇಳಿಕೊಂಡು ಬರಲಾದ ಈ ಕಾವ್ಯಮಯ ಕಥೆಗಳು ನಮ್ಮ ಮುಂದೆ ಅದ್ಭುತ ವೀರರುಗಳಿಂದ ಕೂಡಿದ ಒಂದು ಮಾಂತ್ರಿಕ ಜಗತ್ತನ್ನು ತೆರೆದಿರಿಸುತ್ತವೆ. ಇವುಗಳಲ್ಲಿ ಮಿರುಗುವ ಹಾಸ್ಯ, ಸಮಯ ಸ್ಫೂರ್ತಿ, ಬುದ್ಧಿವಂತಿಕೆ, ಜಾನಪದ ವಿವೇಕಜ್ಞಾನ ತುಂಬಿ ತುಳುಕುತ್ತಿರುತ್ತವೆ. ಇವುಗಳನ್ನು ಬಾಯಿಂದ ಬಾಯಿಗೆ ಹೇಳಿಕೊಂಡು ಬರಲಾಗುತ್ತಿದ್ದುದರಿಂದಲೇ ಇವಕ್ಕೆ ರಷ್ಯನ್ ಭಾಷೆಯಲ್ಲಿ "ಸ್ಕಾಸ್ಕಿ" (ಹೇಳಿಕೊಂಡು ಬರಲಾದಂಥವುಗಳು) ಎಂಬ ಹೆಸರು ಬಂದಿದೆ...

ಉಕ್ರೈನಿನಲ್ಲಿ ಜಾನಪದ ಕಥೆಗಳು ಅಪಾರ ಸಂಖ್ಯೆಯಲ್ಲಿವೆ. ಅವುಗಳಲ್ಲಿನ ವೀರರುಗಳೂ ಘಟನೆಗಳೂ ಅತ್ಯಂತ ಪುರಾತನ ಕಾಲಕ್ಕೆ ಹಾಗೂ ಸಮೀಪ ಗತಕಾಲಕ್ಕೆ ಸೇರಿದವುಗಳು. ಇವುಗಳ ವೀರರು ಸಾಮಾನ್ಯ ಜನರ ಮಧ್ಯದಿಂದ ಬಂದವರು. ಈ ವೀರರ ಹಾಗೂ ಕಥೆಗಳಲ್ಲಿ ಬರುವ ಪ್ರಾಣಿ ಪಕ್ಷಿಗಳ ವಿಸ್ಮಯಗೊಳಿಸುವ ಸಾಹಸಕೃತ್ಯಗಳನ್ನು ಓದುಗರು ಇಷ್ಟಪಡುವರೆಂದು ನಾವು ನಂಬಿದ್ದೇವೆ. ಮಾಂತ್ರಿಕ ಕೈಗವಸು, ಹಾರುವ ಹಡಗು, "ಬೆಂಕಿಯನ್ನು ತಿನ್ನುವ, ಉರಿಯನ್ನು ಕುಡಿಯುವ" ದೈತ್ಯಾಕಾರದ ಕುದುರೆ, ಇವುಗಳಂಥ ಅದ್ಭುತ ಕಲ್ಪನೆಯ ಕಾವ್ಯಮಯ ಪಾತ್ರಗಳನ್ನು ಓದುಗ ಚಿರಕಾಲ ನೆನಪಿನಲ್ಲಿಟ್ಟಿರುತ್ತಾನೆ.

ಜಾನಪದ ಕಥೆಗಳು ಪುಟ್ಟ ಮಗುವಿಗೆ ಪ್ರಕೃತಿಯ ಬಗೆಗೆ. ಸಾಕು ಪ್ರಾಣಿಗಳ ಬಗೆಗೆ, ಕಾಡಿನ ಖಗಮೃಗಗಳ ಬಗೆಗೆ ಮೂಲಭೂತ ತಿಳಿವಳಿಕೆ ನೀಡುತ್ತವೆ. ತೊಟ್ಟಿಲಿನಲ್ಲಿದ್ದಾಗಲೇ ಮಗು. ಹೇಗೆ ಮುದುಕ ಕಾಡಿನಲ್ಲಿ ತನ್ನ ಕೈಗವಸು ಕಳೆದುಕೊಂಡ, ಅದರಲ್ಲಿ ಯಾರು ಯಾರು ವಾಸ

ಮಾಡ ತೊಡಗಿದರು ಎಂಬ ಜಾನಪದ ಕಥೆಯನ್ನೇ ಮೊದಲು ಕೇಳುವುದು ಎನ್ನಬಹುದು. ಈ ಕಥೆಗಳಲ್ಲಿ ಬರುವ ಅದ್ಭುತ ಪ್ರಾಣಿಗಳೆಲ್ಲ ಮಗುವಿನ ಮೆಚ್ಚಿನ ಸಂಗಾತಿಗಳಾಗುತ್ತವೆ. ಮಗು ಅವುಗಳ ಬಗೆಗೆ ಮತ್ತೆ ಮತ್ತೆ ಕೇಳಲಿಚ್ಛಿಸುತ್ತಾನೆ. ಅವನು ಸ್ವಲ್ಪ ದೊಡ್ಡವನಾದ ಮೇಲೆ ಅವನ ಬಳಿಗೆ ಹೊಸ ಜಾನಪದ ಕಥೆಗಳು ಬರುತ್ತವೆ. ಈ ಕಿರಿಯ ಓದುಗ ಅವುಗಳಲ್ಲಿನ ಚಾಣಾಕ್ಷ ನರಿಯ ಸಾಹಸಗಳನ್ನು ಅತ್ಯಾಸಕ್ತಿಯಿಂದ ಓದುತ್ತಾನೆ. ಉಕ್ರೈನಿನ ಜಾನಪದ ಕಥೆಗಳಲ್ಲಿ ಬಹು ಆಗಾಗ್ಗೆ ಈ ನರಿಯ ಪಾತ್ರ ಕಾಣಿಸಿಕೊಳ್ಳುತ್ತದೆ. ಅದರ ಸುತ್ತ ಮನೆಯ ಸಾಕು ಪ್ರಾಣಿಗಳೂ ಕಾಡಿನ ಪ್ರಾಣಿಗಳೂ ಇರುತ್ತವೆ. ಬಹುವೇಳೆ ಈ ಕುತಂತ್ರಿ ನರಿ ಹುಂಜ ಮೊಲಗಳನ್ನು ಮೋಸ ಗೊಳಿಸುತ್ತದೆ. ಅದು ತೋಳ ಕರಡಿಗಳನ್ನೂ ತನ್ನ ಮೋಸದ ಬಲೆಗೆ ಬೀಳಿಸುತ್ತದೆ. ಆದರೆ ಕೆಲವು ವೇಳೆ ಅದು ತನ್ನ ಈ ಮೋಸ ಕುತಂತ್ರಗಳಿಗಾಗಿ ತಕ್ಕ ಶಾಸ್ತಿಯನ್ನೂ ಪಡೆಯುತ್ತದೆನ್ನಿ.

ಪ್ರಾಣಿಗಳ ಕುರಿತ ಈ ಜಾನಪದ ಕಥೆಗಳು "ಜನರತ್ತ ಒಂದು ಹುಬ್ಬನ್ನು ಎತ್ತಿ ತೋರಿಸು ತ್ತವೆ" ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. "ನರಿಯಂಥ ಮೋಸಗಾರ," "ತೋಳ ಹಸಿವು" ಎಂಬ ನುಡಿಗಟ್ಟುಗಳೂ ಜಾನಪದ ಕಥೆಗಳಿಂದ ಬಂದವೇ. ಆದರೆ ಈ ಕಥೆಗಳನ್ನು ಕಟ್ಟಿದ ಜನರು ಯಾವತ್ತೂ ತೊಂದರೆಗೆ ಒಳಗಾದವರ ಪರವಾಗಿಯೇ ಇರುತ್ತಾರೆ, ಅವರ ದುರದೃಷ್ಟ ಗಳ ಬಗೆಗೆ ಅನುಕಂಪ ತೋರುತ್ತಾರೆ, ಕಾರುಣ್ಯ, ಕರ್ತವ್ಯ ನಿಷ್ಠೆ ಮುಂತಾದ ಸದ್ಗುಣಗಳಿಗಾಗಿ ಅವರನ್ನು ಇಷ್ಟಪಡುತ್ತಾರೆ.

ಈ ಸಂಗ್ರಹದಲ್ಲಿ ಮಾಂತ್ರಿಕ ಜಾನಪದ ಕಥೆಗಳನ್ನೂ ಕಾಣಬಹುದು. ಇವುಗಳಲ್ಲಿ ದುಷ್ಟ ಶಕ್ತಿಗಳೊಂದಿಗೆ – ಹಾವು ಹಾಗೂ ಡ್ರೇಗನ್‌ಗಳೊಂದಿಗೆ – ಸೆಣಸಾಡುವ ಮಾಮೂಲಿ ಕೆಲಸ ಗಾರನ, ಸಾಮಾನ್ಯ ವ್ಯಕ್ತಿಯ, ವೀರೋಚಿತ ಲಕ್ಷಣಗಳು ವ್ಯಕ್ತಗೊಳ್ಳುತ್ತವೆ. ಅವರ ಹೆಸರುಗಳೇ ಅವರ ಮೂಲವನ್ನು ತಿಳಿಸುತ್ತವೆ – ರೈತನ ಮಗ ಇವಾನ್, ಕುರುಬ ಹುಡುಗ, ಚರ್ಮ ಹದ ಮಾಡುವ ಕಿರೀಲ್... ದುಷ್ಟ ಶಕ್ತಿಗಳಿಗೆ ಶಿಕ್ಷೆ ನೀಡಲು, ತೊಂದರೆಯಲ್ಲಿದ್ದವರಿಗೆ ಸಹಾಯಮಾಡಲು ಮತ್ತು ನ್ಯಾಯವನ್ನು ಪುನರ್‌ಸ್ಥಾಪಿಸಲು ಈ ಕಥಾನಾಯಕರು ಒಮ್ಮೆಯಲ್ಲ ಹಲವಾರು ಬಾರಿ ಹೋರಾಟ ನಡೆಸಬೇಕಾಗಿ ಬರುತ್ತದೆ. ಅವರ ಸಾಹಸಕೃತ್ಯಗಳನ್ನು ನಿರೂಪಿಸುತ್ತ ಈ ಜಾನಪದ ಕಥೆಗಳು ಅವರ ಧೈರ್ಯ ಶೌರ್ಯಗಳನ್ನು, ಅವರ ಕಾರುಣ್ಯವನ್ನು ಮತ್ತು ತೀಕ್ಷ್ಣ ಬುದ್ಧಿವಂತಿಕೆಯನ್ನು ಹೊಗಳುತ್ತವೆ.

ಅನೇಕ ಜಾನಪದ ಕಥೆಗಳ ನಾಯಕರು ಅತಿಮಾನುಷ ಲಕ್ಷಣಗಳನ್ನು ಹೊಂದಿದವರಂತೆ ಚಿತ್ರಿಸಲ್ಪಟ್ಟಿದ್ದಾರೆ. ಮನುಷ್ಯ ದೀರ್ಘ ಕಾಲದಿಂದ ಕನಸಿಕೊಂಡು ಬಂದಿದ್ದ ಲಕ್ಷಣಗಳನ್ನೇ ಈ ಮಾಂತ್ರಿಕ ಜಾನಪದ ಕಥೆಗಳ ನಾಯಕರಲ್ಲೂ ಮೂರ್ತೀಕರಿಸಲಾಗಿದೆ.

ಈ ಸಂಗ್ರಹದಲ್ಲಿರುವ ಅನೇಕ ಕಥೆಗಳಲ್ಲಿ ನಾವು ಸಾಮಾನ್ಯ ಜನರನ್ನು – ಉಕ್ರೈನಿನ ರೈತರನ್ನು – ಸಂಧಿಸುತ್ತೇವೆ. ಅವರ ಶ್ರಮ, ಅವರ ಶ್ರಮ ಉಪಕರಣಗಳು, ಕೈಕಸಬುಗಳು, ಮನೆಯ ಬಳಕೆಯ ವಸ್ತುಗಳು ಇವೆಲ್ಲ ಈ ಕಥೆಗಳು ಜರುಗುವ ಸ್ಥಳಗಳಲ್ಲಿ ವಿಶೇಷವಾಗಿ ಕಂಡುಬರುವಂಥವೇ ಆಗಿವೆ. ಬಡವರು ಮತ್ತು ಶ್ರೀಮಂತರು, ಕರುಣಾಳುಗಳು ಹಾಗೂ ಕ್ರೂರಿಗಳು, ಸತ್ಯಕ್ಕಾಗಿಯೇ ಬಾಳುವಂಥವರು ಮತ್ತು ಅಸತ್ಯದಿಂದಷ್ಟೆ ಬಾಳಲು ಸಾಧ್ಯ ಎಂದು ನಂಬಿದಂಥವರು, ಇವರ ನಡುವಿನ ಸಂಬಂಧಗಳನ್ನೂ ಈ ಕಥೆಗಳಲ್ಲಿ ಚಿತ್ರಿಸಲಾಗಿದೆ. ದೊರೆಗಳ ಹಾಗೂ ಶ್ರೀಮಂತರ ಒಣಜಂಭ, ಮೌಢ್ಯತೆಗಳನ್ನು ಇವುಗಳಲ್ಲಿ ಗೇಲಿ ಮಾಡಲಾಗಿದೆ. ಸಾಮಾನ್ಯ ಮನುಷ್ಯನ ಚುರುಕು ಬುದ್ಧಿ ಹಾಗೂ ಧೈರ್ಯಗಳೇ ಕೊನೆಯಲ್ಲಿ ಜಯ ಗಳಿಸುತ್ತವೆ, ಎಂದು ತೋರಲಾಗಿದೆ.

ಈ ಜಾನಪದ ಕಥೆಗಳು ಜನರ ಹಾಸ್ಯ ಪ್ರವೃತ್ತಿ, ನಗೆಚಾಟಿಕೆ ಹಾಗೂ ವಿಡಂಬನೆಗಳಿಂದ ಮನಮೋಹಕವಾಗಿವೆ. ಅವು ಮರ್ದಕರನ್ನೂ ಮನುಷ್ಯನ ದೌರ್ಭಾಗ್ಯದಿಂದ ಲಾಭ ಪಡೆಯುವಂಥವರನ್ನೂ ಬಯಲು ಮಾಡುತ್ತವೆ.

ನಿಸರ್ಗ ಶಕ್ತಿಗಳ ಮೇಲೆ ಜಯ ಗಳಿಸುವುದು, ಅವುಗಳನ್ನು ತಮ್ಮ ಕಠಿಣ ಶ್ರಮಕ್ಕೆ ಅನುಕೂಲವಾಗುವಂತೆ ಪರಿವರ್ತಿಸುವುದು, ತಮ್ಮ ಬಾಳನ್ನು ಸುಂದರವಾಗುವಂತೆ ಮಾಡುವುದು, ನ್ಯಾಯವನ್ನು ಸಮರ್ಥಿಸುವುದು, ದುಷ್ಟ ಶಕ್ತಿಗಳ ಹಾಗೂ ಹಿಂಸೆಯ ವಿರುದ್ಧ ಹೋರಾಡುವುದು, ಸುಂದರ, ಸ್ವತಂತ್ರ, ಹರ್ಷಭರಿತ ಜೀವನ ನಡೆಸುವುದು, ಇವೇ ಸಾಮಾನ್ಯ ಜನರ ಬಯಕೆಗಳು. ಜಾನಪದ ಕಥೆಗಳು ಇವುಗಳಿಂದ ಪೂರಿತವಾಗಿವೆ.

ಜಾನಪದ ಕಥೆಗಳು ನಾನಾ ಪಾಠಾಂತರಗಳಲ್ಲಿ ಪ್ರಚಲಿತವಲ್ಲಿವೆ ಎಂಬುದು ಸುವಿದಿತ. ಕಾಲ, ಸ್ಥಳ ಹಾಗೂ ಕಥೆ ಹೇಳುತ್ತಿರುವವನ ವ್ಯಕ್ತಿತ್ವ, ಇವುಗಳನ್ನು ಅವಲಂಬಿಸಿ ಅವು ಬದಲುತ್ತ ಹೋಗಿವೆ. ಒಬ್ಬೊಬ್ಬ ಕಥೆಗಾರನೂ ತನ್ನ ಕಲ್ಪನೆಗೆ ತಕ್ಕಂತೆ ಹೊಸ ಹೊಸ ಕಲಾತ್ಮಕ ವಿವರಗಳನ್ನು ಸೇರಿಸಿ ಹೊಸ ರೂಪಾಂತರಗಳನ್ನು ಸೃಷ್ಟಿಸಿದ್ದಾನೆ.

ಈ ಸಂಗ್ರಹದಲ್ಲಿರುವ ಜಾನಪದ ಕಥೆಗಳು ಹೆಚ್ಚಾಗಿ 19ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಪೊಲ್ತಾವ ಹಾಗೂ ಕೀಯೆವ್ ಪ್ರದೇಶಗಳಲ್ಲಿ ದಾಖಲಾದವುಗಳು. ಈ ಪ್ರದೇಶಗಳು ಸೋವಿಯತ್ ಒಕ್ಕೂಟದ ಹದಿನೈದು ಗಣತಂತ್ರಗಳಲ್ಲಿ ಒಂದಾದ ಉಕ್ರೈನ್ ಗಣತಂತ್ರದಲ್ಲಿವೆ. ಉಕ್ರೈನ್ ಗಣತಂತ್ರ ಕಾರ್ಪಾಥಿಯಾ ಪರ್ವತಗಳಿಂದ ಹಿಡಿದು ಕಪ್ಪು ಸಮುದ್ರದವರೆಗೆ ಹರಡಿದೆ. ಇದರ ಉತ್ತರ ಹಾಗೂ ಪೂರ್ವ ಗಡಿಗಳು ರಷ್ಯನ್ ಫೆಡರಲ್ ರಿಪಬ್ಲಿಕ್ ಹಾಗೂ ಬೈಲೋರಷ್ಯನ್ ರಿಪಬ್ಲಿಕ್‌ಗಳೊಂದಿಗೆ ಹೊಂದಿಕೊಂಡಿವೆ. ಇದರ ನೈರುತ್ಯದಲ್ಲಿ ಮೊಲ್ದಾವಿಯಾ ಗಣತಂತ್ರವಿದೆ.

ಈ ಕಥೆಗಳಲ್ಲಿ ಉಕ್ರೈನಿನ ರೈತರ ಬಾಳು ಬದುಕು, ಅವರ ಜೀವನ ವಿಧಾನ, ಗೃಹಕೃತ್ಯ, ಮನೆಯಲ್ಲಿನ ಸಾಕು ಪ್ರಾಣಿಗಳು ಪಕ್ಷಿಗಳು ಇವೆಲ್ಲ ಸುಂದರವಾಗಿ ಚಿತ್ರಿತವಾಗಿವೆ. ಈ ಸಂಗ್ರಹ ದಲ್ಲಿ ಓದುಗರು ಉಕ್ರೈನಿನ ಜಾನಪದ ಕಥೆಗಳ ಪರಿಚಯ ಪಡೆಯುವಾಗಲೇ ಈ ಗಣತಂತ್ರದ ವಿಶಿಷ್ಟ ಪ್ರಕೃತಿ ಲಕ್ಷಣಗಳ ಪರಿಚಯವನ್ನೂ – ಅದರ ಬೆಂಗಾಡುಗಳು, ಕಾಡುಗಳು, ಪರ್ವತ ಗಳು, ದೊಡ್ಡ ಹಾಗೂ ಸಣ್ಣ ನದಿಗಳು, ಇವುಗಳ ಪರಿಚಯವನ್ನೂ – ಪಡೆಯುತ್ತಾರೆ. ಜಾನ ಪದ ಕಥೆಯ ಮಾಂತ್ರಿಕ ಜಗತ್ತು ಓದುಗರನ್ನು ಈ ಚೆಲುವಿನ ತಾಣಕ್ಕೆ, ದ್ನೀಪರ್ ನದಿಯ ದಡಗಳಿಗೆ, ಕರೆದೊಯ್ಯುತ್ತದೆ, ಹೊಸ ವೀರರ ಪರಿಚಯ ಮಾಡಿಕೊಡುತ್ತದೆ. ಅವರೊಂದಿಗೆ ಓದುಗರೂ ದುಃಖಿಸುತ್ತಾರೆ, ಆನಂದಿಸುತ್ತಾರೆ, ಒಳಿತು ಕೆಡುಕಿನ ಮೇಲೆ ವಿಜಯ ಸಾಧಿಸುವು ದನ್ನು ಕಂಡು ಪುಳಕಿತರಾಗುತ್ತಾರೆ.

ಜಗತ್ತಿನ ಅತ್ಯಂತ ಖ್ಯಾತ ಸಾಹಿತಿಗಳನೇಕರು ಜಾನಪದ ಕಥೆಯ ಮೋಹಕ ಜಗತ್ತಿಗೆ ಮಾರು ಹೋಗಿದ್ದಾರೆ, ಅದರಿಂದ ಕಲಾತ್ಮಕ ಸ್ಫೂರ್ತಿ ಪಡೆದಿದ್ದಾರೆ. ಗ್ಯೋಥೆ, ಷಿಲ್ಲರ್, ಮಿತ್ಸ್‌ಕೇವಿಚ್, ಪೂಷ್ಕಿನ್, ಶೆವ್ಚೇಂಕೊ, ರವೀಂದ್ರನಾಥ ಠಾಕೂರ್ ಮತ್ತು ಇತರ ಅನೇಕ ಗತ ಹಾಗೂ ವರ್ತ ಮಾನ ಕಾಲದ ಸುಪ್ರಸಿದ್ಧ ಸಾಹಿತಿಗಳ ಕೃತಿಗಳಲ್ಲೂ ಜಾನಪದ ಕಥೆಗಳ ಪಾತ್ರಗಳನ್ನೂ ಪ್ರೇರಣೆ ಗಳನ್ನೂ ಕಾಣಬಹುದು.

ಪುರಾತನ ಭಾರತದಿಂದ ನಮಗೆ "ಪಂಚತಂತ್ರ" ಜಾನಪದ ಕಥೆಗಳು ಬಂದವು, ಮಧ್ಯ ಪ್ರಾಚ್ಯದ ಅರೇಬಿಯನ್ ಜನರಿಂದ "ಸಾವಿರದ ಒಂದು ರಾತ್ರಿಗಳು" ಎಂಬ ಜಾನಪದ ಕಥೆಗಳು ಬಂದವು. ಇವಿಷ್ಟೇಯೆ? ಏನಿಲ್ಲ. ಗ್ರಿಮ್ ಸೋದರರ ಜಾನಪದ ಕಥೆಗಳು, ಆಂಡರ್‌ಸನ್ ಹಾಗೂ ಪೆರ್ರೋರವರ ಕಥೆಗಳು, ಇವೂ ಇಂದೂ ಕಿರಿಯ ಹಾಗೂ ಹಿರಿಯ ಓದುಗರೆಲ್ಲರ ಮನ ಸೂರೆ ಗೊಳ್ಳುತ್ತಿವೆ. ಅನೇಕ ದೇಶಗಳಲ್ಲಿ ಹೆಸರಾಂತ ಲೇಖಕರು ತಮ್ಮ ತಮ್ಮ ನಾಡುಗಳ ಜಾನಪದ ಕಥೆ ಗಳನ್ನು ಸಂಗ್ರಹಿಸಿ, ಸಂಪಾದಿಸಿ, ಅವುಗಳಿಗೆ ಹೊಸ ಜೀವ ತುಂಬಿ ಅವುಗಳನ್ನು ಇಡೀ ಜಗತ್ತಿನ ಮಕ್ಕಳಿಗೆ ಕಾಣಿಕೆಯಾಗಿ ನೀಡಿದ್ದಾರೆ.

ಹಿಂದಿನಂತೆ ಇಂದೂ ಜಾನಪದ ಕಥೆಗಳು ನಮಗೆ ನಮ್ಮ ಸುತ್ತಮುತ್ತಲ ಜಗತ್ತನ್ನು ಗಮನ ವಿತ್ತು ನೋಡಿ ತಿಳಿಯಲು ಸಹಾಯ ಮಾಡುತ್ತವೆ, ಜೀವನ ಸೌಂದರ್ಯವನ್ನು ಅದರೆಲ್ಲ ಜಟಿಲತೆ ವೈವಿಧ್ಯತೆಗಳೊಂದಿಗೆ ಅರಿಯಲು ನೆರವಾಗುತ್ತವೆ.

ವ್ಲದೀಮಿರ್ ಬೊಯ್ಕೊ,
ಡಿ.ಎಸ್‌ಸಿ. (ಭಾಷಾಶಾಸ್ತ್ರ)

ಮೋಸದ ಮೇಕೆ

ಒಂದಾನೊಂದು ಕಾಲದಲ್ಲಿ ಒಬ್ಬ ಮುದುಕ ಒಬ್ಬ ಮುದುಕಿ ವಾಸವಾಗಿದ್ದರು. ಒಂದು ಸಾರಿ ಮುದುಕ ಸಂತೆಗೆ ಹೋಗಿ ಒಂದು ಮೇಕೆಯನ್ನು ಕೊಂಡುಕೊಂಡು ಬಂದ. ಅದನ್ನು ಮನೆಗೆ ಕರೆತಂದವನೇ ಅವನು ಮಾರನೆಯ ದಿನ ಬೆಳಿಗ್ಗೆ ತನ್ನ ಹಿರಿಯ ಮಗನನ್ನು ಕರೆದು ಮೇಕೆಯನ್ನು ಮೇಯಿಸಿಕೊಂಡು ಬರುವಂತೆ ತಿಳಿಸಿದ. ಮಗನು ಮೇಕೆಯನ್ನು ಸಂಜೆಯವರೆಗೂ ಮೇಯಿಸಿ ಕೊಂಡು ಆಮೇಲೆ ಮನೆಗೆ ಕರೆತಂದ. ಗೇಟಿನ ಬಳಿ ಕೆಂಪು ಬೂಟು ತೊಟ್ಟು ನಿಂತಿದ್ದ ಮುದುಕ ಮೇಕೆಯನ್ನು ಕೇಳುತ್ತಾನೆ:

"ಏನು, ನನ್ನ ಮುದ್ದಿನ ಮೇಕೆಯ ಮರಿ! ಹೊಟ್ಟೆ ತುಂಬ ತಿಂದೆಯಾ, ಹೊಟ್ಟೆ ತುಂಬ ಕುಡಿದೆಯಾ?"

"ಇಲ್ಲ, ಅಜ್ಜಯ್ಯ. ತಿನ್ನಲೂ ಇಲ್ಲ, ಕುಡಿಯಲೂ ಇಲ್ಲ. ಸೇತುವೆ ದಾಟಿ ಹೋಗುವಾಗ ಒಂದೆರಡು ಎಲೆ ಕಿತ್ತು ತಿಂದೆ. ತೊರೆಯನ್ನು ದಾಟಿ ಹೋಗುವಾಗ ಒಂದೆರಡು ಹನಿ ನೀರು ಕುಡಿದೆ. ಅಷ್ಟೆ ನಾನು ತಿಂದದ್ದು, ಅಷ್ಟೆ ನಾನು ಕುಡಿದದ್ದು."

ಮುದುಕನಿಗೆ ಮಗನ ಮೇಲೆ ತುಂಬ ಕೋಪ ಬಂತು. ಅವನನ್ನು ಮನೆಯಿಂದ ಹೊರಕ್ಕೆ ಅಟ್ಟಿದ.

ಮಾರನೆಯ ಬೆಳಿಗ್ಗೆ ಮುದುಕ ತನ್ನ ಕಿರಿಯ ಮಗನನ್ನು ಕರೆದು ಮೇಕೆಯನ್ನು ಮೇಯಿಸಿ ಕೊಂಡು ಬರುವಂತೆ ತಿಳಿಸಿದ. ಅವನೂ ಮೇಕೆಯನ್ನು ಸಂಜೆಯವರೆಗೂ ಮೇಯಿಸಿಕೊಂಡು ಆಮೇಲೆ ಮನೆಗೆ ಕರೆತಂದ. ಗೇಟಿನ ಬಳಿ ಕೆಂಪು ಬೂಟು ತೊಟ್ಟು ನಿಂತಿದ್ದ ಮುದುಕ ಮೇಕೆ ಯನ್ನು ಕೇಳುತ್ತಾನೆ:

"ಏನು ನನ್ನ ಮುದ್ದಿನ ಮೇಕೆಯ ಮರಿ! ಹೊಟ್ಟೆ ತುಂಬ ತಿಂದೆಯಾ, ಹೊಟ್ಟೆ ತುಂಬ ಕುಡಿದೆಯಾ?"

"ಇಲ್ಲ, ಅಜ್ಜಯ್ಯ. ತಿನ್ನಲೂ ಇಲ್ಲ, ಕುಡಿಯಲೂ ಇಲ್ಲ. ಸೇತುವೆ ದಾಟಿ ಹೋಗುವಾಗ ಒಂದೆರಡು ಎಲೆ ಕಿತ್ತು ತಿಂದೆ. ತೊರೆಯನ್ನು ದಾಟಿ ಹೋಗುವಾಗ ಒಂದೆರಡು ಹನಿ ನೀರು ಕುಡಿದೆ. ಅಷ್ಟೆ ನಾನು ತಿಂದದ್ದು, ಅಷ್ಟೆ ನಾನು ಕುಡಿದದ್ದು."

ಮುದುಕ ತನ್ನ ಕಿರಿಯ ಮಗನನ್ನೂ ಮನೆಯಿಂದ ಹೊರಕ್ಕೆ ಅಟ್ಟಿದ.

ಮೂರನೆಯ ದಿನ ಮುದುಕ ಮುದುಕಿಯನ್ನು ಮೇಕೆಯನ್ನು ಮೇಯಿಸಲು ಕಳುಹಿಸಿ ಕೊಟ್ಟ.

ಮುದುಕಿಯೂ ಮೇಕೆಯನ್ನು ಸಂಜೆಯವರೆಗೂ ಮೇಯಿಸಿಕೊಂಡು ಆಮೇಲೆ ಮನೆಗೆ ಕರೆತಂದಳು. ಗೇಟಿನ ಬಳಿ ಕೆಂಪು ಬೂಟು ತೊಟ್ಟು ನಿಂತಿದ್ದ ಮುದುಕ ಮೇಕೆಯನ್ನು ಕೇಳುತ್ತಾನೆ:

"ಏನು, ನನ್ನ ಮುದ್ದಿನ ಮೇಕೆಯ ಮರಿ! ಹೊಟ್ಟೆ ತುಂಬ ತಿಂದೆಯಾ, ಹೊಟ್ಟೆ ತುಂಬ ಕುಡಿದೆಯಾ?"

"ಇಲ್ಲ, ಅಜ್ಜಯ್ಯ. ತಿನ್ನಲೂ ಇಲ್ಲ, ಕುಡಿಯಲೂ ಇಲ್ಲ. ಸೇತುವೆ ದಾಟಿ ಹೋಗುವಾಗ ಒಂದೆರಡು ಎಲೆ ಕಿತ್ತು ತಿಂದೆ. ತೊರೆಯನ್ನು ದಾಟಿ ಹೋಗುವಾಗ ಒಂದೆರಡು ಹನಿ ನೀರು ಕುಡಿದೆ. ಅಷ್ಟೆ ನಾನು ತಿಂದದ್ದು, ಅಷ್ಟೆ ನಾನು ಕುಡಿದದ್ದು."

ಮುದುಕ ಮುದುಕಿಯನ್ನೂ ಮನೆಯಿಂದ ಹೊರಕ್ಕೆ ಅಟ್ಟಿದ.

ನಾಲ್ಕನೆಯ ದಿನ ಮುದುಕ ತಾನೇ ಮೇಕೆಯನ್ನು ಮೇಯಿಸಲು ಕರೆದೊಯ್ದ. ಇಡೀ ದಿನ, ಸಂಜೆಯಾಗುವವರೆಗೂ ಮೇಯಿಸಿಕೊಂಡು ಮನೆಗೆ ಕರೆತಂದ. ತಾನೇ ಮುಂದೆ ನಡೆದು ಹೋಗಿ ಗೇಟಿನ ಬಳಿ ಕೆಂಪು ಬೂಟು ತೊಟ್ಟು ನಿಂತು ಮೇಕೆಯನ್ನು ಕೇಳುತ್ತಾನೆ:

"ಏನು, ನನ್ನ ಮುದ್ದಿನ ಮೇಕೆಯ ಮರಿ! ಹೊಟ್ಟೆ ತುಂಬ ತಿಂದೆಯಾ, ಹೊಟ್ಟೆ ತುಂಬ ಕುಡಿದೆಯಾ?"

"ಇಲ್ಲ, ಅಜ್ಜಯ್ಯ. ತಿನ್ನಲೂ ಇಲ್ಲ, ಕುಡಿಯಲೂ ಇಲ್ಲ. ಸೇತುವೆ ದಾಟಿ ಹೋಗುವಾಗ ಒಂದೆರಡು ಎಲೆ ಕಿತ್ತು ತಿಂದೆ. ತೊರೆಯನ್ನು ದಾಟಿ ಹೋಗುವಾಗ ಒಂದೆರಡು ಹನಿ ನೀರು ಕುಡಿದೆ. ಅಷ್ಟೆ ನಾನು ತಿಂದದ್ದು, ಅಷ್ಟೆ ನಾನು ಕುಡಿದದ್ದು."

ಮುದುಕನಿಗೆ ಕೋಪ ಬಂತು. ನೇರವಾಗಿ ಕಮ್ಮಾರನ ಬಳಿಗೆ ಹೋಗಿ ಮಚ್ಚು ಮಸೆಯಿಸಿ

ಕೊಂಡು ಬಂದ. ಮೇಕೆಯನ್ನು ತುಂಡರಿಸಲು ಹೋದ. ಆದರೆ ಮೇಕೆ ಹಗ್ಗ ಕಿತ್ತುಕೊಂಡು ಕಾಡಿಗೆ ಓಡಿಹೋಯಿತು. ಅಲ್ಲಿ ಅದು ಒಂದು ಮೊಲದ ಗುಡಿಸಿಲನ್ನು ಕಂಡಿತು. ಅದರ ಒಳಗೆ ಹೋಗಿ ಒಲೆಯ ಹಿಂದೆ ಅಡಗಿ ಕುಳಿತಿತು.

ಸ್ವಲ್ಪ ಹೊತ್ತಾದ ಮೇಲೆ ಮೊಲ ತನ್ನ ಗುಡಿಸಿಲಿಗೆ ಬಂದಿತು. ಒಳಗೆ ಯಾರೋ ಇರುವುದನ್ನು ಕಂಡಿತು. ಅದು ಕೇಳಿತು:

"ಯಾರು ನನ್ನ ಗುಡಿಸಿಲಿನಲ್ಲಿ ಇರೋದು?"

ಮೇಕೆ ಒಲೆಯ ಹಿಂದುಗಡೆಯಿಂದ ಹೇಳಿತು:

"ಘೋರ ಭೀಕರ ಮೇಕೆಯು ನಾನು,
ಕೊಂಡರು ನನ್ನನು ಕಾಸಿಗೆ ಮೂರು!
ಹರಿದಿದೆ ಎನ್ನಯ ಬೆನ್ನಿನ ತೊಗಲು.
ಹೊಸಕಿ ಹಾಕುವೆ ನಿನ್ನನು ನನ್ನ ಪಾದಗಳಿಂದ,
ತಿವಿಯುವೆ ನಿನ್ನನು ನನ್ನ ಚೂಪು ಕೊಂಬುಗಳಿಂದ.
ಚುಚ್ಚುವೆ, ಸೀಳುವೆ ನಿನ್ನನು ಉಗುರುಗಳಿಂದ.
ಗುಡಿಸಿ ಹಾಕುವೆ ನಿನ್ನನು ನನ್ನ ಬಾಲದಿಂದ.
ಮುಗಿಯುತ್ತೆ ಅಲ್ಲಿಗೆ ನಿನ್ನಯ ಕಥೆಯು!"

ಮೊಲಕ್ಕೆ ಹೆದರಿಕೆಯಾಯಿತು. ಗುಡಿಸಿಲಿನಿಂದ ಓಡಿ ಹೋಗಿ ಒಂದು ಮರದ ಕೆಳಗೆ ಕುಳಿತು ಗಟ್ಟಿಯಾಗಿ ಅಳ ತೊಡಗಿತು. ಅಷ್ಟು ಹೊತ್ತಿಗೆ ಅಲ್ಲಿಗೆ ಒಂದು ಕರಡಿ ಬಂತು. ಅದು ಕೇಳಿತು:

"ಯಾಕೆ ಅಳುತಿದೀಯ, ವೇಗ ಓಟದ ಮೊಲವೇ?"

"ಅಳದೆ ಹ್ಯಾಗಿರಲಿ ಹೇಳು, ಗುರ್‌ಗುರ್ ಕರಡಿ, ನನ್ನ ಗುಡಿಸಿಲಿನಲ್ಲಿ ಯಾವುದೋ ಭಯಂಕರ ಮೃಗ ಬಂದು ಕುಳಿತಿರುವಾಗ?"

ಕರಡಿ ಹೇಳಿತು: "ಅಳಬೇಡ, ಸುಮ್ನಿರು, ನಾನು ಅದನ್ನು ಓಡಿಸ್ತೀನಿ!"

ಅದು ಗುಡಿಸಿಲಿನ ಬಳಿಗೆ ಓಡಿ ಹೋಗಿ ಕೇಳಿತು:

"ಯಾರದು, ಮೊಲದ ಗುಡಿಸಿಲಿನಲ್ಲಿ ಇರೋದು?"

ಮೇಕೆ ಒಲೆಯ ಹಿಂದುಗಡೆಯಿಂದ ಹೇಳಿತು:

"ಘೋರ ಭೀಕರ ಮೇಕೆಯು ನಾನು,
ಕೊಂಡರು ನನ್ನನು ಕಾಸಿಗೆ ಮೂರು!
ಹರಿದಿದೆ ಎನ್ನಯ ಬೆನ್ನಿನ ತೊಗಲು.
ಹೊಸಕಿ ಹಾಕುವೆ ನಿನ್ನನು ನನ್ನ ಪಾದಗಳಿಂದ,
ತಿವಿಯುವೆ ನಿನ್ನನು ನನ್ನ ಚೂಪು ಕೊಂಬುಗಳಿಂದ.
ಚುಚ್ಚುವೆ, ಸೀಳುವೆ ನಿನ್ನನು ಉಗುರುಗಳಿಂದ.
ಗುಡಿಸಿ ಹಾಕುವೆ ನಿನ್ನನು ನನ್ನ ಬಾಲದಿಂದ.
ಮುಗಿಯುತ್ತೆ ಅಲ್ಲಿಗೆ ನಿನ್ನಯ ಕಥೆಯು!"

ಕರಡಿಗೆ ತುಂಬ ಹೆದರಿಕೆಯಾಯಿತು. ಅದು ಗುಡಿಸಿಲಿನಿಂದ ಹೊರಕ್ಕೆ ಓಡಿ ಬಂದಿತು.

"ಉಹೂಂ, ವೇಗ ಓಟದ ಮೊಲವೇ! ಅದನ್ನು ಓಡಿಸಲು ನನ್ನ ಕೈಲಾಗದು. ನನಗೆ ಭಯ!"

ಮೊಲ ಮತ್ತೆ ಹೋಗಿ ಮರದ ಕೆಳಗೆ ಕುಳಿತು ಗಟ್ಟಿಯಾಗಿ ಅಳ ತೊಡಗಿತು. ಅಷ್ಟು ಹೊತ್ತಿಗೆ ಒಂದು ತೋಳ ಅಲ್ಲಿಗೆ ಬಂದಿತು. ಅದು ಕೇಳಿತು:

"ಯಾಕೆ ಅಳುತಿದೀಯ, ವೇಗ ಓಟದ ಮೊಲವೇ?"

"ಅಳದೆ ಹ್ಯಾಗಿರಲಿ ಹೇಳು, ಬೂದುಮೈಯಿನ ತೋಳವೇ, ನನ್ನ ಗುಡಿಸಿಲಿನಲ್ಲಿ ಯಾವುದೋ ಭಯಂಕರ ಮೃಗ ಬಂದು ಕುಳಿತಿರುವಾಗ?"

ತೋಳ ಹೇಳಿತು: "ಅಳಬೇಡ, ಸುಮ್ಮಿರು. ನಾನು ಅದನ್ನು ಓಡಿಸ್ತೀನಿ!"

"ನಿನಗೆ ಎಲ್ಲಿ ಓಡಿಸೋಕಾಗುತ್ತೆ? ಕರಡಿಯ ಕೈಲೇ ಆಗಲಿಲ್ಲ. ಇನ್ನು ನಿನ್ನ ಕೈಲಿ ಎಲ್ಲಾಗುತ್ತೆ?"

"ನೋಡ್ತಿರು. ನಾನು ಓಡಿಸ್ತೇನೆ!"

ತೋಳ ಗುಡಿಸಿಲಿನ ಕಡೆಗೆ ಓಡಿತು. ಕೇಳಿತು:

"ಯಾರದು, ಮೊಲದ ಗುಡಿಸಿಲಿನಲ್ಲಿ ಇರೋದು?"

ಮೇಕೆ ಒಲೆಯ ಹಿಂದುಗಡೆಯಿಂದ ಹೇಳಿತು:

"ಘೋರ ಭೀಕರ ಮೇಕೆಯು ನಾನು,
ಕೊಂಡರು ನನ್ನನು ಕಾಸಿಗೆ ಮೂರು!
ಹರಿದಿದೆ ಎನ್ನಯ ಬೆನ್ನಿನ ತೊಗಲು.
ಹೊಸಕಿ ಹಾಕುವೆ ನಿನ್ನನು ನನ್ನ ಪಾದಗಳಿಂದ,

ತಿವಿಯುವೆ ನಿನ್ನನು ನನ್ನ ಚೂಪು ಕೊಂಬುಗಳಿಂದ.
ಚುಚ್ಚುವೆ, ಸೀಳುವೆ ನಿನ್ನನು ಉಗುರುಗಳಿಂದ.
ಗುಡಿಸಿ ಹಾಕುವೆ ನಿನ್ನನು ನನ್ನ ಬಾಲದಿಂದ.
ಮುಗಿಯುತ್ತೆ ಅಲ್ಲಿಗೆ ನಿನ್ನಯ ಕಥೆಯು !"

ತೋಳಕ್ಕೆ ತುಂಬ ಹೆದರಿಕೆಯಾಯಿತು. ಅದೂ ಗುಡಿಸಿಲಿನಿಂದ ಹೊರಕ್ಕೆ ಓಡಿತು.

"ಉಹೂಂ, ವೇಗ ಓಟದ ಮೊಲವೇ ! ಅದನ್ನು ಓಡಿಸಲು ನನ್ನ ಕೈಲಾಗದು. ನನಗೆ ಭಯ !"

ಮೊಲ ಮತ್ತೆ ಹೋಯಿತು, ಮರದ ಕೆಳಗೆ ಕುಳಿತು ಗಟ್ಟಿಯಾಗಿ ಅಳ ತೊಡಗಿತು. ಅಷ್ಟು ಹೊತ್ತಿಗೆ ಒಂದು ನರಿ ಅಲ್ಲಿಗೆ ಬಂದಿತು. ಮೊಲವನ್ನು ಕಂಡು ಕೇಳಿತು:

"ಯಾಕೆ ಅಳುತಿದೀಯ, ವೇಗ ಓಟದ ಮೊಲವೇ ?"

"ಅಳದೆ ಹ್ಯಾಗಿರಲಿ ಹೇಳು, ನರಿಯಕ್ಕ, ನನ್ನ ಗುಡಿಸಿಲಿನಲ್ಲಿ ಯಾವುದೋ ಭಯಂಕರ ಮೃಗ ಬಂದು ಕುಳಿತಿರುವಾಗ ?"

ನರಿ ಹೇಳಿತು: "ಅಳಬೇಡ, ಸುಮ್ನಿರು. ನಾನು ಅದನ್ನು ಓಡಿಸ್ತೀನಿ !"

"ನಿನಗೆ ಎಲ್ಲಿ ಓಡಿಸೋಕಾಗುತ್ತೆ? ಕರಡಿ ಪ್ರಯತ್ನ ಮಾಡಿತು. ಆಗಲಿಲ್ಲ. ತೋಳ ಪ್ರಯತ್ನ ಮಾಡಿತು. ಆಗಲಿಲ್ಲ. ನಿನ್ನ ಕೈಲೂ ಆಗೊಲ್ಲ."

"ನೋಡ್ತಿರು. ನಾನು ಓಡಿಸ್ತೇನೆ !"

ನರಿ ಗುಡಿಸಿಲಿನ ಕಡೆಗೆ ಓಡಿತು. ಕೇಳಿತು:

"ಯಾರದು, ಮೊಲದ ಗುಡಿಸಿಲಿನಲ್ಲಿ ಇರೋದು ?"

ಮೇಕೆ ಒಲೆಯ ಹಿಂದುಗಡೆಯಿಂದ ಹೇಳಿತು:

"ಘೋರ ಭೀಕರ ಮೇಕೆಯು ನಾನು,
ಕೊಂಡರು ನನ್ನನು ಕಾಸಿಗೆ ಮೂರು !
ಹರಿದಿದೆ ಎನ್ನಯ ಬೆನ್ನಿನ ತೊಗಲು.
ಹೊಸಕಿ ಹಾಕುವೆ ನಿನ್ನನು ನನ್ನ ಪಾದಗಳಿಂದ,
ತಿವಿಯುವೆ ನಿನ್ನನು ನನ್ನ ಚೂಪು ಕೊಂಬುಗಳಿಂದ.
ಚುಚ್ಚುವೆ, ಸೀಳುವೆ ನಿನ್ನನು ಉಗುರುಗಳಿಂದ.
ಗುಡಿಸಿ ಹಾಕುವೆ ನಿನ್ನನು ನನ್ನ ಬಾಲದಿಂದ.
ಮುಗಿಯುತ್ತೆ ಅಲ್ಲಿಗೆ ನಿನ್ನಯ ಕಥೆಯು !"

ನರಿಗೆ ತುಂಬ ಹೆದರಿಕೆಯಾಯಿತು. ಅದು ಗುಡಿಸಿಲಿನಿಂದ ಓಟ ಕಿತ್ತಿತು.

"ಉಹೂಂ, ವೇಗ ಓಟದ ಮೊಲವೇ ! ಅದನ್ನು ಓಡಿಸಲು ನನ್ನ ಕೈಲಾಗದು. ನನಗೆ ಭಯ !"

ಮೊಲ ಮತ್ತೆ ಹೋಯಿತು, ಮರದ ಕೆಳಗೆ ಕುಳಿತು ಗಟ್ಟಿಯಾಗಿ ಅಳ ತೊಡಗಿತು. ಅಷ್ಟು ಹೊತ್ತಿಗೆ ಒಂದು ಮುಳ್ಳುನಳ್ಳಿ ಅಲ್ಲಿಗೆ ತೆವಳಿಕೊಂಡು ಬಂದಿತು.

"ಯಾಕೆ ಅಳುತಿದೀಯ, ವೇಗ ಓಟದ ಮೊಲವೇ ?" ಅದು ಕೇಳಿತು.

"ಅಳದೆ ಹ್ಯಾಗಿರಲಿ ಹೇಳು, ನನ್ನ ಗುಡಿಸಿಲಿನಲ್ಲಿ ಯಾವುದೋ ಭಯಂಕರ ಮೃಗ ಬಂದು ಕುಳಿತಿರುವಾಗ ?"

ಮುಳ್ಳುನಳ್ಳಿ ಹೇಳಿತು: "ಹೌದೆ? ನಾನು ಅದನ್ನು ಓಡಿಸ್ತೀನಿ !"

"ನಿನಗೆ ಎಲ್ಲಿ ಓಡಿಸೋಕಾಗುತ್ತೆ ? ಕರಡಿ ಪ್ರಯತ್ನ ಮಾಡಿತು. ಓಡಿಸೋಕಾಗಲಿಲ್ಲ. ತೋಳ ಪ್ರಯತ್ನ ಮಾಡಿತು. ಓಡಿಸೋಕಾಗಲಿಲ್ಲ. ಆಮೇಲೆ ನರಿ ಪ್ರಯತ್ನ ಮಾಡಿತು. ಅದರ ಕೈಲೂ ಓಡಿಸೋಕಾಗಲಿಲ್ಲ. ಇನ್ನು ನಿನ್ನ ಕೈಲಿ ಎಲ್ಲಿ ಆಗುತ್ತೆ ?"

"ನೋಡ್ತಿರು. ನಾನು ಓಡಿಸ್ತೇನೆ !"

ಮುಳ್ಳುನಳ್ಳಿ ಮೊಲದ ಗುಡಿಸಿಲಿನೊಳಗೆ ತೆವಳಿಕೊಂಡು ಹೋಗಿ ಕೇಳಿತು:

"ಯಾರದು, ಮೊಲದ ಗುಡಿಸಿಲಿನಲ್ಲಿ ಇರೋದು ?"

ಮೇಕೆ ಒಲೆಯ ಹಿಂದುಗಡೆಯಿಂದ ಹೇಳಿತು:

"ಘೋರ ಭೀಕರ ಮೇಕೆಯು ನಾನು,
ಕೊಂಡರು ನನ್ನನು ಕಾಸಿಗೆ ಮೂರು !
ಹರಿದಿದೆ ಎನ್ನಯ ಬೆನ್ನಿನ ತೊಗಲು.
ಹೊಸಕಿ ಹಾಕುವೆ ನಿನ್ನನು ನನ್ನ ಪಾದಗಳಿಂದ,
ತಿವಿಯುವೆ ನಿನ್ನನು ನನ್ನ ಚೂಪು ಕೊಂಬುಗಳಿಂದ.
ಚುಚ್ಚುವೆ, ಸೀಳುವೆ ನಿನ್ನನು ಉಗುರುಗಳಿಂದ.
ಗುಡಿಸಿ ಹಾಕುವೆ ನಿನ್ನನು ನನ್ನ ಬಾಲದಿಂದ.
ಮುಗಿಯುತ್ತೆ ಅಲ್ಲಿಗೆ ನಿನ್ನಯ ಕಥೆಯು !"

ಮುಳ್ಳುನಳ್ಳಿ ಮುಂದೆ ಮುಂದೆ ತೆವಳಿಕೊಂಡು ಹೋಯಿತು. ಒಲೆಯ ಮೇಲಕ್ಕೇ ತೆವಳಿಕೊಂಡು ಹೋಗಿ ಹೇಳಿತು:

"ನಾನು ಮುಳ್ಳುನಳ್ಳಿ, – ಮಳ್ಳನಲ್ಲ. ಹೆದರುವರು ನನಗೆ ಎಲ್ಲ. ಕಚ್ಚಿದರೆ ನಾನು ಎಗರಾಡುವೆ ನೀನು. ಕುಟುಕಿದರೆ ನಾನು ಗೋಳಾಡುವೆ ನೀನು!"

ಹೌದು, ಮುಳ್ಳುನಳ್ಳಿ ಹಾಗೆಯೇ ಮಾಡಿತು. ಮೇಕೆಯನ್ನು ತನ್ನ ಮೊನೆಯುಗುರುಗಳಿಂದ ಗಟ್ಟಿಯಾಗಿ ಚುಚ್ಚಿತು. ಮೇಕೆ ಹೇಗೆ ಗೋಳಾಡಿತು! ಅದು ತಕ್ಷಣವೇ ಒಲೆಯ ಹಿಂದುಗಡೆಯಿಂದ ಹೊರಗೆ ಬಂದಿತು. ಗುಡಿಸಿಲಿನಿಂದ ಹೊರಕ್ಕೆ ಬಂದು ಓಟ ಕಿತ್ತಿತು.

ಮೊಲಕ್ಕೆ ತುಂಬ ಸಂತೋಷವಾಯಿತು. ಗುಡಿಸಿಲಿನ ಒಳಕ್ಕೆ ಹೋಯಿತು. ಅದು ಮುಳ್ಳುನಳ್ಳಿಗೆ ಎಷ್ಟು ವಿಧದಲ್ಲಿ ತನ್ನ ಕೃತಜ್ಞತೆ ತಿಳಿಸಿತು! ಹೀಗೆ ಅದು ಇಂದಿಗೂ ತನ್ನ ಗುಡಿಸಿಲಿನಲ್ಲಿ ವಾಸಿಸುತ್ತಿದೆ, ಸುಖಸಂತೋಷಗಳಿಂದ.

ಮಾಂತ್ರಿಕ ಕೈಗವಸು

ಒಮ್ಮೆ ಒಬ್ಬ ಅಜ್ಜ ಕಾಡಿನಲ್ಲಿ ನಡೆದುಕೊಂಡು ಹೋಗುತ್ತಿದ್ದ. ಅವನ ಹಿಂದೆ ಒಂದು ಪುಟ್ಟ ನಾಯಿ ಓಡಿ ಹೋಗುತ್ತಿತ್ತು. ಅಜ್ಜ ಹೋಗುತ್ತಿದ್ದ, ಹೋಗುತ್ತಿದ್ದ. ತನ್ನ ಕೈಗವಸನ್ನು ಕಳೆದು ಕೊಂಡ. ಒಂದು ಇಲಿ ಓಡಿ ಬಂದು ಈ ಕೈಗವಸಿನೊಳ ಹೊಕ್ಕಿತು. ಅಲ್ಲೇ ಕುಳಿತು ಹೇಳಿಕೊಂಡಿತು:

"ಇಲ್ಲಿ ನಾನು ವಾಸಮಾಡುತ್ತೇನೆ."

ಸ್ವಲ್ಪ ಹೊತ್ತಿಗೆ ಒಂದು ಕಪ್ಪೆ ಕುಪ್ಪಳಿಸಿಕೊಂಡು ಅಲ್ಲಿಗೆ ಬಂದಿತು. ಅದು ಕೈಗವಸಿನ ಮುಂದೆ ನಿಂತು ಕೇಳಿತು:

"ಹೇಯ್, ಯಾರದು, ಈ ಕೈಗವಸಿನಲ್ಲಿ ವಾಸವಾಗಿರೋದು?"

"ನಾನು ಕೀಚೋ ಇಲಿ. ನೀನು ಯಾರು?"

"ನಾನು ಕುಪ್ಪೋ ಕಪ್ಪೆ. ನನ್ನನ್ನೂ ಒಳಗೆ ಬಿಡ್ತೀಯ?"

"ಆಗಲಿ, ಬಾ!"

ಆಮೇಲೆ ಒಂದು ಮೊಲ ಓಡಿಕೊಂಡು ಬಂದಿತು. ಅದು ಕೈಗವಸಿನ ಮುಂದೆ ನಿಂತು ಕೇಳಿತು:

"ಯಾರದು, ಈ ಕೈಗವಸಿನಲ್ಲಿ ವಾಸವಾಗಿರೋದು?"

"ನಾವು ಕೀಚೋ ಇಲಿ, ಕುಪ್ಪೋ ಕಪ್ಪೆ. ನೀನು ಯಾರು?"

"ನಾನು ಓಡೋ ಮೊಲ. ನಾನೂ ಒಳಗೆ ಬರಲಾ?"

"ಆಗಲಿ, ಬಾ!"

ಸ್ವಲ್ಪ ಹೊತ್ತಾದ ಮೇಲೆ ಒಂದು ನರಿಯಕ್ಕ ಆತುರಾತುರವಾಗಿ ಅಲ್ಲಿಗೆ ಬಂದಿತು. ಅದು ಕೈಗವಸಿನ ಮುಂದೆ ನಿಂತು ಕೇಳಿತು:

"ಯಾರದು, ಈ ಕೈಗವಸಿನಲ್ಲಿ ವಾಸಿಸುತ್ತಿರೋದು?"

"ನಾವು ಕೀಚೋ ಇಲಿ, ಕುಪ್ಪೋ ಕಪ್ಪೆ ಹಾಗೂ ಓಡೋ ಮೊಲ. ನೀನು ಯಾರು?"

"ನಾನು ನಸುನಗೆಯ ನರಿಯಕ್ಕ. ನನಗೂ ನಿಮ್ಮಲ್ಲಿ ಸ್ವಲ್ಪ ಜಾಗ ಕೊಡುವಿರಾ?"

"ಅದಕ್ಕೇನಂತೆ? ಬಾ ಒಳಗೆ!"

ಹೀಗೆ ಅದರಲ್ಲಿ ನಾಲ್ಕು ಪ್ರಾಣಿಗಳು ಕುಳಿತವು. ಸ್ವಲ್ಪ ಹೊತ್ತಾದ ಮೇಲೆ ಒಂದು ತೋಳ ಗತ್ತಿನಿಂದ ಹೆಜ್ಜೆ ಹಾಕಿಕೊಂಡು ಬಂದಿತು. ಅದು ಕೈಗವಸಿನ ಮುಂದೆ ನಿಂತು ಕೇಳಿತು:

"ಹಲೋ, ಯಾರದು ಈ ಕೈಗವಸಿನಲ್ಲಿ ವಾಸಿಸುತ್ತಿರೋದು?"

"ನಾವು ಕೀಚೋ ಇಲಿ, ಕುಪ್ಪೋ ಕಪ್ಪೆ, ಓಡೋ ಮೊಲ ಹಾಗೂ ನಸುನಗೆಯ ನರಿಯಕ್ಕ. ನೀನು ಯಾರು?"

"ನಾನು ಅರುಚೋ ತೋಳ. ನಾನೂ ನಿಮ್ಮ ಮನೆಯ ಒಳಕ್ಕೆ ಬರೋಣ ಅಂದುಕೊಂಡಿದೀನಿ."

"ಆಗಲಿ, ಬಾ!"

ಅದಾದ ಮೇಲೆ ಒಂದು ಕರಡಿ ಒಡ್ಡೊಡ್ಡಾಗಿ ಕಾಲು ಹಾಕಿಕೊಂಡು ಬಂದಿತು. ಅದು ಗುಟುರು ಹಾಕುತ್ತ ಗರ್ಜಿಸುತ್ತ ಕೇಳಿತು:

"ಹಲೋ, ಯಾರದು ಈ ಕೈಗವಸಿನಲ್ಲಿ ವಾಸಿಸುತ್ತಿರೋದು?"

"ನಾವು ಕೀಚೋ ಇಲಿ, ಕುಪ್ಪೋ ಕಪ್ಪೆ, ಓಡೋ ಮೊಲ, ನಸುನಗೆಯ ನರಿಯಕ್ಕ ಹಾಗೂ ಅರುಚೋ ತೋಳ. ನೀನು ಯಾರು?"

"ನಾನು ಗುಡುಗೋ ಕರಡಿ. ನನಗೆ ಗೊತ್ತು ನೀವು ನನಗೂ ನಿಮ್ಮಲ್ಲಿ ಸ್ವಲ್ಪ ಜಾಗ ಕೊಡುತ್ತೀರ, ಅಲ್ಲವೇ?"

"ಓಹೋ. ಬಾ ಒಳಕ್ಕೆ!"

ಸರಿ, ಕರಡಿಯೂ ಆ ಕೈಗವಸಿನೊಳಕ್ಕೆ ತೂರಿಕೊಂಡಿತು.

ಸ್ವಲ್ಪ ಹೊತ್ತಾದ ಮೇಲೆ ಒಂದು ಕಾಡುಹಂದಿ ಆರಾಮದಿಂದ ಅಡ್ಡಾಡಿಕೊಂಡು ಅತ್ತ ಕಡೆಗೆ ಬಂದಿತು. ಕೈಗವಸಿನ ಮುಂದೆ ನಿಂತು ಅದು ಗುಟುರು ಹಾಕಿ ಕೇಳಿತು:

"ಹಲೋ, ಯಾರದು ಈ ಕೈಗವಸಿನಲ್ಲಿ ವಾಸಿಸುತ್ತಿರೋದು?"

"ನಾವು ಕೀಚೋ ಇಲಿ, ಕುಪ್ಪೋ ಕಪ್ಪೆ, ಓಡೋ ಮೊಲ, ನಸುನಗೆಯ ನರಿಯಕ್ಕ, ಅರುಚೋ ತೋಳ ಹಾಗೂ ಗುಡುಗೋ ಕರಡಿ. ನೀನು ಯಾರು?"

“ನಾನು ಚೊಪು ಮೂತಿಯ ಹಂದಿ. ನನಗೂ ನಿಮ್ಮಲ್ಲಿ ಒಂದಿಷ್ಟು ಸ್ಥಳ ಕೊಡುವಿರಿ, ಅಲ್ಲವೇ ?”

“ಓಹೋ ಖಂಡಿತ ! ಬಾ, ಒಳಗೆ !”

ಕಾಡುಹಂದಿಯೂ ಕೈಗವಸಿನೊಳಕ್ಕೆ ತೂರಿಕೊಂಡಿತು. ಹೀಗೆ ಆ ಪುಟ್ಟ ಕೈಗವಸಿನೊಳಗೆ ಏಳು ಪ್ರಾಣಿಗಳು ಮುದುಡಿ ಕುಳಿತಿದ್ದವು.

ಆ ಹೊತ್ತಿಗೆ ಅಜ್ಜ ನೋಡುತ್ತಾನೆ – ಕೈಗವಸು ಇಲ್ಲ. ಅದಕ್ಕೋಸ್ಕರ ಅವನು ಹಿಂದಿರುಗಿದ. ನಾಯಿ ಮುಂದೆ ಓಡಿತು. ಓಡಿತು, ಓಡಿತು, ನೋಡುತ್ತದೆ – ಆ ಕೈಗವಸು ಅಲ್ಲಿ ಬಿದ್ದಿದೆ, ಮಾಂತ್ರಿಕವೋ ಅನ್ನುವಂತೆ ಮಿಸುಕಾಡುತ್ತಿದೆ. ನಾಯಿ ಆಗ “ಬೌವ್-ಬೌವ್-ಬೌವ್” ಎಂದು ಬೊಗುಳಿತು. ಕೈಗವಸಿನೊಳಗಿದ್ದ ಏಳು ಪ್ರಾಣಿಗಳೂ ಹೆದರಿ ಅದರೊಳಗಿನಿಂದ ಹೊರಬಂದು ದಿಕ್ಕಾಪಾಲಾಗಿ ಓಡಿದವು. ಆಗ ಅಜ್ಜ ಬಂದ. ಕೈಗವಸನ್ನು ತೆಗೆದುಕೊಂಡ.

ನರಿಯಕ್ಕ ಹಾಗೂ ತೋಳಣ್ಣ

ಒಂದಾನೊಂದು ಕಾಲದಲ್ಲಿ ಒಂದು ನರಿ ಕಾಡಿನಲ್ಲಿ ಮನೆ ಮಾಡಿಕೊಂಡು ಸಂತೋಷದಿಂದ ವಾಸವಾಗಿತ್ತು. ಚಳಿಗಾಲ ಬಂತು. ಮನೆ ಎಲ್ಲ ತಣ್ಣಗೆ ಕೊರೆಯೋಕೆ ಶುರುವಾಯಿತು. ಒಲೆ ಹತ್ತಿಸಿ ಬೆಚ್ಚಗೆ ಮಾಡಿಕೊಳ್ಳೋಣ ಅಂತ ನರಿ ಬೆಂಕಿ ತರಲು ಹಳ್ಳಿಗೆ ಹೋಯಿತು. ಅಲ್ಲಿ ಅದಕ್ಕೆ ಒಂದು ಮುದುಕಿಯ ಮನೆ ಕಂಡಿತು. ಅಲ್ಲಿಗೆ ಹೋಗಿ ನರಿ ಕೇಳಿತು:

"ನಮಸ್ಕಾರ, ಅಜ್ಜಿ! ಹಬ್ಬದ ಶುಭಾಶಯಗಳು! ನನಗೊಂದಿಷ್ಟು ಬೆಂಕಿ ಕೊಡ್ತೀಯ? ನಿನಗೂ ನಾನು ಯಾವತ್ತಾದರೂ ಸಹಾಯ ಮಾಡಿ ನಿನ್ನ ಸಾಲ ತೀರಿಸ್ತೀನಿ!"

"ಸರಿ, ಹಾಗೇ ಆಗಲಿ, ನರಿಯಕ್ಕ" ಅಂದಳು ಮುದುಕಿ. "ಕೂತುಕೋ ಸ್ವಲ್ಪ ಹೊತ್ತು. ಮೈ ಬೆಚ್ಚಗೆ ಮಾಡಿಕೋ. ಒಲೆಯ ಮೇಲೆ ಇಟ್ಟಿರೋ ಸೀರೊಟ್ಟಿ ಬೇಯಲಿ. ಅದನ್ನು ತೆಗೆದು ಆಮೇಲೆ ನಿನಗೆ ಬೆಂಕಿ ಕೊಡ್ತೀನಿ."

ಮುದುಕಿ ಗಸಗಸೆ, ದ್ರಾಕ್ಷಿ ಎಲ್ಲ ಹಾಕಿದ ಸೀರೊಟ್ಟಿ ಬೇಯಿಸುತ್ತಿದ್ದಳು. ಘಮಘಮ ಅಂತ ವಾಸನೆ ಬರುತ್ತಿತ್ತು. ಸೀರೊಟ್ಟಿಯನ್ನು ತೆಗೆದು ಆರಲಿ ಅಂತ ಮೇಜಿನ ಮೇಲೆ ಇಟ್ಟಳು. ನರಿ ನೋಡಿತು. ಅದರ ಬಾಯಲ್ಲಿ ನೀರೂರಿತು. ಅದು ಮೆತ್ತಗೆ ಒಂದು ಎಲ್ಲಕ್ಕಿಂತ ದೊಡ್ಡದಾದ ಸವಿಯಾದ ಸೀರೊಟ್ಟಿ ತಗೊಂಡು ಓಟ ಕಿತ್ತಿತು. ಅದು ಸೀರೊಟ್ಟಿ ಒಳಗಿದ್ದ ಹೂರಣವನ್ನೆಲ್ಲ ತಿಂದು, ಅದರೊಳಕ್ಕೆ ಹುಲ್ಲು ತುಂಬಿ, ಮೇಲೆ ಗಟ್ಟಿ ಪದರದಿಂದ ಮುಚ್ಚಿ, ಮತ್ತೆ ಓಡಿಕೊಂಡು ಹೋಯಿತು.

ಓಡುತ್ತ ಓಡುತ್ತ ಅದು ಇಬ್ಬರು ದನ ಕಾಯುವ ಹುಡುಗರನ್ನು ಕಂಡಿತು. ಅವರು ದನಗಳ ಒಂದು ಮಂದೆಯನ್ನು ನೀರಿಗೆ ಹೊಡೆದುಕೊಂಡು ಹೋಗುತ್ತಿದ್ದರು.

"ನಮಸ್ಕಾರ, ಹುಡುಗರೇ, ನಮಸ್ಕಾರ!"

"ನಮಸ್ಕಾರ, ನರಿಯಕ್ಕ! ಚೆನ್ನಾಗಿದೀಯ? ಏನು ಸಮಾಚಾರ?"

"ಏನಿಲ್ಲ. ನನ್ನ ಬಳಿ ಒಂದು ಸೀರೊಟ್ಟಿ ಇದೆ. ಅದನ್ನು ತಗೊಂಡು ನನಗೆ ಒಂದು ಕರು ಕೊಡ್ತೀರ?"

"ಆಗಲಿ. ಅದಕ್ಕೇನಂತೆ. ತಗೋ."

"ಆದರೆ ಒಂದು ವಿಷಯ. ನಾನು ಹಳ್ಳಿಯಿಂದ ಹೊರಗೆ ಹೋಗುವವರೆಗೂ ನೀವು ಸೀರೊಟ್ಟಿ ತಿನ್ನಬಾರದು."

ನರಿ ಹುಡುಗರಿಗೆ ಸೀರೊಟ್ಟಿ ಕೊಟ್ಟು ಬದಲಿಗೆ ಒಂದು ಬೆಳೆದ ಕರುವನ್ನು ತೆಗೆದುಕೊಂಡಿತು. ಕರುವನ್ನು ಹೊಡೆದುಕೊಂಡು ಕಾಡಿಗೆ ಹೋಯಿತು. ನರಿ ಹೋದ ಮೇಲೆ ಹುಡುಗರು ಸೀರೊಟ್ಟಿ ತಿನ್ನ ತೊಡಗಿದರು. ನೋಡುತ್ತಾರೆ – ಅದರೊಳಗೇನಿದೆ – ಬರೀ ಹುಲ್ಲು!

ನರಿಯಕ್ಕ ಮನೆಗೆ ಹಿಂದಿರುಗಿತು. ಒಂದು ಮರ ಕಡಿದು ಅದರಿಂದ ಒಂದು ಜಾರುಬಂಡಿ ಮಾಡಿಕೊಂಡಿತು. ಕರುವನ್ನು ಜಾರುಬಂಡಿಗೆ ಕಟ್ಟಿ ಸವಾರಿ ಮಾಡಿಕೊಂಡು ಹೊರಟಿತು. ಹೋಗ್ತಾ ಇದ್ದಾಗ ಅದಕ್ಕೆ ಯಾರು ಕಂಡುಬಂದರು ಅಂತೀರ – ತೋಳಣ್ಣ!

"ನಮಸ್ಕಾರ, ನರಿಯಕ್ಕ. ಹೇಗಿದೀಯ?"

"ನಮಸ್ಕಾರ, ತೋಳಣ್ಣ. ಚೆನ್ನಾಗಿದೀನಿ. ನೀನು ಹೇಗಿದೀಯ?"

"ಚೆನ್ನಾಗೇ ಇದೀನಿ. ಅದು ಸರಿ, ಎಲ್ಲಿ ಸಿಕ್ಕಿತು ನಿನಗೆ ಈ ಜಾರುಬಂಡಿ, ಈ ಕರು?"

"ನಾನೇ ಮಾಡಿಕೊಂಡೆ."

"ನಾನೂ ಇದರಲ್ಲಿ ಸ್ವಲ್ಪ ದೂರ ಬರಲಾ, ನರಿಯಕ್ಕ?"

"ಬೇಡಪ್ಪ ಬೇಡ. ಜಾರುಬಂಡಿ ಮುರಿದುಹೋಗುತ್ತೆ."

"ಏನಿಲ್ಲ. ನಾನು ಬರೀ ಒಂದು ಕಾಲಷ್ಟೆ ಇಡ್ತೀನಿ."

"ಸರಿ, ಬಾ, ಹಾಗಾದರೆ."

ನರಿಯೂ ತೋಳವೂ ಸ್ವಲ್ಪ ದೂರ ಸವಾರಿ ಮಾಡಿಕೊಂಡು ಹೋದವು. ಆಗ ತೋಳ ಹೇಳಿತು:

"ಒಂದು ಕಾಲೇ ಇಟ್ಟು ನೋಯುತ್ತೆ. ಎರಡು ಕಾಲೂ ಇಟ್ಟರೆ ಹೇಗೆ, ನರಿಯಕ್ಕ?"

"ಬೇಡಪ್ಪ ಬೇಡ. ಜಾರುಬಂಡಿ ಮುರಿದುಹೋಗುತ್ತೆ."

"ಇಲ್ಲ, ನರಿಯಕ್ಕ. ಮುರಿಯಲ್ಲ."

"ಸರಿ, ಹಾಗಾದರೆ. ಇಡು!"

ತೋಳ ಇನ್ನೊಂದು ಕಾಲನ್ನೂ ಜಾರುಬಂಡಿಯೊಳಗೆ ಇರಿಸಿತು. ನರಿ ಬಂಡಿಯನ್ನು ಹೊಡೆದು ಕೊಂಡು ಹೋಯಿತು. ಸ್ವಲ್ಪ ದೂರ ಹೋದಾಗ ಏನೋ ಸೀಳಿದ ಶಬ್ದ ಕೇಳಿಬಂತು.

"ಹೇಯ್, ನೋಡಿದೆಯಾ? ನನ್ನ ಜಾರುಬಂಡಿ ಮುರೀತಾ ಇದೆ!"

"ಇಲ್ಲ, ಇಲ್ಲ, ನರಿಯಕ್ಕ, ನಾನು ಒಂದು ಬಿತ್ತ ಜಗಿದೆ. ಅದರದು ಆ ಶಬ್ದ."

"ಓಹ್, ಹಾಗೋ. ಸರಿ, ಹಾಗಾದರೆ."

ಎರಡೂ ಇನ್ನಷ್ಟು ದೂರ ಸವಾರಿ ಮಾಡಿಕೊಂಡು ಹೋದವು. ಆಗ ತೋಳ ಮತ್ತೆ ಹೇಳಿತು:

"ಇಷ್ಟು ದೂರ ಬಂದಾಯಿತು. ಈಗ ನನ್ನ ಮೂರನೇ ಕಾಲನ್ನೂ ಇಡಲಾ, ನರಿಯಕ್ಕ?"

"ಬೇಡಪ್ಪ ಬೇಡ. ಜಾರುಬಂಡಿ ಮುರಿದುಹೋಗುತ್ತೆ. ಆಮೇಲೆ ಕಟ್ಟಿಗೆಯನ್ನು ಯಾತರಲ್ಲಿ ನಾನು ಒಯ್ಯೋದು?"

"ಇಲ್ಲ, ಮುರಿಯಲ್ಲ. ನೀನೇನೂ ಹೆದರಬೇಡ!"

"ಸರಿ, ಹಾಗಾದರೆ. ಇಡು!"

ತೋಳ ಮೂರನೆಯ ಕಾಲನ್ನೂ ಇರಿಸಿತು. ಆಗ ಮತ್ತೆ ಏನೋ ಮುರಿದ ಶಬ್ದ ಕೇಳಿಬಂತು.

"ಅಯ್ಯೋ, ಇದೇನು ಶಬ್ದ! ನೋಡಿದೆಯಾ? ನೀನು ಇಳಿಯಪ್ಪ ತೋಳಣ್ಣ. ಇಲ್ಲದಿದ್ದರೆ ನನ್ನ ಜಾರುಬಂಡಿ ಮುರಿದುಹೋಗುತ್ತೆ!"

"ಇಲ್ಲ, ನರಿಯಕ್ಕ. ನಾನು ಬಿತ್ತ ಜಗಿದು ತಿಂದೆ. ಅದರದು ಆ ಶಬ್ದ."

"ಹಾಗಾದರೆ ನನಗೂ ಒಂದು ಬಿತ್ತ ಕೊಡು."

"ಇನ್ನಿಲ್ಲ ನನ್ನ ಹತ್ತಿರ. ಕೊನೇದನ್ನೂ ತಿಂದು ಬಿಟ್ಟೆ."

ಅವು ಇನ್ನಷ್ಟು ದೂರ ಹೋದವು. ಆಗ ತೋಳ ಹೇಳಿತು:

"ನರಿಯಕ್ಕ, ನರಿಯಕ್ಕ. ನಾನು ಪೂರ್ತಿ ಜಾರುಬಂಡಿಯೊಳಗೆ ಕುಳಿತರೆ ಹೇಗೆ?"

"ಬೇಡಪ್ಪ ಬೇಡ! ಜಾರುಬಂಡಿ ಮುರಿದುಹೋಗುತ್ತೆ."

"ಇಲ್ಲ. ನಾನು ಹುಷಾರಾಗಿರ್‍ತೀನಿ."

"ಸರಿ, ಹಾಗಾದರೆ. ಕೂತುಕೋ!"

ತೋಳ ಹತ್ತಿ ಕುಳಿತಿತು. ಅದರ ಭಾರಕ್ಕೆ ಜಾರುಬಂಡಿ ಚೂರುಚೂರಾಗಿ ಮುರಿಯಿತು!

ನರಿಗೆ ತುಂಬ ಕೋಪ ಬಂತು. ತೋಳನನ್ನು ಕಂಡಾಪಟ್ಟೆ ಬಯ್ಯಿತು, ಶಪಿಸಿತು. ಆಮೇಲೆ ಹೇಳಿತು:

"ಹೋಗು ಹಾಳಾದವನೆ. ಹೋಗಿ ಒಂದು ಮರ ಕಡಿದು ತುಂಡುತುಂಡು ಮಾಡಿಕೊಂಡು ಬಾ.

ನನ್ನ ಮನೆ ಬೆಚ್ಚಗೆ ಇರಿಸೋಕೂ ಆಗಬೇಕು, ಇನ್ನೊಂದು ಜಾರುಬಂಡಿ ಮಾಡೋಕೂ ಆಗಬೇಕು. ಹೋಗು, ತಗೊಂಡು ಬಾ."

"ಹ್ಯಾಗೆ ಮಾಡೋದು, ನನಗೆ ಗೊತ್ತಿಲ್ಲ, ನರಿಯಕ್ಕ. ನಿನಗೆ ಯಾವ ತರಹ ಮರ ಬೇಕೋ ಅದೂ ಗೊತ್ತಿಲ್ಲ."

"ಥೂ, ಕೆಲಸಕ್ಕೆ ಬಾರದವನೆ! ನನ್ನ ಜಾರುಬಂಡಿ ಮುರಿಯೋಕೆ ಮಾತ್ರ ಆಯಿತು, ಈಗ ಮರ ಕಡಿಯೋಕೆ ಆಗೊಲ್ಲ ಅಂತೀಯಲ್ಲ! ಎಂಥ ನಟನೆ ಮಾಡ್ತೀಯ!"

ಹೀಗೆ ನರಿ ತೋಳನನ್ನು ಚೆನ್ನಾಗಿ ಬಯ್ಯಿತು. ಆಮೇಲೆ ಹೇಳಿತು:

"ಕಾಡಿಗೆ ಹೋಗಿ ಹೇಳು: 'ನೇರವಾದ ಹಾಗೂ ಡೊಂಕಾದ ಮರವೇ, ಮುರಿದು ಬೀಳು! ನೇರವಾದ ಹಾಗೂ ಡೊಂಕಾದ ಮರವೇ, ಮುರಿದು ಬೀಳು!' "

ತೋಳ ಹೋಯಿತು. ಕಾಡಿಗೆ ಹೋಗಿ ಹೇಳಿತು:

"ಡೊಂಕಾದ ಹಾಗೂ ಡೊಂಕಾದ ಮರವೇ, ಮುರಿದು ಬೀಳು! ಡೊಂಕಾದ ಹಾಗೂ ಡೊಂಕಾದ ಮರವೇ, ಮುರಿದು ಬೀಳು!"

ಮರ ಮುರಿದು ಬಿದ್ದಿತು. ಆದರೆ ತೊಲೆಗಳು ಎಷ್ಟು ಡೊಂಕುಡೊಂಕಾಗಿ ಗಂಟುಗಂಟಾಗಿ ಇದ್ದವೆಂದರೆ, ಅವುಗಳಿಂದ ಜಾರುಬಂಡಿ ಹೋಗಲಿ ಒಂದು ಬೆತ್ತವನ್ನೂ ಮಾಡಲಾಗುತ್ತಿರಲಿಲ್ಲ.

ತೋಳ ಅವುಗಳನ್ನೇ ನರಿಗೆ ತೆಗೆದುಕೊಂಡು ಹೋಗಿ ಕೊಟ್ಟಿತು. ನರಿ ನೋಡಿತು. ಇನ್ನೂ ಹೆಚ್ಚು ಗಟ್ಟಿಯಾಗಿ ತೋಳನನ್ನು ಬಯ್ಯ ತೊಡಗಿತು:

"ಥೂ, ಶನಿ ಮುಂಡೇದೆ, ಎಂಥ ಮರ ತಂದಿದೀಯಲ್ಲ! ತಪ್ಪು ಹೇಳಿದೆ ಅಂತ ಕಾಣುತ್ತೆ!"

"ಇಲ್ಲ, ಇಲ್ಲ, ನರಿಯಕ್ಕ! ನೀನು ಹೇಳಿಕೊಟ್ಟ ಹಾಗೇ ಹೇಳಿದೆ. 'ಡೊಂಕಾದ ಹಾಗೂ ಡೊಂಕಾದ ಮರವೇ, ಮುರಿದು ಬೀಳು!' ಅಂತಲೇ ಹೇಳಿದೆ."

"ನನಗೆ ಗೊತ್ತಿತ್ತು! ಎಂಥ ದಡ್ಡ ನೀನು! ಕೂತಿರು ಇಲ್ಲಿ. ನಾನೇ ಹೋಗಿ ಒಂದು ಮರ ಕಡಿದು ತರುತ್ತೀನಿ."

ನರಿ ಹೋಯಿತು.

ತೋಳ ಕಾಯುತ್ತ ಕೂತುಕೊಂಡಿತು. ಅದಕ್ಕೆ ಹಸಿವಾಗ ತೊಡಗಿತು. ನರಿಯ ಮನೆಯಲ್ಲಿ ಏನಾದರೂ ತಿನ್ನುವುದಕ್ಕೆ ಸಿಗುತ್ತೋ ಅಂತ ಹುಡುಕಾಡಿತು. ತುಂಬ ಹೊತ್ತು ಯೋಚನೆ ಮಾಡಿ ಕೊನೆಗೆ ಹೇಳಿಕೊಂಡಿತು:

"ನಾನೇಕೆ ಈ ಕರುವನ್ನು ತಿಂದು ಓಡಿ ಹೋಗಿ ಬಿಡಬಾರದು?"

ಅದು ಕರುವಿನ ನಡುವಿನಲ್ಲಿ ಒಂದು ತೂತು ಕೊರೆದು ಒಳಗಿನ ಮಾಂಸ ಕರುಳುಗಳನ್ನೆಲ್ಲ

ತಿಂದು ಹಾಕಿ ಖಾಲಿಯಾದ ಸ್ಥಳದಲ್ಲಿ ಗುಬ್ಬಚ್ಚಿಗಳನ್ನು ತುಂಬಿ ತೂತನ್ನು ಹುಲ್ಲಿನಿಂದ ಮುಚ್ಚಿ ಓಡಿ ಹೋಯಿತು.

ಸ್ವಲ್ಪ ಹೊತ್ತಾದ ಮೇಲೆ ನರಿ ಮನೆಗೆ ಹಿಂದಿರುಗಿತು. ಅದು ತಾನು ಕಡಿದು ತಂದಿದ್ದ ಮರ ದಿಂದ ಒಂದು ಸೊಗಸಾದ ಹೊಸ ಜಾರುಬಂಡಿ ಮಾಡಿಕೊಂಡಿತು. ಅದರಲ್ಲಿ ಹತ್ತಿ ಕುಳಿತು ಕರುವಿನ ಕಡೆಗೆ ತಿರುಗಿ ಹೇಳಿತು:

"ಹೇಯ್, ಕರುವೇ! ಬಾ, ಬಂಡಿಯನ್ನು ಎಳೀ ಬಾ!"

ಕರು ನಿಂತ ಸ್ಥಳದಲ್ಲೇ ನಿಂತಿತ್ತು. ಒಂದಿಷ್ಟೂ ಕದಲಲಿಲ್ಲ.

ನರಿಗೆ ಕೋಪ ಬಂತು. ಒಂದು ಬೆತ್ತ ತಗೊಂಡು ಕರುವಿಗೆ ಬಲವಾಗಿ ಪೆಟ್ಟು ಕೊಟ್ಟಿತು. ಕರುವಿನ ಪಕ್ಕದಲ್ಲಿ ತುರುಕಿದ್ದ ಹುಲ್ಲು ಕೆಳಕ್ಕೆ ಬಿದ್ದಿತು. ಕರುವಿನ ಒಡಲಿನಿಂದ ಗುಬ್ಬಚ್ಚಿಗಳು ಸುಂಯನೆ ಹೊರಕ್ಕೆ ಹಾರಿ ಬಂದವು.

"ಓಹ್, ಎಂಥ ಮೋಸಗಾರ ತೋಳ, ಎಂಥ ನೀಚ ತೋಳ! ತಾಳು, ನಿನಗೆ ತಕ್ಕ ಶಾಸ್ತಿ ಮಾಡ್ತೀನಿ" ಎಂದು ನರಿ ಗೋಳಾಡಿತು.

ಅದು ಹೊರಕ್ಕೆ ಹೋಗಿ ರಸ್ತೆಯ ಮಧ್ಯದಲ್ಲಿ ಮೈ ಚಾಚಿ ಸದ್ದಿಲ್ಲದೆ ಬಿದ್ದುಕೊಂಡಿತು.

ಸ್ವಲ್ಪ ಹೊತ್ತಿಗೆ ಅಲ್ಲಿಗೆ ರೈತರು ಕೆಲವರು ಬಂದರು. ಅವರು ಬಂಡಿಗಳಲ್ಲಿ ಮೀನು ತುಂಬಿ ಕೊಂಡು ಹೊರಟಿದ್ದರು. ನರಿ ಅಲ್ಲೇ ನಿಶ್ಚಲವಾಗಿ ಮಲಗಿದ್ದಿತು, ಸತ್ತಿದ್ದಿತೋ ಅನ್ನುವಂತೆ ಸೋಗು ಹಾಕಿಕೊಂಡು.

ರೈತರು ಅದನ್ನು ನೋಡಿ ತುಂಬ ಆಶ್ಚರ್ಯಗೊಂಡರು.

"ಬನ್ನಿರೋ, ಈ ನರಿಯನ್ನೂ ತಗೊಂಡು ಹೋಗಿ ಮಾರಿ ದುಡ್ಡು ಮಾಡಿಕೊಳ್ಳೋಣ. ಆಮೇಲೆ ಬೇಕಾದಷ್ಟು ಸಾರಾಯಿ ಕುಡಿಯಬಹುದು!"

ಅವರು ನರಿಯನ್ನು ಎತ್ತಿ ಕೊನೆಯ ಬಂಡಿಯ ಮೇಲೆ ಹಾಕಿ ಮುಂದೆ ಹೊರಟರು. ಅವರು ಒಮ್ಮೆಯೂ ಹಿಂದಿರುಗಿ ನೋಡುತ್ತಿರಲಿಲ್ಲವೆಂಬುದನ್ನು ನರಿ ಕಂಡುಕೊಂಡಿತು. ಅದು ಮೀನು ಗಳನ್ನು ಒಂದೊಂದನ್ನಾಗಿ ಎತ್ತಿ ರಸ್ತೆಯ ಬದಿಗೆ ಎಸೆಯ ತೊಡಗಿತು. ಆಮೇಲೆ ಅರ್ಧ ಬಂಡಿ ಖಾಲಿಯಾದಾಗ ಅದು ತಾನೇ ಬಂಡಿಯಿಂದ ಕೆಳಕ್ಕೆ ಇಳಿಯಿತು.

ಇದಾವುದನ್ನೂ ನೋಡದೆ ಇದ್ದ ಜನ ಬಂಡಿಗಳನ್ನು ಮುಂದಕ್ಕೆ ಹೊಡೆದುಕೊಂಡೇ ಹೋದರು. ನರಿ ಮೀನುಗಳನ್ನೆಲ್ಲ ಗುಡ್ಡೆ ಹಾಕಿಕೊಂಡು ತಿನ್ನ ತೊಡಗಿತು.

ಅಷ್ಟು ಹೊತ್ತಿಗೆ ತೋಳ ಅಲ್ಲಿಗೆ ಬಂದಿತು.

"ನಮಸ್ಕಾರ, ನರಿಯಕ್ಕ!" ಅದು ಕೂಗಿ ಹೇಳಿತು.

"ನಮಸ್ಕಾರ, ತೋಳಣ್ಣ !"

"ಏನು ಮಾಡ್ತಿದೀಯ, ನರಿಯಕ್ಕ ?"

"ಮೀನು ತಿನ್ತಾ ಇದೀನಿ."

"ನಂಗೂ ಸ್ವಲ್ಪ ಕೊಡ್ತೀಯ ?"

"ನೀನೇ ಹೋಗಿ ಹಿಡಿ."

"ನಂಗೆ ಗೊತ್ತಿಲ್ಲ ಹ್ಯಾಗೆ ಹಿಡಿಯೋದೂಂತ."

"ನಾನೇನು ಮಾಡಲಿ ಅದಕ್ಕೆ ! ನಾನಂತೂ ಒಂದು ಮೂಳೆ ಚೂರನ್ನೂ ನಿನಗೆ ಕೊಡೊಲ್ಲ !"

"ಹೋಗಲಿ. ಹ್ಯಾಗೆ ಮೀನು ಹಿಡಿಯೋದು ಅನ್ನೋದನ್ನಾದರೂ ಹೇಳ್ತೀಯ ?"

ನರಿ ತನ್ನಲ್ಲೇ ಹೇಳಿಕೊಂಡಿತು: "ಆಗಲಿ, ತಾಳು, ತಮ್ಮ ! ನೀನು ನನ್ನ ಕರು ತಿಂದು ಹಾಕಿದೆಯಲ್ಲ. ಅದಕ್ಕೆ ಈಗ ನಿನಗೆ ತಕ್ಕ ಶಾಸ್ತಿ ಮಾಡ್ತೀನಿ !"

ಆಮೇಲೆ ಅದು ತೋಳನ ಕಡೆಗೆ ತಿರುಗಿ ಹೇಳಿತು:

"ನದಿಗೆ ಹೋಗು. ನೀರ್ಗಲ್ಲುಗಳ ಮಧ್ಯೆ ತೂತಿನಲ್ಲಿ ನಿನ್ನ ಬಾಲ ಇಳಿಬಿಡು. ಹಿಂದಕ್ಕೂ ಮುಂದಕ್ಕೂ ಅದನ್ನು ನಿಧಾನವಾಗಿ ಆಡಿಸುತ್ತ ಹೇಳು: 'ಬನ್ನಿ ಮೀನುಗಳೇ, ಪುಟ್ಟ ಮೀನುಗಳೇ, ದೊಡ್ಡ ಮೀನುಗಳೇ, ನನ್ನ ಬಾಲಕ್ಕೆ ಬಂದು ಸಿಕ್ಕಿಕೊಳ್ಳಿ !' ಹೀಗೆ ನೀನು ಬೇಕಾದಷ್ಟು ಮೀನು ಹಿಡಿಯಬಹುದು."

"ಹೌದಾ ? ಹೇಳಿಕೊಟ್ಟದ್ದಕ್ಕೆ ತುಂಬ ವಂದನೆಗಳು."

ತೋಳ ನದಿಗೆ ಓಡಿ ಹೋಯಿತು. ನೀರ್ಗಲ್ಲುಗಳ ಮಧ್ಯೆ ಇದ್ದ ತೂತಿನಲ್ಲಿ ತನ್ನ ಬಾಲವನ್ನು ಇಳಿಬಿಟ್ಟು ನಿಧಾನವಾಗಿ ಆಡಿಸುತ್ತ ಹೇಳಿತು:

"ಬನ್ನಿ, ಮೀನುಗಳೇ, ಪುಟ್ಟ ಮೀನುಗಳೇ, ದೊಡ್ಡ ಮೀನುಗಳೇ, ನನ್ನ ಬಾಲಕ್ಕೆ ಬಂದು ಸಿಕ್ಕಿಕೊಳ್ಳಿ !"

ನರಿ ದಡದ ಮೇಲೆ ಜೊಂಡುಗಳ ಮಧ್ಯದಿಂದ ತೋಳವನ್ನೇ ನೋಡುತ್ತ ಹೇಳಿತು:

"ನೀರ್ಗಲ್ಲಾಗು, ನೀರ್ಗಲ್ಲಾಗು, ತೋಳದ ಬಾಲವೇ !"

ಆಗ ಉಗ್ರ ಹಿಮಶೈತ್ಯ ಉಂಟಾಯಿತು. ತೋಳ ಮಾತ್ರ ಬಾಲ ಆಡಿಸುತ್ತ ಹೇಳುತ್ತಲೇ ಇತ್ತು:

"ಬನ್ನಿ, ಮೀನುಗಳೇ, ಪುಟ್ಟ ಮೀನುಗಳೇ, ದೊಡ್ಡ ಮೀನುಗಳೇ, ನನ್ನ ಬಾಲಕ್ಕೆ ಬಂದು ಸಿಕ್ಕಿಕೊಳ್ಳಿ !"

ನರಿಯೂ ಹೇಳುತ್ತಲೇ ಇತ್ತು:

"ನೀರ್ಗಲ್ಲಾಗು, ನೀರ್ಗಲ್ಲಾಗು, ತೋಳದ ಬಾಲವೇ !"

ಹೀಗೆ ತೋಳ ಮೀನು ಹಿಡಿಯಲೆಂದು ಕುಳಿತೇ ಇತ್ತು. ಈ ಮಧ್ಯೆ ಅದರ ಬಾಲ ಗಡ್ಡೆಕಟ್ಟಿ ನೀರ್ಗಲ್ಲಿಗೆ ಗಟ್ಟಿಯಾಗಿ ಸೇರಿಕೊಂಡು ಬಿಟ್ಟಿತು. ಅದನ್ನು ಕಂಡ ಕೂಡಲೇ ನರಿ ಹಳ್ಳಿಗೆ ಓಡಿ ಹೋಗಿ ಜನರಿಗೆ ಹೇಳಿತು:

"ಬನ್ನಿ, ಸಜ್ಜನರೇ, ಬನ್ನಿ ! ಇಲ್ಲೊಂದು ತೋಳ ಇದೆ. ಅದನ್ನು ಹೊಡೆದು ಹಾಕಿ, ಬನ್ನಿ !"

ಹಳ್ಳಿಗರು ಓಡೋಡಿ ಬಂದರು, ಈಟಿ, ಸನಿಕೆ, ಗುದ್ದಲಿಗಳನ್ನು ಹಿಡಿದುಕೊಂಡು ಬಂದರು. ಅವರು ಆ ಬಡಪಾಯಿ ತೋಳನ ಮೇಲೆ ಬಿದ್ದು ಅದನ್ನು ಬಡಿದು ಕೊಂದರು.

ನರಿಯಾದರೋ ಇನ್ನೂ ಇದ್ದುಕೊಂಡೇ ಇದೆ. ತನ್ನ ಮನೆಯಲ್ಲಿ ಸುಖಸಂತೋಷಗಳಿಂದ ಜೀವಿಸುತ್ತ ಇದೆ.

ಡಾಂಬರು ಬೆನ್ನಿನ ಹುಲ್ಲಿನ ಹೋರಿ

ಒಂದಾನೊಂದು ಕಾಲದಲ್ಲಿ ಒಬ್ಬ ಮುದುಕಿ ಒಬ್ಬ ಮುದುಕ ವಾಸವಾಗಿದ್ದರು. ಮುದುಕ ಡಾಂಬರೆಣ್ಣೆ ಮಾಡಿ ಜೀವನ ನಡೆಸುತ್ತಿದ್ದ. ಮುದುಕಿ ಮನೆಯಲ್ಲೇ ಕೆಲಸ ಮಾಡುತ್ತಿದ್ದಳು.

ಒಂದು ದಿನ ಮುದುಕಿಗೆ ತುಂಬ ಬೇಸರವಾಯಿತು. ಅವಳು ಮುದುಕನನ್ನು ಪೀಡಿಸ ತೊಡಗಿದಳು:

"ನಂಗೊಂದು ಪುಟ್ಟ ಹುಲ್ಲಿನ ಹೋರಿ ಮಾಡಿ ಕೊಡು. ಅದರ ಬೆನ್ನಿಗೆ ಡಾಂಬರು ಬಳಿದಿರಬೇಕು."

"ನಿನಗೇನಾಗಿದೆ, ಮೂರ್ಖ ಮುದುಕಿ ! ಹುಲ್ಲಿನ ಹೋರಿ ತಗೊಂಡು ಏನು ಮಾಡ್ತೀಯ ?"

"ಅದೆಲ್ಲ ನಿನಗ್ಯಾಕೆ? ನಾನು ಹೇಳಿದ್ದು ಮಾಡಿ ಕೊಡು !"

ವಿಧಿ ಇಲ್ಲದೆ ಮುದುಕ ಒಂದು ಪುಟ್ಟ ಹುಲ್ಲಿನ ಹೋರಿಯನ್ನು ಮಾಡಿದ. ಅದರ ಬೆನ್ನಿಗೆ ಪಕ್ಕಗಳಿಗೆ ಎಲ್ಲ ಡಾಂಬರು ಎಣ್ಣೆ ಬಳಿದ.

ಬೆಳಗಾಯಿತು. ಮುದುಕಿ ತನ್ನ ಹುಲ್ಲಿನ ಹೋರಿಯನ್ನು ಮೇಯಿಸಲು ಹುಲ್ಲುಗಾವಲಿಗೆ ಕೊಂಡೊಯ್ದಳು. ತನ್ನೊಂದಿಗೆ ನೂಲುವ ರಾಟೆಯನ್ನೂ ತಗೊಂಡು ಹೋದಳು.

ಅಲ್ಲಿ ಬೆಟ್ಟದ ತಪ್ಪಲಲ್ಲಿ ನೂಲು ತೆಗೆಯುತ್ತ ಕುಳಿತು ತನ್ನ ಪುಟ್ಟ ಹೋರಿಗೆ ಹೇಳಿದಳು:

"ಹುಲ್ಲು ಮೇಯಿ, ಡಾಂಬರು ಬೆನ್ನಿನ ಪುಟ್ಟ ಹೋರಿ ! ನಾನು ನೂಲು ನೂಲ್ತೀನಿ ! ನೀನು ಹುಲ್ಲು ಮೇಯಿ, ಪುಟ್ಟ ಹೋರಿ !"

ನೂಲು ನೂಲುತ್ತ ನೂಲುತ್ತ ಅವಳು ನಿದ್ದೆ ಹೋಗಿ ಬಿಟ್ಟಳು.

ಆಗ ಇದ್ದಕ್ಕಿದ್ದಂತೆ ಕಗ್ಗತ್ತಲೆಯ ಕಾಡಿನಿಂದ ಒಂದು ಕರಡಿ ಓಡಿ ಬಂತು. ಅದು ಹೋರಿಯನ್ನು ನೋಡಿ ಹೇಳಿತು: "ಯಾರು ನೀನು? ನಿನ್ನಂಥವನನ್ನು ನಾನು ನೋಡಿಯೇ ಇಲ್ಲವಲ್ಲ!"

"ನಾನು ಡಾಂಬರು ಬೆನ್ನಿನ ಹುಲ್ಲಿನ ಹೋರಿ!"

"ನನಗೆ ಸ್ವಲ್ಪ ಡಾಂಬರು ಎಣ್ಣೆ ಕೊಡ್ತೀಯ? ನಾಯಿಗಳು ನನ್ನ ಪಕ್ಕವನ್ನು ಗೀಚಿ ಗಾಯ ಮಾಡಿಬಿಟ್ಟಿವೆ."

ಪುಟ್ಟ ಹುಲ್ಲಿನ ಹೋರಿ ಏನೂ ಹೇಳದೆ ನಿಂತಲ್ಲೇ ನಿಂತಿತ್ತು. ಹಾಗಾಗಿ ತಾನೇ ಒಂದಿಷ್ಟು ಡಾಂಬರು ಎಣ್ಣೆ ತೆಗೆದುಕೊಳ್ಳೋಣವೆಂದು ಕರಡಿ ಪುಟ್ಟ ಹೋರಿಯ ಡಾಂಬರು ಬಳಿದ ಬೆನ್ನನ್ನು ತನ್ನ ಉಗುರುಗಳಿಂದ ಕೀಳ ತೊಡಗಿತು. ಆದರೆ ಉಗುರುಗಳು ಅದಕ್ಕೆ ಅಂಟಿಕೊಂಡು ಬಿಟ್ಟವು. ಎಷ್ಟು ಕಷ್ಟಪಟ್ಟರೂ ಕರಡಿಗೆ ಕೈ ಕಿತ್ತುಕೊಳ್ಳಲೇ ಆಗಲಿಲ್ಲ.

ಮುದುಕಿಗೆ ಎಚ್ಚರವಾಯಿತು. ಮನೆಗೆ ಓಡಿ ಹೋಗಿ ಹೇಳಿದಳು: "ಮುದುಕ, ಮುದುಕ! ಬೇಗ ಬಾ. ನೋಡು, ಪುಟ್ಟ ಹುಲ್ಲಿನ ಹೋರಿ ಒಂದು ಕರಡಿಯನ್ನು ಹಿಡಿದಿದೆ!"

ಮುದುಕ ಓಡೋಡಿ ಬಂದ. ಕರಡಿಯನ್ನು ಎಳೆದು ಬಿಡಿಸಿದ. ಅದನ್ನು ನೆಲಮಾಳಿಗೆಯಲ್ಲಿ ಕೂಡಿಟ್ಟ.

ಮಾರನೆಯ ದಿನ ಬೆಳಗಾಗುತ್ತಲೇ ಮುದುಕಿ ಮತ್ತೆ ತನ್ನ ರಾಟೆ ಎತ್ತಿಕೊಂಡು ತನ್ನ ಪುಟ್ಟ ಹುಲ್ಲಿನ ಹೋರಿಯನ್ನು ಮೇಯಿಸಲು ಹುಲ್ಲುಗಾವಲಿಗೆ ಹೋದಳು. ಬೆಟ್ಟದ ತಪ್ಪಲಲ್ಲಿ ನೂಲು ತೆಗೆಯುತ್ತ ಕುಳಿತು ತನ್ನ ಹುಲ್ಲಿನ ಹೋರಿಗೆ ಹೇಳಿದಳು:

"ಹುಲ್ಲು ಮೇಯಿ, ಡಾಂಬರು ಬೆನ್ನಿನ ಪುಟ್ಟ ಹೋರಿ! ನಾನು ನೂಲು ನೂಲ್ತೀನಿ! ನೀನು ಹುಲ್ಲು ಮೇಯಿ, ಪುಟ್ಟ ಹೋರಿ!"

ನೂಲುತ್ತ ನೂಲುತ್ತ ಅವಳು ನಿದ್ದೆ ಹೋಗಿ ಬಿಟ್ಟಳು.

ಆಗ ಇದ್ದಕ್ಕಿದ್ದಂತೆ ಕಗ್ಗತ್ತಲೆಯ ಕಾಡಿನಿಂದ ಒಂದು ತೋಳ ಓಡಿಕೊಂಡು ಬಂದಿತು. ಅದು ಪುಟ್ಟ ಹೋರಿಯನ್ನು ಕಂಡು ಕೇಳಿತು: "ಯಾರು ನೀನು?"

"ನಾನು ಡಾಂಬರು ಬೆನ್ನಿನ ಹುಲ್ಲಿನ ಹೋರಿ!"

"ನನಗೂ ಸ್ವಲ್ಪ ಡಾಂಬರು ಎಣ್ಣೆ ಕೊಡ್ತೀಯ? ನಾಯಿಗಳು ನನ್ನ ಪಕ್ಕಗಳನ್ನೆಲ್ಲ ಗೀಚಿ ಗಾಯ ಮಾಡಿಬಿಟ್ಟಿವೆ."

"ತಗೋ, ಬೇಕಾದರೆ."

ತೋಳ ಹುಲ್ಲಿನ ಹೋರಿಯ ಡಾಂಬರು ಬೆನ್ನಿಗೆ ಬಾಯಿ ಹಾಕಿ ಹಲ್ಲುಗಳಿಂದ ಸ್ವಲ್ಪ

ಡಾಂಬರು ಕಿತ್ತುಕೊಳ್ಳಲು ಯತ್ನಿಸಿತು. ಅದರ ಹಲ್ಲುಗಳು ಹೋರಿಯ ಬೆನ್ನಿಗೆ ಗಟ್ಟಿಯಾಗಿ ಅಂಟಿಕೊಂಡು ಬಿಟ್ಟವು.

ಮುದುಕಿಗೆ ನಿದ್ದೆ ಕಳೆದು ಎಚ್ಚರಾಯಿತು. ಅವಳು ಕೂಗಿ ಹೇಳಿದಳು: "ಮುದುಕಾ, ಮುದುಕಾ! ನೋಡು, ಹೋರಿ ಒಂದು ತೋಳವನ್ನು ಹಿಡಿದಿದೆ!"

ಮುದುಕ ಓಡಿ ಬಂದು ತೋಳವನ್ನು ಹಿಡಿದು ಅದನ್ನೂ ನೆಲಮಾಳಿಗೆಯಲ್ಲಿ ಕೂಡಿಟ್ಟ.

ಮೂರನೆಯ ದಿನವೂ ಮುದುಕಿ ಪುಟ್ಟ ಹೋರಿಯನ್ನು ಮೇಯಿಸಲು ಕರೆದೊಯ್ದಳು. ಬೆಟ್ಟದ ತಪ್ಪಲಲ್ಲಿ ಕುಳಿತು ನೂಲುತ್ತ ನೂಲುತ್ತ ನಿದ್ದೆ ಹೋದಳು.

ಸ್ವಲ್ಪ ಹೊತ್ತಿಗೆ ಒಂದು ನರಿ ಅತ್ತ ಕಡೆಗೇ ಓಡಿ ಬಂದಿತು. ಹೋರಿಯನ್ನು ಕಂಡು "ಯಾರು ನೀನು?" ಎಂದು ಕೇಳಿತು.

"ನಾನು ಡಾಂಬರು ಬೆನ್ನಿನ ಹುಲ್ಲಿನ ಹೋರಿ!"

"ಮುದ್ದು ಹೋರಿ, ನನಗೂ ಸ್ವಲ್ಪ ಡಾಂಬರು ಎಣ್ಣೆ ಕೊಡು. ನಾಯಿಗಳು ನನ್ನ ಪಕ್ಕಗಳ ಚರ್ಮವನ್ನೇ ಕಿತ್ತು ಹಾಕಿವೆ!"

"ತಗೋ."

ನರಿ ಸ್ವಲ್ಪ ಡಾಂಬರು ಎಣ್ಣೆಯನ್ನು ತೆಗೆದುಕೊಳ್ಳಲು ಯತ್ನಿಸಿತು. ಆದರೆ ಅದರ ಕೈಯೂ ಹೋರಿಯ ಪಕ್ಕಕ್ಕೆ ಗಟ್ಟಿಯಾಗಿ ಅಂಟಿಕೊಂಡು ಬಿಟ್ಟಿತು.

ಮುದುಕಿಗೆ ಎಚ್ಚರವಾಯಿತು. ಮುದುಕನನ್ನು ಕೂಗಿ ಕರೆದಳು. ಅವನು ನರಿಯನ್ನು ಹಿಡಿದು ಅದನ್ನೂ ನೆಲಮಾಳಿಗೆಯಲ್ಲಿ ಕೂಡಿಟ್ಟ.

ಈಗ ನೆಲಮಾಳಿಗೆಯಲ್ಲಿ ಅಷ್ಟು ಪ್ರಾಣಿಗಳು ಬಂದಿಯಾಗಿದ್ದವು. ಮುದುಕ ಬಾಗಿಲ ಬಳಿ ಕುಳಿತು ಚಾಕುವನ್ನು ಚೂಪು ಮಾಡ ತೊಡಗಿದ.

"ಯಾಕೆ. ಅಜ್ಜಯ್ಯ, ಚಾಕುವನ್ನು ಚೂಪು ಮಾಡ್ತಿದೀಯ?" ಕರಡಿ ಮುದುಕನನ್ನು ಕೇಳಿತು.

"ಯಾಕೇಂದರೆ ನಿನ್ನ ಚರ್ಮ ಸುಲಿದು ಅದರಿಂದ ನನಗೂ ಮುದುಕೀಗೂ ಚೆನ್ನಾದ ಕೋಟು ಮಾಡಿಕೊಳ್ಳೋಣ ಅಂತ."

"ಬೇಡ, ಅಜ್ಜಯ್ಯ! ನನ್ನನ್ನು ಬಿಟ್ಟು ಬಿಡು. ನಿನಗೆ ಬೇಕಾದಷ್ಟು ಜೇನು ತಂದು ಕೊಡ್ತೀನಿ."

"ಹಾಗಾ? ಮೋಸ ಮಾಡೊಲ್ಲ ತಾನೇ?"

"ಇಲ್ಲ, ಅಜ್ಜಯ್ಯ. ಮೋಸ ಮಾಡೊಲ್ಲ."

ಮುದುಕ ಕರಡಿಯನ್ನು ಬಿಟ್ಟು ಬಿಟ್ಟ.

ಆಮೇಲೆ ಪುತ್ತೆ ಬಾಗಿಲ ಬಳಿ ಕುಳಿತು ಚಾಕುವನ್ನು ಚೂಪು ಮಾಡ ತೊಡಗಿದ.

"ಯಾಕೆ, ಅಜ್ಜಯ್ಯ, ಚಾಕುವನ್ನು ಚೂಪು ಮಾಡ್ತಿದೀಯು?" ತೋಳ ಕೇಳಿತು.

"ಯಾಕೇಂದರೆ, ನಿನ್ನ ಚರ್ಮ ಸುಲಿಯೋಣ ಅಂತ! ಅದರಿಂದ ನನಗೆ ಚಳಿಗಾಲಕ್ಕೆ ಬೆಚ್ಚನೆಯ ಟೋಪಿ ಮಾಡ್ಕೋತೀನಿ."

"ಬೇಡ, ಅಜ್ಜಯ್ಯ. ನನ್ನನ್ನು ಬಿಟ್ಟು ಬಿಡು! ನಾನು ನಿನಗೆ ಒಂದು ದೊಡ್ಡ ಕುರಿ ಮಂದೆಯನ್ನೇ ತಂದು ಕೊಡ್ತೀನಿ."

"ಹುಂ, ನೋಡಿಕೋ! ಮೋಸಗೀಸ ಮಾಡ್ಬೇಡ. ತಿಳೀತಾ?"

ಮುದುಕ ತೋಳವನ್ನೂ ಬಿಟ್ಟು ಬಿಟ್ಟ. ಮತ್ತೆ ಚಾಕುವನ್ನು ಚೂಪು ಮಾಡುತ್ತ ಕುಳಿತ.

ನರಿಗೆ ಆ ಶಬ್ದ ಕೇಳಿಸಿತು. ಅದು ಮೂತಿಯಿಂದ ಬಾಗಿಲು ಸರಿಸುತ್ತ ಕೇಳಿತು:

"ಯಾಕೆ, ಅಜ್ಜಯ್ಯ, ಚಾಕುವನ್ನು ಚೂಪು ಮಾಡ್ತಿದೀಯು?"

"ಯಾಕೇಂದರೆ ನಿನ್ನ ಚರ್ಮ ಸುಲಿಯೋಣ ಅಂತ. ನಿನ್ನ ಮೈ ಮೇಲೆ ಎಂಥ ಚೆನ್ನಾದ ತುಪ್ಪುಳ ಇದೆ. ಅದರಿಂದ ಮುದುಕಿಯ ಕೋಟಿಗೆ ಚೆನ್ನಾದ ಕಾಲರ್ ಮಾಡಬಹುದು."

"ಬೇಡ, ಅಜ್ಜಯ್ಯ. ದಯವಿಟ್ಟು ನನ್ನನ್ನು ಕೊಲ್ಲಬೇಡ! ನನ್ನನ್ನು ಬಿಟ್ಟು ಬಿಡು! ನಿನಗೆ ಬೇಕಾದಷ್ಟು ಕೋಳಿಮರಿ ಬಾತಿನ ಮರಿಗಳನ್ನು ತಂದು ಕೊಡ್ತೀನಿ."

"ಸರಿ ಹೋಗು. ಆದರೆ ಮೋಸ ಮಾಡ್ಬೇಡ. ತಿಳೀತಾ?"

ರಾತ್ರಿಯಾಯಿತು. ರಾತ್ರಿ ಕಳೆಯಿತು. ಇನ್ನೂ ಬೆಳಕು ಹರಿದೇ ಇಲ್ಲ, ಆಗಲೇ "ಟಪ್-ಟಪ್" ಅಂತ ಬಾಗಿಲು ತಟ್ಟಿದ ಶಬ್ದ!

ಮುದುಕಿಗೆ ಎಚ್ಚರವಾಯಿತು.

"ಮುದುಕ, ಹೋಗಿ ನೋಡು. ಯಾರೋ ಬಾಗಿಲು ತಟ್ತಿದಾರೆ."

ಮುದುಕ ಬಾಗಿಲು ತೆರೆದ. ಕರಡಿ ನಿಂತಿತ್ತು. ಅದರ ಕೈಯಲ್ಲಿ ಜೇನು ಹನಿಯುತ್ತಿದ್ದ ಒಂದು ದೊಡ್ಡ ಜೇನಿನ ಗೂಡಿತ್ತು!

ಮುದುಕ ಅದನ್ನು ತಗೊಂಡು ಒಳಗಿರಿಸಿದನೋ ಇಲ್ಲವೋ. ಆಗಲೇ ಮತ್ತೆ ಬಾಗಿಲ ಬಳಿ "ಟಪ್-ಟಪ್" ಶಬ್ದ!

ಮುದುಕ ಬಾಗಿಲು ತೆರೆದ. ತೋಳ ನಿಂತಿತ್ತು. ಅದರ ಜೊತೆ ಒಂದು ಇಡೀ ಕುರಿ ಮಂದೆ ಇತ್ತು. ಆಮೇಲೆ ಸ್ವಲ್ಪ ಹೊತ್ತಿನಲ್ಲೇ ನರಿಯೂ ಬಂತು. ಅದು ಕೋಳಿಮರಿ, ಬಾತಿನ ಮರಿ, ಇನ್ನೂ ಅನೇಕ ಪಕ್ಷಿ ಮರಿಗಳನ್ನು ತಂದು ಕೊಟ್ಟಿತು.

ಮುದುಕನಿಗೂ ಮುದುಕಿಗೂ ತುಂಬ ಸಂತೋಷವಾಯಿತು. ಅವರು ಸುಖದಿಂದ ವಾಸ ಮಾಡ ತೊಡಗಿದರು.

ಬೆಕ್ಕು ಹಾಗೂ ಹುಂಜ

ಒಂದಾನೊಂದು ಕಾಲದಲ್ಲಿ ಒಂದು ಬೆಕ್ಕು ಹಾಗೂ ಒಂದು ಹುಂಜ ವಾಸಿಸುತ್ತಿದ್ದವು. ಅವು ಒಂದನ್ನೊಂದು ತುಂಬ ಪ್ರೀತಿಸುತ್ತಿದ್ದವು, ಸದಾ ಒಟ್ಟಿಗೆ ಒಂದೇ ಗುಡಿಸಿಲಿನಲ್ಲಿ ವಾಸಿಸುತ್ತಿದ್ದವು. ಒಮ್ಮೆ ಬೆಕ್ಕು ಕಟ್ಟಿಗೆ ತರಲೋಸುಗ ಕಾಡಿಗೆ ಹೋಗುತ್ತ ಹುಂಜಕ್ಕೆ ಹೇಳಿತು:

"ನೋಡು, ಮುದ್ದು ಹುಂಜ. ಒಲೆಗೂಡಿನ ಮೇಲೇ ಕೂತಿರು, ಅಂಬಲಿ ತಿನ್ನು. ಯಾರನ್ನೂ ಗುಡಿಸಿಲಿನ ಒಳಕ್ಕೆ ಬರಲು ಬಿಡಬೇಡ. ನೀನೂ ಹೊರಗೆ ಹೋಗಬೇಡ."

"ಆಗಲಿ, ಆಗಲಿ" ಎಂದು ಹೇಳಿ ಹುಂಜ ಒಳಗಿನಿಂದ ಬಾಗಿಲಿಗೆ ಭದ್ರವಾಗಿ ಅಗುಳಿ ಹಾಕಿಕೊಂಡಿತು.

ಆ ವೇಳೆಗೆ ಸರಿಯಾಗಿ ಒಂದು ನರಿ ಅಲ್ಲಿಗೆ ಬಂದಿತು. ಅದಕ್ಕೆ ಹುಂಜದ ಮಾಂಸವೆಂದರೆ ಪ್ರಾಣ. ಹುಂಜವನ್ನು ಹೇಗಾದರೂ ಮಾಡಿ ಗುಡಿಸಿಲಿನಿಂದ ಹೊರ ಬರುವಂತೆ ಮಾಡಲು ಯತ್ನಿಸಿತು. ಅದು ಹೇಳಿತು:

"ಹೊರಗೆ ಬಾ, ಪ್ರೀತಿಯ ಹುಂಜ, ಹೊರಗೆ ಬಾ! ಇದೆ ನನ್ನ ಬಳಿ ರುಚಿರುಚಿಯಾದ ಕಾಳು. ಇದೆ ನೀರು ಸಹ, ಕಣ್ಣೀರಿನಷ್ಟು ಶುದ್ಧ! ಬರದಿರೆ ನೀನು ಹೊರಗೆ ನಾನೆ ಬರಬೇಕಾದೀತು ಕಿಟಕಿಯಿಂದ ಒಳಗೆ!"

ಹುಂಜ ಅದಕ್ಕೆ ಉತ್ತರಿಸಿತು:

"ಕೊ-ಕೊ-ಕೋ-ಕ್ಕೋ, ಕೊ-ಕೊ-ಕೋ-ಕ್ಕೋ, ಬರಲಾರೆ ನಾನು ಹೊರಗೆ, ಅನುಮತಿ ಇಲ್ಲ ಬೆಕ್ಕಿನದು ಅದಕೆ!"

ನರಿ ಕಿಟಕಿಯನ್ನು ಮುರಿದು ಒಳಗೆ ಹೋಯಿತು. ಹುಂಜವನ್ನು ತಲೆಯಿಂದ ಕಚ್ಚಿ ಹಿಡಿದು ತನ್ನ ಜೊತೆ ಕರೆದೊಯ್ದಿತು. ಹುಂಜ ಬೆಕ್ಕಿಗೆ ಮೊರೆ ಇಟ್ಟಿತು:

"ನನ್ನ ಪ್ರೀತಿಯ ತಮ್ಮ ಬೆಕ್ಕೇ, ಕಾಪಾಡು ನನ್ನನ್ನು ! ಕರೆದೊಯ್ಯುತ್ತಿದೆ ನರಿಯು ನನ್ನನ್ನು ಕತ್ತಲು ತುಂಬಿದ ಕಾಡಿನಾಚೆಗೆ, ಹಸಿರು ಹುಲ್ಲಿನ ಕಣಿವೆಗಳಾಚೆಗೆ, ಎತ್ತರವಾಗಿ ನಿಂತ ಬೆಟ್ಟಗಳಾಚೆಗೆ. ಜೋರಾಗಿ ಹರಿವ ನೀರಿನಾಚೆಗೆ. ಬಿಡಬೇಡ ನನ್ನನ್ನು ಕಳೆದು ಹೋಗಲು !"

ಬೆಕ್ಕಿಗೆ ಹುಂಜದ ಮೊರೆ ಕೇಳಿಸಿತು. ಓಡಿ ಬಂದಿತು. ಹುಂಜವನ್ನು ನರಿಯಿಂದ ಬಿಡಿಸಿಕೊಂಡು ಮನೆಗೆ ಕರೆತಂದಿತು. ಮತ್ತೆ ಹುಂಜಕ್ಕೆ ಆದೇಶ ನೀಡಿತು: "ನೋಡು ! ನರಿ ಬಂದು ಮತ್ತೆ ಏನಾದರೂ ಕೂಗಿ ಕರೆದರೆ ಉತ್ತರ ಕೊಡಬೇಡ. ಈ ಸಾರಿ ನಾನು ತುಂಬ ದೂರ ಹೋಗುತ್ತಿದ್ದೇನೆ."

ಬೆಕ್ಕು ಹೊರಟು ಹೋದುದನ್ನು ಕಂಡ ನರಿ ಮತ್ತೆ ಓಡಿ ಬಂದಿತು. ಕಿಟಕಿಯ ಬಳಿ ಹೋಗಿ ಮಧುರವಾದ ಧ್ವನಿಯಲ್ಲಿ ಹೇಳಿತು: "ಹೊರಗೆ ಬಾ, ಪ್ರೀತಿಯ ಹುಂಜ, ಹೊರಗೆ ಬಾ ! ಇದೆ ನನ್ನ ಬಳಿ ರುಚಿರುಚಿಯಾದ ಕಾಳು..."

ಹುಂಜ ಉತ್ತರಿಸಿತು:

"ಕೊ-ಕೊ-ಕೋ-ಕ್ಕೋ, ಕೊ-ಕೊ-ಕೋ-ಕ್ಕೋ ! ಬರಲಾರೆ ನಾನು ಹೊರಗೆ, ಅನುಮತಿ ಇಲ್ಲ ಬೆಕ್ಕಿನದು ಅದಕೆ !"

ನರಿ ಕಿಟಕಿಯ ಮೂಲಕ ಗುಡಿಸಿಲಿನೊಳಕ್ಕೆ ಹಾರಿತು, ಮಾಂಸದ ಸಾರು ಹಾಗೂ ಅಂಬಲಿಯನ್ನು ತಿಂದಿತು, ಹುಂಜವನ್ನು ತಲೆಯಿಂದ ಕಚ್ಚಿ ಹಿಡಿದು, ತನ್ನೊಂದಿಗೆ ಕರೆದೊಯ್ದಿತು. ಹುಂಜ ಮತ್ತೆ ಮೊರೆ ಇಟ್ಟಿತು:

"ಓಯ್, ನನ್ನ ಪ್ರೀತಿಯ ತಮ್ಮ ಬೆಕ್ಕೇ ! ಕಾಪಾಡು ನನ್ನನ್ನು ! ಕರೆದೊಯ್ಯುತಿದೆ ನರಿಯು ನನ್ನನ್ನು ಕತ್ತಲು ತುಂಬಿದ ಕಾಡಿನಾಚೆಗೆ..."

ಒಂದು ಸಾರಿ ಮೊರೆ ಇಟ್ಟಿತು, ಎರಡನೆಯ ಸಾರಿ ಮೊರೆ ಇಟ್ಟಿತು – ಬೆಕ್ಕು ಓಡಿ ಬಂದಿತು. ಹುಂಜವನ್ನು ನರಿಯಿಂದ ಬಿಡಿಸಿಕೊಂಡಿತು. ಮತ್ತೆ ಕಟ್ಟುನಿಟ್ಟಾಗಿ ಆಜ್ಞೆ ಮಾಡಿತು:

"ಮುದ್ದು ಹುಂಜ, ಒಲೆಗೂಡಿನ ಮೇಲೆ ಕುಳಿತುಕೊಂಡಿರು. ಹಸಿದಾಗ ಊಟ ಮಾಡು. ನರಿ ಬಂದು ಕರೆದರೆ ಉತ್ತರ ಕೊಡಬೇಡ ! ನಾನು ದೂರ ಹೋಗುತ್ತಿದ್ದೇನೆ, ತುಂಬ ದೂರ. ನೀನು ಎಷ್ಟೇ ಕೂಗಿ ಕರೆದರೂ ನನಗೆ ಕೇಳಿಸೊಲ್ಲ !"

ಬೆಕ್ಕು ಹೋಯಿತೋ ಇಲ್ಲವೋ ನರಿ ಹಾಜರಾಯಿತು: "ಹೊರಗೆ ಬಾ, ಪ್ರೀತಿಯ ಹುಂಜ, ಹೊರಗೆ ಬಾ ! ಇದೆ ನನ್ನ ಬಳಿ ರುಚಿರುಚಿಯಾದ ಕಾಳು..."

ಹುಂಜ ಮತ್ತೆ ತಕ್ಷಣವೇ ಉತ್ತರಿಸಿತು:

"ಕೊ-ಕೊ-ಕೋ-ಕ್ಕೋ. ಕೊ-ಕೊ-ಕೋ-ಕ್ಕೋ! ಬರಲಾರೆ ನಾನು ಹೊರಗೆ, ಅನುಮತಿ ಇಲ್ಲ ಬೆಕ್ಕಿನದು ಅದಕೆ!"

ನರಿ ಕಿಟಕಿಯ ಮೂಲಕ ಒಳಕ್ಕೆ ಹಾರಿ ಹೋಯಿತು, ಮಾಂಸದ ಸಾರು, ಅಂಬಲಿ ತಿಂದಿತು. ಹುಂಜವನ್ನು ತಲೆಯಿಂದ ಹಿಡಿಯಿತು. ತನ್ನ ಜೊತೆ ಕರೆದೊಯ್ದಿತು. ಹುಂಜ ಒಮ್ಮೆ ಮೊರೆ ಇಟ್ಟಿತು, ಎರಡನೆಯ ಸಾರಿ, ಮೂರನೆಯ ಸಾರಿ ಮೊರೆ ಇಟ್ಟಿತು... ಆದರೆ ಬೆಕ್ಕು ತುಂಬ ತುಂಬ ದೂರ ಹೋಗಿದ್ದಿತು. ಅದಕ್ಕೆ ಹುಂಜದ ಮೊರೆ ಕೇಳಿಸಲೇ ಇಲ್ಲ.

ನರಿ ಹುಂಜವನ್ನು ತನ್ನ ಮನೆಗೆ ಕೊಂಡೊಯ್ಯಿತು.

ಕೊನೆಗೆ ಬೆಕ್ಕು ಕಾಡಿನಿಂದ ಮನೆಗೆ ಬಂದು ನೋಡುತ್ತೆ – ಹುಂಜ ಇಲ್ಲವೇ ಇಲ್ಲ! ಅದು ನಿಟ್ಟುಸಿರು ಬಿಟ್ಟಿತು. ಯೋಚನೆ ಮಾಡಿತು. ಬಂದೂರ ವಾದ್ಯವನ್ನೂ ಬಣ್ಣಬಣ್ಣ ಚಿತ್ತಾರದ ಒಂದು ಚೀಲವನ್ನೂ ಎತ್ತಿಕೊಂಡು ನರಿಯ ಗುಡಿಸಿಲಿನತ್ತ ನಡೆಯಿತು.

ನರಿ ಮನೆಯಲ್ಲಿರಲಿಲ್ಲ. ಒಳಗೆ ಅದರ ನಾಲ್ಕು ಹೆಣ್ಣು ಮರಿಗಳೂ ಫಿಲಿಪ್ಪೋಕ್ ಎಂಬ ಒಂದು ಗಂಡು ಮರಿಯೂ ಇದ್ದವು.

ಬೆಕ್ಕು ಕಿಟಕಿಯ ಬಳಿ ಹೋಯಿತು. ಬಂದೂರ ವಾದ್ಯ ನುಡಿಸುತ್ತ ಹಾಡಿತು:

"ಎಷ್ಟು ದೊಡ್ಡದು, ಎಷ್ಟು ಸುಂದರ ನರಿಯಕ್ಕನ ಈ ಹೊಸ ಅರಮನೆ! ಎಂಥ ಚೆಲುವೆಯರವಳ ನಾಲ್ಕು ಕುವರಿಯರು! ಅವಳ ಕುವರ ಫಿಲಿಪ್ಪೋಕ್‌ನೂ ಬಲು ಸುಂದರ! ಬನ್ನಿರಿ, ಮಕ್ಕಳೇ, ಹೊರಗೆ. ನೋಡ ಬನ್ನಿ, ನುಡಿಸುತಿರುವೆನು ನಾನು ಸೊಗಸಾದ ಗಾಯನ, ಬನ್ನಿ ನರ್ತಿಸಿ ಗಾನಕನುಗುಣವಾಗಿ!"

ನರಿಯ ಹಿರಿಯ ಮಗಳು ಕಿರಿಯರಿಗೆ ಹೇಳಿದಳು:

"ನೀವೆಲ್ಲ ಇಲ್ಲೇ ಕುಳಿತಿರಿ. ನಾನು ಹೊರಗೆ ಹೋಗಿ ಯಾರು ವಾದ್ಯ ನುಡಿಸುತ್ತಿರುವುದು ಅನ್ನುವುದನ್ನು ನೋಡಿಕೊಂಡು ಬರುತ್ತೇನೆ."

ಅವಳು ಹೊರಗೆ ಬಂದಳೋ ಇಲ್ಲವೋ ಬೆಕ್ಕು ಅವಳನ್ನು ಹಿಡಿದು ತನ್ನ ಚೀಲದಲ್ಲಿ ತುಂಬಿಕೊಂಡಿತು. ಮತ್ತೆ ಹಾಡ ತೊಡಗಿತು:

"ಎಷ್ಟು ದೊಡ್ಡದು, ಎಷ್ಟು ಸುಂದರ ನರಿಯಕ್ಕನ ಈ ಹೊಸ ಅರಮನೆ! ಎಂಥ ಚೆಲುವೆಯರವಳ ನಾಲ್ಕು ಕುವರಿಯರು!..."

ನರಿಯ ಎರಡನೆಯ ಹೆಣ್ಣು ಮಗಳೂ ಗುಡಿಸಿಲಿನಿಂದ ಹೊರಬಂದಳು. ಬೆಕ್ಕು ಅವಳನ್ನೂ ಚೀಲದಲ್ಲಿ ತುಂಬಿಕೊಂಡಿತು. ಮತ್ತೆ ಹಿಂದಿನಂತೆ ಬಂದೂರ ವಾದ್ಯ ನುಡಿಸುತ್ತ ಹಾಡಿತು:

“ಎಷ್ಟು ದೊಡ್ಡದು, ಎಷ್ಟು ಸುಂದರ ನರಿಯಕ್ಕನ ಈ ಹೊಸ ಅರಮನೆ! ಎಂಥ ಚೆಲುವೆಯರವಳ ನಾಲ್ಕು ಕುವರಿಯರು !...”

ಮೂರನೆಯ ಹೆಣ್ಣು ಮಗಳೂ ಹೊರಬಂದಳು. ಅವಳನ್ನೂ ಬೆಕ್ಕು ಚೀಲದೊಳಕ್ಕೆ ತುಂಬಿ ಕೊಂಡಿತು. ನಾಲ್ಕನೆಯವಳ ಗತಿಯೂ ಹಾಗೆಯೇ ಆಯಿತು. ಕೊನೆಗೆ ಮಗ ಫಿಲಿಪ್ಪೋಕ್‌ನೂ ಹೊರಬಂದ – ಬೆಕ್ಕಿನ ಚೀಲ ಹೊಕ್ಕ! ನರಿಯ ಐವರು ಮಕ್ಕಳೂ ಬೆಕ್ಕಿನ ಬಣ್ಣಬಣ್ಣದ ಚೀಲ ದೊಳಗೆ ಸೇರಿಕೊಂಡು ವಿಲವಿಲನೆ ಒದ್ದಾಡುತ್ತಿದ್ದವು.

ಬೆಕ್ಕು ಚೀಲದ ಬಾಯಿಯನ್ನು ಕಟ್ಟಿ ಎತ್ತಿಕೊಂಡು ನರಿಯ ಗುಡಿಸಿಲಿನ ಒಳಕ್ಕೆ ಹೋಯಿತು. ಹೋಗಿ ನೋಡುತ್ತೆ – ಹುಂಜ ಜೀವದಿಂದ ಇದೆಯೋ ಇಲ್ಲವೋ ಅನ್ನುವಂತೆ ಬೆಂಚಿನ ಮೇಲೆ ಬಿದ್ದುಕೊಂಡಿದೆ !

ಬೆಕ್ಕು ಹುಂಜವನ್ನು ಬಾಲದಿಂದ ಹಿಡಿದೆತ್ತಿ ಹೇಳಿತು:

“ಮುದ್ದು ಹುಂಜ, ತಮ್ಮ ಹುಂಜ, ಕಣ್ಣು ಬಿಡು, ಏಳು !”

ಹುಂಜ ಎಚ್ಚರಗೊಂಡಿತು. ನಿಲ್ಲಲು ನೋಡುತ್ತೆ – ಸುತ್ತಿಕೊಂಡು ಬೀಳುತ್ತೆ. ಒಂದು ಕಾಲು ಇಲ್ಲವೇ ಇಲ್ಲ ! ಆಗ ಬೆಕ್ಕು ಕತ್ತರಿಸಿ ಬಿದ್ದಿದ್ದ ಕಾಲನ್ನು ಅದರ ಹಳೆಯ ಸ್ಥಳದಲ್ಲೇ ಅಂಟು ಹಾಕಿತು.

ಆಮೇಲೆ ಅವೆರಡೂ ನರಿಯ ಗುಡಿಸಿಲಿನಲ್ಲಿ ಇದ್ದುದೆಲ್ಲವನ್ನೂ ತಿಂದವು. ಪಾತ್ರೆ ಪರಟೆ ಗಳನ್ನೆಲ್ಲ ಒಡೆದು ಹಾಕಿದವು. ಚೀಲದಲ್ಲಿ ತುಂಬಿಕೊಂಡಿದ್ದ ನರಿಯ ಮಕ್ಕಳನ್ನೆಲ್ಲ ಹೊರಕ್ಕೆ ಸುರಿದು, ತಾವೇ ತಮ್ಮ ಮನೆಗೆ ಹಿಂದಿರುಗಿದವು.

ಅವು ಅನಂತರ ತಮ್ಮಷ್ಟಕ್ಕೆ ತಾವು ಶಾಂತಿಯಿಂದ ಬಾಳ ತೊಡಗಿದವು. ಹುಂಜ ಈಗ ಬೆಕ್ಕು ಏನು ಹೇಳಿದರೂ ಅದನ್ನು ತಪ್ಪದೆ ಪಾಲಿಸುತ್ತೆ.

ಮಾರ್ಜಾಲ ಮಹಾಶಯ

ಒಂದು ಕಾಲದಲ್ಲಿ ಒಬ್ಬ ಮನುಷ್ಯ ಇದ್ದ. ಅವನ ಹತ್ತಿರ ಒಂದು ಬೆಕ್ಕು ಇತ್ತು. ಅದು ಎಷ್ಟು ಮುದಿಯಾಗಿತ್ತು ಅಂದರೆ ಇಲಿಗಳನ್ನು ಹಿಡಿಯಲೂ ಅದರ ಕೈಲಾಗುತ್ತಿರಲಿಲ್ಲ. ಅದರ ಯಜಮಾನ ಹೀಗೆ ಯೋಚನೆ ಮಾಡಿದ: "ಈ ಬೆಕ್ಕನ್ನು ಇಟ್ಟುಕೊಂಡು ನನಗೇನು ಪ್ರಯೋಜನ? ಕಾಡಿಗೆ ಕರಕೊಂಡು ಹೋಗಿ ಬಿಟ್ಟು ಬಿಡ್ತೀನಿ." ಕರಕೊಂಡು ಹೋಗಿ ಬಿಟ್ಟು ಬಂದ.

ಬೆಕ್ಕು ಮರದ ಕೆಳಗೆ ಕುಳಿತು ಅಳುತ್ತೆ. ಆ ಸಮಯಕ್ಕೆ ಸರಿಯಾಗಿ ನರಿಯಕ್ಕ ಆ ಕಡೆಗೆ ಓಡಿ ಬಂದಿತು.

"ಯಾರು ನೀನು?" ಅದು ಕೇಳುತ್ತೆ.

ಬೆಕ್ಕು ಕೂದಲು ಕೆದರಿಸಿಕೊಂಡು ಹೇಳುತ್ತೆ:

"ಫು-ಫು! ನಾನು ಮಾರ್ಜಾಲ ಮಹಾಶಯ!"

ಇಂತಹ ಮುಖ್ಯ ಮಹಾಶಯನ ಪರಿಚಯ ಪಡೆದು ನರಿಗೆ ಸಂತೋಷವೇ ಆಯಿತು. ಅದು ಆ ಬೆಕ್ಕಿಗೆ ಹೇಳಿತು:

"ನನ್ನನ್ನು ಮದುವೆಯಾಗು. ನಾನು ನಿನಗೆ ಒಳ್ಳೆಯ ಹೆಂಡತಿಯಾಗುತ್ತೇನೆ. ಚೆನ್ನಾಗಿ ಅಡಿಗೆ ಮಾಡಿ ಹಾಕ್ತೀನಿ."

"ಆಗಲಿ" ಬೆಕ್ಕು ಹೇಳುತ್ತೆ. "ಮದುವೆ ಆಗ್ತೀನಿ."

ಹೀಗೆ ಅವು ಪರಸ್ಪರ ಒಪ್ಪಿಕೊಂಡು ನರಿಯ ಗುಡಿಸಿಲಿನಲ್ಲಿ ವಾಸ ಮಾಡಲು ಹೋದವು. ನರಿ ಬೆಕ್ಕಿಗೆ ನಾನಾ ರೀತಿಯ ಆಹಾರ ತಂದು ಕೊಡುತ್ತಿತ್ತು. ಒಂದು ಸಾರಿ ಕೋಳಿ ತಂದು

ಕೊಟ್ಟಿತು, ಇನ್ನೊಂದು ಸಾರಿ ಇನ್ನಾವುದೋ ಕಾಡಿನ ಮೃಗದ ಮಾಂಸ ತಂದು ಕೊಟ್ಟಿತು. ತನಗೇ ತಿನ್ನಲು ಇರಲಿ ಬಿಡಲಿ, ಬೆಕ್ಕಿಗಂತೂ ತಂದು ಕೊಡುತ್ತಿತ್ತು.

ಒಂದು ಸಾರಿ ಶೀಘ್ರ ಓಟದ ಮೊಲ ಈ ನರಿಯನ್ನು ಸಂಧಿಸಿ ಹೇಳಿತು:

"ನರಿಯಕ್ಕ, ನಾನು ನಿನ್ನ ಮನೆಯ ಒಳಕ್ಕೆ ವಿವಾಹ ಪ್ರಸ್ತಾಪ ಮಾಡಲು ಬರ್ತೀನಿ!"

"ಬೇಡ, ಬೇಡ. ಬರಬೇಡ! ನನ್ನ ಮನೆಯಲ್ಲಿ ಈಗ ಮಾರ್ಜಾಲ ಮಹಾಶಯ ಇದ್ದಾನೆ. ಅವನು ನಿನ್ನನ್ನು ಸಿಗಿದು ಹಾಕ್ತಾನೆ."

ಆ ಹೊತ್ತಿಗೆ ಸರಿಯಾಗಿ ಬೆಕ್ಕು ಬಿಲದಿಂದ ಹೊರ ಬಂದಿತು. ಕೂದಲು ಕೆದರಿಸಿಕೊಂಡು ಶರೀರವನ್ನು ಕಮಾನಿನಂತೆ ಬಾಗಿಸಿಕೊಂಡು ಫೂತ್ಕರಿಸಿತು: "ಫ್ರು-ಫ್ರು!"

ಮೊಲಕ್ಕೆ ಪ್ರಾಣ ಹೋದಷ್ಟು ಭಯವಾಯಿತು. ಓಟ ಕಿತ್ತಿತು. ಅದು ತೋಳಕ್ಕೆ, ಕರಡಿಗೆ, ಕಾಡುಹಂದಿಗೆ ತಾನು ಮಾರ್ಜಾಲ ಮಹಾಶಯ ಎಂಬ ಯಾವುದೋ ಭಯಂಕರ ಕಾಡುಮೃಗವನ್ನು ಕಂಡುದಾಗಿ ತಿಳಿಸಿತು.

ಅವು ಹೇಗಾದರೂ ಮಾಡಿ ಈ ಮಾರ್ಜಾಲ ಮಹಾಶಯನನ್ನು ಸಂಧಿಸಬೇಕು ಅಂತ ನಿರ್ಧರಿಸಿದವು. ಅದನ್ನು ನರಿಯೊಂದಿಗೆ ಊಟಕ್ಕೆ ಬರುವಂತೆ ಆಹ್ವಾನಿಸಬೇಕು ಅಂದುಕೊಂಡವು.

ಅತಿಥಿಗಳಿಗೆ ಊಟಕ್ಕೆ ಏನು ಸಿದ್ಧಗೊಳಿಸುವುದು ಅಂತ ಸಮಾಲೋಚಿಸ ತೊಡಗಿದವು.

ತೋಳ ಹೇಳಿತು:

"ನಾನು ಮಾಂಸ ತರ್ತೀನಿ. ಅದರಿಂದ ಚೆನ್ನಾದ ಸಾರು ಮಾಡಬಹುದು."

ಕಾಡುಹಂದಿ ಹೇಳಿತು:

"ನಾನು ಹೋಗಿ ಬೀಟ್ ಗೆಡ್ಡೆ ಹಾಗೂ ಆಲೂಗೆಡ್ಡೆ ತರ್ತೀನಿ."

ಕರಡಿ ಹೇಳಿತು:

"ನಾನು ಜೇನುತುಪ್ಪ ತರ್ತೀನಿ. ಊಟಕ್ಕೆ ರುಚಿಯಾಗಿರುತ್ತೆ."

ಮೊಲ ಓಡಿ ಹೋಗಿ ಕೋಸು ತಂದಿತು.

ಅವು ಊಟ ಸಿದ್ಧಗೊಳಿಸಿದವು. ಎಲ್ಲವನ್ನೂ ಮೇಜಿನ ಮೇಲೆ ಇರಿಸಿದವು. ಈಗ ಯಾರು ಹೋಗಿ ನರಿಯನ್ನೂ ಮಾರ್ಜಾಲ ಮಹಾಶಯನನ್ನೂ ಕರೆತರುವುದು ಎಂಬ ಬಗೆಗೆ ಚರ್ಚೆ ಪ್ರಾರಂಭವಾಯಿತು.

ಕರಡಿ ಹೇಳಿತು:

"ನಾನು ದಪ್ಪ. ಬೇಗ ಓಡಲಾರೆ. ನನಗೆ ಉಸಿರು ಕಟ್ಟುತ್ತೆ."

ಕಾಡುಹಂದಿ ಹೇಳಿತು:

“ನಾನು ಒಡ್ಡೊಡ್ಡು. ಬೇಗ ಹೋಗಲಾರೆ.”

ತೋಳ ಹೇಳಿತು:

“ನನಗೆ ವಯಸ್ಸಾಗಿದೆ. ಕಿವಿಯೇ ಸರಿಯಾಗಿ ಕೇಳಿಸುತ್ತಿಲ್ಲ.”

ಹಾಗಾಗಿ ಮೊಲವೇ ಹೋಗಬೇಕಾಗಿ ಬಂದಿತು.

ಮೊಲ ನರಿಯ ಬಿಲದ ಬಳಿಗೆ ಓಡಿ ಹೋಯಿತು. ಕಿಟಕಿಯನ್ನು ಮೂರು ಬಾರಿ ತಟ್ಟಿತು: “ಟಪ್-ಟಪ್-ಟಪ್ !”

ನರಿ ಹೊರಗೆ ಬಂದು ನೋಡಿತು – ಮೊಲ ಬಂದಿತ್ತು, ಹಿಂಗಾಲುಗಳ ಮೇಲೆ ನಿಂತಿತ್ತು!

“ನಿನಗೆ ಏನು ಬೇಕು ?” ಅದು ಕೇಳಿತು.

“ತೋಳ, ಕರಡಿ, ಕಾಡುಹಂದಿ ಹಾಗೂ ನಾನು ನಿಮ್ಮನ್ನು – ನಿನ್ನನ್ನೂ ಮಾರ್ಜಾಲ ಮಹಾಶಯನನ್ನೂ – ನಮ್ಮಲ್ಲಿಗೆ ಊಟಕ್ಕೆ ಆಹ್ವಾನಿಸುತ್ತಿದ್ದೇವೆ.”

ಹೇಳಿತು, ಓಡಿತು. ಓಡಿ ಬರುತ್ತಿರುವಾಗ ಕರಡಿ ಅದಕ್ಕೆ ಸಿಕ್ಕಿ ಕೇಳಿತು: “ಅವರು ತಮ್ಮೊಂದಿಗೆ ಚಮಚಗಳನ್ನು ತರಬೇಕು ಅಂತ ಹೇಳೋದನ್ನು ಮರೀಲಿಲ್ಲ ತಾನೇ ?”

“ಅಯ್ಯೋ, ಮರೆತೇ ಬಿಟ್ಟೆ !” ಮೊಲ ಹೇಳಿತು. ಮತ್ತೆ ನರಿಯ ಬಳಿಗೆ ಓಡಿತು.

ಓಡಿ ಬಂದು ಕಿಟಕಿ ತಟ್ಟಿತು.

“ಚಮಚಗಳನ್ನು ತರುವುದನ್ನು ಮರೀಬೇಡಿ !” ಹೇಳಿತು.

ನರಿ ಉತ್ತರಿಸಿತು:

“ಆಗಲಿ, ಆಗಲಿ. ಮರೆಯೊಲ್ಲ !”

ನರಿಯಕ್ಕ ಊಟಕ್ಕೆ ಹೋಗಲು ಅಣಿಯಾಯಿತು. ಮಾರ್ಜಾಲ ಮಹಾಶಯನ ಕೈ ಹಿಡಿದುಕೊಂಡು ಹೋಯಿತು. ಮಾರ್ಜಾಲ ಮಹಾಶಯ ಮತ್ತೆ ಕೂದಲು ಕೆದರಿಸಿಕೊಂಡು, ಫೂತ್ಕರಿಸುತ್ತೆ: “ಫು-ಫು-ಫು !” ಅದರ ಕಣ್ಣುಗಳು ಎರಡು ಹಸಿರು ಬೆಂಕಿ ಉಂಡೆಗಳಂತೆ ಉರಿಯುತ್ತವೆ.

ತೋಳಕ್ಕೆ ಭಯವಾಯಿತು. ಪೊದೆಗಳ ಹಿಂದೆ ಅವಿತುಕೊಂಡಿತು. ಕಾಡುಹಂದಿ ಮೇಜಿನ ಕೆಳಗೆ ಮರೆಯಾಗಿ ಕುಳಿತುಕೊಂಡಿತು. ಕರಡಿ ಹತ್ತಿರದಲ್ಲೇ ಇದ್ದ ಯಾವುದೋ ಮರದ ಮೇಲಕ್ಕೆ ಹತ್ತಿ ಹೋಯಿತು. ಮೊಲ ಬಿಲದೊಳಗೆ ಹೋಗಿ ಅಡಗಿಕೊಂಡಿತು.

ಬೆಕ್ಕು ಮೇಜಿನ ಮೇಲಿದ್ದ ಮಾಂಸದ ವಾಸನೆಯನ್ನು ಮೂಸಿ ಅದರ ಬಳಿಗೆ ಓಡಿ ಹೋಯಿತು. “ಮಿಯಾವ್-ಮಿಯಾವ್-ಮಿಯಾವ್ !” ಅಂತ ಕೂಗುತ್ತ ಗಬಗಬನೆ ತಿನ್ನ ತೊಡಗಿತು.

"ಮಿಯಾವ್-ಮಿಯಾವ್" ಅಂದದ್ದು ಆ ಮೃಗಗಳಿಗೆ ಬೆಕ್ಕು "ಸಾಲದು-ಸಾಲದು" ಅನ್ನುತ್ತಿದೆಯೇನೋ ಎಂದು ಅನಿಸಿತು.

"ಎಂಥ ಹೊಟ್ಟೆಬಾಕ ಇದು. ಎಷ್ಟಿದ್ದರೂ ಸಾಲದು ಅನ್ನುತ್ತದಲ್ಲ!" ಎಂದುಕೊಂಡವು ಅವು.

ಮಾರ್ಜಾಲ ಮಹಾಶಯ ಚೆನ್ನಾಗಿ ತಿಂದಿತು, ಕುಡಿಯಿತು, ಮೇಜಿನ ಮೇಲೇ ಮಲಗಿ ನಿದ್ರೆಮಾಡಿತು.

ಕಾಡುಹಂದಿ ಮೇಜಿನ ಕೆಳಗೆ ಅಡಗಿ ಕುಳಿತಿದ್ದಿತಷ್ಟೆ. ಅದರ ಬಾಲದ ತುದಿಯಷ್ಟೆ ಹೊರಗೆ ಕಾಣುತ್ತಿತ್ತು. ಅದು ಇಲಿ ಎಂದು ಬೆಕ್ಕಿಗೆ ಅನ್ನಿಸಿತು. ಅದರ ಬಳಿಗೆ ಹೋಯಿತು. ಕಾಡುಹಂದಿಯನ್ನು ಕಂಡಿತು. ಹೆದರಿ ಹತ್ತಿರದಲ್ಲೇ ಇದ್ದ ಮರ ಹತ್ತಿತು. ಅದೇ ಮರದ ಮೇಲೆ ಕರಡಿಯೂ ಕುಳಿತಿತ್ತು.

ಬೆಕ್ಕು ತನ್ನ ಜೊತೆಗೆ ಹೋರಾಡಲು ಮೇಲಕ್ಕೆ ಹತ್ತಿ ಬರುತ್ತಿದೆ ಎಂದು ಕರಡಿಗೆ ಅನ್ನಿಸಿತು. ಅದು ಇನ್ನೂ ಮೇಲಕ್ಕೆ ಹತ್ತಿ ಹೋಯಿತು. ಅದರ ಭಾರಕ್ಕೆ ಕೊಂಬೆಗಳು ಮುರಿದವು. ಕರಡಿ ಧೊಪ್ಪೆಂದು ಕೆಳಕ್ಕೆ ಬಿದ್ದಿತು.

ಅದೂ ನೇರವಾಗಿ ತೋಳ ಅಡಗಿ ಕುಳಿತಿದ್ದ ಪೊದೆಯ ಮೇಲೆಯೇ ಬಿದ್ದಿತು. ತೋಳ ಅಂದುಕೊಂಡಿತು – ಬೆಕ್ಕು ಕೊನೆಗೆ ತನ್ನ ಮೇಲೇ ಬೀಳಲು ಬಂದಿದೆ. ಹಾಗೆಂದುಕೊಂಡು ಅದು ಓಟ ಕಿತ್ತಿತು! ಅವು ಹೀಗೆ ಓಡಿದವು – ತೋಳ, ತೋಳದ ಹಿಂದೆ ಕರಡಿ, ಕರಡಿಯ ಹಿಂದೆ ಮೊಲ.

ಬೆಕ್ಕು ಮತ್ತೆ ಊಟದ ಮೇಜಿನ ಮೇಲಕ್ಕೆ ಹೋಯಿತು. ಮಾಂಸ. ಜೇನು, ರುಚಿರುಚಿಯಾದ ಭಕ್ಷ್ಯಗಳನ್ನೆಲ್ಲ ತಿಂದಿತು. ಎಲ್ಲವನ್ನೂ ತಿಂದು, ಕುಡಿದು, ಬೆಕ್ಕೂ ನರಿಯೂ ತಮ್ಮ ಮನೆಗೆ ಹೋದವು.

ತೋಳ, ಕರಡಿ, ಕಾಡುಹಂದಿ ಹಾಗೂ ಮೊಲ ಮತ್ತೆ ಜೊತೆಗೂಡಿದವು. ಹೇಳುತ್ತವೆ: "ಎಂಥ ಪ್ರಾಣಿ ಇದು! ನೋಡೋಕೆ ಎಷ್ಟು ಚಿಕ್ಕದಾಗಿದೆ. ನಮ್ಮ ನಾಲ್ವರನ್ನೂ ತಿಂದು ಹಾಕುವುದರಲ್ಲಿತ್ತಲ್ಲ!"

ಹೋತ ಹಾಗೂ ಟಗರು

ಒಂದೂರಿನಲ್ಲಿ ಒಬ್ಬ ಅಜ್ಜ, ಒಬ್ಬ ಅಜ್ಜಿ ವಾಸವಾಗಿದ್ದರು. ಅವರ ಬಳಿ ಒಂದು ಹೋತ ಹಾಗೂ ಒಂದು ಟಗರು ಇದ್ದವು. ಈ ಹೋತನೂ ಈ ಟಗರೂ ಎಂಥ ಆಪ್ತ ಮಿತ್ರರಾಗಿದ್ದರೆಂದರೆ ಎಲ್ಲಿ ಹೋತ ಇರುತ್ತಿತ್ತೋ ಅಲ್ಲಿ ಟಗರು ಇರುತ್ತಿತ್ತು. ಹೋತ ಸ್ವಲ್ಪ ಕೋಸಿನ ಎಲೆ ತಿನ್ನೋಣ ಅಂತ ತರಕಾರಿ ತೋಟಕ್ಕೆ ಹೋದರೆ ಟಗರೂ ಅಲ್ಲಿಗೆ ಹೋಗುತ್ತಿತ್ತು. ಹೋತ ಹಣ್ಣಿನ ತೋಟಕ್ಕೆ ಹೋದರೆ ಟಗರೂ ಅದರ ಹಿಂದೆಯೇ ಹೋಗುತ್ತಿತ್ತು!

ಒಂದು ದಿನ ಅಜ್ಜ ಅಜ್ಜಿಗೆ ಹೇಳಿದ: "ಈ ಹೋತವನ್ನೂ ಟಗರನ್ನೂ ಇಟ್ಟುಕೊಂಡು ನಮಗೇನು ಪ್ರಯೋಜನ? ಸುಮ್ಮನೆ ಕೂತುಕೊಂಡು ತಿನ್ನುತ್ತಿವೆ. ಹೀಗೇ ಇದ್ದರೆ ನಾವೇ ಉಪವಾಸ ಬೀಳಬೇಕಾಗುತ್ತೆ." ಆಮೇಲೆ ಹೋತ ಹಾಗೂ ಟಗರಿನ ಕಡೆಗೆ ತಿರುಗಿ ಹೇಳಿದ: "ಇನ್ನು ಹೊರಡಿ ನೀವು ಇಲ್ಲಿಂದ! ತಿರುಗಿ ನಿಮ್ಮ ಮುಖಾನೂ ತೋರಿಸಬಾರದು ನನಗೆ!"

ಹೋತನೂ ಟಗರೂ ಗಂಟು ಮೂಟೆ ಕಟ್ಟಿಕೊಂಡು ಹೊರಟವು.

ಹೋದವೂ, ಹೋದವೂ. ಕೊನೆಗೆ ಒಂದು ಮೈದಾನಕ್ಕೆ ಬಂದವು. ಅಲ್ಲಿ ಮಧ್ಯದಲ್ಲಿ ಅವಕ್ಕೆ ಏನು ಕಾಣಿಸಿತು ಅಂತೀರಾ – ಒಂದು ತೋಳನ ತಲೆ!

ಟಗರಿಗೆ ಬಲ ಇತ್ತು, ಆದರೆ ಧೈರ್ಯ ಇರಲಿಲ್ಲ. ಹೋತಕ್ಕೆ ಧೈರ್ಯ ಇತ್ತು, ಆದರೆ ಬಲ ಇರಲಿಲ್ಲ.

"ಆ ತೋಳನ ತಲೆಯನ್ನು ತೆಗೆದಿಟ್ಟುಕೋ, ಟಗರೇ! ನಿನಗೆ ಬಲ ಇದೆ. ನಿನಗೆ ಸಾಧ್ಯ" ಹೋತ ಹೇಳಿತು.

"ಇಲ್ಲ, ಇಲ್ಲ, ಹೋತ. ನೀನೇ ತೆಗೆದಿಟ್ಟುಕೋ. ನಿನಗೆ ತುಂಬ ಧೈರ್ಯ ಇದೆ" ಟಗರು ಹೇಳಿತು.

ಕೊನೆಗೆ ಎರಡೂ ಒಟ್ಟಿಗೇ ಆ ತೋಳನ ತಲೆಯನ್ನು ತೆಗೆದುಕೊಂಡು ತಮ್ಮ ಚೀಲದೊಳಕ್ಕೆ ತುರುಕಿಕೊಂಡವು. ಆಮೇಲೆ ಮುಂದೆ ಹೊರಟವು.

ಹೋದವೂ ಹೋದವೂ. ಕೊನೆಗೆ ನೋಡುತ್ತವೆ – ದೂರದಲ್ಲಿ ಒಂದು ಕಡೆ ಒಂದು ಶಿಬಿರಾಗ್ನಿ ಉರೀತಾ ಇದೆ.

ಹೋತ ಹೇಳಿತು: "ಆ ಬೆಂಕಿ ಇರೋ ಕಡೆಗೆ ಹೋಗೋಣ. ರಾತ್ರಿ ಬೆಚ್ಚಗೆ ಅಲ್ಲೇ ಕಳೀಬಹುದು. ತೋಳಗಳ ಕಾಟಾನೂ ಇರೊಲ್ಲ."

ಅವು ಅಲ್ಲಿಗೆ ಹೋಗಿ ನೋಡುತ್ತವೆ – ಶಿಬಿರಾಗ್ನಿ ಸುತ್ತ ಮೂರು ತೋಳಗಳು ಕೂತಿವೆ! ಅವು ಅಂಬಲಿ ಬೇಯಿಸ್ತಾ ಇವೆ.

"ನಮಸ್ಕಾರ, ಗೆಳೆಯರೇ!" ಹೋತನೂ ಟಗರೂ ಒಟ್ಟಿಗೇ ಹೇಳಿದವು.

"ನಮಸ್ಕಾರ, ನಮಸ್ಕಾರ!" ತೋಳಗಳು ಹೇಳಿದವು. "ಬನ್ನಿ, ಬನ್ನಿ. ನಮ್ಮ ಅಂಬಲಿ ಇನ್ನೂ ಸಿದ್ಧವಾಗಿಲ್ಲ. ಅದು ಬೇಯುತ್ತ ಇರೋವಾಗ ನಾವು ಸ್ವಲ್ಪ ನಿಮ್ಮ ಮಾಂಸದ ರುಚಿ ನೋಡಬಹುದು."

ಇದನ್ನು ಕೇಳಿ ಧೈರ್ಯಶಾಲಿಯಾದ ಹೋತಕ್ಕೂ ಹೆದರಿಕೆ ಆಯಿತು. ಇನ್ನು ಟಗರಿನ ವಿಷಯ ಹೇಳಬೇಕಾಗೇ ಇಲ್ಲ – ತೋಳಗಳು ಕಣ್ಣಿಗೆ ಬಿದ್ದಾಗಿನಿಂದಲೂ ಅದು ಥರಥರ ನಡುಗುತ್ತಲೇ ಇತ್ತು.

ಹೋತ ಧೈರ್ಯ ತಂದುಕೊಂಡು ಆ ಅಪಾಯದಿಂದ ಪಾರಾಗಲು ಒಂದು ಉಪಾಯ ಯೋಚಿಸುತ್ತಾ ಟಗರಿಗೆ ಗಟ್ಟಿಯಾಗಿ ಹೇಳಿತು: "ಬಾ, ತಮ್ಮ ಟಗರೇ! ಆ ತೋಳನ ತಲೆಯನ್ನು ಚೀಲದಿಂದ ಹೊರಕ್ಕೆ ತೆಗಿ!"

ಟಗರು ಹಾಗೇ ಮಾಡಿತು.

"ಉಹೂಂ, ಅದಲ್ಲ. ಇನ್ನೊಂದು ದೊಡ್ಡದು!" ಹೋತ ಹೇಳಿತು.

ಟಗರು ತೋಳನ ತಲೆಯನ್ನು ಚೀಲದೊಳಕ್ಕೆ ಹಾಕಿ ಮತ್ತೆ ಅದನ್ನೇ ಹೊರಕ್ಕೆ ತೆಗೆಯಿತು.

"ಉಹೂಂ. ಅದೂ ಅಲ್ಲಪ್ಪ! ಇನ್ನೂ ದೊಡ್ಡದಿದೆ, ನೋಡು. ಎಲ್ಲಕ್ಕಿಂತ ದೊಡ್ಡದು. ಅದನ್ನು ತೆಗಿ!"

ಇದನ್ನು ಕೇಳಿಸಿಕೊಂಡ ತೋಳಗಳಿಗೆ ಜಂಘಾಬಲವೇ ಉಡುಗಿ ಹೋಯಿತು. ಹೇಗಾದರೂ ಮಾಡಿ ಇವುಗಳಿಂದ ತಪ್ಪಿಸಿಕೊಂಡು ಹೋದರೆ ಸಾಕು ಅಂತ ಅನಿಸಿತು ಅವಕ್ಕೆ. ಅವು ಯೋಚನೆ

ಮಾಡ ತೊಡಗಿದವು. ಒಂದು ಇನ್ನೊಂದರ ಹಂಚಿಕೆ ಏನು ಅಂತ ತಿಳಿದುಕೊಳ್ಳಲು ತಲೆ ಮುಂದು ಮಾಡುತ್ತಿದ್ದವು.

ಕೊನೆಗೆ ಒಂದು ತೋಳ ಹೇಳಿತು:

"ನಾವೆಲ್ಲ ಒಟ್ಟಿಗೆ ಸೇರಿದುದು ಎಷ್ಟು ಸಂತೋಷ, ಸೋದರರೇ! ನಮ್ಮ ಅಂಬಲಿಯೂ ಚೆನ್ನಾಗಿ ಬೇಯುತ್ತಿದೆ. ಅದಕ್ಕೆ ಇನ್ನೂ ಸ್ವಲ್ಪ ನೀರು ಬೇಕು ಅಂತ ಕಾಣುತ್ತೆ. ನಾನು ಹೋಗಿ ತಗೊಂಡು ಬರ್ತೀನಿ."

ಹಾಗೆಂದು ಸ್ವಲ್ಪ ದೂರ ಹೋಗಿ ತನ್ನಲ್ಲೇ "ಓಹ್, ಸಾಕಾಯಿತು ಇವುಗಳ ಸಹವಾಸ! ಇವೆಲ್ಲ ಹಾಳಾಗಿ ಹೋಗಲಿ!" ಎಂದು ಹೇಳಿಕೊಳ್ಳುತ್ತ ಓಡಿ ಹೋಯಿತು.

ಅದೇ ರೀತಿ ಎರಡನೆಯ ತೋಳವೂ ಹ್ಯಾಗೆ ಕಂಬಿ ಕೀಳೋದೂ ಅಂತ ಯೋಚನೆ ಮಾಡಿತು. ಕೊನೆಗೆ ಹೇಳಿತು:

"ನೋಡಿದಿರಾ ಆ ಶನಿ ಮುಂಡೇ ಗಂಡ! ಹೋದವ ಹಿಂದಿರುಗಿ ಬರಲೇ ಇಲ್ಲ! ಭೂಮಿಯೇ ನುಂಗಿ ಹಾಕಿ ಬಿಟ್ಟಿತೇನೋ ಅಂತ! ಅಂಬಲಿಗೆ ನೀರು ತರಲೇ ಇಲ್ಲ. ನಾನು ಹೋಗಿ ಕೋಲು ತಗೊಂಡು ಹೊಡಕೊಂಡು ಬರ್ತೀನಿ."

ಹಾಗೆಂದು ಅದೂ ಓಟ ಕಿತ್ತಿತು.

ಮೂರನೆಯ ತೋಳವೂ ಸ್ವಲ್ಪ ಹೊತ್ತು ಕಾದು ಹೇಳಿತು:

"ಸರಿ, ನಾನು ಹೋಗಿ ಇಬ್ಬರನ್ನೂ ಹಿಡಕೊಂಡು ಬರ್ತೀನಿ!"

ಅದೂ ಓಡಿತು, ಬಚಾವಾದೆನಲ್ಲ ಅಂತ ಸಂತೋಷದಿಂದ.

"ಹುಂ, ಬೇಗ ಬಾ, ಟಗರು ತಮ್ಮ! ಕಾಲ ಕಳೆಯಲು ಸಮಯವಿಲ್ಲ. ಬೇಗ ಬೇಗ ಅಂಬಲಿ ತಿಂದು ಓಡಿ ಹೋಗೋಣ!" ಅಂದಿತು ಹೋತ.

ಈ ಮಧ್ಯೆ ಮತ್ತೆ ಒಟ್ಟಿಗೆ ಸೇರಿದ ಮೂರು ತೋಳಗಳೂ ಯೋಚನೆ ಮಾಡ ತೊಡಗಿದವು. ಒಂದು ತೋಳ ಹೇಳಿತು:

"ಏನು ಮಾಡಿ ಬಿಟ್ಟೆವು ನಾವು! ಹೋತಕ್ಕೂ ಟಗರಿಗೂ ಹೆದರೋದೆ, ಸೋದರರೇ? ಬನ್ನಿ ಹೋಗೋಣ, ಆ ಶನಿ ಮುಂಡೇವನ್ನು ತಿಂದು ಹಾಕೋಣ."

ಅವು ಹಿಂದಿನ ಸ್ಥಳಕ್ಕೇ ಓಡಿ ಬಂದವು. ಆದರೆ ಹೋತ ಹಾಗೂ ಟಗರು ಅಲ್ಲಿರಲೇ ಇಲ್ಲ. ಅವು ಅಂಬಲಿಯನ್ನೆಲ್ಲ ತಿಂದು ಒಂದು ಮರ ಹತ್ತಿ ಕುಳಿತಿದ್ದವು.

ತೋಳಗಳು ಏನು ಮಾಡೋದು ಅಂತ ಯೋಚನೆ ಮಾಡ ತೊಡಗಿದವು. ಸ್ವಲ್ಪ ದೂರ ಹೋಗಿ ಸುತ್ತಮುತ್ತ ನೋಡಿದವು. ಅಕೋ, ಹೋತನೂ ಟಗರೂ ಅಲ್ಲೇ ಇವೆ, ಮರದ ಮೇಲೆ!

ಪೆಚ್ಚು ಧೈರ್ಯಶಾಲಿಯಾದ ಪೋತ ಹೆಚ್ಚು ಎತ್ತರಕ್ಕೆ ಹತ್ತಿ ಕುಳಿತಿತ್ತು. ಟಗರು ಸ್ವಲ್ಪ ಕೆಳಗೆ ಕುಳಿತಿತ್ತು.

ಚಿಕ್ಕ ತೋಳ ಪೊದೆಗೂದಲಿನ ದೊಡ್ಡ ತೋಳಕ್ಕೆ ಹೇಳಿತು: "ನೋಡು ನೀನು ದೊಡ್ಡೋನು. ಈಗ ಏನು ಮಾಡಬೇಕು ಅಂತ ನೀನೇ ಯೋಚನೆ ಮಾಡಿ ಹೇಳು."

ಪೊದೆಗೂದಲ ತೋಳ ಮರದ ಕೆಳಗೆ ಕುಳಿತು ಯೋಚನೆ ಮಾಡ ತೊಡಗಿತು. ಮರದ ಮೇಲೆ ಕುಳಿತ ಟಗರಿಗೆ ಹೆದರಿಕೆ – ಗಡಗಡ ನಡುಗುತ್ತ ಇದೆ. ಕೊನೆಗೆ ತಾಳಲಾರದೆ ಕೆಳಕ್ಕೆ ಬಿದ್ದೇ ಬಿಟ್ಟಿತು – ನೇರವಾಗಿ ಪೊದೆಗೂದಲ ತೋಳನ ಮೇಲೆಯೇ ! ಮರದ ಮೇಲೆ ಎತ್ತರದಲ್ಲಿ ಕುಳಿತಿದ್ದ ಪೋತ ಹೀಗೆ ಆಗಬಹುದು ಅಂತ ಮೊದಲೇ ಅಂದುಕೊಂಡಿತ್ತು. ಅದು ಕೂಡಲೇ ಕೂಗಿ ಹೇಳಿತು:

"ಹಿಡಕೊಂಡು ಬಾ ಇಲ್ಲಿ ಆ ಪೊದೆಗೂದಲಿನವನನ್ನು !" ಹಾಗೆಂದು ಅದು ಕೂಡ ಮರದಿಂದ ಕೆಳಕ್ಕೆ ತೋಳಗಳ ಮೇಲೆ ಬಿದ್ದಿತು.

ತೋಳಗಳು ಹೆದರಿ ಕಂಬಿ ಕಿತ್ತವು. ಎಷ್ಟು ಜೋರಾಗಿ ಓಡಿದವೆಂದರೆ ಅವುಗಳ ಹಿಂದೆ ಭಾರಿ ಧೂಳಿನ ಮೋಡವೇ ಎದ್ದಿತು.

ಈಗ ಪೋತಕ್ಕೂ ಟಗರಿಗೂ ಯಾವ ಚಿಂತೆಯೂ ಇರಲಿಲ್ಲ. ಅವು ಸ್ವತಂತ್ರವಾಗಿ ಸುಖವಾಗಿ ಜೀವಿಸಿಕೊಂಡು ಇದ್ದವು.

ತಂತ್ರಗಾರ ನರಿ

ಒಂದು ಸಾರಿ ಒಂದು ನರಿ ಒಂದು ಕೋಳಿಮರಿಯನ್ನು ಕದ್ದಿತು. ಅದನ್ನು ಕಚ್ಚಿಕೊಂಡು ಓಡಿತೂ, ಓಡಿತೂ. ಅದಕ್ಕೆ ತಿಳಿಯೋಕೆ ಮುನ್ನವೇ ಕತ್ತಲಾಗಿ ಬಿಟ್ಟಿತು. ಅದಕ್ಕೊಂದು ಗುಡಿಸಿಲು ಕಾಣಿಸಿತು. ಅದು ಅದರೊಳಕ್ಕೆ ಹೋಯಿತು. ಒಳಗೆ ಕೆಲವು ಜನ ಕೂತಿದ್ದರು.

"ನಮಸ್ಕಾರ, ಸಜ್ಜನರೇ !"

"ನಮಸ್ಕಾರ, ನರಿಯಕ್ಕ !"

"ನನಗೆ ಸ್ವಲ್ಪ ಈ ರಾತ್ರಿ ನಿಮ್ಮಲ್ಲಿರೋಕೆ ಅವಕಾಶ ಕೊಡ್ತೀರ ?"

"ಅಯ್ಯೋ, ನರಿಯಕ್ಕ ! ನಮ್ಮ ಗುಡಿಸಿಲು ಚಿಕ್ಕದು. ನಮಗೇ ಸಾಲುತ್ತಿಲ್ಲ, ನಿನ್ನನ್ನು ಎಲ್ಲಿ ಇರಿಸೋದು !"

"ಪರವಾಗಿಲ್ಲ, ಹೇಗೋ ಹೊಂದಿಸಿಕೋತೀನಿ. ಈ ಬೆಂಚಿನ ಕೆಳಗೇ ಮುದುಡಿ ಮಲಗಿಕೋತೀನಿ. ಬಾಲವನ್ನೇ ಹೊದ್ದುಕೋತೀನಿ. ಹೇಗೋ ರಾತ್ರಿ ಕಳೆದರೆ ಸಾಕು !"

"ಸರಿ, ಹಾಗಾದರೆ. ಹಾಗೇ ಮಾಡು."

"ನನ್ನ ಈ ಕೋಳಿಮರಿಯನ್ನು ಎಲ್ಲಿ ಇಡಲಿ ?"

"ಅಗ್ಗಿಷ್ಟಿಕೆ ಕೆಳಗೆ ಇರಿಸು."

ನರಿ ಹಾಗೇ ಮಾಡಿತು. ಮಧ್ಯರಾತ್ರಿಯಲ್ಲಿ ಯಾರಿಗೂ ಕಾಣದ ಹಾಗೆ ಎದ್ದು ಕೋಳಿಮರಿಯನ್ನು ತಿಂದು ಹಾಕಿ ಪುಕ್ಕಗಳನ್ನು ಬಚ್ಚಿಟ್ಟಿತು.

ಮಾರನೆಯ ಬೆಳಿಗ್ಗೆ ಎಲ್ಲರಿಗಿಂತ ಮೊದಲು ತಾನೇ ಎದ್ದಿತು. ಮುಖ ತೊಳೆದುಕೊಂಡು ಎಲ್ಲರಿಗೂ ಸುಪ್ರಭಾತ ಹೇಳಿತು.

"ನನ್ನ ಕೋಳಿಮರಿ ಎಲ್ಲಿ?" ಅದು ಕೇಳಿತು.

"ಅಗ್ಗಿಷ್ಟಿಕೆ ಕೆಳಗೇ ಇರಬೇಕು."

"ಇಲ್ಲವಲ್ಲ. ನಾನು ನೋಡಿದೆ. ಅಲ್ಲಿ ಇಲ್ಲವೇ ಇಲ್ಲ."

ಹಾಗೆಂದು ಅದು ಜೋರಾಗಿ ಅಳ ತೊಡಗಿತು.

"ನನ್ನ ಬಳಿ ಇದ್ದುದೆಲ್ಲ ಈ ಕೋಳಿಮರಿ ಒಂದೇ. ಈಗ ಅದೂ ಹೊರಟು ಹೋಯಿತಲ್ಲ" ಎಂದದು ಬಿಕ್ಕಳಿಸಿ ಅಳ ತೊಡಗಿತು. "ಈಗ ನೀವು ಅದರ ಬದಲಿಗೆ ನನಗೆ ಒಂದು ಬಾತುಕೋಳಿ ಕೊಡಬೇಕು !"

ವಿಧಿ ಇಲ್ಲದೆ ಅವರು ಅದಕ್ಕೆ ಒಂದು ಬಾತುಕೋಳಿ ಕೊಟ್ಟರು. ನರಿ ಬಾತುಕೋಳಿಯನ್ನು ಚೀಲದಲ್ಲಿ ತುರುಕಿಕೊಂಡು ಓಡಿತು. ಓಡಿತೂ, ಓಡಿತೂ. ಅದಕ್ಕೆ ತಿಳಿಯೋಕೆ ಮುನ್ನವೇ ಕತ್ತಲಾಗಿ ಬಿಟ್ಟಿತು. ಅಷ್ಟು ಹೊತ್ತಿಗೆ ಸರಿಯಾಗಿ ಅದಕ್ಕೊಂದು ಗುಡಿಸಿಲು ಕಾಣಿಸಿತು. ಒಳಗೆ ಹೋಗಿ ಹೇಳಿತು:

"ನಮಸ್ಕಾರ, ಸಜ್ಜನರೇ !"

"ನಮಸ್ಕಾರ, ನರಿಯಕ್ಕ !"

"ನನಗೆ ಸ್ವಲ್ಪ ಈ ರಾತ್ರಿ ನಿಮ್ಮಲ್ಲಿರೋಕೆ ಅವಕಾಶ ಕೊಡ್ತೀರ?"

"ಎಲ್ಲಾಗುತ್ತೆ ನರಿಯಕ್ಕ ! ಈ ಗುಡಿಸಿಲು ನಮಗೇ ಚಿಕ್ಕದು. ನಿನಗೆಲ್ಲಿಂದ ಸ್ಥಳ ತರೋಣ?"

"ಪರವಾಗಿಲ್ಲ ! ಹೇಗೋ ಹೊಂದಿಸಿಕೋತೀನಿ. ಈ ಬೆಂಚಿನ ಕೆಳಗೇ ಮುದುಡಿ ಮಲಗಿಕೋತೀನಿ. ಬಾಲವನ್ನೇ ಹೊದ್ದುಕೋತೀನಿ. ಹೇಗೋ ರಾತ್ರಿ ಕಳೆದರೆ ಸಾಕು !"

"ಸರಿ, ಹಾಗಾದರೆ. ಹಾಗೇ ಮಾಡು !"

"ನನ್ನ ಬಾತುಕೋಳಿಯನ್ನು ಎಲ್ಲಿ ಇರಿಸಲಿ?"

"ಕಣಜದಲ್ಲಿರಿಸು. ವರಟೆಗಳ ಜೊತೆಗೆ."

ನರಿ ಹಾಗೇ ಮಾಡಿತು. ಮಧ್ಯರಾತ್ರಿಯಲ್ಲಿ ಮೆಲ್ಲಗೆದ್ದು ಬಾತುಕೋಳಿಯನ್ನು ತಿಂದು ಹಾಕಿ ಪುಕ್ಕಗಳನ್ನೆಲ್ಲ ಬಚ್ಚಿಟ್ಟಿತು.

ಮಾರನೆಯ ಬೆಳಿಗ್ಗೆ ಹೊತ್ತಿಗೆ ಮುಂಚೆಯೇ ಎದ್ದು ಮುಖ ತೊಳೆದುಕೊಂಡು ಅತಿಥೇಯರಿಗೆ ಸುಪ್ರಭಾತ ಹೇಳಿತು.

"ನನ್ನ ಬಾತುಕೋಳಿ ಎಲ್ಲಿ?" ಅದು ಕೇಳಿತು.

ಅವರು ಕಣಜದಲ್ಲಿ ನೋಡಿದರು. ಬಾತುಕೋಳಿ ಇರಲಿಲ್ಲ.

ಮನೆಯ ಯಜಮಾನ ಹೇಳಿದ:

"ಯಾರಿಗೆ ಗೊತ್ತು? ಬಹುಶಃ ನಾವು ಅದನ್ನೂ ವರಟೆಗಳೊಂದಿಗೆ ಹೊರಕ್ಕೆ ಬಿಟ್ಟು ಬಿಟ್ಟೆವೋ ಏನೋ?"

ನರಿ ಗಟ್ಟಿಯಾಗಿ ಅಳ ತೊಡಗಿತು:

"ಅಯ್ಯೋ, ಏನು ಮಾಡೋದು? ನನ್ನ ಬಳಿ ಇದ್ದುದೆಲ್ಲ ಇದೊಂದು ಬಾತುಕೋಳಿಯಷ್ಟೆ. ಈಗ ಅದೂ ಹೋಯಿತಲ್ಲ!"

ಅದು ಬಿಕ್ಕಿಬಿಕ್ಕಿ ಅಳುತ್ತ ಹೇಳಿತು: "ನೀವು ಬಾತುಕೋಳಿಯ ಬದಲಿಗೆ ನನಗೆ ಒಂದು ವರಟೆ ಕೊಡಬೇಕು."

ವಿಧಿ ಇಲ್ಲದೆ ಅವರು ನರಿಗೆ ಒಂದು ವರಟೆ ಕೊಟ್ಟರು. ನರಿ ಅದನ್ನು ತನ್ನ ಚೀಲದಲ್ಲಿ ತುರುಕಿಕೊಂಡು ಓಡಿತು. ಓಡಿತೂ, ಓಡಿತೂ. ಅದಕ್ಕೆ ತಿಳಿಯೋಕೆ ಮುನ್ನವೇ ಕತ್ತಲಾಗಿ ಬಿಟ್ಟಿತು. ಅಷ್ಟು ಹೊತ್ತಿಗೆ ಸರಿಯಾಗಿ ಅದಕ್ಕೊಂದು ಗುಡಿಸಿಲು ಕಾಣಿಸಿತು. ಒಳಗೆ ಹೋಗಿ ಹೇಳಿತು:

"ನಮಸ್ಕಾರ, ಸಜ್ಜನರೇ. ನನಗೆ ಸ್ವಲ್ಪ ಇವತ್ತು ರಾತ್ರಿ ನಿಮ್ಮಲ್ಲಿರೋಕೆ ಅವಕಾಶ ಕೊಡ್ತೀರ?"

"ಅಯ್ಯೋ, ಅದೆಲ್ಲಿ ಆಗುತ್ತೆ, ನರಿಯಕ್ಕ! ಈ ಗುಡಿಸಿಲು ನಮಗೇ ಚಿಕ್ಕದು. ನಿನಗೆಲ್ಲಿಂದ ಸ್ಥಳ ತರೋಣ?"

"ಪರವಾಗಿಲ್ಲ, ಹೇಗೋ ಹೊಂದಿಸಿಕೋತೀನಿ. ಈ ಬೆಂಚಿನ ಕೆಳಗೇ ಮುದುಡಿ ಮಲಗಿಕೋತೀನಿ. ಬಾಲವನ್ನೇ ಹೊದ್ದುಕೋತೀನಿ. ಹೇಗೋ ರಾತ್ರಿ ಕಳೆದರೆ ಸಾಕು!"

"ಸರಿ, ಹಾಗಾದರೆ ಹಾಗೇ ಮಾಡು!"

"ನನ್ನ ವರಟೆಯನ್ನು ಎಲ್ಲಿ ಇರಿಸಲಿ?"

"ಕಣಜದಲ್ಲಿಡು, ಕುರಿಗಳ ಜೊತೆ."

ನರಿ ಹಾಗೇ ಮಾಡಿತು. ಮಧ್ಯರಾತ್ರಿಯಲ್ಲಿ ಮೆಲ್ಲಗೆದ್ದು ವರಟೆಯನ್ನು ತಿಂದು ಹಾಕಿ ಪುಕ್ಕಗಳನ್ನೆಲ್ಲ ಬಚ್ಚಿಟ್ಟಿತು.

ಮಾರನೆಯ ಬೆಳಿಗ್ಗೆ ಹೊತ್ತಿಗೆ ಮುಂಚೆಯೇ ಎದ್ದು ಮುಖ ತೊಳೆದುಕೊಂಡು ಆತಿಥೇಯರಿಗೆ ಸುಪ್ರಭಾತ ಹೇಳಿತು.

"ನನ್ನ ವರಟೆ ಎಲ್ಲಿ?" ಅದು ಕೇಳಿತು.

ಅವರು ಕಣಜದಲ್ಲಿ ನೋಡಿದರು. ವರಟೆ ಇರಲಿಲ್ಲ. ಆಗ ಅದು ಹೇಳಿತು:

"ಅಯ್ಯೋ, ನಾನು ಎಲ್ಲೆಲ್ಲೋ ಹೋಗಿ ಬಂದಿದೀನಿ. ಎಲ್ಲೂ ಹೀಗೆ ಆದುದಿಲ್ಲ. ನನ್ನ ಬಳಿ ಇದ್ದುದೆಲ್ಲ ಅದೊಂದು ವರಟೆಯುಷ್ಟೆ. ಈಗ ಅದೂ ಹೋಯಿತಲ್ಲ!"

ಮನೆಯ ಯಜಮಾನ ಹೇಳಿದ:

"ಯಾರಿಗೆ ಗೊತ್ತು? ಕುರಿಗಳು ಅದನ್ನು ತುಳಿದು ಹಾಕಿದವೋ ಏನೋ!"

"ಅದು ಏನೇ ಆಗಲಿ. ನೀವು ನನಗೆ ವರಟೆಯ ಬದಲಿಗೆ ಒಂದು ಕುರಿ ಕೊಡಿ" ನರಿ ಎಂದಿತು.

ಅವರು ಅದಕ್ಕೆ ಒಂದು ಕುರಿ ಕೊಟ್ಟರು. ಅದು ಅದನ್ನು ತನ್ನ ಚೀಲದೊಳಕ್ಕೆ ತುರುಕಿಕೊಂಡು ಓಡಿತು. ಓಡಿತೂ, ಓಡಿತೂ. ಮತ್ತೆ ಕತ್ತಲೆಯಾಯಿತು. ಅದಕ್ಕೊಂದು ಗುಡಿಸಿಲು ಕಾಣಿಸಿತು. ಒಳಗೆ ಹೋಗಿ ಹೇಳಿತು:

"ನಮಸ್ಕಾರ, ಸಜ್ಜನರೇ! ನನಗೆ ಸ್ವಲ್ಪ ಇವತ್ತು ರಾತ್ರಿ ನಿಮ್ಮಲ್ಲಿರೋಕೆ ಅವಕಾಶ ಕೊಡ್ತೀರ?"

"ಅಯ್ಯೋ, ಅದೆಲ್ಲಿ ಆಗುತ್ತೆ, ನರಿಯಕ್ಕ? ಈ ಗುಡಿಸಿಲು ನಮಗೇ ಚಿಕ್ಕದು. ನಿನಗೆಲ್ಲಿಂದ ಸ್ಥಳ ತರೋಣ?"

"ಪರವಾಗಿಲ್ಲ, ಹೇಗೋ ಹೊಂದಿಸಿಕೋತೀನಿ. ಈ ಬೆಂಚಿನ ಕೆಳಗೇ ಮುದುಡಿ ಮಲಗಿಕೋತೀನಿ. ಬಾಲವನ್ನೇ ಹೊದ್ದಿಕೋತೀನಿ. ಹೇಗೋ ರಾತ್ರಿ ಕಳೆದರೆ ಸಾಕು!"

"ಸರಿ. ಹಾಗೇ ಮಾಡು, ಹಾಗಾದರೆ!"

"ನನ್ನ ಕುರಿಯನ್ನು ಎಲ್ಲಿ ಇರಿಸಲಿ?"

"ಅಂಗಳದಲ್ಲಿ ಬಿಡು."

ನರಿ ಹಾಗೇ ಮಾಡಿತು. ಮಧ್ಯರಾತ್ರಿಯಲ್ಲಿ ಮೆಲ್ಲಗೆದ್ದು ಕುರಿಯನ್ನು ತಿಂದು ಹಾಕಿತು. ಮಾರನೆಯ ಬೆಳಿಗ್ಗೆ ಹೊತ್ತಿಗೆ ಮುಂಚೆ ಎದ್ದು ಮುಖ ತೊಳೆದು ಆತಿಥೇಯರಿಗೆ ಸುಪ್ರಭಾತ ಹೇಳಿತು.

"ನನ್ನ ಕುರಿ ಎಲ್ಲಿ?" ಅದು ಕೇಳಿತು.

ಆಮೇಲೆ ಕೂತುಕೊಂಡು ಬಿಕ್ಕಿ ಬಿಕ್ಕಿ ಅಳ ತೊಡಗಿತು:

"ನಾನು ಎಲ್ಲೆಲ್ಲೋ ಹೋಗಿ ಬಂದಿದೀನಿ. ಎಲ್ಲೂ ಹೀಗೆ ಆದುದಿಲ್ಲ! ನನ್ನ ಬಳಿ ಇದ್ದುದೆಲ್ಲ ಆ ಕುರಿಯುಷ್ಟೆ. ಈಗ ಅದೂ ಹೋಯಿತು!"

ಮನೆಯ ಯಜಮಾನ ಹೇಳಿದ:

"ಯಾರಿಗೆ ಗೊತ್ತು? ನಮ್ಮ ಸೊಸೆ ದನಕರುಗಳನ್ನು ಮೇಯಲು ಬಿಟ್ಟಾಗ ಕುರಿಯನ್ನೂ ಬಿಟ್ಟುಬಿಟ್ಟಳೋ ಏನೋ !"

"ಅದು ಏನೇ ಆಗಲಿ. ನೀವು ನನಗೆ ಕುರಿಯ ಬದಲಿಗೆ ನಿಮ್ಮ ಸೊಸೆಯನ್ನು ಕೊಡಿ" ನರಿ ಹೇಳಿತು.

ಇದನ್ನು ಕೇಳಿ ಎಲ್ಲರೂ ಅಳ ತೊಡಗಿದರು. ಯಜಮಾನ ಅತ್ತ, ಯಜಮಾನಿ ಅತ್ತಳು, ಮಗ ಅತ್ತ, ಮಗನ ಮಕ್ಕಳು ಅತ್ತರು. ಆದರೆ ನರಿ ಮಾತ್ರ ಇದಾವುದಕ್ಕೂ ಗಮನ ಕೊಡದೆ ಸೊಸೆಯನ್ನು ಚೀಲದಲ್ಲಿ ತುರುಕಿ ಇರಿಸಿ, ಒಂದು ಘಳಿಗೆ ಹೊರಗೆ ಹೋಯಿತು. ಅದು ಹೊರಗೆ ಹೋಗಿದ್ದಾಗ ಮನೆಯ ಮಗ ತನ್ನ ಹೆಂಡತಿಯನ್ನು ಚೀಲದಿಂದ ಹೊರಕ್ಕೆ ಬಿಟ್ಟು ಅವಳ ಸ್ಥಳ ದಲ್ಲಿ ಒಂದು ನಾಯಿ ಕೂರಿಸಿ ಹಾಗೇ ಗಂಟುಹಾಕಿ ಇರಿಸಿದ.

ನರಿ ಹಿಂದಕ್ಕೆ ಬಂತು. ಚೀಲ ಎತ್ತಿಕೊಂಡು ಹೊರಟಿತು. ಹೋಗುತ್ತಾ ತನ್ನಲ್ಲೇ ಹೇಳಿ ಕೊಂಡಿತು:

"ಓಹ್ ಎಲ್ಲ ಎಷ್ಟು ಚೆನ್ನಾಗಿ ಆಯ್ತು. ಕೋಳಿ ಹೋಯ್ತು, ಬಾತುಕೋಳಿ ಬಂತು. ಬಾತು ಕೋಳಿ ಹೋಯಿತು, ವರಟೆ ಬಂತು. ವರಟೆ ಹೋಯಿತು, ಕುರಿ ಬಂತು. ಕುರಿ ಹೋಯಿತು, ಹುಡುಗಿ ಬಂದಳು !"

ಅದು ಚೀಲವನ್ನು ಕೆಳಗಿರಿಸಿತು. ಕೂಡಲೇ ಒಳಗಿನಿಂದ "ಗುರ್" ಅನ್ನುವ ಶಬ್ದ ಕೇಳಿಬಂತು.

"ಅಯ್ಯೋ, ಇದೇನು ಈ ಹುಡುಗಿ ಭಯದಿಂದ ನಾಯಿಯ ಹಾಗೆ ಗುರುಗುಟ್ಟುತಾಳಲ್ಲ. ಸ್ವಲ್ಪ ನೋಡೋಣ ಎಂಥವಳು ಇವಳು ಅಂತ!" ಎಂದುಕೊಂಡು ಅದು ಚೀಲ ಬಿಚ್ಚಿತು. ಕೂಡಲೇ ನಾಯಿ ಹೊರಕ್ಕೆ ಹಾರಿ ಬಂತು. ನರಿ ಓಡಿತು. ಅದನ್ನು ಅಟ್ಟಿಸಿಕೊಂಡು ನಾಯಿ. ನರಿ ಕಾಡಿನ ಒಳಕ್ಕೆ ಹೆಚ್ಚು ಹೆಚ್ಚು ದೂರ ಹೋಯಿತು. ಆದರೂ ನಾಯಿ ಅದರ ಹಿಂದೆಯೇ ! ಕೊನೆಗೆ ನರಿ ತನ್ನ ಬಿಲ ಸೇರಿಕೊಂಡಿತು. ಅಲ್ಲೇ ಅಡಗಿ ಕುಳಿತಿತು. ಒಳ ಹೋಗಲಾರದೆ ನಾಯಿ ಹೊರಗೇ ಕಾಯುತ್ತ ನಿಂತಿತು.

ಒಳಗೆ ಕುಳಿತ ನರಿ ಕೇಳ ತೊಡಗಿತು:

"ನನ್ನ ಪುಟ್ಟ ಕಿವಿಗಳೇ, ನನ್ನ ಮುದ್ದು ಕಿವಿಗಳೇ, ಹೇಳಿ ನೋಡೋಣ. ನೀವು ಆ ನೀಚ ನಾಯಿಯಿಂದ ಅಷ್ಟು ಬೇಗ ಓಡಿದಾಗ ನಿಮಗೇನು ಅನಿಸ್ತು?"

ಪುಟ್ಟ ಕಿವಿಗಳು ಹೇಳಿದವು: "ನಮಗೇನು ಅನಿಸ್ತು ಅಂದರೆ, ನರಿಯಕ್ಕ, ಎಲ್ಲಿ ಆ ನೀಚ ನಾಯಿ ನಿನ್ನನ್ನು ಹಿಡಿದು ನಿನ್ನ ಚಿನ್ನದ ಮೈ ಚರ್ಮವನ್ನು ಹರಿದು ಹಾಕಿ ಬಿಡುತ್ತೋ, ಅಂತ !"

"ವಂದನೆಗಳು, ಕಿವಿಗಳೇ! ಇದಕ್ಕಾಗಿ ನಿಮಗೆ ಒಂದು ಜೊತೆ ಬಂಗಾರದ ಓಲೆ ಕೊಡ್ತೀನಿ!"

ನರಿ ಮತ್ತೆ ಕೇಳಿತು:

"ನನ್ನ ಪುಟ್ಟ ಪಾದಗಳೇ, ನನ್ನ ಮುದ್ದಿನ ಪಾದಗಳೇ! ಹೇಳಿ ನೋಡೋಣ. ನೀವು ಆ ನೀಚ ನಾಯಿಯಿಂದ ಅಷ್ಟು ಬೇಗ ಓಡಿದಾಗ ನಿಮಗೇನು ಅನಿಸ್ತು?"

"ನಮಗೇನು ಅನಿಸ್ತು ಅಂದರೆ, ನರಿಯಕ್ಕ, ಆ ನೀಚ ನಾಯಿಗೆ ನೀನು ಸಿಕ್ಕಿ ಬೀಳದ ಹಾಗೆ, ಅದು ನಿನ್ನ ಚಿನ್ನದ ಮೈ ಚರ್ಮವನ್ನು ಹರಿಯದ ಹಾಗೆ, ಬೇಗ ಓಡಬೇಕು, ಅಂತ!"

"ವಂದನೆಗಳು ನಿಮಗೆ, ಪಾದಗಳೇ! ವಂದನೆಗಳು, ಮುದ್ದಿನ ಪಾದಗಳೇ! ನಾನು ನಿಮಗೆ ಬೆಳ್ಳಿಯ ಹಿಮ್ಮಡಿಗಳಿರುವ ಚಿನ್ನದ ಕೆಂಪು ಬೂಟುಗಳನ್ನು ಕೊಂಡು ಕೊಡುತ್ತೇನೆ!"

ಆಮೇಲೆ ನರಿ ಮತ್ತೆ ಕೇಳಿತು:

"ನೀನು ಆ ನೀಚ ನಾಯಿಯಿಂದ ಓಡಿದಾಗ ಏನು ಯೋಚನೆ ಮಾಡಿದೆ, ಪೊರಕೆ ಬಾಲವೇ?"

ಬಾಲ ಉತ್ತರಿಸಿತು: "ಮೊದಲು ಜೋರಾಗಿ ಓಡೋಣ ಅಂದುಕೊಂಡೆ. ಆಮೇಲೆ, ಹಾಳಾಗಿ ಹೋಗಲಿ, ನಾಯಿ ನರಿಯನ್ನು ಹಿಡಿದರೆ ಏನಂತೆ ಅಂದುಕೊಂಡು ನಿಧಾನ ಮಾಡಿದೆ."

ನರಿಯಕ್ಕನಿಗೆ ತುಂಬ ಕೋಪ ಬಂತು. ಬಾಲವನ್ನು ಬಿಲದಿಂದ ಹೊರಕ್ಕೆ ಹಾಕಿ ಹೇಳಿತು:

"ಹೇಯ್, ನಾಯಿ! ತಗೋ ನನ್ನ ಈ ಬಾಲವನ್ನು. ಎಷ್ಟು ಬೇಕೋ ಅಷ್ಟು ಕಚ್ಚಿಕೋ!"

ನಾಯಿ ಗಬಕ್ಕನೆ ಬಾಯಿ ಹಾಕಿ ಎಷ್ಟು ಜೋರಾಗಿ ಕಚ್ಚಿತೆಂದರೆ ನರಿಯ ಇಡೀ ಬಾಲವೇ ಅದರ ಬಾಯಿಗೆ ಬಂದಿತು. ನಾಯಿ ಹೊರಟು ಹೋಯಿತು.

ಅನಂತರ ನರಿ ಮೊಲಗಳ ಬಳಿಗೆ ಹೋಯಿತು. ಬಾಲವಿಲ್ಲದ ನರಿಯನ್ನು ಕಂಡು ಮೊಲಗಳಿಗೆ ನಗು ಬಂತು. ಅವು ಪಕ್ಕೆ ಬಿರಿಯುವಂತೆ ನಕ್ಕವು.

ನರಿ ಹೇಳಿತು: "ಬಾಲ ಇಲ್ಲದೆ ಇದ್ದರೆ ಏನಂತೆ? ನಾನು ನಿಮಗಿಂತ ಹೆಚ್ಚು ಚೆನ್ನಾಗಿ ಕುಣಿತದಲ್ಲಿ ಮೊದಲಿಗನಾಗಬಲ್ಲೆ!"

"ಅದು ಹೇಗೆ ಸಾಧ್ಯ?"

"ಅದೇನು ಸರಳ! ನಿಮ್ಮ ಬಾಲಗಳನ್ನೆಲ್ಲ ಸೇರಿಸಿ ಗಂಟು ಹಾಕಿದರೆ ಸುಲಭವಾಗಿ ಆಗುತ್ತೆ."

"ಸರಿ, ಹಾಗಾದರೆ ಗಂಟು ಹಾಕು!"

ನರಿ ಮೊಲಗಳ ಬಾಲಗಳನ್ನೆಲ್ಲ ಒಂದಕ್ಕೊಂದು ಸೇರಿಸಿ ಗಂಟು ಹಾಕಿತು. ಆಮೇಲೆ ತಾನೇ ಗುಡ್ಡ ಏರಿ ಹೋಗಿ ಅಲ್ಲಿಂದ ಗಟ್ಟಿಯಾಗಿ ಕಿರುಚಿ ಹೇಳಿತು:

"ಅಯ್ಯೋ, ಬೂದು ತೋಳ ಬರ್‍ತಿದೆ. ಓಡಿ ಹೋಗಿ, ಮೊಲಗಳೇ! ಓಡಿ!"

ಮೊಲಗಳು ಓಡಲು ಯತ್ನಿಸಿದವು. ಆದರೆ ಅವುಗಳ ಬಾಲಗಳೆಲ್ಲ ಗಂಟಾಗಿವೆ. ಅವು ಜೋರಾಗಿ

ಎಳೆದು ದೌಡಾಯಿಸಿದವು. ಎಲ್ಲವುಗಳ ಬಾಲಗಳೂ ಕಿತ್ತು ಬಂದವು. ತುಂಬ ದೂರ ಓಡಿ ಹೋದ ಮೇಲೆ ಅವು ನಿಂತು ಪರಸ್ಪರ ನೋಡಿಕೊಂಡವು. ಒಂದಕ್ಕೂ ಬಾಲವಿರಲಿಲ್ಲ!

ಎಲ್ಲವೂ ಕಲೆತು ಆ ತಂತ್ರಗಾರ ನರಿಗೆ ಹೇಗಾದರೂ ಬುದ್ಧಿ ಕಲಿಸಬೇಕೆಂದು ಯೋಚಿಸ ತೊಡಗಿದವು. ಆದರೆ ನರಿಯಕ್ಕ ಇವುಗಳ ಮಾತನ್ನು ಕೇಳಿಸಿಕೊಂಡು ಬಿಟ್ಟಿತು. ತನಗೆ ಅಪಾಯ ಕಾದಿದೆ ಅಂತ ಅದಕ್ಕೆ ಗೊತ್ತಾಯಿತು. ಅದು ಆ ಕಾಡಿನಿಂದಲೇ ದೂರ ಓಡಿ ಹೋಯಿತು. ಅಂದಿನಿಂದ ಯಾರೂ ಆ ನರಿಯನ್ನು ಕಾಣಲೇ ಇಲ್ಲ. ಮೊಲಗಳೂ ಅಂದಿನಿಂದ ಬಾಲಗಳಿಲ್ಲ ದೆಯೇ ವಾಸಿಸುತ್ತಿವೆ.

ಸೇರ್ಕೊ್ಕೀ

ಒಮ್ಮೆ ಒಬ್ಬ ಮನುಷ್ಯನ ಬಳಿ ಸೇರ್ಕೊ್ಕೀ ಎಂಬ ಹೆಸರಿನ ಒಂದು ನಾಯಿ ಇತ್ತು. ಅದು ತುಂಬ ತುಂಬ ಮುದಿಯಾಗಿತ್ತು. ಮಾಲೀಕ ಅದನ್ನು ಮನೆಯಿಂದ ಹೊರಕ್ಕೆ ಅಟ್ಟಿಬಿಟ್ಟ. ಅದು ಹೊಲಗದ್ದೆಗಳಲ್ಲೆಲ್ಲ ಅಲೆದಾಡಿಕೊಂಡು ಹೋಯಿತು. ಅದಕ್ಕೆ ತುಂಬ ದುಃಖವಾಗಿತ್ತು.

"ಎಷ್ಟು ವರ್ಷ ನಾನು ನನ್ನ ಯಜಮಾನನ ಸೇವೆ ಮಾಡಿದೆ. ಅವನ ಮನೆ ಕಾದೆ. ಈಗ ನನಗೆ ವಯಸ್ಸಾಗಿದೆ. ಅವನು ನನಗೆ ಒಂದು ಚೂರು ರೊಟ್ಟಿ ಕೊಡೋಕೂ ಕೊಸರ್ತಾನಲ್ಲ. ನನ್ನನ್ನು ಮನೆ ಬಿಟ್ಟು ಓಡಿಸಿದಾನಲ್ಲ!"

ಹೀಗೆ ಯೋಚಿಸಿಕೊಂಡೇ ಅದು ಹೋಗುತ್ತಿತ್ತು. ಆಗ ಅದಕ್ಕೆ ಇದ್ದಕ್ಕಿದ್ದಂತೆ ತೋಳ ಕಂಡು ಬಂದಿತು. ನಾಯಿಯ ಬಳಿಗೆ ಬಂದು ಅದು ಕೇಳಿತು:

"ಏನು ನೀನು ಇಲ್ಲಿ ಯಾಕೆ ಹೀಗೆ ಅಲೆದಾಡುತ್ತಿದೀಯ?"

"ಇನ್ನೇನು ಮಾಡಲಿ? ಯಜಮಾನ ನನ್ನನ್ನು ಮನೆಯಿಂದ ಹೊರ ಹಾಕಿದ್ದಾನೆ" ಸೇರ್ಕೊ್ಕೀ ಹೇಳಿತು.

"ಅದಕ್ಕೆ ಯಾಕೆ ಇಷ್ಟು ಚಿಂತೆ ಮಾಡ್ತೀಯ? ನಿನ್ನ ಯಜಮಾನ ನಿನ್ನನ್ನು ಮತ್ತೆ ಮನೆಗೆ ಸೇರಿಸಿಕೊಳ್ಳೋ ಹಾಗೆ ಮಾಡಲಾ?" ತೋಳ ಕೇಳಿತು.

"ದಯವಿಟ್ಟು ಸಹಾಯ ಮಾಡು, ತೋಳರಾಯ! ನೀನು ನನ್ನ ನಚ್ಚಿನ ಗೆಳೆಯ!" ಸೇರ್ಕೊ್ಕೀ ಸಂತೋಷದಿಂದ ಹೇಳಿತು. "ನಾನೂ ನಿನಗೆ ಎಂದಾದರೂ ಪ್ರತ್ಯುಪಕಾರ ಮಾಡ್ತೀನಿ."

"ಸರಿ, ಹಾಗಾದರೆ. ಒಂದು ಉಪಾಯ ಹೇಳಿಕೊಡುತ್ತೇನೆ, ಕೇಳು. ನಿನ್ನ ಯಜಮಾನ, ಯಜಮಾನಿ ಸದ್ಯದಲ್ಲೇ ಫಸಲು ಕಟಾವು ಮಾಡುವುದಕ್ಕೆ ಹೋಗುತ್ತಾರಷ್ಟೆ. ಯಜಮಾನಿ ಆಗ ಏನು ಮಾಡ್ತಾಳೆ – ತನ್ನ ಮಗುವನ್ನು ಒಂದು ಪೊದೆ ಕೆಳಗೆ ಮಲಗಿಸಿ ಯಜಮಾನನಿಗೆ ಸಹಾಯ ಮಾಡಲು ಹೋಗ್ತಾಳೆ, ಅಲ್ಲವೇ? ಆಗ ನೀನು ಆ ಮಗುವಿನ ಸಮೀಪದಲ್ಲೇ ಇರು. ಅದರಿಂದ ನನಗೆ ಗೊತ್ತಾಗುತ್ತೆ ಮಗು ಎಲ್ಲಿದೆ ಅಂತ. ನಾನು ಓಡಿ ಬಂದು ಮಗುವನ್ನು ಎತ್ತಿಕೊಂಡು ಹೋಗೋಕೆ ಯತ್ನ ಮಾಡ್ತೀನಿ. ಆಗ ನೀನು ನನ್ನನ್ನು ಅಟ್ಟಿಸಿಕೊಂಡು ಬರಬೇಕು. ನಾನು ಹೆದರಿದ ಹಾಗೆ ನಟಿಸಿ ಮಗುವನ್ನು ಬಿಟ್ಟುಬಿಟ್ಟು ಓಡಿ ಹೋಗ್ತೇನೆ."

ಸುಗ್ಗಿ ಕಾಲ ಬಂತು. ಯಜಮಾನ ಯಜಮಾನಿ ಹೊಲಕ್ಕೆ ಬೆಳೆ ಕುಯಿಲಿಗೆ ಹೋದರು. ಯಜಮಾನಿ ಎಂದಿನಂತೆ ಮಗುವನ್ನು ಒಂದು ಪೊದೆ ಕೆಳಗೆ ಮಲಗಿಸಿ ಯಜಮಾನನಿಗೆ ಸಹಾಯ ಮಾಡಲು ಹೋದಳು. ಅವರೇನೂ ಹೆಚ್ಚಿಗೆ ಹೊತ್ತು ಕೆಲಸ ಮಾಡಿರಲಿಲ್ಲ, ಆಗ ತೋಳ ಎಲ್ಲಿಂದಲೋ ಬಂದಿತು, ಮಗುವನ್ನು ಬಾಯಲ್ಲಿ ಕಚ್ಚಿಕೊಂಡು ಹೊಲದ ಮಧ್ಯೆ ಓಡಿತು. ಸೇರ್ಕೋ ಅದನ್ನು ಅಟ್ಟಿಸಿಕೊಂಡು ಹೋಯಿತು. ಯಜಮಾನ ಕೂಗಿ ಹೇಳಿದ:

"ಹಿಡಿ ಅದನ್ನು, ಸೇರ್ಕೋ, ಹಿಡಿ!"

ಸೇರ್ಕೋ ತೋಳವನ್ನು ಹಿಡಿಯಿತು, ಮಗುವನ್ನು ಅದರಿಂದ ಕಿತ್ತುಕೊಂಡಿತು, ಯಜಮಾನನ ಮುಂದೆ ತಂದಿರಿಸಿತು. ಯಜಮಾನನಿಗೆ ತುಂಬ ಸಂತೋಷವಾಯಿತು. ಕೂಡಲೇ ಚೀಲದಿಂದ ಒಂದು ಚೂರು ಬ್ರೆಡ್ಡು, ಒಂದು ತುಣುಕು ಕೊಬ್ಬಿನಿಂದ ಕೂಡಿದ ಮಾಂಸ ತೆಗೆದು ನಾಯಿಗೆ ಕೊಡುತ್ತ ಹೇಳಿದ:

"ತಗೋ, ಸೇರ್ಕೋ, ತಿನ್ನು! ನಮ್ಮ ಮಗುವನ್ನು ಉಳಿಸಿದ್ದಕ್ಕೆ ನಿನಗೆ ಇನಾಮು."

ಸಂಜೆಯಾಯಿತು. ಯಜಮಾನ ಯಜಮಾನಿ ಮನೆಗೆ ಹೋದರು. ಸೇರ್ಕೋನನ್ನೂ ತಮ್ಮೊಂದಿಗೆ ಕರೆದೊಯ್ದರು. ಮನೆ ಒಳಹೊಕ್ಕ ಕೂಡಲೇ ಯಜಮಾನ ತನ್ನ ಹೆಂಡತಿಗೆ ಹೇಳಿದ:

"ಇವತ್ತು ಹಬ್ಬದ ಅಡಿಗೆ ಮಾಡು, ಹೆಂಗಸೆ! ಪಾಯಿಸ ಸ್ವಲ್ಪ ಜಾಸ್ತೀನೆ ಮಾಡು. ತುಂಬ ಹಾಲು ತುಪ್ಪ ಹಾಕಲು ಕೈ ಹಿಂದೆ ಮಾಡಬೇಡ!"

ಅಡಿಗೆ ಸಿದ್ಧವಾಯಿತು. ಪಾಯಿಸದ ಘಮಘಮ ಬರುತ್ತಿತ್ತು. ಯಜಮಾನ ಸೇರ್ಕೋನನ್ನು ಊಟದ ಮೇಜಿನ ಬಳಿ ತನ್ನ ಪಕ್ಕದಲ್ಲೇ ಕೂರಿಸಿಕೊಂಡ.

"ಪಾಯಿಸ ಬಡಿಸು, ಹೆಂಗಸೆ!" ಅವನೆಂದ. "ಇವತ್ತು ಹಬ್ಬದ ಊಟ ಮಾಡೋಣ."

ಯಜಮಾನಿ ಪಾಯಿಸದ ಪಾತ್ರೆಯನ್ನು ಮೇಜಿನ ಮೇಲೆ ಇರಿಸಿದಳು. ಯಜಮಾನ ಒಂದು ಬೋಗುಣಿ ತುಂಬ ಪಾಯಿಸ ಹಾಕಿ ಸೇರ್ಕೋನ ಮುಂದಿರಿಸಿದ. ಆರಲೆಂದು ಅವರ ಮೇಲೆ

ಗಾಳಿ ಊದ ತೊಡಗಿದ – ಬಿಸಿಯಾದುದನ್ನೇ ತಿಂದು ಎಲ್ಲಿ ಸೇರ್ಕೋ ನಾಲಿಗೆ ಸುಟ್ಟುಕೊಂಡು ಬಿಡುತ್ತದೋ ಎಂದು ಅಂಜಿ.

"ಇದೆಲ್ಲ ತೋಳನ ಉಪಾಯದ ಫಲ" ಎಂದು ಸೇರ್ಕೋ ತನ್ನಲ್ಲೇ ಹೇಳಿಕೊಂಡಿತು. "ನಾನೂ ತೋಳನಿಗೆ ಯಾವ ರೀತಿಯಲ್ಲಾದರೂ ಪ್ರತ್ಯುಪಕಾರ ಮಾಡಬೇಕು."

ಸ್ವಲ್ಪ ಕಾಲವಾದ ಮೇಲೆ ಯಜಮಾನ ತನ್ನ ಹಿರಿಯ ಮಗಳ ಮದುವೆ ಮಾಡಬೇಕೆಂದು ನಿರ್ಧರಿಸಿದ.

ಸೇರ್ಕೋ ಹೊಲಕ್ಕೆ ಹೋಯಿತು. ತೋಳನನ್ನು ಹುಡುಕಿ ಕಂಡುಹಿಡಿದು ಹೇಳಿತು:

"ಭಾನುವಾರ ಸಂಜೆ ನಮ್ಮ ಮನೆಯ ಅಂಗಳದ ತೋಟಕ್ಕೆ ಬಾ. ನಾನು ನಿನ್ನನ್ನು ಮನೆಯ ಒಳಕ್ಕೆ ಕರೆದುಕೊಂಡು ಹೋಗಿ ನಿನ್ನ ಉಪಕಾರಕ್ಕೆ ಸೂಕ್ತವಾಗಿ ಪ್ರತ್ಯುಪಕಾರ ಮಾಡ್ತೀನಿ."

ತೋಳ ಭಾನುವಾರಕ್ಕಾಗಿಯೇ ಕಾದು. ಕೊನೆಗೆ ಅಂದು ನಾಯಿ ಹೇಳಿದ ಸ್ಥಳಕ್ಕೆ ಸರಿಯಾಗಿ ಹೋಯಿತು.

ಅದೃಷ್ಟಕ್ಕೆ ತಕ್ಕಂತೆ ಅಂದೇ ಭಾರಿ ಮದುವೆಯ ಔತಣಕ್ಕೆ ಏರ್ಪಾಟು ಮಾಡಲಾಗಿತ್ತು. ಸೇರ್ಕೋ ತೋಳನನ್ನು ಒಳಕ್ಕೆ ಕರೆದೊಯ್ದು ಊಟದ ಮೇಜಿನ ಕೆಳಗೆ ಅಡಗಿಸಿ ಇರಿಸಿತು. ಮೇಜಿನ ಮೇಲೆ ಭಕ್ಷ್ಯ ಭೋಜ್ಯಗಳನ್ನೆಲ್ಲ ಇರಿಸಲಾಗಿತ್ತು. ಸೇರ್ಕೋ ಒಂದು ಬಾಟಲ್ ವೋದ್ಕ, ಒಂದು ದೊಡ್ಡ ಮಾಂಸದ ತುಂಡು ತೆಗೆದುಕೊಂಡು ತೋಳನಿಗೆ ಕೊಟ್ಟಿತು. ಅವನ್ನು ತೆಗೆದುಕೊಳ್ಳು ತ್ತಿದ್ದಾಗ ಅತಿಥಿಗಳು ನಾಯಿಗೆ ಹೊಡೆಯಲು ಹೋದರು. ಆದರೆ ಯಜಮಾನ ತಡೆದ.

"ಬೇಡಿ, ಸೇರ್ಕೋನಿಗೆ ಹೊಡೆಯಬೇಡಿ !" ಅವನೆಂದ. "ಈ ನಾಯಿ ನನಗೆ ಭಾರಿ ಉಪ ಕಾರ ಮಾಡಿದೆ. ನಾನು ಯಾವತ್ತೂ ಅದಕ್ಕೆ ಋಣಿಯಾಗಿರುತ್ತೇನೆ."

ಸೇರ್ಕೋ ಇನ್ನಷ್ಟು ಇನ್ನೂ ಹೆಚ್ಚು ಉತ್ತಮವಾದ ಮಾಂಸದ ತುಂಡುಗಳನ್ನು ತೆಗೆದು ಕೊಂಡು ತೋಳನಿಗೆ ಕೊಟ್ಟಿತು. ತೋಳ ಚೆನ್ನಾಗಿ ತಿಂದಿತು, ಬೇಕಾದಷ್ಟು ಕುಡಿಯಿತು. ಭಾರಿ ಉಲ್ಲಾಸಗೊಂಡು ಹೇಳಿತು:

"ನಾನೀಗ ಹಾಡುತ್ತೇನೆ !"

"ಅಯ್ಯೋ, ಬೇಡ, ಬೇಡ ! ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತೇವೆ" ಎಂದು ಸೇರ್ಕೋ ಅಂಜಿ ಬೇಡಿಕೊಂಡಿತು. "ನೀನು ಗಲಾಟೆ ಮಾಡದೆ ಸುಮ್ಮನಿರುತ್ತೀನಿ ಅನ್ನುವುದಾದರೆ ನಿನಗೆ ಇನ್ನಷ್ಟು ವೋದ್ಕ ಕೊಡುತ್ತೇನೆ."

ತೋಳ ಇನ್ನಷ್ಟು ವೋದ್ಕ ಕುಡಿದು ಹೇಳಿತು:

"ಉಹೂಂ ನನಗೆ ಸುಮ್ಮನಿರೋಕಾಗೊಲ್ಲ. ಏನಾದರೂ ಆಗಲಿ ನಾನು ಹಾಡಲೇ ಬೇಕು !"

ಹಾಗೆಂದು ತೋಳ ಮೇಜಿನ ಕೆಳಗಿನಿಂದ ಗಟ್ಟಿಯಾಗಿ ಅರುಚ ತೊಡಗಿತು.

ಅತಿಥಿಗಳು ಹೆದರಿ ನೆಗೆದು ನಿಂತರು. ಅತ್ತ-ಇತ್ತ ಓಡಿದರು. ಮೇಜಿನ ಕೆಳಗೆ ನೋಡುತ್ತಾರೆ – ಅಲ್ಲಿ ತೋಳ ಇದೆ! ಕೆಲವರು ಅಂಜಿ ಓಡಿದರು. ಇನ್ನು ಕೆಲವರು ತೋಳನನ್ನು ಹೊಡೆಯ ಬಯಸಿದರು. ಆಗ ಸೇರ್ಕೋ ತೋಳನ ಮೇಲೆ ಬಿದ್ದು ಅದನ್ನು ಕೊಲ್ಲಲು ಯತ್ನಿಸುತ್ತಿರುವಂತೆ ಸೋಗು ಹಾಕಿತು.

"ತೋಳನಿಗೆ ಹೊಡೆಯಬೇಡಿ! ನಾಯಿಗೂ ಎಲ್ಲಾದರೂ ಪೆಟ್ಟು ಬಿದ್ದೀತು!" ಯಜಮಾನ ಕೂಗಿ ಹೇಳಿದ. "ನೀವೇನೂ ಚಿಂತಿಸಬೇಡಿ! ನಾಯಿಯೇ ಈ ತೋಳನಿಗೆ ತಕ್ಕ ಪಾಠ ಕಲಿಸುತ್ತೆ!"

ಸೇರ್ಕೋ ತೋಳನನ್ನು ಹೊಲಕ್ಕೆ ಕರೆದೊಯ್ದು ಹೇಳಿತು:

"ಒಮ್ಮೆ ನೀನು ನನಗೆ ಒಳ್ಳೆಯದು ಮಾಡಿದೆ. ಈಗ ನಾನು ನಿನಗೆ ಒಳ್ಳೆಯದು ಮಾಡಿದ್ದೇನೆ."

ಎರಡೂ ಪರಸ್ಪರರಿಗೆ ವಿದಾಯ ಹೇಳಿ, ಬೇರೆಬೇರೆ ದಾರಿ ಹಿಡಿದವು.

ಬಾವಿಗೆ ಬಿದ್ದ ಮೃಗರಾಜ

ತುಂಬ ತುಂಬ ಕಾಲದ ಹಿಂದೆ ಒಂದು ದಟ್ಟವಾದ ಕಾಡಿನಲ್ಲಿ ಒಂದು ಸಿಂಹ ವಾಸಿಸುತ್ತಿತ್ತು. ಅದು ಭಾರಿಯಾಗಿತ್ತು, ಭಯಂಕರವಾಗಿತ್ತು. ಅದು ಒಮ್ಮೆ ಗರ್ಜಿಸಿದರೆ ಸಾಕು ಕಾಡಿನ ಪ್ರಾಣಿ ಗಳೆಲ್ಲ ಒಣಗಿದ ಆಸ್ಪೆನ್ ಮರದ ಎಲೆಗಳಂತೆ ಹೆದರಿಕೆಯಿಂದ ತರತರ ನಡುಗುತ್ತಿದ್ದವು. ಅದು ಬೇಟೆಗೆ ಹೊರಗೆ ಹೊರಟಾಗಲೆಲ್ಲ ತನ್ನ ಎದುರಿಗೆ ಬಂದ ಪ್ರಾಣಿಗಳನ್ನೆಲ್ಲ ಕೊಂದು, ಸಿಗಿದು, ಚೂರುಗಳನ್ನು ಸುತ್ತಮುತ್ತ ಚೆಲ್ಲುತ್ತಿತ್ತು. ಕಾಡುಹಂದಿಗಳ ಗುಂಪು ಸಿಕ್ಕಿದರೂ ಅಷ್ಟೆ, ಎಲ್ಲವು ಗಳನ್ನೂ ಕತ್ತು ಹಿಸುಕಿ ಕೊಂದು ಎಸೆಯುತ್ತಿತ್ತು. ತನಗೆ ತಿನ್ನುವುದಕ್ಕೆ ಮಾತ್ರ ಒಂದೇ ಒಂದು ಕಾಡುಹಂದಿಯನ್ನು ಉಳಿಸಿಕೊಳ್ಳುತ್ತಿತ್ತು.

ಕಾಡಿನ ಪ್ರಾಣಿಗಳೆಲ್ಲ ಸತತವಾಗಿ ಜೀವ ಭಯದಿಂದ ವಾಸಿಸುತ್ತಿದ್ದವು. ಇಂತಹ ಪರಿಸ್ಥಿತಿ ಯನ್ನು ಹೀಗೆಯೇ ಹೆಚ್ಚು ಕಾಲ ಬಿಟ್ಟುಕೊಂಡು ಹೋಗಲು ಸಾಧ್ಯವಿಲ್ಲ ಎಂದು ಭಾವಿಸಿ ಅವು ಮುಂದೇನು ಮಾಡುವುದು ಅನ್ನುವುದನ್ನು ನಿರ್ಧರಿಸಲು ಒಂದು ದಿನ ಸಭೆ ಸೇರಿದವು.

ಕರಡಿಯೇ ಮೊದಲು ನಿಂತು ಮಾತನಾಡಿದುದು.

"ಇಲ್ಲಿ ಕೇಳಿ, ನನ್ನ ಮಿತ್ರರೇ !" ಎಂದದು ಮಾತು ಪ್ರಾರಂಭಿಸಿತು. "ಸಿಂಹ ಪ್ರತಿದಿನವೂ ನಮ್ಮನ್ನು ಹತ್ತಕ್ಕೆ ಕಮ್ಮಿ ಇಲ್ಲದಂತೆ ಕೊಲ್ಲುತ್ತಿದೆ. ಕೆಲವು ದಿನ ಇಪ್ಪತ್ತು ಪ್ರಾಣಿಗಳನ್ನು ಕೊಂದುದೂ ಉಂಟು. ಆದರೆ ಅದು ತಿನ್ನುವುದು ಮಾತ್ರ ಒಂದನ್ನಷ್ಟೆ. ಹೆಚ್ಚೆಂದರೆ ಎರಡನ್ನು. ಆದ್ದರಿಂದ ಉಳಿದ ಪ್ರಾಣಿಗಳು ನಿರರ್ಥಕವಾಗಿ ಸಾಯುತ್ತವೆ ಎಂದಾಯಿತು.

ಏಕೆಂದರೆ ಪ್ರತಿದಿನವೂ ಅದಕ್ಕೆ ತಿನ್ನಲು ಹೊಸ ಪ್ರಾಣಿಯೇ ಬೇಕು. ನಿನ್ನೆ ಕೊಂದ ಪ್ರಾಣಿಯನ್ನೂ ಅದು ತಿನ್ನುವುದಿಲ್ಲ. ಆದ್ದರಿಂದ ನಾನು ಒಂದು ಸಲಹೆ ಮಾಡುತ್ತೇನೆ. ನಾವು ಸಿಂಹದ ಬಳಿಗೆ ಹೋಗಬೇಕು, ಮಾತನಾಡಬೇಕು, ವಾದಿಸಬೇಕು. ಅದು ತನ್ನ ಈ ವರ್ತನೆಯನ್ನು ಬದಲಿಸಿಕೊಳ್ಳುವಂತೆ ಮಾಡಬೇಕು."

"ಓಹೋ, ಹೇಳೋದೇನೋ ಸುಲಭ. ಆದರೆ ಹೋಗಿ ಮಾತನಾಡು, ನೋಡೋಣ!" ಅಂತ ತೋಳ ಪ್ರತಿಹೇಳಿತು. "ಸಿಂಹ ಎಲ್ಲಾದರೂ ನಮ್ಮ ಮಾತು ಕೇಳುತ್ತಯೇ? ಅಷ್ಟೇ ಅಲ್ಲ ನಾವು ಯಾರನ್ನಾದರೂ ಕಳುಹಿಸಿದರೆ ಅದು ಅದನ್ನೂ ಕೊಂದು ಹಾಕುತ್ತದಷ್ಟೆ."

"ಹಾಗೇನೂ ಇಲ್ಲ!" ಅಂತ ಕರಡಿ ಮತ್ತೆ ತನ್ನ ವಾದವನ್ನೇ ಸಮರ್ಥಿಸಿತು. "ಆದರೆ ಈಗಿನ ಪ್ರಶ್ನೆ ಎಂದರೆ, ಯಾರನ್ನು ಕಳುಹಿಸುವುದು, ಅಂತ."

"ನೀನೇ ಯಾಕೆ ಹೋಗಬಾರದು?" ತೋಳ ಹೇಳಿತು. "ನೀನೇ ನಮ್ಮೆಲ್ಲರಿಗಿಂತ ಭಾರಿ ಗಾತ್ರದವ. ತುಂಬ ಬಲಶಾಲಿಯೂ ಹೌದು."

"ಬಲಶಾಲಿಯಾಗಿದ್ದರೇನಂತೆ! ಸಿಂಹದ ಉಗುರುಗಳು ನನ್ನನ್ನು ಸಿಗಿದು ಹಾಕದೆ ಬಿಟ್ಟಾವೆಯೇ? ನೀನೇ ಹೋಗೋದು ಹೆಚ್ಚು ಉತ್ತಮ, ತೋಳರಾಯ. ನೀನು ನನಗಿಂತ ಜೋರಾಗಿ ಓಡಬಲ್ಲೆ."

"ಅದೇನೂ ನನ್ನನ್ನು ಸಿಂಹದಿಂದ ರಕ್ಷಿಸೋಲ್ಲ" ಎಂದಿತು ತೋಳ. "ಸಿಂಹವನ್ನು ಮೀರಿಸಿ ಓಡೋಕಾಗುತ್ತೆಯೆ ನನ್ನ ಕೈಲಿ? ನೀನು ಹೇಳೋದು ಸರಿ ಇಲ್ಲ. ನಾವು ಬೇರೆ ಯಾವುದಾದರೂ ಉಪಾಯ ಹುಡುಕಬೇಕು."

ಜಿಂಕೆ ಎದ್ದು ನಿಂತು ಹೇಳಿತು:

"ಮಹಾಶಯರೇ! ನನಗನಿಸುತ್ತೆ, ನಾವು ಏನೇ ಮಾಡಲಿ, ಬಿಡಲಿ, ಸಿಂಹವನ್ನಂತೂ ಕೆಣಕಬಾರದು. ನಾವು ಅದರ ಜೊತೆಗೆ ತುಂಬ ನಮ್ರತೆಯಿಂದ ವರ್ತಿಸಬೇಕು."

"ಓಹೋಹೋ, ತುಂಬ ಜಾಣ ಮಾತು ಹೇಳಿದೆ, ಅಲ್ಲವೇ? ನೀನು ಅಷ್ಟು ಬುದ್ಧಿವಂತನಾದರೆ ನೀನೇ ಯಾಕೆ ಹೋಗಿ ಮಾತನಾಡಬಾರದು?" ಅದರ ಮಿತ್ರರೆಲ್ಲ ಹೇಳಿದರು.

"ಓಹ್, ಇಲ್ಲ, ಇಲ್ಲ. ಅದು ನನ್ನ ಕೈಲಾಗದು. ಸಿಂಹ ನಮ್ಮ ತರಹ ಅಲ್ಲ, ಅದರ ಜೊತೆಗೆ ಮಾತನಾಡೋದು ಅಷ್ಟು ಸುಲಭವಲ್ಲ, ಅಂತಷ್ಟೆ ನಾನು ಹೇಳಿದ್ದು."

"ನಿಜ, ಆದರೆ ಅದರ ಬಳಿಗೆ ಹೋಗೋರು ಯಾರು?"

"ನರಿಯನ್ನೇಕೆ ಕಳುಹಿಸಬಾರದು? ಅದು ಒಳ್ಳೆಯ ತಂತ್ರಗಾರ ಪ್ರಾಣಿ. ಅದು ಸಿಂಹದ ಜೊತೆ ನಯವಾಗಿ ವ್ಯವಹರಿಸಿ ನಮ್ಮ ಮಾತು ತಿಳಿಸಬಲ್ಲುದು."

"ಅದೀಗ ಸರಿಯಾದ ವಿಚಾರ! ನಮ್ಮಲ್ಲಿ ಯಾರಾದರೂ ಈ ಕೆಲಸ ಮಾಡಲು ಸಾಧ್ಯ ವಿದ್ದರೆ ಅದು ನರಿಯುಷ್ಟೆ!"

ಅವು ನರಿಯುನ್ನು ಕರೆದವು. ಕರಡಿ ಅದಕ್ಕೆ ಹೇಳಿತು:

"ನರಿಯುಕ್ಕ, ನೀನು ಸಿಂಹದ ಬಳಿಗೆ ಹೋಗಿ ಮಾತನಾಡಬೇಕು ಅಂತ ನಾವು ತೀರ್ಮಾನಿಸಿದೀವಿ. ನಿನಗೇ ಚೆನ್ನಾಗಿ ಗೊತ್ತಿದೆ ಸಿಂಹ ಹ್ಯಾಗೆ ದಿನದಿನವೂ ನಮ್ಮಲ್ಲಿ ಎಷ್ಟೊಂದು ಪ್ರಾಣಿಗಳನ್ನು ಕೊಂದು ಹಾಕುತ್ತಿದೆ ಅಂತ!"

"ಅದು ಸರಿ. ಗೊತ್ತಿದ್ದ ಮಾತ್ರಕ್ಕೇ, ನೀವು ಯಾರೂ ಹೋಗದಿರುವಾಗ ನಾನು ಹೋಗಬೇಕು, ಅಂತಲೇ? ಚೀಟಿ ಎತ್ತೋಣ. ಯಾರಿಗೆ ಬಂದರೆ ಅವರು ಹೋಗಲಿ."

"ಉಹೂಂ, ನರಿಯುಕ್ಕ, ಅದಾಗೊಲ್ಲ" ಕರಡಿ ಹೇಳಿತು. "ತುಂಬ ಹೆದರುಪುಕ್ಕಲನಿಗೆ. ಅಥವಾ ಏನು ಹೇಳಬೇಕು ಅನ್ನೋದೇ ತಿಳಿಯುದ ಪೆದ್ದನಿಗೆ ಚೀಟಿ ಬಂದು ಬಿಟ್ಟರೆ ಏನು ಮಾಡೋದು? ಸಿಂಹ ನಮ್ಮ ವಿಷಯುದಲ್ಲಿ ನಯುವಾಗಿ ವರ್ತಿಸುವಂತೆ ಮಾಡುವುದು ಬಿಟ್ಟು ಹೆಚ್ಚು ಕೋಪ ತಾಳುವಂತೆ ಮಾಡಿ ಬಿಟ್ಟರೆ! ಆದ್ದರಿಂದ ಅದೆಲ್ಲ ಆಗೊಲ್ಲ. ನಾವು ತೀರ್ಮಾನ ಮಾಡಿದೀವಿ. ನೀನೇ ಹೋಗಬೇಕು. ಹೋಗದಿದ್ದರೆ ನಾವು ನಿನ್ನನ್ನು ಕೊಂದು ಹಾಕ್ತೀವಿ, ಅಷ್ಟೆ!"

ಇದನ್ನು ಕೇಳಿ ನರಿಗೆ ತುಂಬ ಬೇಸರವಾಯಿತು. ಸಿಂಹದ ಬಳಿಗೆ ಹೋದರೂ ಅಪಾಯು. ಹೋಗದೆ ಇದ್ದರೂ ಅಪಾಯು! ತುಂಬ ಯೋಚನೆ ಮಾಡಿ ಅದು ಕೊನೆಗೆ ಹೇಳಿತು:

"ಸರಿ, ಹಾಗಾದರೆ. ಹೋಗಲೇ ಬೇಕು ಅನ್ನೋದಾದರೆ ಹೋಗ್ತೀನಿ! ಅದೇ ನನ್ನ ಹಣೆಯು ಬರಹವೇನೋ!.."

ತುಂಬ ಕಾಲ ನರಿ ಕಾಡಿನಲ್ಲಿ ಅಲೆದಾಡಿತು – ಸಿಂಹದ ಬಳಿಗೆ ಬರುವುದಕ್ಕೂ ಅದಕ್ಕೆ ಭಯು. ಒಮ್ಮೆ ಒಂದು ಬದಿಗೆ ಹೋಗುತ್ತೆ, ಮತ್ತೊಮ್ಮೆ ಇನ್ನೊಂದು ಬದಿಗೆ ಹೋಗುತ್ತೆ... ಅದು ಉಪಾಯು ಯೋಚನೆ ಮಾಡುತ್ತದೆ – ಸಿಂಹಕ್ಕೆ ಹೇಗೆ ಮೋಸಮಾಡುವುದು? ಸಾವೆಂದರೆ ಅದಕ್ಕೆ ತುಂಬ ಭಯು.

ಹೋಗುತ್ತಾ ಹೋಗುತ್ತಾ ಅದಕ್ಕೊಂದು ಬಾವಿ ಸಿಕ್ಕಿತು.

"ಹೇಗಿದ್ದರೂ ಸಾಯುಬೇಕಾಗುತ್ತೆ. ಈ ಬಾವಿಯುಲ್ಲೇ ಬಿದ್ದು ಯಾಕೆ ಸಾಯುಬಾರದು?" ಎಂದದು ತನ್ನಲ್ಲೇ ಹೇಳಿಕೊಂಡಿತು. "ಆ ಭೀಕರ ಸಿಂಹದ ಕೈಗೆ ಸಿಕ್ಕಿ ಮೈ ಕೈ ಹರಿಸಿಕೊಳ್ಳೋದಕ್ಕಿಂತ ಇದೇ ವಾಸಿ!"

ಹಾಗೆಂದುಕೊಂಡು ಅದು ಬಾವಿ ಸುತ್ತ ಒಮ್ಮೆ ಹೋಗಿ ಬಂದಿತು, ಮೂಸು ನೋಡಿತು. ಆಮೇಲೆ ಒಳಕ್ಕೆ ಬಗ್ಗಿ ನೋಡಿತು. ಓಹ್, ಏನಾಶ್ಚರ್ಯ, ಬಾವಿಯೊಳಗೆ ನೀರಿನಿಂದ ಅದರ

ರೀತಿಯದೇ ಮತ್ತೊಂದು ನರಿ ಇದರತ್ತವೇ ನೋಡುತ್ತಿದೆ! ಅದು ತನ್ನ ಸ್ವಂತ ಪ್ರತಿಬಿಂಬ ಎಂದು ನರಿಯ ಮನಸ್ಸಿಗೆ ಕೂಡಲೇ ಹೊಳೆಯಲಿಲ್ಲ. ನರಿ ತಲೆ ಆಡಿಸಿತು – ಬಾವಿಯೊಳಗಿನ ನರಿಯೂ ಪ್ರತಿಯಾಗಿ ತಲೆ ಆಡಿಸಿತು. ನರಿ ನಾಲಿಗೆ ಮುಂಚಾಚಿತು – ಬಾವಿಯೊಳಗಿನ ನರಿಯೂ ಹಾಗೆಯೇ ಮಾಡಿತು.

"ಇದು ನೀರಿನೊಳಗೆ ನನ್ನ ಪ್ರತಿಬಿಂಬ ಅಷ್ಟೆ" ಎಂದು ನರಿ ಅರ್ಥಮಾಡಿಕೊಂಡಿತು. "ಸರಿ, ಈಗ ಗೊತ್ತಾಯಿತು, ಸಿಂಹಕ್ಕೆ ಹೇಗೆ ಮೋಸ ಮಾಡಬಹುದು, ಅಂತ. ಸಿಂಹಕ್ಕೆ ಈ ವಿಷಯ ಗೊತ್ತಿರಬಾರದಷ್ಟೆ. ಹಾಗಿದ್ದರೆ ನಾನು ಅದಕ್ಕೆ ಮೋಸ ಮಾಡಬಹುದು."

ಅದು ನೇರವಾಗಿ ಸಿಂಹದ ಗುಹೆಯ ಕಡೆಗೆ ಹೊರಟಿತು. ಕತ್ತಲಾಗುತ್ತಿತ್ತು. ಆದರೂ ನರಿ ಹಿಂದಿಗಿಂತ ಹೆಚ್ಚು ಗೆಲುವಾಗಿತ್ತು, ಚುರುಕಿನಿಂದ ನಡೆಯಿತು.

ಬೇಗನೆಯೇ ಸಿಂಹದ ಗರ್ಜನೆಯ ಧ್ವನಿ ಕೇಳಿ ಬಂದಿತು. ಕೊನೆಗೆ ಸಿಂಹವೇ ಮುಂದೆ ಕಾಣ ಬಂದಿತು. ಎಷ್ಟೋ ಧೈರ್ಯ ತಂದುಕೊಂಡರೂ ಪುಕಪುಕನೆ ಹೆದರುತ ನರಿ ಬಾಗಿ ವಂದಿಸಿ ಹೇಳಿತು:

"ಮಹಾಪ್ರಭು, ನಿಮ್ಮಲ್ಲಿ ಒಂದು ವಿಷಯ ಅರಿಕೆ ಮಾಡಿಕೊಳ್ಳಲು ಅಪ್ಪಣೆ ಕೊಡಿ. ನಾನು ಯಾಕೆ ಇಲ್ಲಿಗೆ ಬಂದೆ ಅನ್ನೋದನ್ನು ಮೊದಲು ತಿಳಿಸ್ತೀನಿ. ಅದು ಹೀಗಾಯಿತು, ಮಹಾಪ್ರಭು. ಇವತ್ತು ನಿಮ್ಮ ಹುಟ್ಟಿದ ಹಬ್ಬ ಅಂತ ಈ ಕಾಡಿನ ಪ್ರಾಣಿಗಳಿಗೆಲ್ಲ ಗೊತ್ತಿತ್ತು. ಅದಕ್ಕೇ ಅವು ಬೆಳಿಗ್ಗೆ ನನ್ನನ್ನೂ ಎರಡು ಮೊಲಗಳನ್ನೂ ನಿಮಗೆ ಶುಭಾಶಯ ತಿಳಿಸಲು ಕಳಿಸಿಕೊಟ್ಟವು. ಆದರೆ ನಾವು ಬರುತ್ತಾ ಇದ್ದಾಗ ಮಧ್ಯದಲ್ಲಿ ನಿಮ್ಮ ತರಹದೇ ಒಂದು ಮೃಗ ಸಿಕ್ಕಿತು. ಅದು ನಮ್ಮನ್ನು ನಿಲ್ಲಿಸಿ ಎಲ್ಲಿಗೆ ಹೋಗುತ್ತಿರೋದು ಅಂತ ಕೇಳಿತು. ನಿಮಗೆ ಹುಟ್ಟಿದ ಹಬ್ಬದ ದಿನ ಶುಭಾಶಯ ಹೇಳಲು ಹೋಗ್ತಿದೀವಿ ಅಂತ ಹೇಳಿದಾಗ ಅದಕ್ಕೆ ತುಂಬ ಕೋಪ ಬಂತು. ತಾನೇ ಈ ಕಾಡಿನ ರಾಜ, ನೀವಲ್ಲ, ಅಂತ ಅದು ಹೇಳಿತು. ಕಾಡಿನಲ್ಲಿರೋ ಪ್ರಾಣಿಗಳೆಲ್ಲ ತನಗೆ ಅಧೀನವಾಗಿರಬೇಕು, ಅಂತ ಹೇಳಿ ನಮ್ಮನ್ನು ಮುಂದಕ್ಕೆ ಹೋಗೋಕೇ ಬಿಡಲಿಲ್ಲ. 'ಅಯ್ಯೋ, ಬೇಡ, ಬೇಡ. ಇವತ್ತು ನಮ್ಮ ಮೃಗರಾಜನ ಹುಟ್ಟಿದ ಹಬ್ಬ. ನಮ್ಮನ್ನು ಅದು ನಿರೀಕ್ಷಿಸುತ್ತ ಇದೆ. ನಾವು ಹೋಗದೆ ಇದ್ದರೆ ನಮ್ಮನ್ನು ಕೊಂದು ಹಾಕುತ್ತದಷ್ಟೆ' ಅಂತ ನಾನು ಹೇಳಿದೆ. ಅದು ಏನು ಹೇಳಿತು ಅಂತೀರಿ, ಮಹಾಪ್ರಭು! 'ಅದರ ಹುಟ್ಟಿದ ಹಬ್ಬ ಆದರೆ ನನಗೇನಂತೆ? ನಾನು ಅದನ್ನೂ ತಿಂದು ಹಾಕ್ತೀನಿ, ಅಷ್ಟೆ!' ನನ್ನನ್ನು ಬಿಟ್ಟು ಕೊಡು ಅಂತ ಅದರ ಮನವೊಲಿಸೋಕೆ ನನಗೆ ಅರ್ಧ ದಿನವೇ ಬೇಕಾಯಿತು. ಕೊನೆಗೆ ಅದು ಮೊಲಗಳನ್ನು ಹಿಡಿದುಕೊಂಡು ನನ್ನನ್ನಷ್ಟೆ ಬಿಟ್ಟು ಕೊಟ್ಟಿತು."

ಇದನ್ನು ಕೇಳಿ ಸಿಂಹದ ಕೋಪ ನೆತ್ತಿಗೇರಿತು. ಅದಕ್ಕೆ ಹಸಿವೇ ಮರೆಯಿತು.

"ಎಲ್ಲಿದೆ ಆ ನೀಚ ಮೃಗ?" ಅದು ಗರ್ಜಿಸಿತು.

"ಇಲ್ಲೇ, ಹತ್ತಿರದಲ್ಲೇ. ಕಲ್ಲಿನ ಅರಮನೆಯೊಂದರಲ್ಲಿ."

ಸಿಂಹ ಕೆರಳಿ ಕುಪ್ಪಳಿಸಿತು. ಅದು ಮಾಡಿದ ಗರ್ಜನೆ ಕಾಡಿನಲ್ಲೆಲ್ಲ ಪ್ರತಿಧ್ವನಿಸಿತು – ಕಾಡಿನ ಮತ್ತೊಂದು ಕೊನೆಯಲ್ಲಿ ಇನ್ನೊಂದು ಸಿಂಹ ಗರ್ಜಿಸುತ್ತಿದ್ದಿತೇನೋ ಅನ್ನುವಂತೆ.

ನರಿ ಹೇಳಿತು:

"ನಿಮಗೆ ಅದು ಗರ್ಜಿಸಿದುದು ಕೇಳಿಸಿತೇ, ಮಹಾಪ್ರಭು? ಅದು ನಿಮ್ಮನ್ನು ಅಣಕಿಸುತ್ತಿದೆ."

ಸಿಂಹಕ್ಕೆ ಇನ್ನೂ ಹೆಚ್ಚು ಕೋಪ ಬಂತು.

"ಎಲ್ಲಿದೆ ಅದು? ಅದನ್ನು ಹರಿದು ತುಂಡುತುಂಡು ಮಾಡ್ತೀನಿ!" ಎಂದದು ಗರ್ಜಿಸಿತು. "ನನ್ನನ್ನು ಕೆಣಕೋದಕ್ಕೆ ಎಷ್ಟು ಧೈರ್ಯ ಅದಕ್ಕೆ! ಈ ಕಾಡು ನನ್ನದು. ಬಾ, ಅದರ ಬಳಿಗೆ ಹೋಗೋಣ."

ನರಿ ಸಿಂಹವನ್ನು ಬಾವಿಯ ಬಳಿಗೆ ಕರೆದೊಯ್ದಿತು.

ಅದು ದೂರದಲ್ಲಿ ಕಾಣುತ್ತಿದ್ದಾಗಲೇ ಸಿಂಹ ತನ್ನ ಶತ್ರು ಎಲ್ಲಿ ಅಡಗಿದೆ ಎಂದು ತಿಳಿಸು ವಂತೆ ನರಿಯನ್ನು ಕೇಳಿತು.

ನರಿ ಬಾವಿಯನ್ನು ತೋರಿಸುತ್ತ ಹೇಳಿತು:

"ಅದು ಅಲ್ಲಿ ಆ ಕಲ್ಲಿನ ಅರಮನೆಯ ಒಳಗೆ ಅಡಗಿಕೊಂಡಿದೆ ಮಹಾಪ್ರಭು! ನಾನು ಮಾತ್ರ ಇನ್ನು ಹೆಚ್ಚು ಹತ್ತಿರ ಬರೊಲ್ಲ. ಅದು ನನ್ನನ್ನು ತಿಂದು ಹಾಕಿ ಬಿಡಬಹುದು ಅಂತ ಹೆದರಿಕೆ ನನಗೆ. ನೀವು ಬಾವಿಯ ಹತ್ತಿರ ಹೋಗಿ ಬಾಗಿ ನೋಡಿದರೆ ಕಾಣುತ್ತೆ."

ಸಿಂಹ ಬಾವಿಯ ಬಳಿ ಹೋಗಿ ಬಾಗಿ ನೋಡಿತು. ಅದಕ್ಕೆ ಕಂಡದ್ದೇನು? – ಮತ್ತೊಂದು ಸಿಂಹ ಇದನ್ನೇ ದಿಟ್ಟಿಸಿ ನೋಡುತ್ತಿದೆ! ಇದು ತನ್ನ ಹಲ್ಲುಗಳನ್ನು ಕಟಕಟನೆ ಕಡಿಯಿತು. ಅದೂ ಹಾಗೆಯೇ ಮಾಡಿತು. ಆಗ ಈ ಮೃಗರಾಜ ಗಟ್ಟಿಯಾಗಿ ಗರ್ಜಿಸಿ ಬಾವಿಯೊಳಕ್ಕೆ ನೆಗೆಯಿತು. ನೀರು ಸಿಡಿದ ಶಬ್ದ ಕೇಳಿ ಬಂದಿತು. ಸಿಂಹ ನೀರಿನಲ್ಲಿ ಬಿದ್ದಿತ್ತು! ಬಾವಿ ತುಂಬ ಅಗಲವಾಗಿತ್ತು. ಅದರ ಕಲ್ಲಿನ ಗೋಡೆಗಳು ತುಂಬ ನಯವಾಗಿದ್ದವು. ಸಿಂಹ ಹತ್ತಿ ಹೊರಬರದಾಯಿತು. ಅದು ಅಲ್ಲೇ ಮುಳುಗಿತು.

ಇದನ್ನೆಲ್ಲ ಕಂಡ ನರಿ ಇತರ ಪ್ರಾಣಿಗಳಿಗೆ ಈ ವಿಷಯ ತಿಳಿಸಲು ಓಡಿತು. ಅವುಗಳ ಬಳಿ ಹೋದಾಗ ಅದರ ಮುಖ ಹಿಗ್ಗುತ್ತಿತ್ತು. ಅದನ್ನು ಕಂಡಾಗಲೇ ಅದು ಶುಭ ಸಮಾಚಾರ ತರು ತ್ತಿದ್ದಿತೆಂದು ಇತರ ಪ್ರಾಣಿಗಳು ಅರಿತವು.

"ಏನು ಮೃಗರಾಜನನ್ನು ಕಂಡೆಯಾ, ಇಲ್ಲವೇ?" ಅವು ಕೇಳಿದವು.

"ಕಂಡೆ, ಕಂಡೆ ! ಇನ್ನು ನೀವು ಅದನ್ನು ಸಂಪೂರ್ಣವಾಗಿ ಮರೆಯಬಹುದು. ಅದೀಗ ಸತ್ತಿದೆ. ಹೇಗೆ ಸಾಯಿತು, ಗೊತ್ತ? ನಾನದಕ್ಕೆ ಚೆನ್ನಾಗಿ ಮೋಸ ಮಾಡಿದೆ."

"ಮೋಸ ಮಾಡಿದೆಯ? ಹೇಗೆ?"

ನರಿ ಎಲ್ಲ ಹೇಳಿತು. ಅದನ್ನು ಕೇಳಿದ ಕೂಡಲೇ ಪ್ರಾಣಿಗಳೆಲ್ಲ ಆನಂದದಿಂದ ಕುಣಿದಾಡಿದವು. ಅವು ಎಷ್ಟು ಸಂತೋಷಪಟ್ಟವೆಂಬುದನ್ನು ನನ್ನ ನಾಲಿಗೆ ಹೇಳಲಾಗದು, ನನ್ನ ಲೇಖನಿ ಬರೆಯಲಾಗದು !

ಹಂಸ, ಮುಳ್ಳುನಳ್ಳಿ ಹಾಗೂ ಪೈಕ್ ಮೀನು

ಹಂಸ ನದಿಯ ತೀರದ ಬಳಿ ಈಜುತ್ತಿತ್ತು. ಕತ್ತು ಬಾಗಿಸಿ ನೀರಿನೊಳಗೆ ನೋಡಿತು. ನೀರಿನಲ್ಲಿ ಒಂದು ಪೈಕ್ ಮೀನು ಈಜಿಕೊಂಡು ಹೋಗುತ್ತಿತ್ತು. ಅದು ಹಂಸವನ್ನು ಕೇಳಿತು:

"ದಯವಿಟ್ಟು ಹೇಳು. ಚಳಿಗಾಲದಲ್ಲಿ ನದಿಯ ನೀರು ಗಡ್ಡೆಕಟ್ಟಿದಾಗ ನೀನು ಎಲ್ಲಿಗೆ ಹಾರಿ ಹೋಗುತ್ತೀಯ?"

"ಅದು ಯಾತಕ್ಕೆ ನಿನಗೆ?"

"ನಾನೂ ಚಳಿಗಾಲದಲ್ಲಿ ಎಲ್ಲಾದರೂ ಬೆಚ್ಚಗಿನ ಸ್ಥಳದಲ್ಲಿ ಆಶ್ರಯ ಪಡೆದುಕೊಳ್ಳಬೇಕೂಂತ. ನೀರ್ಗಲ್ಲಿನ ಕೆಳಗೆ ಹಚ್ಚ ಹೊಸ ಗಾಳಿಯಿಲ್ಲದೆ ಎಂಥ ವಿಶ್ರಾಂತಿ!"

"ನಾನು ಚಳಿಗಾಲದಲ್ಲಿ ಬೆಚ್ಚಗಿನ ಪ್ರದೇಶಕ್ಕೆ ಹಾರಿ ಹೋಗುತ್ತೇನೆ. ವಸಂತದವರೆಗೂ ಅಲ್ಲೇ ಇರುತ್ತೇನೆ."

"ನನ್ನನ್ನೂ ನಿನ್ನ ಜೊತೆ ಕರೆದುಕೊಂಡು ಹೋಗು" ಪೈಕ್ ಮೀನು ಕೇಳಿಕೊಂಡಿತು.

"ಓಹೋ, ಅದಕ್ಕೇನಂತೆ, ಹಾಗೇ ಮಾಡು. ಒಟ್ಟಿಗೇ ಹಾರಿ ಹೋದರೆ ಉಲ್ಲಾಸಕರವಾಗಿರುತ್ತೆ."

ಈ ಸಂಭಾಷಣೆಯನ್ನು ಮುಳ್ಳುನಳ್ಳಿ ಕೇಳಿಸಿಕೊಂಡಿತು. ಅದು ಹೇಳಿತು:

"ನನ್ನನ್ನೂ ಕರೆದುಕೊಂಡು ಹೋಗಿ."

"ಓಹೋ, ಅದಕ್ಕೇನಂತೆ, ಬಾ, ಹೋಗೋಣ! ನೀನೂ ನಮ್ಮ ಜೊತೆ ಬಂದರೆ ನಮ್ಮ

ಪ್ರಯಾಣ ಇನ್ನೂ ಹೆಚ್ಚು ಉಲ್ಲಾಸಕರವಾಗುತ್ತೆ. ಶರತ್ಕಾಲದವರೆಗೂ ಕಾಯೋಣ. ಯಾವಾಗ ಹಾರಿ ಹೋಗೋದು ಅನ್ನೋದನ್ನು ನಾನು ನಿಮಗೆ ತಿಳಿಸುತ್ತೇನೆ."

ಹಂಸ ಸ್ಪಷ್ಟವಾಗಿಯೇ ಭಾವಿಸಿತ್ತು, ಅವು ನೀರಿನಲ್ಲಿ ಈಜುತ್ತವಾದರೆ ಹಾರಲೂ ಬಲ್ಲವು ಅಂತ.

ಬೇಸಿಗೆ ಕಳೆಯಿತು. ಶರತ್ಕಾಲ ಬಂದಿತು. ಹಂಸ ಹೇಳಿತು:

"ಸರಿ, ಮಿತ್ರರೇ, ಬೆಚ್ಚಗಿನ ಪ್ರದೇಶಕ್ಕೆ ಹೋಗುವ ಸಮಯ ಬಂದಿದೆ. ಸಿದ್ಧರಾಗಿ. ನಾಳೆ ಭೋಜನದನಂತರ ದಾರಿ ಹಿಡಿಯಬೇಕು."

ಪೈಕ್ ಮೀನು ಈ ವಿಷಯವನ್ನು ಮುಳ್ಳುನಳ್ಳಿಗೆ ತಿಳಿಸಿತು. ಮುಳ್ಳುನಳ್ಳಿ ಯೋಚನೆ ಮಾಡಿ ಮಾಡಿ ಕೊನೆಗೆ ಹೇಳಿತು:

"ಏನು ತಂಗಮ್ಮ, ಪ್ರಯಾಣ ಮಾರ್ಗದಲ್ಲಿ ನೀರಿಲ್ಲದೆ ನಾವು ಜೀವಿಸುವುದಾದರೂ ಹೇಗೆ? ಆಹಾರವಿಲ್ಲದೆ ಇರುವುದೆ? ಪ್ರಯಾಣದ ಕೊನೆಯವರೆಗೂ ಸಾಲುವಂತೆ ಒಂದಿಷ್ಟು ಬುತ್ತಿ ಕಟ್ಟಿಕೊಂಡು ಹೋಗೋಣ."

"ಆದರೆ ಅದನ್ನೆಲ್ಲ ಹೇಗೆ ತೆಗೆದುಕೊಂಡು ಹೋಗೋದು?" ಪೈಕ್ ಮೀನು ಕೇಳಿತು.

"ಆಹಾರ ಪದಾರ್ಥಗಳನ್ನೆಲ್ಲ ಒಂದು ಬಂಡಿಯಲ್ಲಿ ತುಂಬಿಕೊಳ್ಳೋಣ. ಹಂಸವನ್ನೂ ಕರೆಯೋಣ. ಮೂವರೂ ಸೇರಿ ಎಳೆದುಕೊಂಡು ಹೋಗೋಣ."

ಮುಳ್ಳುನಳ್ಳಿಯೂ ಪೈಕ್ ಮೀನೂ ಬಂಡಿಯನ್ನು ಸಿದ್ಧಗೊಳಿಸಿದವು. ಅದಕ್ಕೆ ಹುಲ್ಲಿನಿಂದ ಎಳೆಪಟ್ಟಿ ಜೋಡಿಸಿದವು. ಹಂಸ ಬರುವುದಕ್ಕಾಗಿಯೇ ಕಾದವು. ಮಾರನೆಯ ದಿನ ಹಂಸ ಬಂದಿತು. ಹೇಳಿತು:

"ಏನು ಸಿದ್ಧವಾಗಿದ್ದೀರ? ನಾನಾಗಲೇ ಹಾರಿ ಹೊರಟಿದ್ದೇನೆ."

"ಸಿದ್ಧವಾಗಿದ್ದೇವೆ, ಸಿದ್ಧವಾಗಿದ್ದೇವೆ! ಆದರೆ ದಯವಿಟ್ಟು ಈ ಬಂಡಿಯನ್ನು ಎಳೆದು ಕೊಂಡು ಹೋಗಲು ಸಹಾಯ ಮಾಡು. ಮೂವರೂ ಎಳೆದುಕೊಂಡು ಹೋಗೋಣ. ಮಾರ್ಗ ಮಧ್ಯದಲ್ಲಿ ಉಪಯೋಗಿಸಿಕೊಳ್ಳೋಣ."

"ಆಗಲಿ, ನನ್ನ ಕಾಲಿಗೆ ಕಟ್ಟಿ."

ಮುಳ್ಳುನಳ್ಳಿಯು ಬಂಡಿಯ ಒಂದು ಎಳೆಪಟ್ಟಿಯನ್ನು ಹಂಸದ ಕಾಲಿಗೆ ಕಟ್ಟಿತು. ಇನ್ನೊಂದನ್ನು ತನ್ನ ಚಿಮುಟಾಂಗದಿಂದ ಹಿಡಿದುಕೊಂಡಿತು. ಮೂರನೆಯದನ್ನು ಪೈಕ್ ಮೀನು ತನ್ನ ಹಲ್ಲುಗಳಿಂದ ಹಿಡಿದುಕೊಂಡಿತು.

"ಸರಿ, ಬನ್ನಿ, ಒಟ್ಟಿಗೆ ಹಾರಿ ಹೋಗೋಣ!"

ಮುಳ್ಳುನಳ್ಳಿ ತನಗೆ ಸಹಜವಾದ ರೀತಿಯಲ್ಲಿ ಹಿಂದೆ ಹಿಂದಕ್ಕೆ ಸರಿಯಿತು. ಪೈಕ್ ಮೀನು ತನ್ನ ಪ್ರಕೃತಿಗೆ ತಕ್ಕಂತೆ ನೀರಿನ ಕಡೆಗೆ ಬಾಣದಂತೆ ಹೋಯಿತು. ಹಂಸವಾದರೋ ರೆಕ್ಕೆ ಬಡಿದು ಕೊಂಡು ಆಕಾಶಕ್ಕೇರಿತು. ಮೂರು ಬೇರೆ ಬೇರೆ ದಿಕ್ಕುಗಳಲ್ಲಿ ಎಳೆದುದರಿಂದ ಮೂರು ಎಳೆಪಟ್ಟಿ ಗಳೂ ಹರಿದು ಹೋದವು. ಬಂಡಿ ಎಲ್ಲಿತ್ತೋ ಅಲ್ಲೇ ನಿಂತಿತು. ಈ ಏರ್ಪಾಟು ಮಾಡುವುದರಲ್ಲಿ ಯಾರದು ತಪ್ಪು, ಯಾರದು ಸರಿ, ಯಾರಿಗೂ ಗೊತ್ತಾಗಲಿಲ್ಲ. ಇದನ್ನು ತೀರ್ಮಾನಿಸುವ ಗೊಡ ವೆಗೂ ಯಾರೂ ಹೋಗಲಿಲ್ಲ. ಆದರೆ ಇವನ್ನೆಲ್ಲ ಕಂಡ ಕಪ್ಪೆಗಳಷ್ಟೆ ನಕ್ಕವೂ, ನಕ್ಕವೂ ! ಎಲ್ಲಕ್ಕೂ ಹೆಚ್ಚಿನ ಆಶ್ಚರ್ಯವೆಂದರೆ ಈ ಮುಳ್ಳುನಳ್ಳಿಯೂ ಪೈಕ್ ಮೀನೂ ತಮ್ಮದಲ್ಲದ ಈ ವ್ಯವಹಾರ ವನ್ನು ಯಾಕೆ ಕೈಕೊಂಡವೋ ?

ಸಿಂಹದ ಆಡಳಿತ

ಒಂದು ದಿನ ಕಾಡಿನ ಮೃಗಗಳೂ ಹೊಲದ ಪ್ರಾಣಿಗಳೂ ಎಲ್ಲ ಸಭೆ ಸೇರಿ ತಮ್ಮ ಮೇಲೆ ಆಡಳಿತ ನಡೆಸಲು ಯೋಗ್ಯನಾದಂಥ ಒಬ್ಬ ದೊರೆಯನ್ನು, ಯಾರನ್ನು ಕಂಡರೆ ಎಲ್ಲರೂ ಹೆದರುವರೋ ವಿಧೇಯರಾಗಿ ವರ್ತಿಸುವರೋ ಅಂತಹ ದೊರೆಯನ್ನು, ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದವು. ಆದರೆ ಅಂದಿನ ಸಭೆಗೆ ಅತ್ಯಂತ ಭಾರಿಯಾದ ಅತ್ಯಂತ ಬಲಶಾಲಿಯಾದ ಪ್ರಾಣಿಗಳು ಬಂದಿರಲಿಲ್ಲ. ಹಾಗಾಗಿ ಆ ಸಭೆಯಲ್ಲಿ ಪ್ರಶ್ನೆ ಇತ್ಯರ್ಥವಾಗಲಿಲ್ಲ. ಕೆಲವು ದಿನಗಳನಂತರ ಇನ್ನೊಂದು ಸಭೆಯನ್ನು ಕರೆಯಬೇಕು, ಅದರಲ್ಲಿ ಎಲ್ಲ ಪ್ರಾಣಿಗಳೂ, ಚಿಕ್ಕವು ದೊಡ್ಡವು ಎಲ್ಲವೂ, ಹಾಜರಿರಬೇಕು, ಈ ಪ್ರಶ್ನೆಯನ್ನು ಆಖೈರಾಗಿ ಇತ್ಯರ್ಥಪಡಿಸಲೇ ಬೇಕು, ಎಂದು ನಿರ್ಧರಿಸಲಾಯಿತು.

ಗೊತ್ತು ಮಾಡಿದ ದಿನ ಬಂದಿತು. ಎಲ್ಲ ಪ್ರಾಣಿಗಳೂ ಬಂದಿದ್ದವು – ಆನೆ, ಸಿಂಹ, ಹುಲಿ, ಹಿಪ್ಪೋ, ರ್ಹೈನೊಸರೆಸ್, ಕರಡಿ, ತೋಳ, ಜಿಂಕೆ, ಒಂಟೆ, ನರಿ, ಮೊಲ, ಕಾಡುಹಂದಿ, ಜೀಬ್ರ, ಮೇಕೆ, ಕುರಿ, ಕುದುರೆ, ಹಸು, ನಾಯಿ, ಬೆಕ್ಕು, ಪೋಲ್‌ಕ್ಯಾಟ್, ಗಾಫರ್, ಇಲಿ, ಸುಂಡಿಲಿ, ಕತ್ತೆ – ಎಲ್ಲವೂ ಬಂದಿದ್ದವು.

ಜಿಂಕೆಯೇ ಮೊದಲು ಮಾತನಾಡಿದುದು:

"ಕಾಡಿನ ಒಡೆಯರೇ! ದಯವಿಟ್ಟು ನಿಮಗೆ ಒಂದು ಅರಿಕೆ ಮಾಡಿಕೊಳ್ಳಲು ಅವಕಾಶ ನೀಡಿ. ನೀವೆಲ್ಲ ದೊಡ್ಡವರು, ಬಲಶಾಲಿಗಳು. ನಾವಾದರೋ ಚಿಕ್ಕವರು, ತ್ರಾಣವಿಲ್ಲದವರು. ನಿಮ್ಮನ್ನು ಇಲ್ಲಿಗೆ ಬನ್ನಿ ಅಂತ ಕರೆದಿದ್ದಕ್ಕೆ ಕೋಪ ಮಾಡಿಕೊಳ್ಳಬೇಡಿ. ಈ ಸಭೆ ಸೇರಿರುವುದರ ಉದ್ದೇಶ ನಿಮ್ಮಲ್ಲಿ ಒಬ್ಬರನ್ನು ದೊರೆಯನ್ನಾಗಿ ಆರಿಸಬೇಕು ಅನ್ನುವುದು. ನಮ್ಮ ಕಾಡಿಗೆ ಒಬ್ಬ ದೊರೆ ಇರುವುದು ತುಂಬ ಅವಶ್ಯವಾಗಿದೆ. ಅವನು ನ್ಯಾಯವಂತನಾಗಿರಬೇಕು, ಎಲ್ಲರನ್ನೂ ಸಮನಾಗಿ ನೋಡಿಕೊಳ್ಳಬೇಕು. ಎಲ್ಲಕ್ಕೂ ಹೆಚ್ಚಾಗಿ ಕಾಡಿನಲ್ಲಿ ಶಾಂತಿ ಶಿಸ್ತು ಇರುವಂತೆ ನೋಡಿ ಕೊಳ್ಳಬೇಕು."

ಅನಂತರ ಆನೆ ಮಾತನಾಡಿತು:

"ನೀನು ಹೇಳಿದ್ದು ಸರಿ. ನಮಗೀಗ ಒಬ್ಬ ದೊರೆ ಬೇಕಾಗಿದ್ದಾನೆ. ಕಳ್ಳತನ, ದರೋಡೆ, ದುಷ್ಕೃತ್ಯಗಳು ಹೆಚ್ಚಿಬಿಟ್ಟಿವೆ. ಅವನ್ನೆಲ್ಲ ಇಲ್ಲದಂತೆ ಮಾಡಿ ತಪ್ಪಿತಸ್ಥರಿಗೆ ಸರಿಯಾಗಿ ಶಿಕ್ಷೆ ನೀಡುವ ದೊರೆ ಬೇಕು. ನೀವೆಲ್ಲ ಕಲೆತು ಯೋಚನೆ ಮಾಡಿ ಬುದ್ಧಿವಂತಿಕೆಯಿಂದ ಸರಿಯಾದ ದೊರೆಯನ್ನು ಆಯ್ಕೆ ಮಾಡಿ. ನಾನೇನೋ ನಿಮ್ಮಲ್ಲೆಲ್ಲ ತುಂಬ ಭಾರಿ ಗಾತ್ರದವ, ತುಂಬ ಬಲಶಾಲಿ. ಸಹಜ ವಾಗಿಯೇ ನಾನು ದೊರೆಯಾಗಲು ಸರಿಯಾದವ. ಆದರೆ ಅದನ್ನು ತೀರ್ಮಾನಿಸುವವರು ನೀವೇ. ನೀವು ಏನು ನಿರ್ಧರಿಸಿದರೆ ನಾನು ಅದಕ್ಕೆ ಬದ್ಧ."

ಆನೆ ಇನ್ನೂ ಮಾತು ಮುಗಿಸಿರಲೇ ಇಲ್ಲ ಆಗಲೇ ಸಿಂಹ ಮುಂದೆ ನುಗ್ಗಿ ಬಂದು ಹೇಳಿತು:

"ಆನೆಯನ್ನು ದೊರೆಯನ್ನಾಗಿ ಮಾಡುವುದೇ? ಹುಚ್ಚು ಮಾತು! ಅದು ಎಂತಹ ಒಡ್ಡ ಪ್ರಾಣಿ. ನಡಿಗೆಯೂ ನಿಧಾನ. ನನ್ನನ್ನು ನೋಡಿ. ನಾನು ಎಷ್ಟು ಜೋರಾಗಿ ಓಡಬಲ್ಲೆ. ನಾನು ಬಲಶಾಲಿಯೂ ಆಗಿದೀನಿ. ನೋಡೋಕೂ ಚೆನ್ನಾಗಿದೀನಿ. ಎಲ್ಲರೂ ನನ್ನ ಮಾತು ಕೇಳುತ್ತಾರೆ. ದೊರೆಯಾಗಲು ನನಗಿಂತ ಹೆಚ್ಚು ಉತ್ತಮರು ಇನ್ನಾರು ಇರಲು ಸಾಧ್ಯ?"

ಅದು ಹೀಗೆಯೇ ಮಾತು ಮುಂದುವರಿಸುತ್ತಲೇ ಇತ್ತು, ಆಗ ಇದ್ದಕ್ಕಿದ್ದಂತೆ ನರಿ ಪ್ರಾಣಿ ಗಳ ಮಧ್ಯದಿಂದ ಮುಂದಕ್ಕೆ ನೂಕಿಕೊಂಡು ಬಂದು ಒಂದು ಮರದ ಮೋಟಿನ ಮೇಲೆ ನೆಗೆದು ನಿಂತು ಹೇಳಿತು:

"ನಮಗೆಲ್ಲ ಗೊತ್ತಿದೆ ನೀವಿಬ್ಬರೂ ದೊರೆಯಾಗಬೇಕೂಂತ ಬಯಸುತ್ತಿದ್ದೀರ ಅಂತ. ನೀವಿಬ್ಬರೂ ಅದಕ್ಕೆ ಯೋಗ್ಯರೂ ಆಗಿದ್ದೀರ. ಆದರೆ ನಿಮ್ಮ ಮಧ್ಯೆ ಜಗಳ ಆಗುವುದು ಒಳ್ಳೆಯು ದಲ್ಲ. ಆದ್ದರಿಂದ ನಾವು ನಿಮ್ಮಿಂದ ಸ್ವಲ್ಪ ದೂರ ಹೋಗಿ, ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನ ಮಾಡಿದರೆ ಒಳ್ಳೆಯದು ಅಂತ ನನಗೆ ಅನಿಸುತ್ತೆ."

ನರಿಯು ಸಲಹೆಯನ್ನು ಎಲ್ಲರೂ ಹೊಗಳಿ ಸ್ವಾಗತಿಸಿದರು. ಅದು ಹೇಳಿದಂತೆಯೇ ಮಾಡ ಬೇಕೆಂದು ನಿರ್ಧರಿಸಲಾಯಿತು. ಆನೆಯೂ ಸಿಂಹವೂ ಇದ್ದ ಕಡೆಯೇ ಇದ್ದವು. ಉಳಿದ ಪ್ರಾಣಿ ಗಳೆಲ್ಲ ಕಾಡಿನ ಇನ್ನೊಂದು ಭಾಗಕ್ಕೆ ಹೋದವು.

ಈಗ ಭಾರಿ ಕೋಲಾಹಲವೇ ಉಂಟಾಯಿತು. ದುರ್ಬಲವಾದ ಆತ್ಮರಕ್ಷಣೆ ಇಲ್ಲದ ಪ್ರಾಣಿ ಗಳು ಆನೆಯೇ ಮೃಗಗಳ ರಾಜನಾಗಬೇಕೆಂದು ಬಯಸಿದಲ್ಲಿ ಬಲಶಾಲಿ ಪ್ರಾಣಿಗಳು ಸಿಂಹವೇ ಹೆಚ್ಚು ಉತ್ತಮವಾದ ಆಯ್ಕೆ ಎಂದು ಒತ್ತಾಯಿಸ ತೊಡಗಿದವು.

ಇದಕ್ಕೆ ಮುಂಚೆ ಸಿಂಹ ನರಿಯನ್ನು ಪಕ್ಕಕ್ಕೆ ಕರೆದು ಎಚ್ಚರಿಕೆ ನೀಡಿತ್ತು. ಸಾರ್ವಜನಿಕಾಭಿ ಪ್ರಾಯವನ್ನು ತನ್ನ ಕಡೆಗೆ ಇರುವಂತೆ ಮಾಡದೆ ಹೋದರೆ ಅದಕ್ಕಾಗಿ ತಕ್ಕ ಶಾಸ್ತಿ ಮಾಡುವು ದಾಗಿ ಅದು ನರಿಯನ್ನು ಬೆದರಿಸಿದ್ದಿತು. ಹಾಗಾಗಿ ಸಿಂಹದ ಕೋಪಕ್ಕೆ ತುತ್ತಾಗಲಿಚ್ಛಿಸದೆ ನರಿ ಬೇರಾವ ಪ್ರಾಣಿಗಳಿಗಿಂತ ಹೆಚ್ಚಾಗಿ ಸಿಂಹದ ಪರವಾಗಿ ಪ್ರಚಾರ ನಡೆಸಿತು. ಎಲ್ಲರ ಗಮನವನ್ನೂ ತನ್ನ ಕಡೆಗೆ ಆಕರ್ಷಿಸಲೋಸುಗ ಅದು ಮತ್ತೆಮತ್ತೆ ಮರದ ಮೋಟೊಂದರ ಮೇಲೆ ನೆಗೆದು ನಿಂತು ಹೇಳುತ್ತಿತ್ತು:

"ನಮ್ಮ ಮಧ್ಯೆ ಆನೆಗೇ ಮತ ನೀಡಬೇಕು ಅನ್ನುವವರೂ ಕೆಲವರಿದ್ದಾರೆ. ಆದರೆ ಅವರ ವಿಚಾರ ತಪ್ಪು, ನಾನು ಖಾತರಿಯಾಗಿ ಹೇಳುತ್ತೇನೆ. ನಿಜ, ಆನೆ ಕುಶಲಿ, ಬಲಶಾಲಿ, ತಾನೂ ಮಾಂಸ ತಿನ್ನುವುದಿಲ್ಲ, ಇತರರಿಗೂ ಮಾಂಸಕ್ಕಾಗಿ ಪ್ರಾಣಿಗಳನ್ನು ಕೊಲ್ಲಲು ಬಿಡುವುದಿಲ್ಲ. ಆದರೆ ಅದೊಂದು ಒಡ್ಡ ಪ್ರಾಣಿ. ಅದರ ಓಟ ನಿಧಾನ. ತಮ್ಮನ್ನು ಹಿಡಿಯಲು ಆನೆಗೆ ಎಂದೂ ಆಗದು ಎಂದು ತಿಳಿದ ನಮ್ಮ ಶತ್ರುಗಳು ಆನೆಗೆ ಎಷ್ಟು ಮಾತ್ರವೂ ಹೆದರುವುದಿಲ್ಲ. ಬದಲು ಇನ್ನೂ ಹೆಚ್ಚು ದುಷ್ಟ ಕೃತ್ಯಗಳನ್ನು ಮಾಡ ತೊಡಗುತ್ತವೆ. ಆದ್ದರಿಂದ ಎಲ್ಲರೂ ಸಿಂಹಕ್ಕೇ ಮತ ನೀಡಿ ! ಸಿಂಹ ಸೊಗಸಾದ ಮೃಗರಾಜನಾಗುವುದು. ಏಕೆಂದರೆ ಅದೂ ಆನೆಯಷ್ಟೇ ಕುಶಲಿ ಮತ್ತು ಹೆಚ್ಚು ಕಮ್ಮಿ ಅಷ್ಟೇ ಬಲಶಾಲಿ. ಆದರೆ ಆನೆಯಂತಲ್ಲದೆ ಇದು ಹೆಚ್ಚು ಬೇಗ ಓಡುತ್ತೆ. ಎಲ್ಲರೂ ಇದಕ್ಕೆ ಹೆದರುತ್ತಾರೆ. ದೆವ್ವವೂ ಇದರ ಕೈಯಿಂದ ತಪ್ಪಿಸಿಕೊಂಡು ಹೋಗ ಲಾರದು."

"ನೀನು ಹೇಳೋದೇನೋ ಸರಿಯೆ, ನರಿಯಣ್ಣ" ಎಂದು ಜಿಂಕೆ ಧೈರ್ಯ ಮಾಡಿ ಹೇಳ ತೊಡಗಿತು. "ಆದರೆ ಯಾರಿಗೂ ದೂರುವುದಕ್ಕೆ ಅವಕಾಶ ಮಾಡಿ ಕೊಡಬಾರದು, ನೋಡು. ಆದ್ದರಿಂದ ನಾನು ಸಲಹೆ ಮಾಡೋದೇನೂಂದರೆ, ಚೀಟಿ ಎತ್ತಿ ತೀರ್ಮಾನ ಮಾಡೋಣ."

"ಒಳ್ಳೆಯ ವಿಚಾರ !" ಎಲ್ಲರೂ ಒಪ್ಪಿದರು. "ಆದರೆ ಹೇಗೆ ಇದನ್ನು ಮಾಡೋದು ?"

“ಅದೇನು ತುಂಬ ಸರಳ” ಹೇಳಿತು ಜಿಂಕೆ. “ಅಲ್ಲಿ ಒಂದು ಮರದ ಪೊಟರೆ ಕಾಣಿಸೊಲ್ವೆ ನಿಮಗೆ? ಯಾರು ಸಿಂಹದ ಪರವೋ ಅವರು ಅದರೊಳಕ್ಕೆ ಒಂದು ಕರಟಕಾಯಿ ಹಾಕಲಿ. ಯಾರು ಆನೆಯ ಪರವೋ ಅವರು ಅದರೊಳಕ್ಕೆ ಒಂದು ಓಕ್ ಬೀಜ ಹಾಕಲಿ.”

“ಭೇಷ್, ಭೇಷ್ ! ಸರಿಯಾಗಿ ಹೇಳಿದೆ.”

ಅವು ಕರಟಕಾಯಿಗಳನ್ನೂ ಓಕ್ ಬೀಜಗಳನ್ನೂ ಸಂಗ್ರಹಿಸಿ ಎರಡನ್ನೂ ಬೆರಸಿ ಗುಡ್ಡೆ ಹಾಕಿದವು. ಆಮೇಲೆ ನರಿ ತನ್ನ ಹಿಂಗಾಲುಗಳ ಮೇಲೆ ಎದ್ದು ನಿಂತು ಪ್ರಕಟಿಸಿತು:

“ಸರಿ, ಎಲ್ಲರೂ ಮತದಾನ ಮಾಡಲು ಬನ್ನಿ !”

ಎಲ್ಲ ಪ್ರಾಣಿಗಳೂ ಬೇಗನೆಯೇ ಸಾಲು ನಿಂತವು. ಪ್ರತಿಯೊಂದು ಪ್ರಾಣಿಯೂ ಸರದಿಯಲ್ಲಿ ಗುಡ್ಡೆಯ ಬಳಿ ಹೋಗಿ ತನ್ನ ಮತಕ್ಕನುಗುಣವಾಗಿ ಕರಟಕಾಯನ್ನೋ ಓಕ್ ಬೀಜವನ್ನೋ ಎತ್ತಿಕೊಂಡು ಪೊಟರೆಯಲ್ಲಿ ಹಾಕ ತೊಡಗಿತು. ಹಿಂಸ್ರ ಪ್ರಾಣಿಗಳೆಲ್ಲ ಸಿಂಹಕ್ಕೆ ಮತ ನೀಡಿದವು. ಹುಲ್ಲು, ಹಣ್ಣು, ಮೂಲಿಕೆಗಳನ್ನು ತಿನ್ನುವ ಪ್ರಾಣಿಗಳು ಆನೆಗೆ ಮತ ನೀಡಿದವು.

ನರಿ ಕರಟಕಾಯಿ ಹಾಗೂ ಓಕ್ ಬೀಜಗಳ ಗುಡ್ಡೆಯ ಮೇಲೇ ಕಣ್ಣಿಟ್ಟಿತ್ತು. ಗುಡ್ಡೆಯಲ್ಲಿ ಓಕ್ ಬೀಜಗಳಿಗಿಂತ ಕರಟಕಾಯಿಗಳೇ ಹೆಚ್ಚಾಗಿ ಹಿಂದೆ ಉಳಿದಿದ್ದುದನ್ನು ಕಂಡಿತು. ಅಂದರೆ ಹೆಚ್ಚಿನ ಪ್ರಾಣಿಗಳು ಆನೆಗೇ ಮತ ನೀಡುತ್ತಿದ್ದವು ಎಂದಾಯಿತು. ಆಗ ನರಿ ಕಾಣದಂತೆ ಮತದಾರರ ಬಳಿಗೆ ಹೋಗಿ ಅವುಗಳ ಮೇಲೆ ಪ್ರಭಾವ ಹಾಗೂ ಒತ್ತಡ ತರ ತೊಡಗಿತು. ಪುಟ್ಟ ಪ್ರಾಣಿಗಳ ಕಿವಿಯಲ್ಲಿ ಪಿಸುಮಾತಿನಲ್ಲಿ ಹೇಳುತ್ತಿತ್ತು: “ಏಯ್ ನೋಡು, ಸಿಂಹಕ್ಕೆ ಮತ ನೀಡು. ಇಲ್ಲದಿದ್ದರೆ ಅದು ನಿನ್ನನ್ನು ಕೀಟದಂತೆ ಹೊಸಕಿ ಹಾಕುತ್ತೆ.” ಆ ಪುಟ್ಟ ಪ್ರಾಣಿಗಳು ಹೆದರಿದವು. ಸಿಂಹವನ್ನೇಕೆ ಶತ್ರುವನ್ನಾಗಿ ಮಾಡಿಕೊಳ್ಳಬೇಕು ಎಂದು ಅದಕ್ಕೇ ಮತ ನೀಡಿದವು.

ಕುತಂತ್ರಿ ನರಿ ಇಷ್ಟಕ್ಕೇ ನಿಲ್ಲಲಿಲ್ಲ. ತನ್ನನ್ನು ಯಾರೂ ನೋಡುತ್ತಿಲ್ಲ ಎಂದು ಕಂಡುಬಂದಾಗ ಅದು ಮೆಲ್ಲನೆ ಒಂದು ಬೊಗಸೆ ಕರಟಕಾಯಿಗಳನ್ನು ಎತ್ತಿಕೊಂಡು ಹೋಗಿ ಪೊಟರೆಯೊಳಕ್ಕೆ ಹಾಕಿ ಬಿಟ್ಟಿತು.

ಕೊನೆಯಲ್ಲಿ ಎಣಿಕೆ ನಡೆದಾಗ, ಕರಟಕಾಯಿಗಳೂ ಓಕ್ ಬೀಜಗಳೂ ಸರಿಸಮ ಇದ್ದುದು ಕಂಡುಬಂದಿತು.

“ಇಲ್ಲೇನೋ ತಪ್ಪಾಗಿದೆ, ಮಿತ್ರರೇ” ಎಂದಿತು ಕರಡಿ. “ನಾವು ಮತ್ತೆ ಮತ ನೀಡಬೇಕು. ಯಾರೂ ಒಂದಕ್ಕಿಂತ ಹೆಚ್ಚು ಬಾರಿ ಮತ ನೀಡದಂತೆ ನೋಡಿಕೊಳ್ಳಬೇಕು.”

ನರಿ ಮಧ್ಯೆ ಬಾಯಿ ಹಾಕಿ ಹೇಳಿತು:

"ಬೇಡ, ಬೇಡ, ಎರಡನೆಯ ಸಾರಿ ಮತದಾನ ಬೇಕಿಲ್ಲ. ನಾವು ಹೀಗೆ ಮಾಡೋಣ. ಸಿಂಹ ಹಾಗೂ ಆನೆ ಬಳಿಗೆ ಹೋಗಿ, 'ನಮಗೆ ನೀವಿಬ್ಬರೂ ಸಮಾನರೇ. ಆದರೆ ನಿಮ್ಮಲ್ಲಿ ಯಾರು ರಾಜನಾಗಬೇಕು ಅನ್ನುವುದನ್ನು ಆಮೇಲೆ ತೀರ್ಮಾನಿಸುತ್ತೇವೆ. ಇಷ್ಟರ ಮೇಲೆ ನಿಮಗೆ ಹೇಗೆ ಸರಿ ಅಂತ ಕಂಡುಬರುತ್ತೋ ಹಾಗೆ ಮಾಡಿ' ಅಂತ ಸಲಹೆ ನೀಡೋಣ."

ಎಲ್ಲವೂ ಸಿಂಹ ಹಾಗೂ ಆನೆ ಬಳಿಗೆ ಹೋಗಿ ತಮ್ಮ ನಿರ್ಧಾರ ತಿಳಿಸಿದವು.

ಮತ್ತೆ ನರಿಯೇ ಮುಂದೆ ಬಂದು ಹೇಳಿತು:

"ಮಿತ್ರರೇ, ನಮ್ಮ ಪ್ರಾಣಿಗಳ ಸಮಾಜ ಯಾರು ರಾಜನಾಗಬೇಕು, ಸಿಂಹವೇ ಅಥವಾ ಆನೆಯೇ, ಅನ್ನುವುದನ್ನು ತೀರ್ಮಾನಿಸಲು ಮತದಾನ ನಡೆಸಿತು. ನಿಮ್ಮಿಬ್ಬರಲ್ಲಿ ಯಾರು ರಾಜನಾಗಬೇಕು ಅನ್ನುವುದನ್ನು ನಿರ್ಧರಿಸಲು ನಾವು ಒಬ್ಬೊಬ್ಬರೂ ನಮ್ಮ ಇಷ್ಟದ ಪ್ರಕಾರ ಪೊಟರೆಯೊಳಕ್ಕೆ ಕರಟಕಾಯಿ ಹಾಗೂ ಓಕ್ ಬೀಜ ಹಾಕಿದೆವು. ಕೊನೆಯಲ್ಲಿ ಎಣಿಸಿದೆವು. ನೀವಿಬ್ಬರೂ ಸರಿಸಮನಾಗಿ ಮತ ಗಳಿಸಿದ್ದಿರಿ. ಈಗ ಮತ್ತೆ ನಿಮ್ಮಿಬ್ಬರಲ್ಲಿ ಯಾರು ರಾಜನಾಗಬೇಕು ಅನ್ನುವುದನ್ನು ಯೋಚಿಸಬೇಕಾಗಿದೆ. ನನಗನಿಸುತ್ತೆ ಹೀಗೆ ಮಾಡೋಣ ಅಂತ: ಯಾರು ಯಾರನ್ನ ಓಟದಲ್ಲಿ ಸೋಲಿಸುತ್ತಾರೋ ಅವರು ರಾಜನಾಗಲಿ. ಆದ್ದರಿಂದ ಈಗ ಓಟದ ಸ್ಪರ್ಧೆ ಏರ್ಪಡಿಸೋಣ. ಯಾರು ಜೋರಾಗಿ ಓಡುತ್ತಾರೋ ಅವರೇ ರಾಜನಾಗಲಿ."

"ಶುದ್ಧ ಅವಿವೇಕ!" ಎಂದಿತು ಆನೆ. "ಜೋರಾಗಿ ಓಡುವುದು ನನ್ನ ಕೈಲಾಗದು. ಓಡುವ ರೀತಿಯಲ್ಲಿ ನಾನು ಹುಟ್ಟೇ ಇಲ್ಲ. ಆದರೆ ನನಗನಿಸುತ್ತೆ, ರಾಜನಿಗೆ ಜೋರಾಗಿ ಓಡುವುದಾದರೂ ಯಾಕೆ ಬೇಕು? ಅವನು ನ್ಯಾಯಸಮ್ಮತವಾಗಿ, ಬುದ್ಧಿವಂತಿಕೆಯಿಂದ ರಾಜ್ಯಭಾರ ಮಾಡಬೇಕು, ಅಷ್ಟೆ. ಯಾರನ್ನಾದರೂ ಹಿಡಿಯಬೇಕಾಗಿ ಬಂದರೆ ರಾಜನೇ ಯಾಕೆ ಓಡಿ ಹೋಗಿ ಹಿಡಿಯಬೇಕು? ಬೇರೆ ಯಾರನ್ನಾದರೂ ಕಳಿಸಿ ತಪ್ಪಿತಸ್ಥನನ್ನು ಹಿಡಿಸಿ ತರಿಸಬಹುದು."

"ಸರಿ, ಒಳ್ಳೆಯದೇ. ಹಾಗಾದರೆ ಹೀಗೆ ಮಾಡೋಣ. ನಿಮ್ಮಿಬ್ಬರಲ್ಲಿ ಯಾರು ಹೆಚ್ಚು ಎತ್ತರ ನೆಗೆಯುತ್ತಾರೋ ಅವರು ರಾಜನಾಗಲಿ."

ಆನೆ ಮತ್ತೆ ಹೇಳಿತು:

"ಉಹೂಂ. ನಾನು ನೆಗೆಯಲಾರೆ. ನಾನು ಅಷ್ಟು ಹಗುರವಲ್ಲ."

"ಹಾಗಾದರೆ ಸಿಂಹವೇ ರಾಜನಾಗಲಿ!" ಎಂದು ಸಿಂಹದ ಪರವಾಗಿದ್ದ ಪ್ರಾಣಿಗಳೆಲ್ಲ ಕೂಗಿ ಹೇಳಿದವು.

ಆನೆ ಮತ್ತೆ ಹೇಳಿತು:

"ನೀವು ಹಾಗೆ ಹೇಳಿದರೆ ಹಾಗೇ ಆಗಲಿ. ನನಗೆಲ್ಲ ಒಂದೇ. ಆದರೆ ಅದು ನ್ಯಾಯವಾಗುವುದಿಲ್ಲ, ಅಷ್ಟೆ. ಯಾಕೇಂದರೆ, ಸಿಂಹ ಏನು ಮಾಡಬಲ್ಲುದೋ ಅದನ್ನು ನಾನು ಮಾಡಲಾರೆ, ನಾನು ಏನು ಮಾಡಬಲ್ಲೆನೋ ಅದನ್ನು ಸಿಂಹ ಮಾಡಲಾರದು. ಹಾಗೆ ಬೇಕು ಅನ್ನುವುದಾದರೆ ಸಿಂಹ ನನ್ನ ಜೊತೆಗೆ ಹೋರಾಡಲಿ. ಹೋರಾಟದಲ್ಲಿ ಯಾರು ಗೆಲ್ಲುತ್ತಾರೋ ಅವರು ರಾಜನಾಗಲಿ."

ನರಿ ಅಷ್ಟು ಹೊತ್ತಿಗೆ ತುಂಬ ಯೋಚನೆ ಮಾಡಿ ಆನೆಯನ್ನು ಮೋಸಗೊಳಿಸಲು ಮತ್ತೊಂದು ಕುತಂತ್ರ ಕಂಡುಹಿಡಿದಿದ್ದಿತು. ಅದು ಹೇಳಿತು:

"ಸರಿ. ನೀನು ಹೇಳಿದ ಹಾಗೇ ಆಗಲಿ. ಇಬ್ಬರೂ ಹೋರಾಡಿ ! ಆದರೆ ಈಗ ಆಗಲೇ ತುಂಬ ತಡವಾಗಿದೆ. ನಾವೆಲ್ಲ ತುಂಬ ಬಳಲಿದ್ದೇವೆ, ಹಸಿದಿದ್ದೇವೆ. ನಾಳೆ ಬೆಳಿಗ್ಗೆ ನಾಷ್ಟಾ ಆದ ಮೇಲೆ ಅದನ್ನು ಮಾಡೋದು ಒಳ್ಳೆಯದು. ಮತ್ತೆ ನೀವು, ಪ್ರಾಣಿಗಳೇ, ಹೋರಾಟ ನೋಡಲು ಬೆಳಿಗ್ಗೆ ಬೇಗ ಎದ್ದು ಬಂದು ಬಿಟ್ಟು ಅವಕ್ಕೆ ತೊಂದರೆ ಕೊಡಬೇಡಿ. ನಾವು ತಡವಾಗಿ ಬಂದು ಯಾರು ಯಾರನ್ನು ಸೋಲಿಸಿದರು ಅನ್ನುವುದನ್ನು ತಿಳಿಯುವುದೇ ಒಳ್ಳೆಯದು."

ಎಲ್ಲ ಪ್ರಾಣಿಗಳೂ ಈ ಸಲಹೆಗೆ ಒಪ್ಪಿದವು. ರಾತ್ರಿಯಾಯಿತು. ಆನೆ ನಿದ್ರೆ ಮಾಡಲು ಹೋಯಿತು. ಅದು ಕಾಡಿಗೆ ಹೋಗಿ ಅಷ್ಟೇನೂ ದಪ್ಪನಲ್ಲದ ಒಂದು ಓಕ್ ಮರಕ್ಕೆ ಒರಗಿ ನಿಂತು ನಿದ್ರೆ ಮಾಡ ತೊಡಗಿತು. ಆನೆಗಳು ಯಾವತ್ತೂ ನಿಂತೇ ಮರಕ್ಕೆ ಒರಗಿ ನಿದ್ರಿಸೋದು. ಅವು ಮಲಗಿ ಬಿಟ್ಟರೆ ಮತ್ತೆ ಬೇರೆಯವರ ಸಹಾಯವಿಲ್ಲದೆ ತಮಗೆ ತಾವೇ ಏಳಲಾರವು.

ನರಿ ಇದನ್ನೇ ದೂರದಿಂದ ನೋಡುತ್ತ ಇತ್ತು. ಆನೆ ಆಗಲೇ ಗಾಢವಾಗಿ ನಿದ್ರೆ ಹೋಯಿತು ಅನ್ನುವುದು ತಿಳಿದ ಕೂಡಲೇ ಸಿಂಹದ ಬಳಿಗೆ ಓಡಿ ಹೋಗಿ ಹೇಳಿತು:

"ಸಿಂಹರಾಯ, ಬಾ, ಬೇಗ ಬಾ. ಆನೆ ಆಗಲೇ ನಿದ್ರೆ ಹೋಗಿದೆ. ಅದನ್ನು ಸೋಲಿಸಲು ಇದೀಗ ಸೂಕ್ತ ಕಾಲ."

"ಹೇಗೆ ಸೋಲಿಸೋದು?" ಸಿಂಹ ಕೇಳಿತು. "ಆನೆಯನ್ನು ಹಿಸುಕುವಷ್ಟು ಶಕ್ತಿ ನನಗಿಲ್ಲ. ಅದನ್ನು ತಳ್ಳಿ ಹಿಸುಕೋಕೆ ಹೋದರೆ ಅದು ಎಚ್ಚರಾಗಿ ಬಿಡುತ್ತೆ."

"ಉಹೂಂ, ಅದನ್ನಲ್ಲ ನಾನು ಹೇಳ್ತಿರೋದು. ಅದನ್ನೇನೂ ತಳ್ಳಿ ಹಿಸುಕಬೇಕಾಗಿಲ್ಲ. ನಿದ್ರೆ ಮಾಡುವಾಗ ಆನೆಗೆ ಮರಕ್ಕೆ ಒರಗಿಕೊಂಡಿರೋದು ಅಭ್ಯಾಸವಾಗಿಬಿಟ್ಟಿದೆ. ಈಗ ಏನು ಮಾಡಬೇಕು ಅಂದರೆ ಅದು ಒರಗಿಕೊಂಡಿರೋ ಮರವನ್ನು ಹಲ್ಲುಗಳಿಂದ ಕಡಿದು ಹಾಕಬೇಕು.

ಮರ ಬೀಳುತ್ತೆ, ಅದರ ಜೊತೆಗೆ ಆನೆಯೂ ಬೀಳುತ್ತೆ. ನೀನು ಆನೆಯನ್ನು ಉರುಳಿಸಿ ಬೀಳಿಸಿದೆ ಅಂತ ಎಲ್ಲರಿಗೂ ತಿಳಿಸಿ ಬಿಡೋಣ."

"ಭಲೆ, ಭೇಷ್! ಎಷ್ಟು ಚೆನ್ನಾಗಿ ಯೋಚನೆ ಮಾಡಿದೆ. ಆದರೆ ನಾನೊಬ್ಬನೇ ಬೆಳಗಾಗುವ ಮುನ್ನ ಮರವನ್ನು ಹಲ್ಲುಗಳಿಂದ ಕಡಿದು ಬೀಳಿಸೋಕೆ ಎಲ್ಲಾಗುತ್ತೆ? ಹಲ್ಲು ನೋಯುತ್ತೆ ಅಷ್ಟೆ. ನೀನು ಹೋಗಿ ಬೇರೆ ಯಾರನ್ನಾದರೂ ಸಹಾಯಕ್ಕೆ ಕರೆದುಕೊಂಡು ಬಾ."

ನರಿ ಓಡಿ ಹೋಗಿ ಹನ್ನೆರಡು ತೋಳಗಳನ್ನು ಕರೆತಂದಿತು. ಅವು ಆನೆ ಒರಗಿದ್ದ ಓಕ್ ಮರದ ಬುಡವನ್ನು ತಮ್ಮ ಹಲ್ಲುಗಳಿಂದ ಕಡಿಯ ತೊಡಗಿದವು. ಕಡಿದವೂ ಕಡಿದವೂ, ಅರು ಣೋದಯದವರೆಗೂ ಕಡಿದವು. ಆದರೂ ಇನ್ನೂ ತುಂಬ ಉಳಿದುಕೊಂಡಿತ್ತು. ಮರವೇನೋ ಆಗಲೇ ಸ್ವಲ್ಪ ವಾಲಿತ್ತು. ಆದರೆ ಇನ್ನೂ ಬಿದ್ದಿರಲಿಲ್ಲ. ಏನು ಮಾಡೋದು? ಆಗಲೇ ಬೆಳಗಾಗು ತ್ತಿದೆ. ಆನೆ ಯಾವುದೇ ಘಳಿಗೆಯಲ್ಲಿ ಎಚ್ಚರಾಗಿ ಬಿಡಬಹುದು. ಮತ್ತೆ ಮರ ಬೀಳುತ್ತಿಲ್ಲ. ನರಿ ಪುನಃ ಯೋಚನೆ ಮಾಡಿತು. ಮೂರು ಕರಡಿಗಳನ್ನು ಕರೆದು ಹೇಳಿತು:

"ನಮ್ಮ ಭಾವೀ ರಾಜ ಆನೆ ಈ ಮರದ ಮೇಲೆ ಜೇನು ಇದೆ ಅಂತ ಕಂಡುಕೊಂಡಿತು. ಮಲಗೋಕೆ ಮುಂಚೆ, ನಿಮ್ಮನ್ನು ಕರೆದು ಆ ಜೇನನ್ನು ಕೆಳಕ್ಕೆ ತಂದಿರಿಸುವಂತೆ ನಿಮಗೆ ಹೇಳು ವಂತೆ ನನಗೆ ಹೇಳಿತು. ನೀವು ಅದು ಹೇಳಿದ ಹಾಗೆ ಮಾಡಬೇಕು. ಇಲ್ಲದಿದ್ದರೆ ಅದಕ್ಕೆ ಕೋಪ ಬರುತ್ತೆ."

ಕರಡಿಗಳಿಗೆ ಈ ಕೆಲಸ ಮಾಡಲು ಸಂತೋಷವೇ ಆಯಿತು. ಮರ ಹತ್ತ ತೊಡಗಿದವು. ನರಿ ಕೆಳಗೆ ನಿಂತು ಮೆಲ್ಲಗೆ "ಮೇಲೆ, ಮೇಲಕ್ಕೆ, ಅಲ್ಲಿಗೆ ಹತ್ತಿ ಹೋಗಿ" ಎಂದು ಮರದ ತುದಿಯಲ್ಲಿ, ಅದು ವಾಲಿದ್ದ ಕಡೆಯಲ್ಲಿ, ತೂಗಿ ಬಿದ್ದಿದ್ದ ರೂಕ್ ಹಕ್ಕಿಯ ಗೂಡೊಂದನ್ನು ತೋರಿಸುತ್ತ ಹೇಳಿತು. ಕರಡಿಗಳು ಮರದ ತುಟ್ಟತುದಿಯವರೆಗೂ ಹತ್ತಿ ಹೋದವು. ಮರಕ್ಕೆ ಅವುಗಳ ಭಾರವನ್ನು ತಡೆಯಲು ಆಗಲಿಲ್ಲ. ಅದು ಕಟಕಟನೆ ಶಬ್ದ ಮಾಡುತ್ತ ಮುರಿದು ಬಿದ್ದಿತು. ಅದರ ಜೊತೆಗೆ ಆನೆಯೂ ನೆಲದ ಮೇಲೆ ಅಂಗತ್ತನಾಗಿ ಬಿದ್ದಿತು. ಅದಕ್ಕೆ ಸ್ವತಃ ಮೇಲೇಳಲು ಆಗಲಿಲ್ಲ. ಕರಡಿಗಳು ಮರದ ಮೇಲಿನಿಂದ ಬಿದ್ದವೋ ಇಲ್ಲವೋ ಹಾಗೆಯೇ ಅವುಗಳ ಪ್ರಾಣವೂ ಹಾರಿ ಹೋಯಿತು.

ನಾಷ್ಟಾ ಆದನಂತರ ಪ್ರಾಣಿಗಳೆಲ್ಲ ಸಭೆ ಸೇರ ತೊಡಗಿದವು. ಸಿಂಹ ಕೆಳಗೆ ಬಿದ್ದಿದ್ದ ಆನೆಯ ಮೇಲೆ ನಿಂತಿದ್ದಿತು. ನರಿ ಒಂದು ಪಕ್ಕದಲ್ಲಿ ನಿಂತು ತನ್ನ ಬಾಲ ಆಡಿಸುತ್ತಿತ್ತು. ಎಲ್ಲ ಪ್ರಾಣಿಗಳೂ ಬಂದ ಮೇಲೆ ನರಿ ಪ್ರಕಟಿಸಿತು:

"ನೋಡಿ, ಮಾನ್ಯರೇ! ನಮ್ಮ ರಾಜ ಎಷ್ಟು ಶಕ್ತಿವಂತ. ಆನೆಯನ್ನು ಉರುಳಿಸಿ ಬೀಳಿಸಿದೆ.

ಬೀಳುವಾಗ ಆನೆ ಮರಕ್ಕೆ ಒರಗಿಕೊಂಡು ನಿಲ್ಲಲು ಬಯಸಿತು. ಸಿಂಹ ಆನೆಯನ್ನು ಮರದ ಸಮೇತ ಉರುಳಿಸಿತು. ಮರವಾದರೂ ನೋಡಿ ಎಷ್ಟು ಬಲವಾದುದು. ಆದರೂ ಸಿಂಹದ ಹೊಡೆತ ತಡೆಯಲಾರದೆ ಅದೂ ಮುರಿದು ಬಿದ್ದಿದೆ. ಇದೂ ಸಾಲದು ಅಂತ ಆನೆಗೆ ಬೆಂಬಲ ಕೊಡಲು ಬಂದ ಮೂರು ಕರಡಿಗಳನ್ನೂ ಸಿಂಹ ಎಷ್ಟು ಜೋರಾಗಿ ಕುಕ್ಕಿ ಬಡಿಯಿತು ಅಂದರೆ ಅವು ಮೂರೂ ಸತ್ತು ಬಿದ್ದವು. ನೋಡಿ, ಅಲ್ಲಿ ಬಿದ್ದಿವೆ, ಆ ಬಡಪಾಯಿ ಪ್ರಾಣಿಗಳು !"

ಪ್ರಾಣಿಗಳು ಭಯದಿಂದ ನಡುಗಿದವು. ಎಲ್ಲವೂ ಒಕ್ಕೊರಲಿನಿಂದ ಕೂಗಿ ಹೇಳಿದವು:

"ಸಿಂಹವೇ ನಮ್ಮ ರಾಜನಾಗಲಿ !"

ಅಂದಿನಿಂದ ಎಲ್ಲ ಪ್ರಾಣಿಗಳೂ ಸಿಂಹಕ್ಕೆ ಹೆದರ ತೊಡಗಿದವು. ಸಿಂಹವನ್ನೇ ತಮ್ಮ ರಾಜ ನೆಂದು ಕರೆಯ ತೊಡಗಿದವು. ಸಿಂಹ ಕಾಡಿನಲ್ಲಿ ಒಮ್ಮೆ ಘರ್ಜಿಸಿದರೆ ಸಾಕು ಎಲ್ಲ ಪ್ರಾಣಿಗಳೂ ನಡುಗುತ್ತಿದ್ದವು.

ತನಗೆ ಸಹಾಯಕರಾಗಿ ಸಿಂಹ ರಾಜ್ಯಪಾಲರುಗಳನ್ನು ನೇಮಿಸಿತು. ಅದು ತೋಳನನ್ನು ಬಯಲುಗಳ ರಾಜ್ಯಪಾಲನನ್ನಾಗಿ ಮಾಡಿತು, ಹುಲಿಯನ್ನು ಕಾಡುಗಳ ರಾಜ್ಯಪಾಲನನ್ನಾಗಿ ಮಾಡಿತು, ನರಿಯನ್ನು ಹೊಲಗಳ ರಾಜ್ಯಪಾಲನನ್ನಾಗಿ ಮಾಡಿತು.

ರಾಜ್ಯಪಾಲರುಗಳು ಸಿಂಹಕ್ಕೆ ತಮ್ಮ ವಂದನೆ ಸಲ್ಲಿಸಿ ತಾವು ನೇಮಿತರಾಗಿದ್ದ ಸ್ಥಳಗಳಿಗೆ ಹೊರಟು ಹೋದವು. ಉಳಿದ ಪ್ರಾಣಿಗಳು ತಮ್ಮತಮ್ಮಲ್ಲೇ ಮಾತನಾಡಿಕೊಂಡವು:

"ತೋಳನೂ ನರಿಯೂ ಈ ಗೌರವಕ್ಕೆ ಪಾತ್ರರಾಗುವಂತೆ ಮಾಡಿದ ಅಂತಹ ಮಹಾ ಕಾರ್ಯವಾದರೂ ಏನು? ನಮ್ಮ ಮಧ್ಯೆ ರಾಜ್ಯಪಾಲರ ಪದವಿಗೆ ಇನ್ನೂ ಹೆಚ್ಚು ಅರ್ಹರಾದಂಥ ಪ್ರಾಣಿಗಳು ಎಷ್ಟೋ ಇವೆ."

ಜಿಂಕೆ ಹೇಳಿತು:

"ಹೌದು, ಮಾನ್ಯರೇ. ಇಲ್ಲೇನೋ ದುಷ್ಟ ಹಂಚಿಕೆ ನಡೆದಿದೆ. ಸತ್ಯವಾದುದು, ಶುದ್ಧವಾದುದು ರಾಜನ ಗಮನಕ್ಕೆ ಬರುತ್ತಿಲ್ಲ. ಸಿಂಹ ಅಷ್ಟು ಸರಳವಾಗಿಯೇನೂ ಆನೆಯನ್ನು ಸೋಲಿಸಿಲ್ಲ ಅಂತ ನನಗೆ ತಕ್ಷಣವೇ ಗೊತ್ತಾಯಿತು. ಇಲ್ಲೇನೋ ಕುತಂತ್ರ ನಡೆದಿದೆ. ನರಿ ಇಂತಹ ಕುತಂತ್ರಗಳಲ್ಲೆಲ್ಲ ಚಾಣಾಕ್ಷ. ಅದೇ ಇಲ್ಲಿ ಏನೋ ಉಪಾಯ ನಡೆಸಿರಬೇಕು. ತೋಳಗಳೂ ಸ್ಪಷ್ಟವಾಗಿಯೇ ಅದಕ್ಕೆ ಸಹಾಯ ಮಾಡಿರಬೇಕು. ಆದ್ದರಿಂದಲೇ ಅವಕ್ಕೆ ಈ ಗೌರವ ಪದವಿಗಳು. ಇನ್ನು ಹುಲಿಯ ವಿಷಯ ಹೇಳುವುದಾದರೆ ಅದೇ ಬೇರೆ ಸಂಗತಿ. ಹುಲಿ ಶಕ್ತಿವಂತ ಪ್ರಾಣಿ. ಅದು ರಾಜ್ಯಪಾಲನಾಗಲು ತಕ್ಕನಾದ ಪ್ರಾಣಿ. ಅದೂ ಅಲ್ಲದೆ ಹುಲಿಯನ್ನು ಕಡೆಗಾಣಿಸಲೂ ಆಗದು. ಹಾಗೆ ಮಾಡಿ

ದ್ದರೆ ಅದು ಸಿಂಹದ ಮೇಲೆ ಕೋಪ ತಾಳಿ ಸೇಡು ತೀರಿಸಿಕೊಳ್ಳುತ್ತಿತ್ತು. ಶಕ್ತಿಯಲ್ಲಿ ಹುಲಿ ಸಿಂಹಕ್ಕಿಂತ ಕಮ್ಮಿ ಏನೂ ಇಲ್ಲ. ಅದನ್ನು ತಿಳಿದೇ ಸಿಂಹ ಅದಕ್ಕೆ ರಾಜ್ಯಪಾಲ ಪದವಿ ನೀಡಿದೆ."

"ನನಗೂ ಹಾಗೇ ಅನ್ನಿಸ್ತು" ಎಂದಿತು ಕರಡಿ. "ಇವು ಕುತಂತ್ರ ನಡೆಸಿವೆ ಅನ್ನೋದು ತಕ್ಷಣವೇ ಗೊತ್ತಾಗುತ್ತೆ. ಆನೆಗೆ ಮೋಸ ಮಾಡಿದಾವೆ, ನನ್ನ ಮೂರು ತಮ್ಮಂದಿರನ್ನೂ ಕೊಂದಿದಾವೆ. ತೋಳಗಳೇ ಹಲ್ಲುಗಳಿಂದ ಕಡಿದು ಮರ ಬೀಳುವಂತೆ ಮಾಡಿರಬೇಕು ಅಂತ ನನಗೆ ಆಗಲೇ ಸಂಶಯ ಬಂತು..."

"ಹೌದು ! ಹಾಗೇ ಆಗಿರಬೇಕು !" ಎಂದು ಉಳಿದ ಪ್ರಾಣಿಗಳೂ ಧ್ವನಿಗೂಡಿಸಿದವು.

ನೋಡುತ್ತವೆ – ಹತ್ತಿರದಲ್ಲೇ ನರಿ ಹೋಗುತ್ತಿದೆ ! ಎಲ್ಲವೂ ಮೌನವಾದವು.

"ಹುಷ್ ! ಮೌನ ! ನಮ್ಮ ಮಾತು ಅದಕ್ಕೆ ಕೇಳಿಸಿದರೆ ತೊಂದರೆ ಆಗುವುದು ಖಂಡಿತ. ಕುರಿಮರಿಗಳನ್ನೂ ದಬ್ಬದಂಥ ಸ್ಥಳಕ್ಕೆ ನಮ್ಮನ್ನು ದಬ್ಬಿ ಬಿಡುತ್ತದೆ."

ಅಷ್ಟು ಹೊತ್ತಿಗೆ ನರಿ ಹತ್ತಿರಕ್ಕೆ ಬಂದಿತು. ಅದು ಕೇಳಿತು:

"ಯಾತಕ್ಕೆ ನೀವೆಲ್ಲ ಇಲ್ಲಿ ಸಭೆ ಸೇರಿರೋದು ? ಒಳಸಂಚನ್ನೇನೂ ಮಾಡುತ್ತಿಲ್ಲ ಪಷ್ಟೆ ?"

"ಅಯ್ಯೋ ಏನು ನೀವು ಹೇಳೋದು ! ನಾವೆಲ್ಲ ನಿನ್ನಿನ ವಿಷಯವನ್ನೇ ಮಾತನಾಡುತ್ತಿದ್ದೆವು. ನಮಗೆಲ್ಲ ಎಂತಹ ಸಂತಸದ ದಿನವಾಗಿತ್ತು ಅದು. ನಮಗೆ ಎಂತಹ ರಾಜ ಸಿಕ್ಕಿದ, ಎಂತಹ ಬುದ್ಧಿವಂತರಾದ ನ್ಯಾಯವಂತರಾದ ರಾಜ್ಯಪಾಲರುಗಳು ಸಿಕ್ಕಿದರು ಅಂತ ನಮಗೆ ತುಂಬ ಸಂತೋಷವಾಗಿದೆ."

"ಓಹ್, ಹಾಗೋ ! ಹಾಗಾದರೆ ಪರವಾಗಿಲ್ಲ. ಇನ್ನು ಮುಂದೆ ನೀವೆಲ್ಲ ಹೀಗೆ ಸಭೆ ಸೇರಬಾರದು. ರಹಸ್ಯ ಸಭೆಗಳನ್ನು ಕಾನೂನಿನ ಪ್ರಕಾರ ನಿಷೇಧಿಸಲಾಗಿದೆ."

ಇದಾದನಂತರ ಪ್ರಾಣಿಗಳು ಒಂದೊಂದೂ ತಮ್ಮಿಷ್ಟಕ್ಕೆ ತಾವು ಇದ್ದುಕೊಂಡು ಹೋಗಲು ಯತ್ನಿಸಿದವು. ಹುಲ್ಲು, ಗೆಡ್ಡೆಗೆಣಸುಗಳನ್ನು ತಿನ್ನುತ್ತಿದ್ದ ಪ್ರಾಣಿಗಳು ಶಾಂತಿಯಿಂದ ಬಾಳುತ್ತಿದ್ದವು, ಯಾರನ್ನೂ ಮುಟ್ಟ ಹೋಗುತ್ತಿರಲಿಲ್ಲ. ಆದರೆ ಹಿಂಸ್ರ ಪ್ರಾಣಿಗಳು ದುರ್ಬಲವಾದವನ್ನು ನಿಸ್ಸಹಾಯಕವಾದವನ್ನು ಹಿಂಸಿಸಿದವು, ಬೇಕಾದಷ್ಟು ದುಷ್ಟ ಕಾರ್ಯಗಳನ್ನೆಸಗಿದವು. ರಾಜನ ಮುಂದೂ ಕಾನೂನಿನ ಮುಂದೂ ದೋಷಮುಕ್ತರೆಂದು ಕಾಣಿಸಿಕೊಳ್ಳಲು ಅವು ತಾವು ಈ ದುಷ್ಕೃತ್ಯಗಳನ್ನೆಲ್ಲ ಸ್ವ-ಇಚ್ಛೆಯಿಂದ ಮಾಡಲಿಲ್ಲ, ಆದರೆ ಸೇವಾ ಕರ್ತವ್ಯ ಪಾಲನೆಯ ಸಮಯದಲ್ಲಿ ಮಾಡಿದವು, ಎಂದು ಸಾಧಿಸಿ ತೋರಲು ಯತ್ನಿಸಿದವು. ಮೊಲವನ್ನೋ ಮತ್ತಾವುದೋ ಪುಟ್ಟ

ಪ್ರಾಣಿಯನ್ನೋ ಕೊಂದದ್ದೇಕೆ ಎಂದು ರಾಜ ಏನಾದರೂ ಕೇಳಿದರೆ, ಅವು, ಆ ಪ್ರಾಣಿಗಳು ರಾಜನನ್ನು ಗೇಲಿ ಮಾಡುತ್ತಿದ್ದವು ಎಂದೋ ರಾಜನನ್ನು ಕೊಲ್ಲಲು ಸಂಚು ನಡೆಸುತ್ತಿದ್ದವು ಎಂದೋ ಹೇಳಿ, ಅದಕ್ಕಾಗಿಯೇ ತಾವು ಅವನ್ನು ಕೊಂದದ್ದೆಂದು ಕಾರಣ ಕೊಡುತ್ತಿದ್ದವು. ಸಿಂಹ ಈ ಸುಳ್ಳು ಮಾತುಗಳನ್ನೇ ನಂಬಿ ತನಗೆ ಇಂತಹ ಅಮೋಘ ಸೇವೆ ಸಲ್ಲಿಸಿದುದಕ್ಕಾಗಿ ಆ ಪ್ರಾಣಿಗಳಿಗೆ ಇನಾಮು ನೀಡುತ್ತಿದ್ದಿತು.

ಹೀಗೆಯೇ ಮುಂದುವರಿಯುತ್ತಿತ್ತು. ಹೊಲದ ರಾಜ್ಯಪಾಲನಾಗಿ ನರಿಗೆ ಬೇಸರವಾಗ ತೊಡಗಿತು. ಹೊಲದಲ್ಲಿ ನರಿಗೆ ತಿನ್ನಲು ಇಲಿಗಳು ಮತ್ತಿತರ ಸಣ್ಣ ಪುಟ್ಟ ಚಿಲ್ಲರೆ ಪ್ರಾಣಿಗಳನ್ನು ಬಿಟ್ಟು ಬೇರೇನೂ ಇರುತ್ತಿರಲಿಲ್ಲ. ಅದಕ್ಕೆ ಕೋಳಿಯನ್ನೋ ಬಾತುಕೋಳಿಯನ್ನೋ ತಿನ್ನಬೇಕೆಂದು ಆಸೆ. ಅದು ರಾಜನ ಬಳಿಗೆ ಹೋಗಿ ಹೇಳಿತು:

"ಮಹಾಪ್ರಭು! ನನ್ನನ್ನು ಈ ಹೊಲದ ರಾಜ್ಯಪಾಲನ ಹುದ್ದೆಯಿಂದ ಬಿಡುಗಡೆ ಮಾಡುವಿರಾ? ನನಗೆ ಕೋಳಿಗಳ ಹಾಗೂ ಬಾತುಕೋಳಿಗಳ ಮೇಲೆ ಉಸ್ತುವಾರಿ ನಡೆಸಬೇಕು. ಅವನ್ನು ಅವುಗಳ ಶತ್ರುಗಳಿಂದ ರಕ್ಷಿಸಬೇಕು, ಅಂತ ಆಸೆ."

"ಏನು ಕೋಳಿಗಳು ಅಂದೆಯಾ?" ಸಿಂಹ ಆಶ್ಚರ್ಯದಿಂದ ಕೇಳಿತು. "ನನ್ನ ಅಧಿಕಾರ ಅಲ್ಲಿಯವರೆಗೂ ಹೋಗುವುದಿಲ್ಲವಲ್ಲ. ಕೋಳಿಗಳು ಪಕ್ಷಿಗಳು. ಪಕ್ಷಿಗಳಿಗೆ ಅವುಗಳದೇ ರಾಜನಿದ್ದಾನೆ. ಅದು ಸರಿ. ಯಾರು ಈ ಕೋಳಿಗಳಿಗೆ ಕಾಟ ಕೊಡುತ್ತಿರೋದು?"

"ಪೋಲ್‌ಕ್ಯಾಟ್*ಗಳೂ ಇಲಿಗಳೂ, ಮಹಾ ಸ್ವಾಮಿ. ಅವು ಕೋಳಿಗಳನ್ನೂ ಕೋಳಿ ಮರಿಗಳನ್ನೂ ಸದಾಕಾಲವೂ ನಿಷ್ಕರುಣೆಯಿಂದ ಕೊಲ್ಲುತ್ತಿವೆ. ಅದರ ಬಗ್ಗೆ ಹುಂಜ ದೂರಿತು. ನಿಮಗೆ ಈ ವಿಷಯ ಹೇಳಬೇಕೆಂದು ಕೇಳಿತು. ನೀವು ಈ ಸಣ್ಣಪುಟ್ಟ ಪ್ರಾಣಿಗಳ ರಕ್ಷಣೆ ಮಾಡುತ್ತಿಲ್ಲ, ಶಾಂತಿ ಪಾಲನೆ ಮಾಡುತ್ತಿಲ್ಲ, ಅಂತ ಎಲ್ಲರೂ ನಗಾಡುತ್ತಿದಾರೆ ಅಂತ ಅದು ಹೇಳಿತು."

ಸಿಂಹ ನರಿಯ ಮಾತನ್ನು ನಂಬಿತು. ಅದಕ್ಕೆ ಕೋಳಿಪಾಲಕನ ಹುದ್ದೆ ನೀಡಿತು.

ನರಿಗೆ ತುಂಬ ಸಂತೋಷವಾಯಿತು. ತಕ್ಷಣವೇ ಹಳ್ಳಿಗೆ ಓಡಿತು. ಕತ್ತಲಾಗುತ್ತಲೇ ತನ್ನ ಸುಘರ್ದಿನಲ್ಲಿರುವವರನ್ನು ಕಾಣಲು ಹೋಯಿತು. ಅಂದಿನಿಂದ ಅದು ಪ್ರತಿದಿನವೂ ಕೋಳಿ

---

*ಯುರೋಪಿನಲ್ಲಿರುವ ಮಾಂಸಾಹಾರಿಯಾದ ಮುಂಗುಸಿಯನ್ನು ಹೋಲುವ ಒಂದು ಪ್ರಾಣಿ. – ಸಂ.

ಹಂಜರಗಳಿಗೆ ಭೇಟಿಕೊಡ ತೊಡಗಿತು. ಪ್ರತಿ ಬಾರಿ ಹೋದಾಗಲೂ ಒಂದೆರಡು ಕೋಳಿಗಳನ್ನು ಕದ್ದು ತಿನ್ನುತ್ತಿತ್ತು.

ಒಂದು ದಿನ ಈ ಕೋಳಿಗಳ ಮಾಲೀಕನಾಗಿದ್ದ ರೈತ ಹಂಜರದ ಬಳಿಯೇ ಕಾದು ಕೂತಿದ್ದ. ನರಿ ಬಂದು ಕೋಳಿಗಳ ಮೇಲೆ ಎರಗಿದ ಕೂಡಲೇ ಅವನು ಅದನ್ನು ಅದರ ಬಾಲದಿಂದ ಹಿಡಿದು ಅದಕ್ಕೆ ಎಂತಹ ಜೋರು ಏಟು ಕೊಟ್ಟನೆಂದರೆ ನರಿ ಸತ್ತೇ ಬಿಡುವುದರಲ್ಲಿತ್ತು. ಆಮೇಲೆ ಅವನು ಅದರ ಬಾಲಕ್ಕೆ ಒಂದು ಹಗ್ಗ ಕಟ್ಟಿ ಅದನ್ನು ಬೇಲಿ ಕಂಬಕ್ಕೆ ನೇತು ಹಾಕಿ ಮಲಗಲು ಹೋದ.

ಸ್ವಲ್ಪ ಹೊತ್ತಾದ ಮೇಲೆ ನರಿಗೆ ಜೀವ ಬಂದಂತಾಯಿತು. ಅದು ಹಗ್ಗವನ್ನು ಜಗ್ಗಿ ಎಳೆದು ಹರಿಯಲು ಯತ್ನಿಸಿತು. ಆಗಲಿಲ್ಲ. ಆಮೇಲೆ ತುಂಬ ನೋವಾದರೂ ಸರಿಯೆ ಎಂದು ತನ್ನ ಬಾಲಕ್ಕೇ ಹಲ್ಲು ಹಾಕಿ ಜೋರಾಗಿ ಕಚ್ಚಿತು. ಬಾಲ ಕತ್ತರಿಸಿಕೊಂಡು ಬಿದ್ದಿತು. ಬಿಡುಗಡೆ ಹೊಂದಿದ ನರಿ ಓಟ ಕಿತ್ತಿತು.

"ಈಗ ನಾನೇನು ಮಾಡಲಿ?" ಎಂದದು ತನ್ನಲ್ಲೇ ಯೋಚನೆ ಮಾಡ ತೊಡಗಿತು. "ಇತರರ ಮುಂದೆ ಹೇಗೆ ಕಾಣಿಸಿಕೊಳ್ಳೋದು? ಅವರು ಇನ್ನೆಷ್ಟು ಮಾತ್ರವೂ ನನ್ನ ಮಾತು ಕೇಳೊಲ್ಲ. ನನ್ನ ಹಿಂದೆ ನಗಾಡ್ತಾರೆ, ಅಷ್ಟೆ. ಆದರೆ ಅದು ಪರವಾಗಿಲ್ಲ. ನನಗೆ ಸಿಂಹದ್ದೇ ಯೋಚನೆ. ನನ್ನ ಬಾಲದ ವಿಷಯ ಕೇಳಿದರೆ ಏನು ಹೇಳೋದು? ಬಾಲವಿಲ್ಲದ ರಾಜ್ಯಪಾಲ! ನಾಚಿಕೆಗೇಡು! ಆ ರೈತ ನನ್ನನ್ನು ಕೊಂದು ಹಾಕಿದ್ದರೇ ಚೆನ್ನಾಗಿತ್ತು! ಸರಿ, ಇನ್ನೇನು ಮಾಡೋಕಾಗುತ್ತೆ? ಬಾಲ ಇಲ್ಲದೆ ಇದ್ದರೂ ಹೇಗೋ ಜೀವನವನ್ನಂತೂ ಸಾಗಿಸಬೇಕಲ್ಲ. ಮೊಲದ ಗುಡಿಸಿಲಿಗೆ ಹೋಗಿ ಗಾಯ ಮಾಯುವವರೆಗೂ ಅಲ್ಲೇ ಇದ್ದರಾಯಿತು."

ಹೀಗೆ ನಿರ್ಧರಿಸಿ ಅದು ನೇರವಾಗಿ ಮೊಲದ ಗುಡಿಸಿಲಿಗೆ ಹೋಯಿತು.

"ಮೊಲ, ಮೊಲ. ಇವತ್ತು ರಾತ್ರಿ ನಿನ್ನ ಮನೆಯಲ್ಲಿ ಇರಲು ಅವಕಾಶ ಕೊಡು. ನಿನಗೂ ಎಂದಾದರೂ ಸಹಾಯ ಮಾಡ್ತೀನಿ."

"ಇಲ್ಲಪ್ಪ. ನನ್ನ ಮನೆಯಲ್ಲಿ ಎಲ್ಲಿ ಜಾಗ ಇದೆ. ನನ್ನ ಮಕ್ಕಳಿಗೇ ಜಾಗ ಸಾಲದು."

"ಏನು ಅನ್ನೋದು ನೀನು? ಬಾಗಿಲು ತೆಗೆ ಮೊದಲು. ಯಾರ ಜೊತೆ ಮಾತಾಡ್ತಿದೀನಿ ಅಂದುಕೊಂಡಿದೀಯ? ನಾನು ಹೊಲದ ರಾಜ್ಯಪಾಲ, ಕೋಳಿಗಳ ಮೇಲ್ವಿಚಾರಕ. ರಾಜನ ಕೆಲಸದ ಮೇಲೆ ಬಂದಿದೀನಿ."

ಮೊಲ ಹೆದರಿ ಬಾಗಿಲು ತೆರೆಯಿತು. ನರಿ ಒಳಗೆ ಹೋದದ್ದೇ ಮೊಲದ ಮಕ್ಕಳನ್ನು ಹಾಸಿಗೆಯಿಂದ ಹೊರಕ್ಕೆ ಹಾಕಿ ತಾನೇ ಅದರ ಮೇಲೆ ಮಲಗಿತು. ಮೊಲ ಏನೂ ಹೇಳಲಿಲ್ಲ. ನರಿಗೆ

ಎಲ್ಲಿ ಕೋಪವಾಗುತ್ತೋ ಅಂತ ಅದಕ್ಕೆ ಹೆದರಿಕೆ.

ಸ್ವಲ್ಪ ಹೊತ್ತಾದ ಮೇಲೆ ಮೊಲ ತನ್ನ ಮಕ್ಕಳಿಗೆ ಆಹಾರ ತರಲು ಹೋಯಿತು. ನರಿಗೆ ಅಷ್ಟು ಹೊತ್ತಿಗಾಗಲೇ ತುಂಬ ಹಸಿವಾಗಿತ್ತು. ಅದು ಒಂದು ಮೊಲದ ಮರಿಯನ್ನು ಹಿಡಿದು ತಿಂದು ಹಾಕಿತು.

ಮೊಲ ಹಿಂದಿರುಗಿ ಬಂದಿತು. ನೋಡುತ್ತೆ—ಒಂದು ಮರಿ ಇಲ್ಲ!

"ಪೂಜ್ಯರೇ, ನನ್ನ ಒಂದು ಮರಿ ಎಲ್ಲಿ?" ಅದು ನರಿಯನ್ನು ನಮ್ರತೆಯಿಂದ ಕೇಳಿತು.

"ನನ್ನನ್ನು ಏನು ಕೇಳ್ತೀಯ ನಿನ್ನ ಮರಿಗಳ ವಿಷಯ? ಎಷ್ಟು ಧೈರ್ಯ ನಿನಗೆ! ನಾನೇನು ನಿನ್ನ ಮರಿಗಳ ದಾದಿಯೇ?" ನರಿ ಜಬರ್ದಸ್ತಿನಿಂದ ಹೇಳಿತು. "ನಿನಗೆ ನೂರು ಮರಿಗಳಿರಬಹುದು. ನಾನೇನು ಅವುಗಳನ್ನು ಎಣಿಸುತ್ತ ಕೂತಿರಬೇಕೆ? ನಿನಗೆ ಜೀವದಿಂದ ಇರಬೇಕು ಅಂತ ಆಸೆ ಇದ್ದರೆ ಹೀಗೆಲ್ಲ ಮಾತನಾಡುವುದನ್ನು ನಿಲ್ಲಿಸು. ಅಲ್ಲದೆ ರಾಜನ ಕೋಪದಿಂದ ಪಾರಾಗಬೇಕು ಅನ್ನುವುದಾದರೆ ಸರಿಯಾದ ನಡವಳಿಕೆಯನ್ನು ಕಲಿ."

ಮೊಲ ಗುಡಿಸಿಲಿನಿಂದ ಹೊರ ಹೋಯಿತು. ಅತ್ತಿತು. ಮತ್ತೆ ಆಹಾರ ತರಲು ಹೋಯಿತು. ಹಿಂದಿರುಗಿದಾಗ ನೋಡುತ್ತೆ – ಇನ್ನೂ ಒಂದು ಮರಿ ಇಲ್ಲ. ಮೊಲ ಒಂದು ಮಾತೂ ಆಡಲಿಲ್ಲ. ಉಳಿದಿದ್ದ ಮರಿಗಳಿಗೇ ಆಹಾರ ಕೊಟ್ಟು ಮನೆಯಿಂದ ಹೊರ ಹೋಗಿ ಗಟ್ಟಿಯಾಗಿ ಅಳುತ್ತ ಕುಳಿತುಕೊಂಡಿತು.

ಅಷ್ಟು ಹೊತ್ತಿಗೆ ಇನ್ನೊಂದು ಮೊಲ – ಅದರ ನೆರೆಮನೆಯದು – ಅದರ ಬಳಿಗೆ ಬಂದಿತು. ಕೇಳಿತು:

"ಯಾಕೆ ಅಳುತಿದೀಯ, ತಮ್ಮ?"

"ಅಳದೆ ಏನು ಮಾಡಲಿ? ನರಿ ನನ್ನ ಮನೆಯಲ್ಲಿ ವಾಸಮಾಡುತ್ತ ನನ್ನ ಮರಿಗಳನ್ನೆಲ್ಲ ತಿಂದು ಹಾಕುತ್ತ ಇದೆ. ಒಂದು ಮಾತೂ ಆಡೋ ಹಾಗಿಲ್ಲ. ರಾಜನಿಗೆ ಹೇಳಿ ಶಿಕ್ಷೆ ಮಾಡಿಸ್ತೀನಿ ಅಂತ ಹೆದರಿಸುತ್ತೆ."

"ನೀನೇ ರಾಜನ ಬಳಿಗೆ ಹೋಗಿ ಯಾಕೆ ದೂರು ಕೊಡಬಾರದು?"

"ಅದರಿಂದ ಏನು ಪ್ರಯೋಜನ? ನಮ್ಮಂಥವರು ಎಷ್ಟು ದೂರು ಕೊಟ್ಟರೂ ಒಂದೇ. ಅದು ರಾಜನವರೆಗೂ ತಲುಪೋದೇ ಇಲ್ಲ. ಅವನ ಸುತ್ತಮುತ್ತ ಇರೋರೆಲ್ಲ ನರಿಯ ಸ್ನೇಹಿತರೇ. ಯಾರೂ ನಮ್ಮ ಪರವಾಗಿ ಒಂದು ಮಾತೂ ಹೇಳೊಲ್ಲ."

ಪಕ್ಕದ ಮನೆಯ ಮೊಲ ಹೊರಟು ಹೋಯಿತು. ಮೊದಲ ಮೊಲ ತನ್ನ ಮನೆಗೆ ಹಿಂದಿ

ರುಗಿತು. ಬಾಗಿಲು ತೆರೆದು ನೋಡುತ್ತೆ – ಅದಕ್ಕೆ ಸಿಡಿಲು ಬಡಿದಂತಾಯಿತು – ಒಂದು ಮರಿಯೂ ಇಲ್ಲ ! ನರಿಗೆ ಮುಖ ತೋರಿಸಲೂ ಹೆದರಿ ಅದು ಹೊಲಕ್ಕೆ ಓಡಿ ಹೋಗಿ ಕುಳಿತು ಗಟ್ಟಿಯಾಗಿ ಅಳ ತೊಡಗಿತು. ಅಷ್ಟು ಹೊತ್ತಿಗೆ ಒಂದು ತೋಳ ಆ ಕಡೆ ಬಂದಿತು. ಮೊಲವನ್ನು ಕಂಡು "ಯಾಕೆ ಅಳುತ್ತಿದೀಯ ?" ಅಂತ ಕೇಳಿತು.

"ಅಳದೆ ಏನು ಮಾಡಲಿ. ನರಿ ನನ್ನ ಮನೆ ಹೊಕ್ಕು ನನ್ನ ಮರಿಗಳನ್ನೆಲ್ಲ ತಿಂದು ಹಾಕಿದೆ. ನನಗೆ ಒಳಕ್ಕೆ ಹೋಗೋಕೆ ಭಯ. ಹೋದರೆ ನನ್ನನ್ನೂ ತಿಂದು ಹಾಕಿ ಬಿಡುತ್ತೆ."

"ಅಳಬೇಡ, ಮೊಲ. ನಾನು ನಿನ್ನ ಜೊತೆಗೆ ಬರ್‍ತೀನಿ. ಅದನ್ನು ಹೊರಕ್ಕೆ ಓಡಿಸ್ತೀನಿ."

ಅವು ಗುಡಿಸಿಲಿಗೆ ಹೋದವು. ತೋಳ ಬಾಗಿಲ ಬಳಿ ಹೋಗಿ ಕೂಗಿ ಹೇಳಿತು:

"ಯಾರದು ಮನೆಯುಲ್ಲಿ ಸೇರಿಕೊಂಡಿರೋದು ? ಹೊರಕ್ಕೆ ಬಂದು ಮೊಲಕ್ಕೆ ಶಾಂತಿಯಿಂದಿರಲು ಬಿಡಿ !"

"ನಾನು ನರಿ. ಹೊಲಗಳ ರಾಜ್ಯಪಾಲ. ಯಾರದು ನನ್ನ ಜೊತೆ ಹೀಗೆ ಮಾತನಾಡುವ ಸಾಹಸ ಮಾಡುತ್ತಿರೋದು ?"

"ಓಹ್, ನೀನಾ, ನರಿ !" ತೋಳ ಹೇಳುತ್ತೆ. "ನಿನಗೆ ನಾಚಿಕೆಯಾಗಬೇಕು. ಬಡಪಾಯಿ ಮೊಲಕ್ಕೆ ತೊಂದರೆ ಕೊಡುತ್ತಿದ್ದೀಯಲ್ಲ ! ಬೇಡ, ಸುಮ್ಮನೆ ಹೊರಕ್ಕೆ ಬಾ !"

"ನೀನು ನನ್ನ ವಿಷಯುದಲ್ಲೆಲ್ಲ ತಲೆ ಹಾಕೋಕೆ ಬರಬೇಡ, ತೋಳ. ನಿನ್ನ ವಿಷಯ ನೀನು ನೋಡಿಕೋ ಹೋಗು" ನರಿ ಹೇಳಿತು.

ನರಿಯೊಂದಿಗೆ ವಾದ ಮಾಡುವುದರಲ್ಲಿ ಏನೂ ಪ್ರಯೋಜನವಿಲ್ಲ ಎಂದು ಕಂಡುಕೊಂಡ ತೋಳ ರಾಜನ ಬಳಿಗೆ ಹೋಗಿ ನರಿಯು ಮೇಲೆ ದೂರು ಕೊಟ್ಟಿತು. ಸಿಂಹ ತಕ್ಷಣವೇ ನರಿಯನ್ನು ಕರೆತರುವಂತೆ ಜಿಂಕೆಯುನ್ನು ಕಳುಹಿಸಿ ಕೊಟ್ಟಿತು. ನರಿ ಕಂಡದ್ದೇ ತಡ ಸಿಂಹ ಘರ್ಜಿಸುತ್ತ ಕೇಳಿತು:

"ಏನು ನೀನು ಇಷ್ಟೆಲ್ಲ ದಾಂದಲೆ ಮಾಡ್ತಿದೀಯ ?"

ನರಿ ಅಡ್ಡ ಬಿದ್ದು ತಲೆ ಬಾಗಿ ನಮಸ್ಕರಿಸಿ, ಹೇಳಿತು:

"ಮಹಾಪ್ರಭು ! ನನ್ನನ್ನು ದಂಡಿಸಬೇಡಿ, ಮೊದಲು ನನ್ನ ಮಾತು ಕೇಳಿ !"

"ಹೇಳು, ಏನದು ನಿನ್ನ ಮಾತು."

"ಮಹಾಪ್ರಭು. ನನಗೆ ಗೊತ್ತು, ತೋಳ ಹೊಟ್ಟೆಕಿಚ್ಚಿನಿಂದ ನನ್ನ ಮೇಲೆ ನಿಮಗೆ ಏನೇನೋ ಹೇಳಿದೆ, ಅಂತ. ನಿಜ ಹೇಳೋದಾದರೆ, ತೋಳನೇ ತಪ್ಪಿತಸ್ಥ. ನಾನಲ್ಲ, ತೋಳನೇ ಮೊಲದ

ಮರಿಗಳನ್ನು ತಿಂದು ಹಾಕಿರೋದು. ನಾನು ಮೊಲದ ರಕ್ಷಣೆಗೆ ಹೋದಾಗ ತೋಳ ನನ್ನ ಬಾಲವನ್ನೂ ಕಡಿದು ಹಾಕಿತು. ನೋಡಿ, ಮಹಾಪ್ರಭು, ನೀವೇ, ಅದು ನನಗೆ ಏನು ಮಾಡಿದೆ ಅಂತ. ನಾನು ಬಾಲವಿಲ್ಲದ ನರಿ ಆಗಿಬಿಟ್ಟಿದ್ದೇನೆ. ಹೀಗೆ ನಾನು ಬಾಳೋದಾದರೂ ಹೇಗೆ. ಹೇಳಿ, ಮಹಾಪ್ರಭು. ಇಷ್ಟೆಲ್ಲ ಮಾಡಿ ತೋಳ ನನ್ನ ಮೇಲೇ ತಪ್ಪು ಹೊರಿಸ್ತಿದೆ, ನೋಡಿದಿರಾ !"

ಸಿಂಹ ಯೋಚನೆ ಮಾಡಿ, ಯೋಚನೆ ಮಾಡಿ, ಕೊನೆಗೆ ಹೇಳಿತು:

"ಸರಿ, ನೀನು ಹೇಳೋದು ನಿಜ, ಅನ್ನು. ಆದರೆ ನೀನು ಇನ್ನೆಷ್ಟು ಮಾತ್ರವೂ ರಾಜ್ಯಪಾಲನಾಗಿರಲಾರೆ. ನೀನು ನನ್ನ ಬಳಿಯೇ ಕೆಲಸಕ್ಕಿರು. ನನ್ನ ಅರಮನೆಯ ರಕ್ಷಣಾ ಸಿಬ್ಬಂದಿಯ ಮುಖ್ಯಸ್ಥನಾಗಿರು. ತೋಳನಿಗೆ ತಕ್ಕ ಶಿಕ್ಷೆ ಕೊಡುತ್ತೇನೆ."

ಅದು ತೋಳಕ್ಕೆ ಹೇಳಿ ಕಳುಹಿಸಿ ಮತ್ತೆ ತಾನೇ ಚಿಂತಿಸ ತೊಡಗಿತು. ಇವರಿಬ್ಬರಲ್ಲಿ ಯಾರು ಸರಿ, ಯಾರು ತಪ್ಪು ಅಂತ ಹೇಳೋದೇ ಕಷ್ಟ. ಆದರೆ ಇಬ್ಬರೂ ಸುಳ್ಳು ಹೇಳುತ್ತಿದಾರೆ, ಅನಿಸಿತು ಅದಕ್ಕೆ. ಇವರಲ್ಲಿ ಒಬ್ಬರು ಸಾಯಲು ಅರ್ಹರು, ಆದರೆ ಯಾರು ಅನ್ನುವ ಬಗೆಗೆ ಯೋಚನೆ ಮಾಡಬೇಕು. ನರಿಯೇನೋ ಕುತಂತ್ರಿಯೇ ಸರಿ. ಆದರೆ ಅದರ ಕುತಂತ್ರವೇ ಅಲ್ಲವೇ ತನ್ನನ್ನು ರಾಜನನ್ನಾಗಿ ಮಾಡಿದ್ದು? ಹಾಗಾಗಿ ಅದಕ್ಕೆ ಹೇಗೆ ಶಿಕ್ಷಿಸುವುದು? ಇನ್ನು ತೋಳ? ನಿಜ. ಅದೇನೋ ಕಡಿದು ಮರ ಬೀಳಿಸುವುದರಲ್ಲಿ ನೆರವಾಯಿತು. ಆದರೆ ಅದೇನೂ ಅಂತಹ ಮಹಾ ಕೆಲಸವಲ್ಲ – ಯಾವ ಮೂರ್ಖನೂ ಕಡಿಯಬಲ್ಲ. ತೋಳನಿಗೇ ಶಿಕ್ಷೆ ಕೊಡಬೇಕು ಅಂತ ಕಾಣಿಸುತ್ತೆ. ಎರಡಕ್ಕೂ ಶಿಕ್ಷೆ ಕೊಡದೆ ಇರುವುದು ಸಾಧ್ಯವಿಲ್ಲ.

ತೋಳ ರಾಜನ ಬಳಿಗೆ ಬಂದಿತು. ಸಿಂಹ ಮಾತುಕತೆಗೆ ಒಂದಿಷ್ಟೂ ಅವಕಾಶ ನೀಡದೆ ತೋಳನನ್ನು ತನ್ನ ಪಂಜಾದಿಂದ ಅಪ್ಪಳಿಸಿ ಕೊಂದಿತು.

ಈ ವಿಷಯ ಇತರ ತೋಳಗಳಿಗೆ ತಿಳಿದಾಗ ಅವಕ್ಕೆ ತುಂಬ ಕೋಪ ಬಂದಿತು. ಪ್ರತೀಕಾರಕ್ಕೆ ಹಂಬಲಿಸಿದವು. ತಮ್ಮ ಸೋದರನ ಸಾವಿಗಾಗಿ ನರಿಗೆ ತಕ್ಕ ಶಾಸ್ತಿ ಮಾಡಬೇಕು. ಸಿಂಹಕ್ಕೂ ಪಾಠ ಕಲಿಸಬೇಕು, ಅದಕ್ಕೆ ಯುದ್ಧವೊಂದಷ್ಟೆ ಮಾರ್ಗ ಎಂದು ಅವಕ್ಕೆ ಕಂಡುಬಂದಿತು. ಅವು ಹಿಂಡುಗೂಡಿ ನರಿಗಳ ಮನೆಗಳ ಮೇಲೆ ದಾಳಿ ಮಾಡಿದವು, ದೊಡ್ಡವು ಚಿಕ್ಕವು ಎನ್ನದೆ ಎಲ್ಲ ನರಿಗಳನ್ನೂ ನಾಶಮಾಡ ತೊಡಗಿದವು.

ಈ ಯುದ್ಧ ಮುಗಿಯುತ್ತಲೇ ಇರಲಿಲ್ಲವೇನೋ. ಆದರೆ ಅಷ್ಟರಲ್ಲೇ ತಮ್ಮ ಕೋಳಿಗಳನ್ನೂ ಕುರಿಗಳನ್ನೂ ಕರುಗಳನ್ನೂ ಕಳೆದುಕೊಳ್ಳುತ್ತಿದ್ದ ರೈತರು ಸಹನೆಯನ್ನು ಕಳೆದುಕೊಂಡು ಕಳ್ಳರನ್ನೆಲ್ಲ ಹಿಡಿದು ಹಾಕಲು ನಿರ್ಧರಿಸಿದರು. ಸಿಂಹವನ್ನು ಹಿಡಿದು ಬೋನಿನಲ್ಲಿಟ್ಟರು. ತೋಳಗಳನ್ನು

ಚೆನ್ನಾಗಿ ಥಳಿಸಿದರು. ಇತರ ಪ್ರಾಣಿಗಳು ಎಷ್ಟು ಅಂಜಿದವೆಂದರೆ ಸಿಕ್ಕಿದೆಡೆಯಲ್ಲೇ ಅಡಗಿ ಕುಳಿತು ಪ್ರಾಣ ಉಳಿಸಿಕೊಂಡವು.

ಇದಾದ ಮೇಲೆ ಗ್ರಾಮಾಂತರದಲ್ಲಿ ಶಾಂತಿ ಶಿಸ್ತು ಪುನಃ ಸ್ಥಾಪಿತವಾಯಿತು. ಎಲ್ಲರೂ ಮತ್ತೆ ನೆಮ್ಮದಿಯಿಂದ ಬಾಳ ತೊಡಗಿದರು.

ತೆಲೇಸಿಕ್

ಒಂದಾನೊಂದು ಕಾಲದಲ್ಲಿ ಒಬ್ಬ ಮುದುಕ, ಒಬ್ಬ ಮುದುಕಿ ವಾಸವಾಗಿದ್ದರು. ಅವರು ಆಗಲೇ ಮುಪ್ಪಿಗೆ ಬಂದಿದ್ದರು. ಆದರೆ ಅವರಿಗೆ ಮಕ್ಕಳಿರಲಿಲ್ಲ. ಇದು ಅವರನ್ನು ನಿಜಕ್ಕೂ ತುಂಬ ದುಃಖಿತರನ್ನಾಗಿ ಮಾಡಿತ್ತು. "ಯಾರು ನಮ್ಮನ್ನು ಮುಪ್ಪಿನಲ್ಲಿ ನೋಡಿಕೊಳ್ಳುವವರು? ಯಾರು ನಮ್ಮ ಕಣ್ಣುಗಳನ್ನು ಮುಚ್ಚುವವರು?" ಎಂದು ಅವರು ದುಃಖಿಸುತ್ತಿದ್ದರು.

ಒಂದು ದಿನ ಮುದುಕಿ ಮುದುಕನಿಗೆ ಹೇಳಿದಳು:

"ಕಾಡಿಗೆ ಹೋಗಿ, ಮುದುಕಪ್ಪ, ಒಂದು ಮರವನ್ನು ಕಡಿದುಕೊಂಡು ಬಾ. ಅದರಿಂದ ನನಗೆ ಒಂದು ತೊಟ್ಟಿಲು ಮಾಡಿಕೊಡು. ಅದರಲ್ಲಿ ನಾನು ಒಂದು ಮರದ ತುಂಡನ್ನಿರಿಸಿ ಅದನ್ನೇ ಮಗುವೆಂದು ತೂಗುತ್ತೇನೆ. ಅದರಿಂದ ನನಗೆ ಎಷ್ಟೋ ಸಮಾಧಾನವಾಗುತ್ತೆ."

ಮುದುಕನಿಗೆ ಮೊದಲು ಹಾಗೆ ಮಾಡಲು ಇಷ್ಟವಾಗಲಿಲ್ಲ. ಆದರೆ ಮುದುಕಿ ಒಂದೇ ಸಮನೆ ಕೇಳುತ್ತಲೇ ಹೋದಳು. ಅವಳ ಗೋಳನ್ನು ಕೇಳಲಾರದೆ ಕೊನೆಗೆ ಮುದುಕ ಕಾಡಿಗೆ ಹೋದ. ಒಂದು ಮರವನ್ನು ಕಡಿದು ಅದರಿಂದ ಒಂದು ತೊಟ್ಟಿಲು ಮಾಡಿದ. ಮುದುಕಿ ಆ ತೊಟ್ಟಿಲಿನಲ್ಲಿ ಒಂದು ಮರದ ತುಂಡನ್ನಿರಿಸಿ ತೂಗುತ್ತಾಳೆ, ಜೋಗುಳ ಹಾಡುತ್ತಾಳೆ:

"ಲಾಲಿ, ಲಾಲೀ, ತೆಲೇಸಿಕ್ ಮಗುವೇ,
ಹೂರಣದ ಕಡುಬನು ನಿನಗೆ ಬೇಯಿಸಿಕೊಡುವೆ,
ಮುರಬ್ಬ ಜೆಲ್ಲಿಯು ನಿನಗೆ ಮಾಡಿಕೊಡುವೆ,
ಲಾಲಿ, ಲಾಲೀ, ತೆಲೇಸಿಕ್ ಮಗುವೇ!"

ಮುದುಕಿ ಹೀಗೆ ಹಾಡುತ್ತಾ ತೂಗುತ್ತಾ ಹೋದಳು. ಸಂಜೆಯಾಯಿತು. ಮಲಗುವ ಹೊತ್ತೂ ಬಂದಿತು.

ಬೆಳಿಗ್ಗೆ ಎದ್ದರು. ನೋಡುತ್ತಾರೆ – ತೊಟ್ಟಿಲಿನಲ್ಲಿ ಮರದ ತುಂಡಿಗೆ ಬದಲು ಒಂದು ಪುಟ್ಟ ಮಗು ಮಲಗಿದೆ! ಅವರಿಗೆ ಆದ ಆನಂದಕ್ಕೆ ಪಾರವೇ ಇರಲಿಲ್ಲ. ಅವರು ಮಗುವಿಗೆ ತೆಲೇಸಿಕ್ ಅಂತ ನಾಮಕರಣ ಮಾಡಿದರು.

ತೆಲೇಸಿಕ್ ತುಂಬ ಬೇಗ ಬೆಳೆಯುತ್ತ ಹೋದ. ಎಷ್ಟು ಸುಂದರನಾಗಿ ಬೆಳೆದನೆಂದರೆ ಮುದುಕ ಮುದುಕಿಗೆ ಅವನನ್ನು ಎಷ್ಟು ನೋಡಿದರೂ ತೃಪ್ತಿಯಾಗುತ್ತಿರಲಿಲ್ಲ.

ಒಂದು ದಿನ ತೆಲೇಸಿಕ್ ಬೆಳೆದ ಹುಡುಗನಾದಾಗ, ಮುದುಕನಿಗೆ ಹೇಳಿದ:

"ಅಪ್ಪ! ನನಗೊಂದು ಚಿನ್ನದ ದೋಣಿ, ಬೆಳ್ಳಿಯ ಹುಟ್ಟುಗೋಲು ಮಾಡಿಕೊಡು. ಮೀನು ಹಿಡಿದು ನಿಮ್ಮಿಬ್ಬರಿಗೂ ತಿನ್ನಲು ತಂದು ಕೊಡುತ್ತೇನೆ."

ಮುದುಕ ಚಿನ್ನದ ದೋಣಿಯನ್ನೂ ಬೆಳ್ಳಿಯ ಹುಟ್ಟುಗೋಲನ್ನೂ ಮಾಡಿದ. ದೋಣಿಯನ್ನು ನದಿಯಲ್ಲಿ ತೇಲಿ ಬಿಟ್ಟ. ತೆಲೇಸಿಕ್ ಅದರಲ್ಲಿ ಕುಳಿತು ಮೀನು ಹಿಡಿಯಲು ಹೋದ. ಅವನು ಹೆಚ್ಚಿನ ಸಮಯವನ್ನೆಲ್ಲ ನೀರಿನ ಮೇಲೇ ಕಳೆಯುತ್ತಿದ್ದ. ಮೀನು ಹಿಡಿಯುತ್ತಿದ್ದ, ಮುದುಕ ಮುದುಕಿಗೆ ತಂದು ಕೊಡುತ್ತಿದ್ದ. ಮತ್ತೆ ಹುಟ್ಟು ಹಾಕಿಕೊಂಡು ಹೋಗುತ್ತಿದ್ದ. ಮುದುಕಿ ಅವನಿಗೆ ಊಟವನ್ನು ಅಲ್ಲಿಗೇ ತಂದು ಕೊಡುತ್ತಿದ್ದಳು. ಅವನು ದೋಣಿಯಲ್ಲಿ ಕುಳಿತೇ ಊಟ ಮಾಡುತ್ತಿದ್ದ.

ಊಟ ತಂದಾಗಲೆಲ್ಲ ಮುದುಕಿ ಅವನಿಗೆ ಹೇಳುತ್ತಿದ್ದಳು:

"ನೆನಪಿನಲ್ಲಿಡು, ಮಗು. ನಾನು ಕರೆದಾಗ ಮಾತ್ರ ದಡಕ್ಕೆ ಬಾ. ಬೇರೆ ಯಾರಾದರೂ ಕರೆದರೆ ದೋಣಿಯನ್ನು ದೂರ ನಡೆಸಿಕೊಂಡು ಹೋಗಿ ಬಿಡು. ತಿಳಿಯಿತಾ?"

ಒಂದು ದಿನ ಅವಳು ತೆಲೇಸಿಕ್‌ಗಾಗಿ ಉಣಲು ತಿನಿಸು ತಂದು ಕೂಗಿ ಹೇಳಿದಳು:

"ಬಾ, ಮಗುವೆ, ಬಾ, ತೆಲೇಸಿಕ್!
ತಂದಿಹೆನು ನಿನಗಾಗಿ ಹೂರಣದ ಕಡುಬು.
ಬಾ ದಡಕೆ, ಬಾ ಬೇಗ, ತಿನಿಸು ತಿನ್ನಲಿಕೆ!"

ತೆಲೇಸಿಕ್‌ಗೆ ಅವಳು ಕೂಗಿ ಹೇಳಿದುದು ಕೇಳಿಸಿತು. ಅವನು ತನ್ನ ದೋಣಿಗೆ ಹೇಳಿದ:

"ಸಾಗು, ಸಾಗು, ದೋಣಿ, ದಡಕೆ! ತಂದಿಹಳು ತಾಯಿ ನನಗಾಗಿ ತಿನಿಸು."

ಅವನು ದಡಕ್ಕೆ ಬಂದ, ದೋಣಿ ನಿಲ್ಲಿಸಿದ, ತಾಯಿ ಕೊಟ್ಟುದನ್ನು ತಿಂದ, ಕುಡಿದ, ಬೆಳ್ಳಿ

ಹುಟ್ಟಿನಿಂದ ದೋಣಿಯನ್ನೊಮ್ಮೆ ನೀರಿನೊಳಕ್ಕೆ ದೂಕಿ, ಹುಟ್ಟು ಹಾಕಿಕೊಂಡು ಮತ್ತೆ ಮೀನು ಹಿಡಿಯಲು ಹೊರಟ.

ಅದೇ ಹೊತ್ತಿನಲ್ಲಿ ದಡದ ಮೇಲೆ ಒಂದು ಹಾವು ಮಲಗಿತ್ತು. ಅದು ತಾಯಿ ತನ್ನ ಮಗನನ್ನು ಕೂಗಿ ಕರೆದುದನ್ನು ಕೇಳಿಸಿಕೊಂಡಿತು. ತಾಯಿ ಹೊರಟು ಹೋದ ಮೇಲೆ ಅದು ತಾನೂ ದಡಕ್ಕೆ ಹೋಗಿ ತನ್ನ ಕರ್ಕಶ ಧ್ವನಿಯಲ್ಲಿ ಕೂಗಿ ಹೇಳಿತು:

"ಬಾ, ಮಗುವೆ, ಬಾ, ತೆಲೇಸಿಕ್ !
ತಂದಿಹೆನು ನಿನಗಾಗಿ ಹೂರಣದ ಕಡುಬು.
ಬಾ ದಡಕೆ, ಬಾ ಬೇಗ, ತಿನಿಸು ತಿನ್ನಲಿಕೆ !"

ತೆಲೇಸಿಕ್ ಕೇಳಿಸಿಕೊಂಡ. ಅವನನ್ನು ಮೋಸಗೊಳಿಸುವುದು ಅಷ್ಟು ಸುಲಭವಾಗಿರಲಿಲ್ಲ. "ಇದು ನನ್ನ ತಾಯಿಯ ಧ್ವನಿಯಲ್ಲ" ಎಂದವನು ತನ್ನಲ್ಲೇ ಹೇಳಿಕೊಂಡ. ಆಮೇಲೆ ಗಟ್ಟಿಯಾಗಿ ತನ್ನ ದೋಣಿಗೆ ಹೇಳಿದ:

"ಹೋಗು, ದೋಣಿ, ಹೋಗು, ತೀರದಿಂದ ದೂರ ! ಹೋಗು, ದೋಣಿ, ಹೋಗು, ತೀರದಿಂದ ದೂರ !"

ಅವನು ಜೋರಾಗಿ ಹುಟ್ಟು ಹಾಕಿದ. ದೋಣಿ ದಡದಿಂದ ಇನ್ನೂ ಹೆಚ್ಚು ದೂರ ಚಲಿಸಿತು. ಹಾವು ದಡದ ಮೇಲೆ ಸ್ವಲ್ಪ ಹೊತ್ತು ಕಾದು ಅನಂತರ ಪೊದೆಯೊಳಕ್ಕೆ ತೆವಳಿಕೊಂಡು ಹೊರಟು ಹೋಯಿತು.

ಸ್ವಲ್ಪ ಹೊತ್ತಾದ ಮೇಲೆ ತೆಲೇಸಿಕ್‌ನ ತಾಯಿ ಅವನಿಗೆ ಊಟ ತಂದಳು. ನದಿಯ ದಡದ ಮೇಲೆ ನಿಂತು ಕೂಗಿ ಹೇಳಿದಳು:

"ಬಾ, ಮಗುವೆ, ಬಾ, ತೆಲೇಸಿಕ್ !
ತಂದಿಹೆನು ನಿನಗಾಗಿ ಹೂರಣದ ಕಡುಬು.
ಬಾ ದಡಕೆ, ಬಾ ಬೇಗ, ತಿನಿಸು ತಿನ್ನಲಿಕೆ !"

ತೆಲೇಸಿಕ್ ಕೇಳಿಸಿಕೊಂಡ. ಹೇಳಿದ:

"ಸಾಗು, ಸಾಗು, ದೋಣಿ ದಡಕೆ ! ತಂದಿಹಳು ತಾಯಿ ನನಗಾಗಿ ಊಟ !"

ದಡಕ್ಕೆ ಬಂದ, ತಿಂದ, ಕುಡಿದ, ತಾಯಿಗೆ ತಾನು ಹಿಡಿದಿದ್ದ ಮೀನು ಕೊಟ್ಟ, ದೋಣಿಯನ್ನು ನೀರಿನೊಳಕ್ಕೆ ನೂಕಿ, ಮತ್ತೆ ಹುಟ್ಟು ಹಾಕಿಕೊಂಡು ಹೊರಟ.

ಹಾವು ಮತ್ತೆ ದಡಕ್ಕೆ ಬಂದು ತನ್ನ ಕರ್ಕಶ ಧ್ವನಿಯಲ್ಲಿ ಕೂಗಿ ಹೇಳಿತು:

"ಬಾ, ಮಗುವೆ, ಬಾ, ತೆಲೇಸಿಕ್!
ತಂದಿಹೆನು ನಿನಗಾಗಿ ಹೂರಣದ ಕಡುಬು.
ಬಾ ದಡಕೆ, ಬಾ ಬೇಗ, ತಿನಿಸು ತಿನ್ನಲಿಕೆ!"

ಆದರೆ ಈಗ ತನ್ನನ್ನು ಕರೆಯುತ್ತಿರುವುದು ತನ್ನ ತಾಯಿಯಲ್ಲ ಎಂದು ತಿಳಿದಿದ್ದ ಅವನು ಹೆಚ್ಚು ಬೇಗ ಬೇಗ ಹುಟ್ಟು ಹಾಕುತ್ತ ತನ್ನ ದೋಣಿಗೆ ಹೇಳಿದ:

"ಹೋಗು, ದೋಣಿ, ಹೋಗು, ತೀರದಿಂದ ದೂರ! ಹೋಗು. ದೋಣಿ, ಹೋಗು, ತೀರದಿಂದ ದೂರ!"

ದೋಣಿ ಹಾಗೆಯೇ ದೂರ ಸಾಗಿತು.

ಹಾವು ನೋಡುತ್ತೆ – ತನ್ನ ಆಟ ಸಾಗದು ಅಂತ ಅದಕ್ಕೆ ತಿಳಿದು ಬರುತ್ತೆ. ಅದು ಕಮ್ಮಾರನ ಬಳಿಗೆ ಹೋಗುತ್ತೆ.

"ಕಮ್ಮಾರ, ಕಮ್ಮಾರ! ನನ್ನ ಗಂಟಲನ್ನು ಸ್ವಲ್ಪ ಸರಿ ಮಾಡು. ಅದು ತೆಲೇಸಿಕ್‌ನ ತಾಯಿಯಂತೆ ಅಷ್ಟೇ ಸಣ್ಣ ಧ್ವನಿ ಹೊರಡಿಸುವಂತಾಗಬೇಕು, ಹಾಗೆ ಮಾಡು."

ಕಮ್ಮಾರ ಹಾಗೆಯೇ ಮಾಡಿದ. ಹಾವು ದಡಕ್ಕೆ ಹೋಗಿ ಕೂಗಿ ಹೇಳಿತು:

"ಬಾ, ಮಗುವೆ, ಬಾ, ತೆಲೇಸಿಕ್!
ತಂದಿಹೆನು ನಿನಗಾಗಿ ಹೂರಣದ ಕಡುಬು.
ಬಾ ದಡಕೆ. ಬಾ ಬೇಗ, ತಿನಿಸು ತಿನ್ನಲಿಕೆ!"

ಇದು ತನ್ನ ತಾಯಿಯೇ ಕರೆಯುತ್ತಿರುವುದು ಅಂತ ತೆಲೇಸಿಕ್ ಅಂದುಕೊಂಡ. ತನ್ನ ದೋಣಿಗೆ ಹೇಳಿದ:

"ಸಾಗು, ಸಾಗು, ದೋಣಿ, ದಡಕೆ! ನನ್ನ ತಾಯಿ ಕರೆಯುತಿಹಳು ಊಟಕೆ."

ಅವನು ದಡಕ್ಕೆ ಬಂದ. ಹಾವು ತಕ್ಷಣವೇ ಅವನನ್ನು ದೋಣಿಯಿಂದ ಹೊರಕ್ಕೆ ಎಳೆದುಕೊಂಡು ತನ್ನ ಮನೆಗೆ ಕರೆದೊಯ್ದಿತು.

ಕರೆದೊಯ್ದು ಒಳಗಿದ್ದ ತನ್ನ ಮಗಳಿಗೆ ಹೇಳಿತು:

"ಬಾಗಿಲು ತೆರೆ, ಅಲ್ಯೋಂಕ, ನನ್ನ ಪುಟ್ಟ ಮರಿ!"

ಅಲ್ಯೋಂಕ ಬಾಗಿಲು ತೆರೆಯಿತು. ಹಾವು ಒಳಕ್ಕೆ ಹೋಯಿತು.

"ಅಲ್ಯೋಂಕ, ನನ್ನ ಮುದ್ದು ಮರಿ! ಒಲೆ ಹಚ್ಚು. ಚೆನ್ನಾಗಿ ಕಾಯಿಸು. ಈ ತೆಲೇಸಿಕ್‌ನನ್ನು ಗರಿಗರಿಯಾಗಿ ಬೇಯಿಸು. ನಾನು ಹೋಗಿ ಅತಿಥಿಗಳನ್ನು ಕರೆದುಕೊಂಡು ಬರ್ತೀನಿ. ಸೊಗಸಾದ ಊಟ ಮಾಡೋಣ."

ಹಾಗೆ ಹೇಳಿ ಅದು ಅತಿಥಿಗಳನ್ನು ಆಹ್ವಾನಿಸಲು ಹೊರಟು ಹೋಯಿತು.

ಅಲ್ಯೋಂಕ ಒಲೆ ಹತ್ತಿಸಿತು. ಕೆಂಪಗೆ ಕಾಯಿಸಿತು. ಆಮೇಲೆ ಹೇಳಿತು:

"ಮೊರಗುದ್ದಲಿಯ ಮೇಲೆ ಕುಳಿತುಕೋ, ತೆಲೇಸಿಕ್!"

ಆದರೆ ಅವನು ಉತ್ತರಿಸಿದ:

"ನನಗೆ ಗೊತ್ತಿಲ್ಲ, ಹೇಗೆ ಅದರ ಮೇಲೆ ಕುಳಿತುಕೊಳ್ಳೋದು ಅಂತ."

"ತರಲೆ ಮಾಡಬೇಡ. ಬೇಗ ಕುಳಿತುಕೋ" ಕೂಗಿ ಹೇಳಿತು ಅಲ್ಯೋಂಕ.

ಅವನು ಮೊರಗುದ್ದಲಿಯ ಮೇಲೆ ತನ್ನ ಕೈ ಇರಿಸಿ ಹೇಳಿದ:

"ಹೀಗಾ? ಸರಿಯಾ?"

"ಉಹೂಂ. ಪೂರ್ತಿ ಕುಳಿತುಕೋ."

ಅವನು ತಲೆಯನ್ನಿರಿಸಿದ:

"ಹ್ಯಾಗೆ? ಹೀಗಾ?"

"ಉಹೂಂ. ಹಾಗೂ ಅಲ್ಲ! ಪೂರ್ತಿ ಕುಳಿತುಕೋ."

"ಹಾಗಾದರೆ, ಹೇಗೆ? ಹೀಗಾ?" ಎಂದವನು ಕಾಲನ್ನಿರಿಸಿದ.

"ಉಹೂಂ. ಹಾಗೂ ಅಲ್ಲ" ಅಲ್ಯೋಂಕ ಹೇಳಿತು. "ಅಲ್ಲ, ಹಾಗೂ ಅಲ್ಲ!"

"ಹಾಗಾದರೆ ಹ್ಯಾಗೆ ಅಂತ ತೋರಿಸಿಕೊಡು. ನನಗಂತೂ ಗೊತ್ತಿಲ್ಲ" ತೆಲೇಸಿಕ್ ಹೇಳಿದ.

ಅದು ತೋರಿಸಬೇಕು ಅಂತ ಮೊರಗುದ್ದಲಿಯ ಮೇಲೆ ಕುಳಿತಿತು. ಅದು ಕುಳಿತಿತೋ ಇಲ್ಲವೋ ತಕ್ಷಣವೇ ತೆಲೇಸಿಕ್ ಅದನ್ನು ಒಲೆಯೊಳಕ್ಕೆ ಹಾಕಿ ಅದರ ಬಾಗಿಲು ಮುಚ್ಚಿದ. ಆಮೇಲೆ ತಾನೇ ಆ ಹಾವಿನ ಮನೆಯಿಂದ ಹೊರಬಂದು ಒಂದು ಎತ್ತರದ ಮೇಪ್‌ಲ್ ಮರ ಹತ್ತಿ ಕುಳಿತ.

ಸ್ವಲ್ಪ ಹೊತ್ತಾದ ಮೇಲೆ ಹಾವು ತನ್ನ ಅತಿಥಿಗಳೊಂದಿಗೆ ಬಂದಿತು.

"ಮುದ್ದುಮರಿ ಅಲ್ಯೋಂಕ! ಬಾಗಿಲು ತೆರೆ!"

ಒಳಗಿನಿಂದ ಮಾತೇ ಇಲ್ಲ.

ಹಾವು ಮತ್ತೆ ಹೇಳಿತು:

"ಮುದ್ದುಮರಿ ಅಲ್ಯೋಂಕ! ಬಾಗಿಲು ತೆರೆ!"

ಉತ್ತರವಿಲ್ಲ.

"ಹಾಳಾದ ಅಲ್ಯೋಂಕ! ಎಲ್ಲಿ ಹೋಯಿತೋ ಏನೋ!"

ಹಾವು ತಾನೇ ತಳ್ಳಿ ಬಾಗಿಲು ತೆರೆಯಿತು. ಅತಿಥಿಗಳನ್ನು ಒಳಕ್ಕೆ ಕರೆಯಿತು. ಎಲ್ಲವೂ ಉತ್ಸಾಹದಿಂದ ಊಟದ ಮೇಜಿನ ಸುತ್ತ ಕುಳಿತವು. ಹಾವು ಒಲೆಯ ಬಾಗಿಲು ತೆರೆದು ಚೆನ್ನಾಗಿ ಬೆಂದು ಗರಿಗರಿಯಾಗಿದ್ದ ಭಕ್ಷ್ಯವನ್ನು ಹೊರ ತೆಗೆದು ಎಲ್ಲರಿಗೂ ಬಡಿಸಿತು. ಎಲ್ಲವೂ ಬಾಯಿ ಚಪ್ಪರಿಸಿಕೊಂಡು ಹೊಟ್ಟೆ ತುಂಬ ತಿಂದವು. ಅಂದುಕೊಂಡವು ತಾವು ತೆಲೇಸಿಕ್‌ನನ್ನು ತಿಂದುದು, ಅಂತ.

ಮನಸ್ಸಿಗೆ ತೃಪ್ತಿಯಾಗುವಷ್ಟು ತಿಂದ ಮೇಲೆ ಅವು ಮನೆಯಿಂದ ಹೊರಗೆ ಬಂದು ಹುಲ್ಲಿನ ಮೇಲೆ ಮೈ ಚಾಚಿದವು.

"ಹಾಯಾಗಿ ಹುಲ್ಲಿನ ಮೇಲೆ ಸ್ವಲ್ಪ ಹೊರಳಾಡೋಣ. ತೆಲೇಸಿಕ್‌ನನ್ನು ತಿಂದು ಮುಗಿಸಿದ್ದಾಯಿತಲ್ಲ" ಎಂದವು ಹೇಳಿಕೊಂಡವು.

ಮರದ ಮೇಲಿನಿಂದ ತೆಲೇಸಿಕ್ ಹೇಳಿದ:

"ಹೌದು, ಹಾಯಾಗಿ ಹೊರಳಾಡಿ. ಅಲ್ಯೋಂಕಳನ್ನು ತಿಂದು ಮುಗಿಸಿದ್ದಾಯಿತಲ್ಲ!"

ಅವು ಕೇಳಿಸಿಕೊಳ್ಳುತ್ತವೆ – ಏನಿದು? ಅವು ಮತ್ತೆ ಹೇಳಿಕೊಳ್ಳುತ್ತವೆ:

"ಹಾಯಾಗಿ ಹುಲ್ಲಿನ ಮೇಲೆ ಸ್ವಲ್ಪ ಹೊರಳಾಡೋಣ. ತೆಲೇಸಿಕ್‌ನನ್ನು ತಿಂದು ಮುಗಿಸಿದ್ದಾಯಿತಲ್ಲ."

ಅವನು ಮತ್ತೆ ಹೇಳಿದ:

"ಹೌದು, ಹಾಯಾಗಿ ಹೊರಳಾಡಿ. ಅಲ್ಯೋಂಕಳನ್ನು ತಿಂದು ಮುಗಿಸಿದ್ದಾಯಿತಲ್ಲ!"

ಅವು ಬೆರಗಾಗಿ ಯೋಚಿಸಿದವು – ಯಾರು ಹೀಗೆ ಹೇಳುತ್ತಿರೋದು?

ಸುತ್ತಮುತ್ತ ಹುಡುಕ ತೊಡಗಿದವು, ನೋಡ ತೊಡಗಿದವು. ಕೊನೆಗೆ ಮರದ ಮೇಲೆ ತೆಲೇಸಿಕ್‌ನನ್ನು ಕಂಡವು. ಅವು ಮರದ ಬಳಿಗೆ ಹೋಗಿ ಅದನ್ನು ಕೆಡವಲೋಸುಗ ಬುಡದ ಬಳಿ ಜಗಿಯ ತೊಡಗಿದವು. ತುಂಬ ಹೊತ್ತು ಜಗಿದವು. ಆದರೆ ಮರ ಮಿಸುಕಲಿಲ್ಲ. ಅವುಗಳ ಹಲ್ಲುಗಳೇ ಮುರಿದವು. ಅವು ಕಮ್ಮಾರನ ಬಳಿಗೆ ಓಡಿದವು. ಹೇಳಿದವು:

"ಕಮ್ಮಾರ, ಕಮ್ಮಾರ! ಆ ಮೇಪ್ಲ್ ಮರವನ್ನು ಜಗಿದು ಬೀಳಿಸುವಷ್ಟು ಗಟ್ಟಿಯಾಗುವಂತೆ ನಮ್ಮ ಹಲ್ಲುಗಳನ್ನು ಮಾಡು!"

ಕಮ್ಮಾರ ಅವಕ್ಕೆ ಗಟ್ಟಿಯಾದ ಲೋಹದ ಹಲ್ಲುಗಳನ್ನು ಮಾಡಿ ಕೊಟ್ಟ. ಅವು ಮತ್ತೆ ಮರವನ್ನು ಜಗಿಯ ತೊಡಗಿದವು...

ಅವು ಇನ್ನೇನು ಜಗಿದು ಮರವನ್ನು ಬೀಳಿಸಲಿದ್ದವು ಅಷ್ಟು ಹೊತ್ತಿಗೆ ಅಲ್ಲಿಗೆ ಏನು ಬಂದವು ಅಂತೀರ – ಬಾತುಕೋಳಿಗಳ ಒಂದು ಹಿಂಡು !

ತೆಲೇಸಿಕ್ ಅವುಗಳನ್ನು ಕಂಡು ಕೇಳಿದ:

"ಬಾತುಕೋಳಿಗಳೇ, ಬಾತುಕೋಳಿಗಳೇ !
ಮುದ್ದು ಬಾತುಕೋಳಿಗಳೇ !
ಒಯ್ಯಿರಿ ನನ್ನನೂ ನಿಮ್ಮೊಂದಿಗೆ !
ಕಾದಿಹರು ನನಗಾಗಿ ತಾಯಿತಂದೆ.
ಒಯ್ಯಿರಿ ನನ್ನನೂ ಮುಗಿಲ ಮೇಲೆ,
ಬಿಡಿಸಿರಿ ನನ್ನನೀ ಭವಣೆಯಿಂದ !"

ಅವುಗಳು ಹೇಳಿದವು:

"ನಾವು ಮುಂದೆ ಹಾರಿ ಹೋಗುತ್ತಿರುವವರು. ಮಧ್ಯದಲ್ಲಿ ಹಾರಿ ಬರುತ್ತಿರುವವರನ್ನು ಕೇಳು."

ಹಾವುಗಳು ಜಗಿಯುತ್ತಿವೆ, ಜಗಿಯುತ್ತಿವೆ... ಈಗ ಇನ್ನೊಂದು ಬಾತುಕೋಳಿಗಳ ಹಿಂಡು ಹಾರಿ ಬರುತ್ತದೆ.

ತೆಲೇಸಿಕ್ ಅವನ್ನೂ ಕೇಳಿಕೊಳ್ಳುತ್ತಾನೆ:

"ಬಾತುಕೋಳಿಗಳೇ, ಬಾತುಕೋಳಿಗಳೇ !
ಮುದ್ದು ಬಾತುಕೋಳಿಗಳೇ !
ಒಯ್ಯಿರಿ ನನ್ನನೂ ನಿಮ್ಮೊಂದಿಗೆ !
ಕಾದಿಹರು ನನಗಾಗಿ ತಾಯಿತಂದೆ.
ಒಯ್ಯಿರಿ ನನ್ನನೂ ಮುಗಿಲ ಮೇಲೆ,
ಬಿಡಿಸಿರಿ ನನ್ನನೀ ಭವಣೆಯಿಂದ !"

ಅವು ಉತ್ತರಿಸುತ್ತವೆ:

"ನಾವು ಮಧ್ಯದಲ್ಲಿದ್ದೇವೆ ! ನಮಗೂ ಹಿಂದೆ ಕೊನೆಯಲ್ಲಿ ಹಾರಿ ಬರುತ್ತಿರುವವರನ್ನು ಕೇಳು !"

ಹಾಗೆಂದು ಅವೂ ಹಾರಿ ಹೋದವು.

ಮರ ಆಗಲೇ ತೂಗಾಡುತ್ತಿದೆ. ಹಾವುಗಳು ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಮತ್ತೆ ಜಗಿಯ ತೊಡಗುತ್ತವೆ... ವಿಶ್ರಾಂತಿ ತೆಗೆದುಕೊಳ್ಳುತ್ತವೆ, ಮತ್ತೆ ಜಗಿಯುತ್ತವೆ... ಇನ್ನಷ್ಟು ಬಾತುಕೋಳಿಗಳು ಹಾರಿ ಬರುತ್ತವೆ.

ತೆಲೇಸಿಕ್ ಅವನ್ನೂ ಕೇಳಿಕೊಳ್ಳುತ್ತಾನೆ:

"ಬಾತುಕೋಳಿಗಳೇ, ಬಾತುಕೋಳಿಗಳೇ !
ಮುದ್ದು ಬಾತುಕೋಳಿಗಳೇ !
ಒಯ್ಯಿರಿ ನನ್ನನೂ ನಿಮ್ಮೊಂದಿಗೆ !
ಕಾದಿಹರು ನನಗಾಗಿ ತಾಯಿತಂದೆ.
ಒಯ್ಯಿರಿ ನನ್ನನೂ ಮುಗಿಲ ಮೇಲೆ,
ಬಿಡಿಸಿರಿ ನನ್ನನೀ ಭವಣೆಯಿಂದ !"

ಅವು ಹೇಳುತ್ತವೆ:

"ನಮಗೂ ಹಿಂದೆ ಕೊನೆಯಲ್ಲಿ ಹಾರಿ ಬರುತ್ತಿರುವ ಬಾತುಕೋಳಿಯನ್ನು ಕೇಳು !"

ಹಾಗೆಂದು ಅವೂ ಹಾರಿ ಹೋದವು.

ತೆಲೇಸಿಕ್ ಮರದ ಮೇಲೇ ದುಃಖದಿಂದ ಕುಳಿತಿದ್ದ. ಮರ ಇನ್ನೇನು ಮುರಿದು ಬೀಳುವುದು, ಅದರ ಜೊತೆಗೆ ತಾನೂ ಬಿದ್ದು ಸಾಯಲಿರುವನು ಎಂದು ಅವನು ಖಚಿತವಾಗಿ ತಿಳಿದಿದ್ದ.

ಆಗ ಇದ್ದಕ್ಕಿದ್ದಂತೆ ಏನು ಬಂತು ಅಂತೀರಾ? – ಇನ್ನೊಂದು ಬಾತುಕೋಳಿ. ಒಂದೇ ಒಂದು. ಹಿಂದೆ ಬಿದ್ದಿತ್ತು. ತುಂಬ ಬಳಲಿತ್ತು. ಕಷ್ಟಪಟ್ಟುಕೊಂಡು ಹಾರುತ್ತಿತ್ತು.

ತೆಲೇಸಿಕ್ ಅದನ್ನು ಕಂಡು ಕೇಳಿದ:

"ಬಾತುಕೋಳಿ, ಬಾತುಕೋಳಿ !
ಮುದ್ದು ಬಾತುಕೋಳಿ !
ಒಳ್ಳೆಯವನಾಗಿ ನೀ ಕಂಡುಬರುವೆ,
ಒಯ್ಯಿ ನೀ ನನ್ನನೂ ನಿನ್ನೊಂದಿಗೆ !
ಕಾದಿಹರು ನನಗಾಗಿ ತಾಯಿತಂದೆ,
ಎತ್ತಿಕೋ ನನ್ನನು ಬೇಗ ಇಲ್ಲಿಂದ,
ಇಲ್ಲದಿರೆ ಆಗುವೆನು ಹಾವುಗಳಿಗಾಹಾರ !

ಬಾತುಕೋಳಿಗೆ ಮನ ಕರಗಿತು. "ಕೂತುಕೋ" ಎಂದದು ಹೇಳಿತು.

ತನ್ನ ಬೆನ್ನ ಮೇಲೆ ಹತ್ತಿ ಕೂರಲು ಅವನಿಗೆ ಸಹಾಯಮಾಡಿ ಅದು ಮುಂದಕ್ಕೆ ಹಾರಿ ಹೊರಟಿತು. ಆದರೆ ಎಷ್ಟು ಬಳಲಿದ್ದಿತೆಂದರೆ ಮೇಲೆ ಹಾರಿ ಹೋಗಲಾಗದೆ ಕ್ಷಣಕ್ಷಣಕ್ಕೂ ಕೆಳಗಿಳಿಯುತ್ತಿತ್ತು. ಅದನ್ನು ಕಂಡು ಹಾವುಗಳು ಅದನ್ನು ಹಿಂಬಾಲಿಸಿ ಹೊರಟವು. ಅಕೋ, ಅಕೋ, ಇನ್ನೇನು ಸಿಕ್ಕಿಬಿಟ್ಟಿತು, ಹಾವುಗಳು ಅದನ್ನು ಹಿಡಿದು ಬಿಟ್ಟವು, ಅನ್ನುವ ಹೊತ್ತಿಗೆ ಬಾತುಕೋಳಿ ಮತ್ತೆ ಮೇಲೇರಿತು. ಹಿಡಿಯಲಾಗದೆ ಹಾವುಗಳು ಹಿಂದಿರುಗಿದವು.

ಹೇಗೋ ಅಂತೂ ಹಾರುತ್ತ ಬಾತುಕೋಳಿ ತೆಲೇಸಿಕ್‌ನನ್ನು ಮನೆ ಮುಟ್ಟಿಸಿತು, ಅವನನ್ನು ಮನೆಯ ಮುಂದೆ ಇಳಿಸಿ ತಾನು ಅಂಗಳಕ್ಕೆ ಹೋಗಿ ಸುಸ್ತಾಗಿ ಬಿದ್ದುಕೊಂಡಿತು.

ತೆಲೇಸಿಕ್ ಕಿಟಕಿಯ ಕೆಳಗೆ ಕುಳಿತು ಮನೆಯ ಒಳಗೆ ಏನು ನಡೆಯುತ್ತಿದೆ ಅನ್ನುವುದನ್ನು ಕೇಳಿಸಿಕೊಳ್ಳುತ್ತಾನೆ. ಅದೀಗ ಮುದುಕಿ ಸೀದೋಸೆ ಬೇಯಿಸುತ್ತಿದ್ದಳು, ಕೆಲವನ್ನು ಒಲೆಯಿಂದ ಹೊರ ತೆಗೆಯುತ್ತ ಮುದುಕನಿಗೆ ಹೇಳಿದಳು:

"ಮುದುಕಪ್ಪ, ಈ ಸೀದೋಸೆ ನಿನಗೆ. ಈ ಇನ್ನೊಂದು ನನಗೆ!"

ತೆಲೇಸಿಕ್ ಕಿಟಕಿಯ ಕೆಳಗಿನಿಂದ ಹೇಳುತ್ತಾನೆ:

"ನನಗೆ?"

ಮುದುಕಿ ಮತ್ತಷ್ಟು ಸೀದೋಸೆಯನ್ನು ಹೊರ ತೆಗೆದು ಹೇಳುತ್ತಾಳೆ:

"ಮುದುಕಪ್ಪ, ಇದು ನಿನಗೆ. ಮತ್ತೆ ಇದು ನನಗೆ!"

ತೆಲೇಸಿಕ್ ಮತ್ತೆ ಹೇಳುತ್ತಾನೆ:

"ನನಗೆ?"

ಅವರು ಕಿವಿ ಆನಿಸಿ ಕೇಳಿದರು. ಯಾರದು ಹೀಗೆ ಹೇಳುತ್ತಿರುವುದು?

ಮುದುಕಿ ಹೇಳಿದಳು:

"ನಿನಗೆ ಕೇಳಿಸಿತೆ, ಮುದುಕಪ್ಪ? ಯಾರೋ ಮಾತನಾಡುತ್ತಿದಾರೆ."

ಆದರೆ ಮುದುಕ ಉತ್ತರಿಸಿದ:

"ನಿನಗೆಲ್ಲೋ ಭ್ರಾಂತಿ."

ಮುದುಕಿ ಇನ್ನಷ್ಟು ಸೀದೋಸೆಗಳನ್ನು ಒಲೆಯಿಂದ ಹೊರ ತೆಗೆದು ಹೇಳಿದಳು:

"ಇದು ನಿನಗೆ, ಇದು ನನಗೆ!"

ತೆಲೇಸಿಕ್ ಮತ್ತೆ ಹೇಳಿದ:

"ನನಗೆ?"

“ನೀನು ಏನೇ ಹೇಳು. ಯಾರೋ ಮಾತನಾಡುತ್ತಿದಾರೆ” ಅಂತ ಮುದುಕಿ ಕಿಟಕಿಯ ಬಳಿ ಹೋಗಿ ಬಾಗಿ ನೋಡಿದಳು. ಅಲ್ಲಿ ಕೂತಿದಾನೆ ತೆಲೇಸಿಕ್ ಬೆಂಚಿನ ಮೇಲೆ!

ಮುದುಕ ಮುದುಕಿ ಹೊರಕ್ಕೆ ಓಡಿ ಬಂದರು. ತೆಲೇಸಿಕ್‌ನನ್ನು ಎತ್ತಿಕೊಂಡು ಒಳಕ್ಕೆ ಹೋದರು. ಅವರಿಗೆ ಆನಂದವೋ ಆನಂದ!..

ಬಾತುಕೋಳಿ ಅಂಗಳದಲ್ಲೇ ಅಡ್ಡಾಡುತ್ತಿತ್ತು. ಅದು ಅಜ್ಜಿಯ ಕಣ್ಣಿಗೆ ಬಿದ್ದಿತು. ಅವಳು ಹೇಳಿದಳು:

“ಅಂಗಳದಲ್ಲಿ ಒಂದು ಬಾತುಕೋಳಿ ಅಡ್ಡಾಡುತ್ತಿದೆ. ಹಿಡಿದುಕೊಂಡು ಬಂದು ನಿನಗೆ ಬೇಯಿಸಿ ಹಾಕುತ್ತೀನಿ.”

ತೆಲೇಸಿಕ್ ಹೇಳುತ್ತಾನೆ:

“ಬೇಡ, ಅಮ್ಮ, ಬೇಡ! ಅದನ್ನು ಹಿಡಿಯಲೂ ಬೇಡ, ಬೇಯಿಸಲೂ ಬೇಡ! ಅದಿಲ್ಲದಿದ್ದಿದ್ದರೆ ನಾನೂ ಇಲ್ಲಿ ನಿಮ್ಮ ಬಳಿ ಇರುತ್ತಿರಲಿಲ್ಲ.”

ಅವರು ಬಾತುಕೋಳಿಗೆ ಅನ್ನಾಹಾರ ಕೊಟ್ಟರು, ಕುಡಿಯಲು ನೀರು ಕೊಟ್ಟರು. ಅದು ಆಮೇಲೆ ತಿನ್ನಲೆಂದು ಅದರ ರೆಕ್ಕೆಗಳ ಕೆಳಗೆ ಒಂದಿಷ್ಟು ಕಾಳು ಚೆಲ್ಲಿದರು. ಅವನ್ನೆಲ್ಲ ತಿಂದು ಬಾತುಕೋಳಿಗೆ ಶಕ್ತಿ ಬಂದಿತು. ಅದು ಹಾರಿ ಹೋಯಿತು.

ಹೀಗೆ ನೋಡಿ, ನಿಮಗೆ ಲಭಿಸಿತು ಒಂದು ಕಥಾ ಪ್ರಸಂಗ, ಮತ್ತೆ ನನಗೆ – ರೊಟ್ಟಿ ಜೇನು ಹೊಟ್ಟೆತುಂಬ!

ಮಾಂತ್ರಿಕ ಮೊಟ್ಟೆ

ಬಹಳ ಕಾಲದ ಹಿಂದೆ, ನೆನಪಿಗೂ ಸಿಗದಂತಹ ಕಾಲದಲ್ಲಿ, ಬಾನಾಡಿ ರಾಜನಾಗಿತ್ತು, ಇಲಿ ರಾಣಿಯಾಗಿತ್ತು. ಅವುಗಳಿಗೆ ತಮ್ಮದೇ ಹೊಲವಿತ್ತು. ಈ ಹೊಲದಲ್ಲಿ ಅವು ಗೋಧಿ ಬೆಳೆದವು. ಕಟಾವು ಮಾಡಿ ತೆನೆಯಿಂದ ಕಾಳುಗಳನ್ನು ಬೇರ್ಪಡಿಸಿದ ಮೇಲೆ ಅವು ಕಾಳುಗಳನ್ನು ತಮ್ಮ ಮಧ್ಯೆ ಸಮನಾಗಿ ಹಂಚಿಕೊಂಡವು. ಆದರೆ ಕೊನೆಯಲ್ಲಿ ಒಂದು ಗೋಧಿ ಕಾಳು ಉಳಿದು ಬಿಟ್ಟಿತು. ಇಲಿ ಹೇಳಿತು:

"ಈ ಕೊನೆಯ ಕಾಳು ನನ್ನದು."

ಬಾನಾಡಿ ಹೇಳಿತು:

"ಇಲ್ಲ, ನನ್ನದು!"

"ಹಾಗಾದರೆ ನಾನು ಇದನ್ನೂ ಅರ್ಧ ಭಾಗ ಮಾಡ್ತೀನಿ."

ಬಾನಾಡಿ ಅದಕ್ಕೆ ಒಪ್ಪಿಕೊಂಡಿತು. ಇಲಿ ಗೋಧಿ ಕಾಳನ್ನು ತನ್ನ ಹಲ್ಲುಗಳ ಮಧ್ಯೆ ಕಚ್ಚಿ ಹಿಡಿದು ತಕ್ಷಣವೇ ಓಡಿ ಹೋಗಿ ತನ್ನ ಬಿಲದೊಳಗೆ ಸೇರಿಕೊಂಡಿತು. ರಾಜ ಬಾನಾಡಿ ಹುಯಿಲೆಬ್ಬಿಸಿತು, ಅದು ರಾಣಿ ಇಲಿಯ ಮೇಲೆ ದಾಳಿ ಮಾಡಲೆಂದು ಕಾಡಿನ ಹಕ್ಕಿಗಳನ್ನೆಲ್ಲ ಅಣಿನೆರೆಯಿಸಿತು. ರಾಣಿ ಇಲಿಯೂ ಕಾಡಿನಲ್ಲಿದ್ದ ಮೃಗಗಳನ್ನೆಲ್ಲ ಒಂದುಗೂಡಿಸಿತು. ಪ್ರಾರಂಭವಾಯಿತು ಯುದ್ಧ.

ಇಡೀ ದಿನ ಹೋರಾಡಿದವು. ಸಂಜೆ ಎಲ್ಲವೂ ವಿಶ್ರಾಂತಿಗಾಗಿ ಹೋದವು. ರಾಣಿ ಇಲಿ ತನ್ನ

ಸೈನ್ಯ ಬಲವನ್ನೆಲ್ಲ ಪರಿಶೀಲಿಸಿತು. ಅಲ್ಲಿ ಇರುವೆಗಳು ಇಲ್ಲದಿರುವುದನ್ನು ಕಂಡಿತು. ಎಲ್ಲ ಇರುವೆಗಳೂ ಕೂಡಲೇ ಯುದ್ಧದಲ್ಲಿ ಭಾಗಿಗಳಾಗಬೇಕೆಂದು ಆಜ್ಞಾಪಿಸಿತು. ಇರುವೆಗಳು ಓಡೋಡಿ ಬಂದವು. ರಾತ್ರಿ ಕತ್ತಲಿನಲ್ಲಿ ಮರ ಹತ್ತಿ ಹೋಗಿ ಅಲ್ಲಿ ವಿರಮಿಸಿದ್ದ ಎಲ್ಲ ಹಕ್ಕಿಗಳ ರೆಕ್ಕೆಗಳ ಬಳಿ ಪುಕ್ಕಗಳನ್ನು ಕಚ್ಚಿ ಹಾಕಬೇಕೆಂದು ಅದು ಇರುವೆಗಳಿಗೆ ಆಜ್ಞೆ ನೀಡಿತು.

ಮಾರನೆಯ ದಿನ, ಬೆಳಗಾಗುತ್ತಲೇ, ರಾಣಿ ಇಲಿ ಕೂಗಿ ಹೇಳಿತು:

"ಏಳಿ, ಎದ್ದೇಳಿ ಎಲ್ಲ. ಯುದ್ಧಕ್ಕೆ ಹೊರಡಿ!"

ಹಕ್ಕಿಗಳು ಎದ್ದು ಹಾರಲು ನೋಡುತ್ತವೆ–ಆಗುತ್ತಲೇ ಇಲ್ಲ. ಏನೋ ಆಗಿ ಬಿಟ್ಟಿದೆ! ಅವು ಹಾರ ಹೊರಟಂತೆ ಎಲ್ಲ ನೆಲದ ಮೇಲೆ ಬೀಳುತ್ತಿದ್ದವು. ಮೃಗಗಳು ಅವುಗಳ ಮೇಲೆ ಬಿದ್ದು ಕೊಂದುಹಾಕಿದವು. ಹೀಗೆ ರಾಣಿ ಇಲಿ ರಾಜನ ಮೇಲೆ ವಿಜಯ ಸಾಧಿಸಿತು.

ಆದರೆ ಒಂದು ಹದ್ದು ಮಾತ್ರ ಹಾರುವುದು ಅಪಾಯಕರ ಎಂದು ಕಂಡುಕೊಂಡಿತು. ಮರದ ಮೇಲೆಯೇ ಉಳಿಯಿತು. ಅಷ್ಟು ಹೊತ್ತಿಗೆ ಆ ಕಡೆಗೆ ಒಬ್ಬ ಬೇಟೆಗಾರ ಬಂದ. ಮರದ ಮೇಲೆ ಹದ್ದು ಕುಳಿತಿರುವುದನ್ನು ಕಂಡ. ಅದನ್ನು ಹೊಡೆಯಲು ಗುರಿ ಇಟ್ಟ. ಆಗ ಹದ್ದು ಮೊರೆ ಇಟ್ಟಿತು:

"ಯುವ ಬೇಟೆಗಾರ, ನನ್ನನ್ನು ಕೊಲ್ಲಬೇಡ. ನಾನು ನಿನಗೆ ಕಷ್ಟದಲ್ಲಿ ನೆರವಾಗುತ್ತೇನೆ!"

ಬೇಟೆಗಾರ ಎರಡನೆಯ ಬಾರಿ ಗುರಿ ಇಟ್ಟ. ಹದ್ದು ಮತ್ತೆ ಅವನನ್ನು ಕೇಳಿಕೊಂಡಿತು:

"ನನ್ನನ್ನು ಕೊಲ್ಲುವ ಬದಲು ನಿನ್ನ ಜೊತೆ ಕರೆದೊಯ್ಯಿ. ನಾನು ನಿನಗೆ ಕಷ್ಟದಲ್ಲಿ ಹೇಗೆ ನೆರವಾಗುತ್ತೇನೆ ಅನ್ನುವುದನ್ನು ನೀನೇ ಕಾಣುವೆ!"

ಬೇಟೆಗಾರ ಮೂರನೆಯ ಬಾರಿ ಗುರಿ ಇಟ್ಟ. ಹದ್ದು ಮತ್ತೆ ಅವನನ್ನು ಕೇಳಿಕೊಳ್ಳ ತೊಡಗಿತು:

"ಅಯ್ಯೋ, ನನ್ನನ್ನು ಕೊಲ್ಲಬೇಡ. ನಿನ್ನ ಜೊತೆ ಕರೆದೊಯ್ಯಿ. ನಾನು ನಿನಗೆ ಕಷ್ಟದಲ್ಲಿ ನೆರವಾಗುತ್ತೇನೆ!"

ಬೇಟೆಗಾರ ಅದರ ಮಾತನ್ನು ನಂಬಿದ. ಮರ ಹತ್ತಿ ಅದನ್ನು ತೆಗೆದುಕೊಂಡು ಮನೆಗೆ ಹೋದ. ಹದ್ದು ಅವನಿಗೆ ಹೇಳಿತು:

"ನನ್ನ ರೆಕ್ಕೆಗಳು ಮತ್ತೆ ಚೆನ್ನಾಗಿ ಬೆಳೆದು ನನ್ನನ್ನು ಎಲ್ಲಿಗಂದರೆ ಅಲ್ಲಿಗೆ ಒಯ್ಯುವಂತಾಗುವವರೆಗೂ ನನಗೆ ಚೆನ್ನಾಗಿ ಮಾಂಸ ಕೊಟ್ಟು ಪೋಷಣೆ ಮಾಡು."

ಆ ಬೇಟೆಗಾರನ ಬಳಿ ಎರಡು ಮೇಕೆಗಳು ಒಂದು ಕುರಿ ಇದ್ದವು. ಅವನು ಒಂದು ಮೇಕೆಯನ್ನು ಕೊಂದ. ಹದ್ದು ಆ ಮೇಕೆಯ ಮಾಂಸವನ್ನು ಒಂದು ವರ್ಷ ತಿಂದಿತು. ಮತ್ತೆ ಬೇಟೆಗಾರನಿಗೆ ಹೇಳಿತು:

"ನನ್ನನ್ನು ಸ್ವಲ್ಪ ಹಾರಿ ಬಿಡು. ನನ್ನ ರೆಕ್ಕೆಗಳು ಸಾಕಷ್ಟು ಬೆಳೆದಿವೆಯೋ ಇಲ್ಲವೋ ನೋಡುತ್ತೇನೆ."

ಬೇಟೆಗಾರ ಅದನ್ನು ತನ್ನ ಗುಡಿಸಿಲಿನಿಂದ ಹೊರಕ್ಕೆ ಹಾರಿ ಬಿಟ್ಟ. ಹದ್ದು ಹಾರಿತು, ಹಾರಿತು. ಮಧ್ಯಾಹ್ನ ಹಿಂದಿರುಗಿ ಹೇಳಿತು:

"ನನಗೆ ಶಕ್ತಿ ಇನ್ನೂ ಸಾಲದು ! ಎರಡನೆಯ ಮೇಕೆಯನ್ನೂ ಕೊಂದು ಮಾಂಸ ಹಾಕು !"

ಬೇಟೆಗಾರ ಅದರ ಮಾತನ್ನು ಕೇಳಿಕೊಂಡು ಎರಡನೆಯ ಮೇಕೆಯನ್ನೂ ಕೊಂದ. ಹದ್ದು ಅದನ್ನು ಇನ್ನೊಂದು ವರ್ಷದವರೆಗೆ ತಿಂದಿತು. ಈ ಮೇಕೆಯನ್ನೂ ತಿಂದು ಮುಗಿಸಿದ ಮೇಲೆ ಅದು ಮತ್ತೆ ಹಾರಿತು... ಇಡೀ ದಿನಕ್ಕೆ ಸ್ವಲ್ಪ ಕಮ್ಮಿ ಕಾಲ ಹಾರಿತು. ಸಂಜೆ ಹಿಂದಿರುಗಿ ಹೇಳಿತು:

"ಈಗ ಕುರಿಯನ್ನೂ ಕೊಂದು ನನಗೆ ಆಹಾರವಾಗಿ ನೀಡು !"

ಬೇಟೆಗಾರ ಯೋಚಿಸಿದ: "ಏನು ಮಾಡುವುದು ? ಕೊಲ್ಲುವುದೋ, ಬೇಡವೋ ?" ಆಮೇಲೆ ಹೇಳಿದ:

"ನಿನಗೆ ಎಷ್ಟೊಂದು ಕೊಟ್ಟಿದ್ದಾಯಿತು. ಸರಿ, ಇದನ್ನೂ ತೆಗೆದುಕೋ !"

ಕುರಿಯನ್ನೂ ಕೊಂದ. ಹದ್ದು ಅದರ ಮಾಂಸವನ್ನು ಇನ್ನೊಂದು ವರ್ಷದವರೆಗೆ ತಿಂದಿತು. ಆಮೇಲೆ ಹಾರಿತು – ಎಷ್ಟು ಎತ್ತರ, ಎಷ್ಟು ಎತ್ತರ, ಮೋಡಗಳವರೆಗೂ ಹಾರಿತು ! ಹಿಂದಕ್ಕೆ ಹಾರಿ ಬಂದು ಅದು ಬೇಟೆಗಾರನಿಗೆ ಹೇಳಿತು:

"ನಿನಗೆ ತುಂಬ ವಂದನೆಗಳು. ನೀನೊಬ್ಬ ಒಳ್ಳೆಯ ಮನುಷ್ಯ. ನನ್ನನ್ನು ಚೆನ್ನಾಗಿ ಪೋಷಿಸಿ ಬೆಳೆಸಿದೆ. ಈಗ ನನ್ನ ಮೇಲೆ ಕೂತುಕೋ !"

ಬೇಟೆಗಾರ ಕೇಳಿದ:

"ಯಾಕೆ ?"

ಹದ್ದು ಹೇಳಿತು:

"ಕೂತುಕೋ ಅಂತ ಹೇಳುತ್ತಿಲ್ಲವೇ !"

ಸರಿ, ಅವನು ಅದರ ಮೇಲೆ ಕುಳಿತ.

ಹದ್ದು ಅವನನ್ನು ನೀಲಿ ಮೋಡಗಳವರೆಗೂ ಎತ್ತಿಕೊಂಡು ಹೋಗಿ ಅಲ್ಲಿಂದ ಅವನನ್ನು ಕೆಳಕ್ಕೆ ಬಿಟ್ಟಿತು. ಬೇಟೆಗಾರ ಕೆಳಕ್ಕೆ ಬೀಳ ತೊಡಗಿದ. ಅಷ್ಟರಲ್ಲೇ ಹದ್ದು ಮತ್ತೆ ಅವನನ್ನು ಗಾಳಿಯಲ್ಲಿದ್ದಂತೆಯೇ ಹಿಡಿದು ಹೇಳಿತು:

"ಹುಂ. ಏನಂತಿ ? ಹೇಗೆ ಅನ್ನಿಸಿತು ನಿನಗೆ ?"

ಅವನು ಹೇಳಿದ:

"ನಾನು ಸತ್ತೇ ಹೋದೆನೇನೋ ಅನ್ನಿಸಿತು !"

ಹದ್ದು ಹೇಳಿತು:

"ನನಗೂ ಹಾಗೇ ಅನ್ನಿಸಿತು – ನೀನು ನನ್ನತ್ತ ಗುರಿ ಇಟ್ಟಾಗ." ಆಮೇಲೆ ಹೇಳಿತು: "ಕೂತುಕೋ ಮತ್ತೆ."

ಬೇಟೆಗಾರ ಸಹಜವಾಗಿಯೇ ಕೂರಲು ಇಷ್ಟಪಡಲಿಲ್ಲ. ಆದರೆ ಹಾಗೆ ಮಾಡದೆ ಇರಲೂ ಸಾಧ್ಯವಿರಲಿಲ್ಲ. ಮತ್ತೆ ಹತ್ತಿ ಕೂತ.

ಹದ್ದು ಮತ್ತೆ ಅವನನ್ನು ನೀಲಿ ಮೋಡಗಳವರೆಗೂ ಕರೆದೊಯ್ದಿತು, ಮತ್ತೆ ಅವನನ್ನು ಕೆಳಕ್ಕೆ ಬಿಟ್ಟಿತು. ಅವನು ಇನ್ನೇನು ಭೂಮಿಗೆ ತೀರ ಸಮೀಪ ಬಂದಿದ್ದ ಅನ್ನುವಾಗ ಅವನನ್ನು ಹಿಡಿದು ಕೇಳಿತು:

"ಹುಂ, ಏನಂತಿ? ಹೇಗೆ ಅನ್ನಿಸಿತು ನಿನಗೆ?"

ಅವನು ಅದಕ್ಕೆ ಹೇಳಿದ:

"ನನ್ನ ಮೂಳೆಗಳೆಲ್ಲ ಪುಡಿಪುಡಿಯಾದವೇನೋ ಅನ್ನಿಸಿತು."

ಆಗ ಹದ್ದು ಅವನಿಗೆ ಹೇಳಿತು:

"ಹಾಗೇ ಅನ್ನಿಸಿತು ನನಗೂ – ನೀನು ಎರಡನೆಯ ಬಾರಿ ನನ್ನ ಮೇಲೆ ಗುರಿ ಇಟ್ಟಾಗ. ಸರಿ, ಕೂತುಕೋ ಮತ್ತೆ."

ಅವನು ಕೂತ.

ಹದ್ದು ಅವನನ್ನು ನೀಲಿ ಮೋಡಗಳವರೆಗೂ ಕರೆದೊಯ್ದಿತು. ಅಲ್ಲಿಂದ ಅವನನ್ನು ಕೆಳಕ್ಕೆ ಬಿಟ್ಟಿತು. ಅವನು ಇನ್ನೇನು ಭೂಮಿಯ ಮೇಲೆ ಬೀಳಲಿದ್ದ ಅನ್ನುವಾಗ ಅದು ಅವನನ್ನು ಹಿಡಿದು ಕೇಳಿತು:

"ಹುಂ, ಏನಂತಿ? ಹೇಗೆ ಅನ್ನಿಸಿತು ನಿನಗೆ?"

"ನಾನು ಈ ಪ್ರಪಂಚದಲ್ಲಿ ಇನ್ನೇನು ಇಲ್ಲವೇ ಇಲ್ಲವೇನೋ ಅನ್ನಿಸಿತು ನನಗೆ."

ಆಗ ಹದ್ದು ಅವನಿಗೆ ಹೇಳಿತು:

"ನೀನು ಮೂರನೆಯ ಬಾರಿ ನನ್ನ ಮೇಲೆ ಗುರಿ ಇಟ್ಟಾಗ ನನಗೂ ಹಾಗೇ ಅನ್ನಿಸಿತು." ಆಮೇಲೆ ಮತ್ತೆ ಹೇಳಿತು: "ಈಗ ನಾನೂ ನೀನೂ ಸರಿಸಮ. ನಮ್ಮ ಜಗಳ ಪರಿಹಾರವಾಯಿತು. ನನ್ನ ಮೇಲೆ ಕುಳಿತುಕೋ. ನನ್ನ ರಾಜ್ಯಕ್ಕೆ, ನನ್ನ ಮನೆಗೆ ಹಾರಿ ಹೋಗೋಣ."

ಅವರು ತುಂಬ ದೂರ ಹಾರಿ ಹೋದರು. ಕೊನೆಗೆ ಹದ್ದಿನ ಚಿಕ್ಕಪ್ಪನ ಮನೆಯ ಸಮೀಪ ಬಂದರು. ಹದ್ದು ಹೇಳಿತು:

"ಗುಡಿಸಿಲಿನ ಒಳಕ್ಕೆ ಹೋಗು. ನೀನು ನನ್ನನ್ನು ಕಂಡೆಯಾ ಎಂದು ಅವರು ಕೇಳಿದಾಗ ಹೇಳು: 'ನನಗೆ ಮಾಂತ್ರಿಕ ಮೊಟ್ಟೆ ಕೊಡಿ, ತಕ್ಷಣವೇ ಅವನನ್ನು ಕರೆದುಕೊಂಡು ಬರುತ್ತೇನೆ.' "

ಬೇಟೆಗಾರ ಗುಡಿಸಿಲಿನ ಒಳಗೆ ಹೋದ. ಅಲ್ಲಿ ಅವರು ಅವನನ್ನು ಕೇಳಿದರು:

"ನೀನು ನಿನ್ನ ಸ್ವಂತ ಇಚ್ಛೆಯಿಂದ ಇಲ್ಲಿಗೆ ಬಂದೆಯೋ ಅಥವಾ ಸ್ವಂತ ಇಚ್ಛೆ ಇಲ್ಲದೆಯೋ?"

ಅವನು ಅವರಿಗೆ ಉತ್ತರಿಸಿದ:

"ನಿಜವಾದ ಕೊಸ್ಸಾಕ್ ಯಾವತ್ತೂ ಎಲ್ಲಿಗೂ ಸ್ವಂತ ಇಚ್ಛೆಯಿಂದಲೇ ಹೋಗುವುದು."

ಅವರು ಅವನನ್ನು ಮತ್ತೆ ಕೇಳಿದರು:

"ನಮ್ಮ ಸೋದರಳಿಯನನ್ನು ಎಲ್ಲಾದರೂ ಕಂಡೆಯಾ? ಯುದ್ಧಕ್ಕೆ ಹೋಗಿ ಮೂರು ವರ್ಷ ಆಯಿತು. ಪತ್ತೆಯೇ ಇಲ್ಲ."

ಅವನು ಅವರಿಗೆ ಹೇಳಿದ:

"ಮಾಂತ್ರಿಕ ಮೊಟ್ಟೆ ಕೊಡಿ – ತಕ್ಷಣವೇ ಅವನನ್ನು ಕರೆದುಕೊಂಡು ಬರುತ್ತೇನೆ."

ಅವರು ಹೇಳಿದರು:

"ನಿನಗೆ ಮಾಂತ್ರಿಕ ಮೊಟ್ಟೆ ಕೊಡುವುದಕ್ಕಿಂತ ಅವನನ್ನು ಎಂದೂ ನೋಡದೇ ಇರುವುದೇ ಮೇಲು."

ಆಗ ಅವನು ಗುಡಿಸಿಲಿನಿಂದ ಹೊರ ಬಂದು ಹದ್ದಿಗೆ ಹೇಳಿದ:

" 'ಮಾಂತ್ರಿಕ ಮೊಟ್ಟೆ ಕೊಡುವುದಕ್ಕಿಂತ ಅವನನ್ನು ಎಂದೂ ನೋಡದೇ ಇರುವುದೇ ಮೇಲು' ಅಂತ ಅವರು ಹೇಳಿದರು."

ಹದ್ದು ಅವನಿಗೆ ಹೇಳಿತು:

"ಮುಂದಕ್ಕೆ ಹಾರಿ ಹೋಗೋಣ."

ಅವರು ಹಾರಿಕೊಂಡು ಹಾರಿಕೊಂಡು ಹೋದರು. ಕೊನೆಗೆ ಹದ್ದಿನ ಸೋದರನ ಮನೆಗೆ ಹೋದರು. ಅಲ್ಲೂ ಚಿಕ್ಕಪ್ಪನ ಮನೆಯಲ್ಲಿ ಆದ ಹಾಗೆಯೇ ಆಯಿತು – ಬೇಟೆಗಾರನಿಗೆ ಮಾಂತ್ರಿಕ ಮೊಟ್ಟೆ ಸಿಗಲಿಲ್ಲ. ಅವರು ಹದ್ದಿನ ತಂದೆಯ ಮನೆಗೆ ಹಾರಿ ಹೋದರು. ಹದ್ದು ಬೇಟೆಗಾರನಿಗೆ ಹೇಳಿತು:

"ಗುಡಿಸಿಲಿನೊಳಕ್ಕೆ ಹೋಗು. ನನ್ನ ವಿಷಯ ಕೇಳಿದ ಕೂಡಲೇ ಹೇಳು: 'ಮಾಂತ್ರಿಕ ಮೊಟ್ಟೆ ಕೊಡಿ – ತಕ್ಷಣವೇ ಕರೆದುಕೊಂಡು ಬರುತ್ತೇನೆ.' "

ಬೇಟೆಗಾರ ಗುಡಿಸಿಲಿನೊಳಕ್ಕೆ ಹೋದ. ಅವರು ಕೇಳಿದರು:

"ನೀನು ಸ್ವಂತ ಇಚ್ಛೆಯಿಂದ ಬಂದೆಯೋ ಅಥವಾ ಸ್ವಂತ ಇಚ್ಛೆ ಇಲ್ಲದೆಯೋ?"

ಅವನು ಅವರಿಗೆ ಉತ್ತರಿಸಿದ:

"ನಿಜವಾದ ಕೊಸ್ಸಾಕ್ ಯಾವತ್ತೂ ಎಲ್ಲಿಗೂ ಸ್ವಂತ ಇಚ್ಛೆಯಿಂದಲೇ ಹೋಗುವುದು."

ಅವರು ಅವನನ್ನು ಮತ್ತೆ ಕೇಳಿದರು:

"ನಮ್ಮ ಮಗನನ್ನು ಎಲ್ಲಾದರೂ ಕಂಡೆಯಾ? ಯುದ್ಧಕ್ಕೆ ಹೋಗಿ ನಾಲ್ಕನೆಯ ವರ್ಷ ಮುಗಿಯುತ್ತಿದೆ. ಅವನು ಅಲ್ಲೇ ಏನಾದರೂ ಸತ್ತುಹೋದನೋ ಏನೋ?"

ಅವನು ಅವರಿಗೆ ಹೇಳಿದ:

"ಮಾಂತ್ರಿಕ ಮೊಟ್ಟೆ ಕೊಡಿ – ತಕ್ಷಣವೇ ನಾನು ಅವನನ್ನು ಕರೆದುಕೊಂಡು ಬರುತ್ತೇನೆ."

ಹದ್ದಿನ ಅಪ್ಪ ಹೇಳಿತು:

"ಮೊಟ್ಟೆ ಯಾಕೆ ನಿನಗೆ? ಬೇಕಾದರೆ ನಿನಗೆ ಬೇಕಾದಷ್ಟು ಹಣ ಕೊಡುತ್ತೇನೆ."

ಅವನು ಹೇಳಿದ:

"ನನಗೆ ಹಣ ಬೇಕಿಲ್ಲ. ಮಾಂತ್ರಿಕ ಮೊಟ್ಟೆ ಕೊಡಿ!"

"ಸರಿ. ನಿನಗೆ ಮಾಂತ್ರಿಕ ಮೊಟ್ಟೆ ಕೊಡುತ್ತೇನೆ. ಆದರೆ ಬೇಗ ಮಗನನ್ನು ಕರೆದುಕೊಂಡು ಬಾ!"

ಬೇಟೆಗಾರ ಹದ್ದನ್ನು ಗುಡಿಸಿಲಿನೊಳಕ್ಕೆ ಕರೆದೊಯ್ದ. ಎಲ್ಲರಿಗೂ ಎಷ್ಟೊಂದು ಆನಂದ ವಾಯಿತು! ಅವರು ಬೇಟೆಗಾರನಿಗೆ ಮಾಂತ್ರಿಕ ಮೊಟ್ಟೆ ಕೊಟ್ಟು ಹೇಳಿದರು:

"ದಾರಿಯಲ್ಲಿ ಎಲ್ಲಾದರೂ ಒಡೆದು ಹಾಕಿ ಬಿಡಬೇಡ. ಮನೆಗೆ ಹೋಗು, ಒಂದು ದೊಡ್ಡ ಬೇಲಿ ನಿರ್ಮಿಸು. ಅನಂತರವಷ್ಟೆ ಮೊಟ್ಟೆಯನ್ನು ಒಡೆಯಬಹುದು."

ಬೇಟೆಗಾರ ಮನೆಯ ಕಡೆಗೆ ಹೊರಟ. ಹೋದ, ಹೋದ. ಅವನಿಗೆ ಬಾಯಾರಿಕೆ ಆಯಿತು. ಒಂದು ಬಾವಿಯನ್ನು ಕಂಡ. ನೀರು ಕುಡಿಯ ತೊಡಗಿದನೋ ಇಲ್ಲವೋ ಮಾಂತ್ರಿಕ ಮೊಟ್ಟೆ ಬಕೆಟ್ಟಿನ ಅಂಚಿಗೆ ತಗುಲಿ ಒಡೆದು ಹೋಯಿತು. ಆ ಮೊಟ್ಟೆಯೊಳಗಿನಿಂದ ದನಕರುಗಳ ಒಂದು ದೊಡ್ಡ ಹಿಂಡೇ ಹೊರ ಬರ ತೊಡಗಿತು! ಅವು ಒಂದೇ ಸಮನಾಗಿ ಹೊರಕ್ಕೆ ಬರುತ್ತಲೇ ಇವೆ. ಅವನ್ನು ಹೇಗೆ ತಡೆಯುವುದು ಅನ್ನುವುದು ಬೇಟೆಗಾರನಿಗೆ ತಿಳಿಯಲಿಲ್ಲ. ಒಂದು ಕಡೆಯಿಂದ ಅಟ್ಟಿಸಿಕೊಂಡು ಬಂದರೆ ಅವು ಇನ್ನೊಂದು ಕಡೆಯಿಂದ ಹೊರ ಓಡುತ್ತಿದ್ದವು. ಅವನು ನಿಸ್ಸಹಾಯಕನಾಗಿ ಕೂಗಾಡಿದ. ಅವನ ಕೈಲಿ ಏನು ಮಾಡಲೂ ಆಗಲಿಲ್ಲ. ನೋಡಿದ – ಹತ್ತಿರ ದಲ್ಲೇ ಒಂದು ಹಾವು ಹರಿದು ಹೋಗುತ್ತಿತ್ತು.

"ನಾನು ಈ ದನಕರುಗಳನ್ನೆಲ್ಲ ಮತ್ತೆ ಮೊಟ್ಟೆಯೊಳಕ್ಕೇ ಹೋಗುವಂತೆ ಮಾಡಿದರೆ ನೀನು ನನಗೇನು ಕೊಡುತ್ತೀಯ?"

ಅವನು ಕೇಳಿದ:

"ನಿನಗೇನು ಬೇಕು?"

ಅದು ಹೇಳಿತು:

"ನೀನು ನಿನ್ನ ಮನೆಯಲ್ಲಿ ಇಲ್ಲದಿದ್ದಾಗ ಅಲ್ಲಿ ಏನು ಕಾಣಿಸಿಕೊಂಡಿತೋ ಅದನ್ನು ಕೊಡುತ್ತೀಯ?"

ಅವನು ಹೇಳಿದ:

"ಕೊಡುತ್ತೇನೆ."

ಹಾವು ದನಕರುಗಳನ್ನೆಲ್ಲ ಮೊಟ್ಟೆಯೊಳಕ್ಕೆ ಸೇರಿಸಿ ಒಡೆದ ಚಿಪ್ಪನ್ನು ಗಟ್ಟಿಯಾಗಿ ಮುಚ್ಚಿ ಅಂಟು ಹಾಕಿ, ಅದನ್ನು ಬೇಟೆಗಾರನ ಕೈಗೆ ಕೊಟ್ಟಿತು.

ಅವನು ಮನೆಗೆ ಹೋದ. ಅವನಿಲ್ಲದಿದ್ದಾಗ ಮನೆಯಲ್ಲಿ ಒಂದು ಮಗು ಹುಟ್ಟಿದೆ. ಬೇಟೆಗಾರ ತಲೆಯ ಮೇಲೆ ಕೈ ಹೊತ್ತು ಕೂತ.

"ಅಯ್ಯೋ, ನಿನ್ನನ್ನು ನಾನು ಹಾವಿಗೆ ಕೊಡುತ್ತೇನೆ ಅಂತ ಮಾತು ಕೊಟ್ಟುಬಿಟ್ಟೆನಲ್ಲ!" ಎಂದವನು ಗೋಳಾಡಿದ.

ಅವನೂ ಅವನ ಹೆಂಡತಿಯೂ ಸ್ವಲ್ಪ ಹೊತ್ತು ಅತ್ತರು. ಆಮೇಲೆ ಹೇಳಿದರು:

"ಏನು ಮಾಡೋದು! ಕಣ್ಣೀರು ಸುರಿಸುವುದರಿಂದ ಪ್ರಯೋಜನವಿಲ್ಲ. ಹೇಗಾದರೂ ಜೀವಿಸಿಕೊಂಡು ಹೋಗಬೇಕಲ್ಲ."

ಅವನು ಒಂದು ದೊಡ್ಡ ಬೇಲಿ ನಿರ್ಮಿಸಿದ. ಅದರ ಮಧ್ಯದಲ್ಲಿ ಮಾಂತ್ರಿಕ ಮೊಟ್ಟೆಯನ್ನಿಟ್ಟು ಒಡೆದ. ಅದರೊಳಗಿನಿಂದ ದನಕರುಗಳನ್ನು ಹೊರ ಬಿಟ್ಟ. ಭಾರಿ ಶ್ರೀಮಂತನಾದ.

ಹೀಗೆಯೇ ಜೀವಿಸುತ್ತ ಜೀವಿಸುತ್ತ ಹೋದರು... ಅವರ ಮಗ ಬೆಳೆದು ದೊಡ್ಡವನಾದ. ಅವನು ಹೇಳಿದ:

"ಅಪ್ಪ, ನೀನು ನನ್ನನ್ನು ಹಾವಿಗೆ ಕೊಡುತ್ತೇನೆ ಅಂತ ಮಾತು ಕೊಟ್ಟಿರುವೆಯಂತೆ. ನಾನು ಅದರ ಬಳಿಗೆ ಹೋಗುತ್ತೇನೆ. ಆದದ್ದಾಗಲಿ!"

ಅವನು ಹಾವಿನ ಬಳಿಗೆ ಹೋದ. ಅದು ಅವನಿಗೆ ಹೇಳಿತು:

"ನಾನು ನಿನಗೆ ಮೂರು ಕೆಲಸ ಕೊಡುತ್ತೇನೆ. ಮಾಡಿದರೆ ಮನೆಗೆ ಹೋಗಬಹುದು. ಮಾಡದಿದ್ದರೆ, ನಾನು ನಿನ್ನನ್ನು ತಿಂದು ಹಾಕುತ್ತೇನೆ!"

ಹಾವಿನ ಮನೆಯ ಸುತ್ತ ಒಂದು ಭಾರಿ ಕಾಡು ಹರಡಿತ್ತು. ಅದು ನೋಟ ನಿಲುಕುವವರೆಗೂ ಹರಡಿತ್ತು.

ಹಾವು ಅವನಿಗೆ ಹೇಳಿತು:

"ಈ ಕಾಡು ಕಾಣುತ್ತಲ್ಲ. ನೀನು ಇದರಲ್ಲಿನ ಮರಗಳನ್ನೆಲ್ಲ ಕಡಿದು ಹಾಕಿ, ಉತ್ತು, ಗೋಧಿ ಬಿತ್ತಿ, ಕಟಾವು ಮಾಡಿ, ರಾಶಿ ಹಾಕಬೇಕು. ಎಲ್ಲವನ್ನೂ ಒಂದೇ ರಾತ್ರಿಯೊಳಗೆ ಮಾಡಿ ಮುಗಿಸ ಬೇಕು. ಆಮೇಲೆ ಇದೇ ಗೋಧಿಯಿಂದ ಬ್ರೆಡ್ ಮಾಡಿ ನಾಳೆ ಬೆಳಿಗ್ಗೆ ನಾನು ಏಳುವ ಹೊತ್ತಿಗೆ ನನ್ನ ಉಪಾಹಾರದ ಮೇಜಿನ ಮೇಲಿರಿಸಬೇಕು !"

ಬೇಟೆಗಾರನ ಮಗ ದುಃಖದಿಂದ ತಲೆ ತಗ್ಗಿಸಿಕೊಂಡು ನಡೆದು ಹೋದ. ಅಲ್ಲೇ ಹತ್ತಿರದಲ್ಲಿ ಒಂದು ಕಲ್ಲಿನ ಸ್ತಂಭ ನಿಂತಿತ್ತು. ಆ ಸ್ತಂಭದಲ್ಲಿ ಹಾವಿನ ಹೆಣ್ಣುಮರಿ ಕಲ್ಲಾಗಿ ನಿಂತಿತ್ತು. ಅವನು ಈ ಸ್ತಂಭದ ಬಳಿ ಹೋಗಿ ಅದಕ್ಕೆ ಒರಗಿ ಕುಳಿತು ಅಳ ತೊಡಗಿದ. ಹಾವಿನ ಹೆಣ್ಣುಮರಿ ಅವನನ್ನು ಕೇಳಿತು:

"ಯಾತಕ್ಕೆ ಅಳುತ್ತಿದ್ದೀಯ ?"

ಅವನು ಹೇಳಿದ:

"ಅಳದೆ ಏನು ಮಾಡಲಿ ! ಹಾವು ನನಗೆ ಎಂಥ ಕೆಲಸ ಕೊಟ್ಟಿದೆ ಎಂದರೆ ನಾನು ಅದನ್ನು ನನ್ನ ಜೀವಮಾನದಲ್ಲೇ ಮಾಡಲಾರೆ. ಮತ್ತೆ ಒಂದು ರಾತ್ರಿಯಲ್ಲೇ ಮಾಡಬೇಕು ಅಂದರೆ ಹೇಗಾ ಗುತ್ತೆ ?"

ಅದು ಮತ್ತೆ ಅವನನ್ನು ಕೇಳಿತು:

"ಯಾವ ಕೆಲಸವನ್ನು ಅದು ನಿನಗೆ ಕೊಟ್ಟಿರೋದು ?"

ಅವನು ಅದಕ್ಕೆ ಎಲ್ಲವನ್ನೂ ಹೇಳಿದ. ಆಗ ಅದು ಹೇಳಿತು:

"ನನ್ನನ್ನು ಮದುವೆ ಆಗ್ತೀಯ ? ನಾನು ಎಲ್ಲವನ್ನೂ ಸಕಾಲದಲ್ಲಿ ಮಾಡಿ ಮುಗಿಸುತ್ತೇನೆ !"

ಅವನು ಹೇಳಿದ:

"ಆಗಲಿ."

ಅದು ಹೇಳಿತು: "ಸರಿ, ಈಗ ಹೋಗಿ ಮಲಗು. ಬೆಳಿಗ್ಗೆ ಬೇಗ ಎದ್ದು ಬಾ. ಹಾವಿಗೆ ಬ್ರೆಡ್ ತೆಗೆದುಕೊಂಡು ಹೋಗಿ ಕೊಡುವಿಯಂತೆ."

ಬೇಟೆಗಾರನ ಮಗ ಮಲಗಲು ಮನೆಗೆ ಹೋದ. ಹಾವಿನ ಹೆಣ್ಣುಮರಿ ಕಾಡಿಗೆ ಹೋಗಿ ಶಿಳ್ಳೆ ಹಾಕಿತು – ಕೂಡಲೇ ಕಾಡಿನ ಮರಗಳು ಚಟಚಟನೆ ಮುರಿದು ಬಿದ್ದವು, ಹೊಲ ನಿರ್ಮಿತ ವಾಯಿತು, ಗೋಧಿ ಬೆಳೆ ಬೆಳೆಯಿತು. ಅರುಣೋದಯವಿನ್ನೂ ಆಗಿರಲಿಲ್ಲ ಆಗಲೇ ಬ್ರೆಡ್ ಸಿದ್ಧವಾಗಿತ್ತು. ಬೇಟೆಗಾರನ ಮಗ ಅದನ್ನು ಹಾವಿನ ಗುಡಿಸಿಲಿಗೆ ಕೊಂಡೊಯ್ದು ಅದರ ಬೆಳ ಗಿನ ಉಪಾಹಾರದ ಮೇಜಿನ ಮೇಲಿರಿಸಿದ.

ಹಾವು ಎಚ್ಚರಗೊಂಡಿತು, ಅಂಗಳಕ್ಕೆ ಬಂದಿತು. ನೋಡಿತು – ಕಾಡಿದ್ದ ಸ್ಥಳದಲ್ಲಿ ವಿಶಾಲ ವಾದ ಹೊಲವಿತ್ತು. ಅದರಲ್ಲಿ ಕಟಾವಾದನಂತರದ ಗೋಧಿ ಪೈರಿನ ಮೋಟುಗಳಿದ್ದವು. ಇನ್ನೊಂದು ಕಡೆ ಗೋಧಿ ರಾಶಿ ಹಾಕಲಾಗಿತ್ತು. ಆಗ ಅದು ಹೇಳಿತು:

"ಸರಿ, ನಾನು ಹೇಳಿದ ಹಾಗೆಯೇ ಮಾಡಿದ್ದೀಯ. ಆದರೆ ನೋಡು ಇನ್ನೊಂದು ಕೆಲಸ ವನ್ನೂ ಮಾಡಬೇಕು. ಈ ಬೆಟ್ಟದಲ್ಲಿ ನೀನೊಂದು ಸುರಂಗ ತೋಡಬೇಕು. ಆ ಸುರಂಗದ ಮೂಲಕ ದ್ನೀಪರ್ ನದಿ ಹರಿಯುವಂತಾಗಬೇಕು. ನದಿಯ ಬಳಿ ಗೋಧಿ ಕಣಜಗಳನ್ನು ಕಟ್ಟಬೇಕು. ನದಿಯ ಮೂಲಕ ಹಡಗುಗಳು ಇಲ್ಲಿಗೆ ಬರುವಂತಾಗಬೇಕು. ನೀನು ಈ ಗೋಧಿಯನ್ನೆಲ್ಲ ಆ ಹಡಗುಗಳಿಗೆ ಮಾರಬೇಕು. ನಾನು ಬೆಳಿಗ್ಗೆ ಏಳುವುದರೊಳಗೆ ಇದೆಲ್ಲ ಆಗಿರಬೇಕು !"

ಅವನು ಮತ್ತೆ ಆ ಕಲ್ಲಿನ ಸ್ತಂಭದ ಬಳಿಗೆ ಹೋಗಿ ಗಟ್ಟಿಯಾಗಿ ಅಳುತ್ತ ನಿಂತ. ಹಾವಿನ ಹೆಣ್ಣುಮರಿ ಮತ್ತೆ ಕೇಳಿತು:

"ಯಾಕೆ ಅಳುತ್ತಿದ್ದೀಯ ?"

ಹಾವು ಅವನಿಗೆ ಏನೇನು ಮಾಡಬೇಕೆಂದು ಹೇಳಿದ್ದಿತೋ ಅದೆಲ್ಲವನ್ನೂ ಅವನು ಅದಕ್ಕೆ ಹೇಳಿದ.

ಅದು ಅವನಿಗೆ ಹೇಳಿತು:

"ನೀನು ಮಲಗಲು ಹೋಗು. ಎಲ್ಲವೂ ಹೇಳಿದ ಹಾಗೆ ಮಾಡಲ್ಪಟ್ಟಿರುತ್ತೆ."

ಅದು ಹಿಂದಿನಂತೆಯೇ ಶಿಳ್ಳೆ ಹಾಕಿತು. ಬೆಟ್ಟದಲ್ಲಿ ಸುರಂಗವಾಯಿತು. ದ್ನೀಪರ್ ನದಿ ಅದರ ಮೂಲಕ ಹರಿಯ ತೊಡಗಿತು. ಅದರ ದಡಗಳ ಮೇಲೆ ಗೋಧಿಯ ಕಣಜಗಳು ನಿರ್ಮಿತ ವಾದವು. ಆಗ ಅದು ಅವನನ್ನು ಎಚ್ಚರಿಸಲು ಹೋಯಿತು – ಅವನು ಹಡಗುಗಳಲ್ಲಿ ಬಂದ ವರ್ತ ಕರಿಗೆ ಗೋಧಿ ಮಾರಲೆಂದು.

ಹಾವು ಬೆಳಿಗ್ಗೆ ಎದ್ದಿತು. ಎಲ್ಲವೂ ತಾನು ಹೇಳಿದ್ದಂತೆ ಮಾಡಲ್ಪಟ್ಟಿರುವುದನ್ನು ಕಂಡು ಆಶ್ಚರ್ಯಪಟ್ಟಿತು.

ಆಗ ಅದು ಅವನಿಗೆ ಮೂರನೆಯ ಕೆಲಸವನ್ನು ನೀಡಿತು:

"ಈ ರಾತ್ರಿ ನೀನು ಚಿನ್ನದ ಮೊಲವನ್ನು ಹಿಡಿದು ಹೊತ್ತು ಮೂಡುತ್ತಿದ್ದಂತೆಯೇ ನನ್ನ ಗುಡಿಸಿಲಿಗೆ ತಂದುಕೊಡಬೇಕು !"

ಅವನು ಮತ್ತೆ ಆ ಕಲ್ಲಿನ ಸ್ತಂಭದ ಬಳಿಗೆ ಹೋಗಿ ಅಳ ತೊಡಗಿದ. ಹಾವಿನ ಹೆಣ್ಣುಮರಿ ಅವನನ್ನು ಕೇಳಿತು:

"ಏನು ಆಜ್ಞೆ ಕೊಟ್ಟಿದೆ ?"

ಅವನು ಹೇಳಿದ: "ಚಿನ್ನದ ಮೊಲವನ್ನು ಹಿಡಿದು ತಾ ಅಂತ ಆಜ್ಞಾಪಿಸಿದೆ."

ಆಗ ಅದು ಹೇಳಿತು: "ಓಹ್, ಇದು ತುಂಬ ಕಷ್ಟದ ಕಾರ್ಯಭಾರ. ಯಾರು ಅದನ್ನು ತಿಳಿದಿದ್ದಾರೆ, ಯಾರು ಅದನ್ನು ಹಿಡಿಯಬಲ್ಲರು ! ಆದರೆ ವಿಧಿಯಿಲ್ಲ, ಮಾಡಲೇ ಬೇಕು. ಬಾ, ಆ ಬಂಡೆಯ ಬಳಿಗೆ ಹೋಗೋಣ."

ಅವರು ಅಲ್ಲಿಗೆ ಹೋದರು. ಅದು ಹೇಳಿತು:

"ನೀನು ಆ ಬಿಲದ ಬಳಿ ನಿಂತಿರು. ನಾನು ಅದನ್ನು ಹೊರಕ್ಕೆ ಓಡಿಸುತ್ತೇನೆ. ನೀನು ಅದನ್ನು ಹಿಡಿಯಬೇಕು. ನೋಡು, ಆ ಬಿಲದಿಂದ ಹೊರಕ್ಕೆ ಏನು ಬಂದರೂ ಸರಿ ನೀನು ಅದನ್ನು ಹಿಡಿಯಬೇಕು. ಅದೇ ಚಿನ್ನದ ಮೊಲವಾಗಿರುತ್ತೆ !"

ಅದು ಹೋಗಿ ಮೊಲವನ್ನು ಬಿಲದಿಂದ ಹೊರಕ್ಕೆ ಓಡಿಸಿತು. ಆಗ ಬಿಲದಿಂದ ಒಂದು ವಿಷಸರ್ಪ ಬುಸುಗುಟ್ಟಿಕೊಂಡು ಹೊರಬಂದಿತು. ಅವನು ಅದನ್ನು ಬಿಟ್ಟುಬಿಟ್ಟ. ಹಾವಿನ ಹೆಣ್ಣು ಮರಿ ಬಿಲದಿಂದ ಹೊರಬಂದು ಅವನನ್ನು ಕೇಳಿತು:

"ಬಿಲದಿಂದ ಯಾರೂ ಹೊರಬರಲಿಲ್ಲವೇ ?"

"ಬಂದಿತು. ಒಂದು ವಿಷಸರ್ಪ ಹೊರಬಂದಿತು. ನಾನು ಭಯಪಟ್ಟು ಅದನ್ನು ಬಿಟ್ಟುಬಿಟ್ಟೆ."

ಅದು ಅವನಿಗೆ ಹೇಳಿತು:

"ನೀನು ಎಂಥವನು ! ಅದೇ ಚಿನ್ನದ ಮೊಲ. ಹೋಗಲಿ, ನೋಡು. ನಾನು ಮತ್ತೆ ಹೋಗ್ತೀನಿ. ಯಾರಾದರೂ ಬಿಲದಿಂದ ಹೊರಬಂದು ಅಲ್ಲಿ ಚಿನ್ನದ ಮೊಲ ಇಲ್ಲ ಅಂತ ಹೇಳಿದರೆ ನೀನು ನಂಬಬೇಡ. ಅದನ್ನೇ ಹಿಡಿದು ಇರಿಸಿಕೋ."

ಅದು ಬಿಲದೊಳಗೆ ಹೋಗಿ ಮತ್ತೆ ಚಿನ್ನದ ಮೊಲವನ್ನು ಹೊರಕ್ಕೆ ಅಟ್ಟಿತು. ಬಿಲದಿಂದ ಎಂತಹ ಹಣ್ಣುಹಣ್ಣು ಮುದುಕಿ ಹೊರಬಂದಳೋ ಹೇಳುವುದು ಕಷ್ಟ. ಅವಳು ಹುಡುಗನನ್ನು ಕೇಳಿದಳು:

"ಇಲ್ಲಿ ನೀನು ಯಾರಿಗಾಗಿ ಕಾಯುತ್ತಿದ್ದೀಯ, ಮಗು ?"

ಅವನು ಅವಳಿಗೆ ಹೇಳಿದ: "ಚಿನ್ನದ ಮೊಲಕ್ಕೆ."

ಅವಳು ಅವನಿಗೆ ಹೇಳಿದಳು: "ಅದು ಇಲ್ಲಿ ಯಾಕೆ ಇರುತ್ತೆ? ನೀನು ವ್ಯರ್ಥವಾಗಿ ಕಾಯುತ್ತಿದ್ದೀಯ."

ಹಾಗೆಂದು ಅವಳು ಅವನಿಂದ ದೂರ ಹೊರಟು ಹೋದಳು. ಹಾವಿನ ಹೆಣ್ಣುಮರಿ ಬಿಲದಿಂದ ಹೊರಬಂದು ಹುಡುಗನನ್ನು ಕೇಳಿತು:

"ಏನು ಮೊಲವನ್ನು ಹಿಡಿಯಲಿಲ್ಲವೇ? ಯಾರೂ ಬಿಲದಿಂದ ಹೊರಬರಲಿಲ್ಲವೇ ?"

ಅವನು ಹೇಳಿದ: "ಒಬ್ಬ ಹಣ್ಣುಹಣ್ಣು ಮುದುಕಿ ಹೊರಬಂದಳು. ನಾನು ಯಾರಿಗಾಗಿ ಕಾಯುತ್ತಿದ್ದೇನೆ ಅಂತ ಕೇಳಿದಳು. ಚಿನ್ನದ ಮೊಲಕ್ಕೆ ಅಂತ ನಾನು ಹೇಳಿದೆ. ಅದು ಇಲ್ಲಿ ಇಲ್ಲ ಎಂದು ಅವಳು ಹೇಳಿದಳು. ನಾನು ಅವಳನ್ನು ಬಿಟ್ಟುಬಿಟ್ಟೆ."

ಆಗ ಅದು ಹೇಳಿತು:

"ಏನು ಮಾಡಿಬಿಟ್ಟೆ ನೀನು! ಆ ಮುದುಕಿಯೇ ಚಿನ್ನದ ಮೊಲ. ಇನ್ನು ನೀನು ಅದನ್ನು ಎಲ್ಲೂ ಕಂಡುಹಿಡಿಯಲಾರೆ. ಈಗ ಹೀಗೆ ಮಾಡೋಣ. ನಾನೇ ಚಿನ್ನದ ಮೊಲದ ರೂಪ ತಾಳುತ್ತೇನೆ. ನೀನು ನನ್ನನ್ನು ಹಾವಿನ ಮೇಜಿನ ಮೇಲೆ ಇರಿಸು. ಹಾವಿನ ಕೈಗೆ ಮಾತ್ರ ಕೊಡಬೇಡ. ಹಾಗೆ ಮಾಡಿದರೆ ಅದು ತಿಳಿದುಬಿಟ್ಟು ನಿನ್ನನ್ನೂ ನನ್ನನ್ನೂ ಕೊಂದು ಹಾಕುತ್ತೆ."

ಅದು ಹಾಗೆಯೇ ಮಾಡಿತು – ಚಿನ್ನದ ಮೊಲದ ರೂಪ ತಾಳಿತು. ಅವನು ಅದನ್ನು ಎತ್ತಿಕೊಂಡು ಹೋಗಿ ಹಾವಿನ ಮುಂದೆ ಮೇಜಿನ ಮೇಲೆ ಇರಿಸಿ ಹೇಳಿದ:

"ಇಲ್ಲಿದೆ ನೋಡು, ಚಿನ್ನದ ಮೊಲ. ನಾನಿನ್ನು ಹೊರಡುತ್ತೇನೆ."

"ಹುಂ. ಹೋಗು" ಅದು ಹೇಳಿತು.

ಅವನು ಹೊರಟು ಹೋದ.

ಹಾವು ಗುಡಿಸಿಲಿನಿಂದ ಹೊರಕ್ಕೆ ಹೋದುದೇ ತಡ ಮೊಲ ಸುಂದರ ಯುವತಿಯ ರೂಪ ತಳೆಯಿತು. ಅವಳು ಹೊರಕ್ಕೆ ಓಡಿ ಹೋಗಿ ಯುವಕನ ಜೊತೆ ಕೂಡಿಕೊಂಡಳು. ಅವರಿಬ್ಬರೂ ಜೊತೆಯಾಗಿ ಓಡ ತೊಡಗಿದರು. ಈ ಮಧ್ಯೆ ಹಾವು ತನ್ನ ಗುಡಿಸಿಲಿಗೆ ಹಿಂದಿರುಗಿತು. ನೋಡಿತು – ಮೊಲ ಇಲ್ಲವೇ ಇಲ್ಲ. ತಾನು ಮೋಸಮಾಡಲ್ಪಟ್ಟಿದ್ದಿತೆಂದು ಅದಕ್ಕೆ ಅರಿವಾಯಿತು. ಕೂಡಲೇ ಅವರನ್ನು ಹಿಡಿದು ತರುವಂತೆ ತನ್ನ ಗಂಡನನ್ನು ಕಳುಹಿಸಿಕೊಟ್ಟಿತು. ಅವರ ಓಟದ ಆರ್ಭಟಕ್ಕೆ ಭೂಮಿ ನಡುಗಿತು, ಗುಡುಗುಟ್ಟಿತು... ಆಗ ಹಾವಿನ ಹೆಣ್ಣುಮರಿ ಹೇಳಿತು:

"ಓಹ್, ಅವನು ನಮ್ಮನ್ನು ಅಟ್ಟಿಸಿಕೊಂಡು ಬರುತ್ತಿದ್ದಾನೆ! ನಾನು ನನ್ನನ್ನು ಒಂದು ಗೋಧಿ ಹೊಲವನ್ನಾಗಿ ಪರಿವರ್ತಿಸಿಕೊಳ್ಳುತ್ತೇನೆ. ನಿನ್ನನ್ನು ಒಬ್ಬ ಮುದುಕನನ್ನಾಗಿ ಪರಿವರ್ತಿಸುತ್ತೇನೆ. ಅವನು ಬಂದು 'ಒಬ್ಬ ಹುಡುಗ, ಒಬ್ಬ ಹುಡುಗಿ ಓಡಿ ಬಂದುದನ್ನು ನೋಡಿದೆಯಾ?' ಎಂದು ಕೇಳಿದಲ್ಲಿ ನೀನು, 'ಹೌದು, ನೋಡಿದೆ. ಅದು ತುಂಬ ಹಿಂದೆ, ಈ ಗೋಧಿ ಬೆಳೆಗೆ ಬೀಜ ಬಿತ್ತುತ್ತಿದ್ದಾಗ' ಅಂತ ಹೇಳು."

ಹಾವಿನ ಗಂಡ ಅಟ್ಟಿಸಿಕೊಂಡು ಬಂದು ಅಲ್ಲಿದ್ದ ಮುದುಕನನ್ನು ಕೇಳಿತು: "ನೀನು ನೋಡಲಿಲ್ಲವೇ, ಮುದುಕಪ್ಪ, ಈ ಕಡೆ ಒಬ್ಬ ಹುಡುಗಿ, ಒಬ್ಬ ಹುಡುಗ ಓಡಿ ಹೋದುದನ್ನು?"

ಅವನು ಹೇಳಿದ: "ಹೌದು, ಓಡಿ ಹೋದರು."

ಅದು ಕೇಳಿತು: "ತುಂಬ ಹಿಂದೆಯೇ?"

ಅವನು ಹೇಳಿದ: "ಹೌದು. ಈ ಗೋಧಿ ಬೆಳೆಯ ಬೀಜ ಬಿತ್ತುತ್ತಿದ್ದಾಗ."

ಹಾವಿನ ಗಂಡ ಹೇಳಿತು: "ಅಯ್ಯೋ, ಈ ಗೋಧಿ ಆಗಲೇ ಮಾಗಿ ಕಟಾವಿಗೆ ಬಂದಿದೆ. ಆದರೆ ಅವರು ನಿನ್ನೆಯಷ್ಟೆ ಓಡಿ ಹೋದುದು!"

ಹಾವಿನ ಗಂಡ ಹಿಂದಿರುಗಿತು. ಹಾವಿನ ಹೆಣ್ಣುಮರಿ ಮತ್ತೆ ತನ್ನನ್ನು ಹುಡುಗಿಯನ್ನಾಗಿ ಪರಿವರ್ತಿಸಿಕೊಂಡಿತು. ಮುದುಕನನ್ನು ಹುಡುಗನನ್ನಾಗಿ ಮಾಡಿತು. ಇಬ್ಬರೂ ಓಡ ತೊಡಗಿದರು.

ಹಾವಿನ ಗಂಡ ಮನೆಗೆ ಹಿಂದಿರುಗಿತು. ಅದರ ಹೆಂಡತಿ ಕೇಳಿತು:

"ಏನು ಸಿಗಲಿಲ್ಲವೇ? ದಾರಿಯಲ್ಲಿ ಯಾರನ್ನೂ ನೀನು ಸಂಧಿಸಲಿಲ್ಲವೇ?"

ಅದು ಹೇಳಿತು: "ಹೌದು ಸಂಧಿಸಿದೆ, ಒಬ್ಬ ಮುದುಕಪ್ಪನನ್ನು. ಅವನು ಗೋಧಿ ಹೊಲ ಕಾಯುತ್ತಿದ್ದ. ಹುಡುಗ, ಹುಡುಗಿ ಓಡಿ ಹೋದುದನ್ನು ಕಂಡೆಯಾ ಅಂತ ಕೇಳಿದೆ. 'ಕಂಡೆ, ಆದರೆ ಈ ಗೋಧಿ ಬೀಜ ಬಿತ್ತನೆ ಮಾಡುತ್ತಿದ್ದಾಗ' ಅಂತ ಹೇಳಿದ. ಗೋಧಿ ಆಗಲೇ ಮಾಗಿ ಕಟಾವಿಗೆ ನಿಂತಿತ್ತು. ಅದಕ್ಕೇ ನಾನು ಹಿಂದಿರುಗಿ ಬಂದೆ."

ಹಾವಿನ ಹೆಂಡತಿ ಹೇಳಿತು: "ಅಯ್ಯೋ, ನೀನು ಏನು ಮಾಡಿಬಿಟ್ಟೆ! ಅವರೇ ಅವರಾಗಿದ್ದರು! ಬೇಗ ಓಡು ಮತ್ತೆ ಅವರ ಹಿಂದೆ!"

ಹಾವಿನ ಗಂಡ ಹಾರಿ ಹೋಗುತ್ತೆ. ಅದರ ಓಟದ ಆರ್ಭಟಕ್ಕೆ ಭೂಮಿ ನಡುಗುತ್ತೆ, ಗುಡುಗುತ್ತೆ. ಹಾವಿನ ಹೆಣ್ಣುಮರಿ ಬೇಟೆಗಾರನ ಮಗನಿಗೆ ಹೇಳಿತು:

"ನಾನು ನನ್ನನ್ನು ಒಂದು ಹಳೆಯ ಕೋಟೆಯನ್ನಾಗಿ ಪರಿವರ್ತಿಸಿಕೊಳ್ಳುತ್ತೇನೆ. ನಿನ್ನನ್ನು ಒಬ್ಬ ಸೈನಿಕನನ್ನಾಗಿ ಪರಿವರ್ತಿಸುತ್ತೇನೆ. ಹಾವಿನ ಗಂಡ ಬಂದು 'ಅಂಥವರನ್ನು ಕಂಡೆಯಾ?' ಅಂತ ಕೇಳಿದರೆ, 'ಕಂಡೆ, ಆದರೆ ಈ ಕೋಟೆಯನ್ನು ಕಟ್ಟುತ್ತಿದ್ದಾಗ' ಅಂತ ಹೇಳು."

ಹಾವಿನ ಗಂಡ ಹಾರಿ ಬಂದಿತು. ಈ ಸೈನಿಕನನ್ನು ಕೇಳಿತು:

"ಒಬ್ಬ ಹುಡುಗಿ, ಒಬ್ಬ ಹುಡುಗ ಈ ಕಡೆ ಓಡಿ ಬಂದುದನ್ನು ನೀನೇನಾದರೂ ಕಂಡೆಯಾ, ಸೈನಿಕ?"

ಸೈನಿಕ ಹೇಳಿದ: "ಕಂಡೆ. ಆದರೆ ಈ ಕೋಟೆ ಕಟ್ಟುತ್ತಿದ್ದಾಗ."

ಹಾವಿನ ಗಂಡ ಹೇಳಿತು: "ಹೌದೆ? ಅವರು ನಿನ್ನೆಯಷ್ಟೆ ಓಡಿ ಹೋದದ್ದು. ಈ ಕೋಟೆಯನ್ನು ಕಟ್ಟಿ ಬಹಳ ಕಾಲವೇ ಆಗಿರಬೇಕು."

ಹಾಗೆ ಹೇಳಿ ಅದು ಮನೆಗೆ ಹಿಂದಿರುಗಿತು.

ಮನೆಗೆ ಹಿಂದಿರುಗಿದ್ದೇ ಅದು ತನ್ನ ಹೆಂಡತಿಗೆ ವರದಿ ಮಾಡಿತು:

"ಒಬ್ಬ ಸೈನಿಕನನ್ನು ಕಂಡೆ, ಒಂದು ಹಳೆಯ ಕೋಟೆಯ ಬಳಿ. ನಾನು ಅವನನ್ನು ಕೇಳಿದೆ. ಅವನು ಹೇಳಿದ, ಆ ಕೋಟೆ ಕಟ್ಟುತ್ತಿದ್ದಾಗ ಕಂಡ ಅಂತ. ಕೋಟೆ ತುಂಬ ಹಳೆಯದಾಗಿತ್ತು. ಯಾವಾಗ ಕಟ್ಟಿದ್ದೋ. ಅವರು ನಿನ್ನೆಯಷ್ಟೆ ಓಡಿ ಹೋದದ್ದು."

ಆಗ ಹಾವಿನ ಹೆಂಡತಿ ಹೇಳಿತು:

"ನೀನು ಯಾಕೆ ಆ ಸೈನಿಕನನ್ನು ಕೊಲ್ಲಲಿಲ್ಲ? ಆ ಕೋಟೆಯನ್ನು ಯಾಕೆ ಪುಡಿಪುಡಿ ಮಾಡ ಲಿಲ್ಲ? ಅದು ಅವರೇ! ಈಗ ನಾನೇ ಹೋಗಿ ಹಿಡಿಯಬೇಕು ಅಂತ ಕಾಣುತ್ತೆ!"

ಹಾಗೆಂದು ಅದು ಓಡಿತು.

ಓಡಿತು, ಓಡಿತು... ಭೂಮಿ ನಡುಗುತ್ತೆ, ಗುಡುಗುತ್ತೆ. ಹಾವು ಕೆಂಪಗೆ ಕಾಯುತ್ತೆ. ಹಾವಿನ ಹೆಣ್ಣುಮರಿ ಹೇಳುತ್ತೆ:

"ಅಯ್ಯೋ, ಇನ್ನು ನಾವು ಸಿಕ್ಕಿಬಿದ್ದೆವು ಅಂತಲೇ! ಹಾವೇ ಹಾರಿ ಬರುತ್ತಿದೆ! ನಾನು ನಿನ್ನನ್ನು ಒಂದು ನದಿಯನ್ನಾಗಿ ಪರಿವರ್ತಿಸುತ್ತೇನೆ. ನಾನು ಪೆರ್ಚ್ ಮೀನು ಆಗುತ್ತೇನೆ."

ಅದು ಹಾಗೇ ಮಾಡಿತು.

ಹಾವು ಹಾರಿ ಬಂದಿತು. ನದಿಯನ್ನು ಕಂಡು ಕೇಳಿತು:

"ಏನು? ತಪ್ಪಿಸಿಕೊಂಡೆವು ಅಂದುಕೊಂಡು ಬಿಟ್ಟಿರಾ?"

ಅದು ಪೈಕ್ ಮೀನಾಗಿ ಪೆರ್ಚ್ ಮೀನನ್ನು ಅಟ್ಟಿಸಿಕೊಂಡು ಹೋಯಿತು. ಇನ್ನೇನು ಹಿಡಿ ಯಿತು ಅನ್ನುವಾಗಲೆಲ್ಲ ಪೆರ್ಚ್ ಮೀನು ತನ್ನ ಚೂಪು ತುದಿಯ ಈಜುರೆಕ್ಕೆಗಳನ್ನು ಅದರ ಕಡೆಗೆ ತಿರುಗಿಸುತ್ತಿತ್ತು. ಹಾಗಾಗಿ ಅದು ಪೆರ್ಚ್ ಮೀನನ್ನು ಹಿಡಿಯಲು ಆಗುತ್ತಿರಲಿಲ್ಲ. ಅಟ್ಟಿಸಿ ಕೊಂಡು ಹೋಯಿತು, ಅಟ್ಟಿಸಿಕೊಂಡು ಹೋಯಿತು. ಆದರೂ ಹಿಡಿಯಲು ಆಗಲಿಲ್ಲ. ನದಿಯ ನೀರನ್ನೆಲ್ಲ ಕುಡಿದು ಬಿಡೋಣ ಅಂತ ಯೋಚಿಸಿತು. ಕುಡಿಯಿತು, ಕುಡಿಯಿತು. ಅದರ ಹೊಟ್ಟೆ ಊದಿಕೊಂಡು ಸಿಡಿಯಿತು. ಅದು ಸತ್ತು ಬಿದ್ದಿತು.

ಆಗ ಮೀನಾಗಿದ್ದ ಹುಡುಗಿ ನದಿಯಾಗಿದ್ದ ಹುಡುಗನಿಗೆ ಹೇಳಿದಳು:

"ಇನ್ನು ನಾವು ಹೆದರಬೇಕಾಗಿಲ್ಲ. ನಿನ್ನ ತಂದೆ ತಾಯಿಯ ಬಳಿಗೆ ಹೋಗೋಣ. ಆದರೆ ಒಂದು ವಿಷಯ ಮಾತ್ರ ನೆನಪಿನಲ್ಲಿಟ್ಟಿರು: ಮನೆಯ ಒಳಗೆ ಹೋದಾಗ ಎಲ್ಲರಿಗೂ ಮುತ್ತು ಕೊಡು, ಆದರೆ ನಿನ್ನ ಚಿಕ್ಕಪ್ಪನ ಮಗುವನ್ನು ಮಾತ್ರ ಚುಂಬಿಸಬೇಡ. ಏಕೆಂದರೆ ನೀನು ಅವನ್ನು ಚುಂಬಿಸಿದರೆ ನನ್ನನ್ನು ಸಂಪೂರ್ಣವಾಗಿ ಮರೆತು ಬಿಡುತ್ತೀಯ. ನಾನು ಬೇರೆ ಯಾರ ಬಳಿಯಾ ದರೂ ಕೆಲಸಕ್ಕೆ ಇರಬೇಕಾಗುತ್ತೆ."

ಅವನು ಮನೆಯ ಒಳ ಹೋದ. ಎಲ್ಲರನ್ನೂ ಚುಂಬಿಸಿ ನಮಸ್ಕರಿಸಿದ. ಆಮೇಲೆ ತನ್ನಲ್ಲೇ ಹೇಳಿಕೊಂಡ: "ಚಿಕ್ಕಪ್ಪನ ಮಗುವನ್ನು ಚುಂಬಿಸದೆ ಇದ್ದರೆ ಹೇಗೆ? ಅವರು ನನ್ನ ಬಗೆಗೆ ತಪ್ಪು ತಿಳಿಯಬಹುದು." ಹಾಗೆಂದುಕೊಂಡು ಅವನು ಚಿಕ್ಕಪ್ಪನ ಮಗುವಿನ ಬಳಿಗೂ ಹೋಗಿ ಚುಂಬಿಸಿದ. ಅವನು ಚುಂಬಿಸಿದನೋ ಇಲ್ಲವೋ ಹುಡುಗಿಯ ವಿಷಯವನ್ನು ಸಂಪೂರ್ಣವಾಗಿ ಮರೆತ.

ತುಂಬ ಸಮಯವೋ, ಸ್ವಲ್ಪ ಸಮಯವೋ, ಅಂತೂ ಕಳೆಯಿತು. ಹುಡುಗ ಮದುವೆಯಾಗ ಬೇಕು ಅಂತ ಯೋಚಿಸಿದ. ಅವನಿಗಾಗಿ ಒಬ್ಬ ಸುಂದರ ಕನ್ಯೆಯನ್ನು ಕರೆತಂದರು. ಹಾವಿನ ಹಿಡಿತ ದಿಂದ ಸಂರಕ್ಷಿಸಿದ ಯುವತಿಯ ವಿಷಯವನ್ನು ಸಂಪೂರ್ಣವಾಗಿ ಮರೆತು ಅವನು ಈ ಯುವತಿ ಯನ್ನು ಪ್ರೀತಿಸ ತೊಡಗಿದ.

ಮದುವೆಯ ಸಮಾರಂಭಕ್ಕೆ ಮುನ್ನ ಒಂದು ದಿನ ಸಂಜೆ ಆ ಗ್ರಾಮದ ಯುವತಿಯರನ್ನೆಲ್ಲ ಔತಣಕ್ಕೆ ಆಹ್ವಾನಿಸಲಾಯಿತು. ಅವನು ಹಾವಿನಿಂದ ತಪ್ಪಿಸಿಕೊಂಡು ಯಾವ ಯುವತಿಯ ಜೊತೆ ಓಡಿ ಬಂದನೋ ಆ ಯುವತಿಯನ್ನೂ ಆಹ್ವಾನಿಸಲಾಯಿತು. ಆದರೆ ಅವಳು ಯಾರು, ಎಲ್ಲಿಂದ ಬಂದಳು ಅನ್ನುವುದು ಯಾರಿಗೂ ತಿಳಿದಿರಲಿಲ್ಲ. ಎಲ್ಲರೂ ಸಂತೋಷದಿಂದ ಹಾಡಿದರು, ಆಟ ಆಡಿದರು. ಹಿಟ್ಟಿನಿಂದ ತರಹೇವಾರಿ ಬೊಂಬೆಗಳನ್ನು ಮಾಡಿದರು. ಹಾವಿನ ಮಗಳು ಹಿಟ್ಟಿನಿಂದ ಒಂದು ಹೆಣ್ಣು ಒಂದು ಗಂಡು ಪಾರಿವಾಳಗಳನ್ನು ಮಾಡಿ ಅವುಗಳನ್ನು ಮೇಲಕ್ಕೆ ಎಸೆದಳು. ಅವು ಜೀವ ತಳೆದು ಹಾರಾಡ ತೊಡಗಿದವು. ಹೆಣ್ಣುಪಾರಿವಾಳ ಗಂಡುಪಾರಿವಾಳಕ್ಕೆ ಹೇಳಿತು:

"ಏನು ನೀನು ಮರೆತು ಬಿಟ್ಟೆಯಾ, ಹೇಗೆ ನಾನು ನಿನಗಾಗಿ ಒಂದು ಇಡೀ ಕಾಡನ್ನು ಕಡಿದು ಹಾಕಿ, ಅಲ್ಲಿ ಗೋಧಿ ಬೆಳೆದು, ಆದರಿಂದ ಬ್ರೆಡ್ ಮಾಡಿ, ಅದನ್ನು ನೀನು ಹಾವಿಗೆ ತೆಗೆದುಕೊಂಡು ಹೋಗಿ ಕೊಡುವುದಕ್ಕೆ ನೆರವಾದೆ, ಅನ್ನುವುದನ್ನು?"

ಗಂಡುಪಾರಿವಾಳ ಹೇಳಿತು:

"ಇಲ್ಲ, ಇಲ್ಲ! ನನಗೆ ಯಾವುದೂ ಜ್ಞಾಪಕವಿಲ್ಲ!"

ಹೆಣ್ಣುಪಾರಿವಾಳ ಮತ್ತೆ ಕೇಳಿತು:

"ಮತ್ತೆ ನೀನು ಮರೆತು ಬಿಟ್ಟೆಯಾ ನಾನು ಹೇಗೆ ನಿನಗಾಗಿ ಬೆಟ್ಟದಲ್ಲಿ ಸುರಂಗ ಮಾಡಿದೆ, ಅದರಲ್ಲಿ ದ್ನೀಪರ್ ನದಿ ಹರಿಯುವಂತೆ ಮಾಡಿದೆ, ಆ ನದಿಯಲ್ಲಿ ಹಡಗುಗಳು ಬಂದವು, ನೀನು ಅವುಗಳಿಗೆ ಗೋಧಿ ಮಾರಿದೆ, ಅನ್ನುವುದನ್ನು?"

ಗಂಡುಪಾರಿವಾಳ ಹೇಳಿತು:

"ಇಲ್ಲ, ಇಲ್ಲ! ನನಗೆ ಯಾವುದೂ ಜ್ಞಾಪಕವಿಲ್ಲ!"

ಹೆಣ್ಣುಪಾರಿವಾಳ ಮತ್ತೆ ಕೇಳಿತು:

"ನಾವಿಬ್ಬರೂ ಒಟ್ಟಿಗೆ ಹೇಗೆ ಚಿನ್ನದ ಮೊಲಕ್ಕಾಗಿ ಹುಡುಕಾಡಿದೆವು ಅನ್ನುವುದನ್ನು ಮರೆತು ಬಿಟ್ಟೆಯಾ? ನೀನು ನನ್ನನ್ನು ಸಂಪೂರ್ಣವಾಗಿ ಮರೆತು ಬಿಟ್ಟೆಯಾ?"

ಗಂಡುಪಾರಿವಾಳ ಉತ್ತರಿಸಿತು:

"ಇಲ್ಲ, ಇಲ್ಲ! ನನಗೆ ಯಾವುದೂ ಜ್ಞಾಪಕವಿಲ್ಲ!"

ಇವುಗಳ ಸಂಭಾಷಣೆಯನ್ನು ಕೇಳಿದಾಗ ಬೇಟೆಗಾರನ ಮಗನಿಗೆ ಹಿಂದಿನದೆಲ್ಲ ನೆನಪಿಗೆ ಬಂದಿತು. ಅವನು ಆ ಯುವತಿಯ ಗುರುತನ್ನೂ ಹಿಡಿದ. ಅವಳನ್ನೇ ಮದುವೆಯಾದ. ಈಗಲೂ ಅವರು ಹಾಯಾಗಿ ಸುಖ ಜೀವನ ನಡೆಸುತ್ತಿದ್ದಾರೆ.

ಕುರುಬ ಹುಡುಗ

ಒಂದಾನೊಂದು ಕಾಲದಲ್ಲಿ ಒಬ್ಬ ಕುರುಬ ಹುಡುಗನಿದ್ದ. ಅವನು ತನ್ನ ಎಳೆಯ ವಯಸ್ಸಿನಿಂದಲೂ ಕುರಿಗಳನ್ನು ಮೇಯಿಸುವುದನ್ನು ಬಿಟ್ಟು ಬೇರೇನೂ ಕೆಲಸ ಮಾಡುತ್ತಿರಲಿಲ್ಲ.

ಒಂದು ದಿನ ಎಂಟು ಪೂದ್* ಗಳಷ್ಟು ತೂಗುವ ದೊಡ್ಡ ಕಲ್ಲುಗುಂಡೊಂದು ಆಕಾಶದಿಂದ ಅವನ ಬಳಿ ಬಂದು ಬಿದ್ದಿತು. ಕುರುಬ ಹುಡುಗ ಅದನ್ನು ತೆಗೆದುಕೊಂಡು ತಮಾಷಿ ಮಾಡುತ್ತಿದ್ದ. ಅದನ್ನು ಚಾಟಿಗೆ ಕಟ್ಟಿ ಆಡುತ್ತಿದ್ದ. ಆಕಾಶಕ್ಕೆ ಎಸೆದು ಹಿಡಿಯುತ್ತಿದ್ದ.

ಕಲ್ಲುಗುಂಡಿನೊಂದಿಗೆ ಆಟವಾಡುತ್ತಿದ್ದುದನ್ನು ಕಂಡು ಅವನ ತಾಯಿ ಅವನನ್ನು ಬಯ್ಯುತ್ತಿದ್ದಳು. ಅಷ್ಟು ಭಾರವಾದ ಕಲ್ಲುಗುಂಡು ಅವನಿಗೆ ಅಪಾಯ ತರಬಹುದೆಂದು ಅವಳು ಅಂಜಿದ್ದಳು. ಆದರೆ ಅವನು ಅವಳ ಮಾತಿಗೆ ಕಿವಿಗೊಡುತ್ತಿರಲಿಲ್ಲ.

ಕುರುಬ ಹುಡುಗ ವಾಸಿಸುತ್ತಿದ್ದ ಹಳ್ಳಿಗೆ ಅನತಿ ದೂರದಲ್ಲಿದ್ದ ಪಟ್ಟಣದಲ್ಲಿ ರಾಜ್ಯದ ದೊರೆ ವಾಸಿಸುತ್ತಿದ್ದ. ಅಲ್ಲಿ ಒಮ್ಮೆ ಏನಾಯಿತೂಂದರೆ, ಒಂದು ಡ್ರೇಗನ್ ಪ್ರಾಣಿ** ಬಂದು ಕಾಟ ಕೊಡ ತೊಡಗಿತು. ಅದು ಒಂದೊಂದೂ ಮೂವತ್ತು ಪೂದ್ ತೂಗುವ ಕಲ್ಲುಗುಂಡುಗಳನ್ನು ಆ ಪಟ್ಟಣಕ್ಕೆ ತಂದು ಹಾಕಿ ಅವುಗಳಿಂದ ಅಲ್ಲಿ ಒಂದು ಅರಮನೆಯನ್ನು ಕಟ್ಟಿಕೊಂಡಿತು. ಅನಂತರ ತನಗೆ ರಾಜಕುಮಾರಿಯನ್ನು ಮದುವೆ ಮಾಡಿಕೊಡಬೇಕೆಂದು ದೊರೆಯನ್ನು ಪೀಡಿಸ ತೊಡಗಿತು.

---

* ಒಂದು ರಷ್ಯನ್ ತೂಕದ ಅಳತೆ, 16.38ಕಿ.ಗ್ರಾಂ.ಗೆ ಸಮ. – ಸಂ.

**ಕಾಲ್ಪನಿಕ ರೆಕ್ಕೆಯ ಹಾವು. – ಸಂ.

ದೊರೆಗೆ ಗಾಬರಿಯಾಯಿತು. ತನ್ನ ರಾಜ್ಯದ ಮೂಲೆಮೂಲೆಗೂ ದೂತರನ್ನು ಅಟ್ಟಿದ. ಈ ಡ್ರೇಗನ್ ಪ್ರಾಣಿಯ ವಿರುದ್ಧ ಹೋರಾಡಿ ಅದನ್ನು ಕೊಲ್ಲುವಷ್ಟು ಧೈರ್ಯ ಸ್ಥೈರ್ಯವುಳ್ಳ ಯಾರನ್ನಾದರೂ ಕಂಡುಹಿಡಿಯುವಂತೆ ಆಜ್ಞಾಪಿಸಿದ.

ಈ ಸುದ್ದಿ ಕುರುಬ ಹುಡುಗನ ಕಿವಿಗೂ ಬಿದ್ದಿತು. ಅವನು ಜಂಭದಿಂದ ಹೇಳಿದ:

"ನಾನು ಈ ಚಾಟಿಯಿಂದಲೇ ಡ್ರೇಗನ್ ಪ್ರಾಣಿಯನ್ನು ಕೊಲ್ಲಬಲ್ಲೆ!"

ಅವನು ತಮಾಷಿಗೆ ಹಾಗೆ ಹೇಳಿದ್ದಿರಬಹುದು. ಆದರೆ ಅವನ ಮಾತನ್ನು ಕೇಳಿದವರು ನಿಜಕ್ಕೂ ನಂಬಿದರು. ಅಂತೆಯೇ ದೊರೆಗೆ ವಿಷಯ ತಿಳಿಸಿದರು. ದೊರೆ ಕೂಡಲೇ ಅವನನ್ನು ಕರೆತರುವಂತೆ ದೂತರನ್ನು ಅಟ್ಟಿದ.

ಕುರುಬ ಹುಡುಗ ಇನ್ನೂ ಚಿಕ್ಕವನಾಗಿದ್ದುದನ್ನು ಕಂಡು ದೊರೆ ಹೇಳಿದ:

"ನೀನೇನೋ ಡ್ರೇಗನ್ ಪ್ರಾಣಿಯನ್ನು ಕೊಲ್ಲಬಲ್ಲೆ ಅಂತ ಹೇಳಿದೆಯಂತೆ. ನಿಜಕ್ಕೂ ಕೊಲ್ಲಬಲ್ಲೆಯಾ? ನೀನಿನ್ನೂ ಎಷ್ಟು ಚಿಕ್ಕವನಾಗಿ ಕಾಣಿಸುತ್ತೀಯ!"

"ಚಿಕ್ಕವನಾಗಿದ್ದರೇನಂತೆ. ನಾನು ಕೊಲ್ಲಬಲ್ಲೆ!" ಅವನೆಂದ.

ಸರಿ, ದೊರೆ ಅವನಿಗೆ ಎರಡು ದಳ ಸೈನಿಕರನ್ನು ಸಹಾಯಕ್ಕೆ ಕೊಟ್ಟ. ಕುರುಬ ಹುಡುಗ ಅವರಿಗೆ ಎಷ್ಟು ಆತ್ಮವಿಶ್ವಾಸದಿಂದ ಆಜ್ಞೆ ನೀಡುತ್ತಿದ್ದನೆಂದರೆ ಅವನು ಕೊನೆಯ ಪಕ್ಷ ಇಪ್ಪತ್ತು ವರ್ಷಗಳಿಂದ ಸೇನಾಧಿಪತಿಯ ಕಾರ್ಯ ನಿರ್ವಹಿಸುತ್ತಿದ್ದನೇನೋ ಎಂದು ಹೇಳಬಹುದಿತ್ತು.

ಇವನ್ನು ಕಂಡು ದೊರೆ ಬೆರಗಾಗಿ ಬಾಯಿಯ ಮೇಲೆ ಬೆರಳಿಟ್ಟ.

ಕುರುಬ ಹುಡುಗ ಸೈನಿಕರನ್ನು ಡ್ರೇಗನ್ ಅರಮನೆಯ ಬಳಿಗೆ, ಸುಮಾರು ಕಲ್ಲೆಸೆತದ ದೂರ ಇರುವವರೆಗೂ, ಕರೆದೊಯ್ದ. ಆಮೇಲೆ ಹೇಳಿದ:

"ನೋಡಿ, ನೀವು ಇಲ್ಲೇ ನಿಲ್ಲಿ. ಅಕೋ, ಆ ಹೊಗೆಕೊಳವಿ ಇದೆಯಲ್ಲ ಅದರಿಂದ ಹೊಗೆ ಬಂದರೆ ನಾನು ಡ್ರೇಗನ್ ಪ್ರಾಣಿಯನ್ನು ಕೊಂದೆ ಅಂತ ತಿಳಿಯಬೇಕು. ಅದರಿಂದ ಉರಿ ಬಂದರೆ ಡ್ರೇಗನ್ ಪ್ರಾಣಿಯೇ ಗೆದ್ದಿತು ಅಂತ ತಿಳಿಯಬೇಕು. ಗೊತ್ತಾಯಿತಾ?"

ಹಾಗೆ ಹೇಳಿ ಕುರುಬ ಹುಡುಗ ಒಬ್ಬನೇ ಡ್ರೇಗನ್‌ನ ಅರಮನೆ ಒಳಹೊಕ್ಕ. ಡ್ರೇಗನ್ ತಾನೊಬ್ಬ ಬಹಳ ಬಲಶಾಲಿ ಎಂದು ಭಾವಿಸಿಕೊಂಡಿತ್ತು. ಬಾಯಿಯಿಂದ ಉರಿ ಉಗುಳುತ್ತಲೇ ಅದು ತನ್ನ ಎದುರು ಬರುತ್ತಿದ್ದವರನ್ನೆಲ್ಲ ದೂರವೇ ಇರಿಸುತ್ತಿದ್ದಿತು. ಈ ಕುರುಬ ಹುಡುಗನನ್ನು ಕಂಡಾಗಲೂ ಅದು ಹಾಗೆಯೇ ಮಾಡಿತು. ಆದರೆ ಕುರುಬ ಹುಡುಗ ಕಣ್ಣು ಕೂಡ ಮಿಟುಕಿಸಲಿಲ್ಲ.

"ಓಹೋ, ಪರವಾಗಿಲ್ಲ. ನೀನು ಧೈರ್ಯವಂತ. ಯಾತಕ್ಕಾಗಿ ಇಲ್ಲಿಗೆ ಬಂದೆ, ಹುಡುಗ?"

ಡ್ರೇಗನ್ ಗರ್ಜಿಸುತ್ತ ಕೇಳಿತು. "ನನ್ನ ಜೊತೆ ಹೋರಾಡಲು ಬಂದೆಯಾ, ಅಥವಾ ಶಾಂತಿ ಮಾಡಿಕೊಳ್ಳಲು ಬಂದೆಯಾ?"

"ನಾನು ಹೋರಾಡುವುದಕ್ಕೆ ಬಂದಿದೀನಿ! ನಿನ್ನಂಥವರ ಜೊತೆ ಶಾಂತಿ ಮಾಡಿಕೊಳ್ಳುವಷ್ಟು ಕೆಳಮಟ್ಟಕ್ಕೆ ಇಳೀತೀನಿ ಅಂತ ಅಂದುಕೊಂಡೆಯಾ?"

"ಹಾಗಾ? ಹೋಗು. ಸ್ವಲ್ಪ ಮೈ ಬೆಳೆಸಿಕೊಂಡು, ಬಲ ಹೆಚ್ಚಿಸಿಕೊಂಡು ಮೂರು ವರ್ಷಗಳಾದ ಮೇಲೆ ಬಾ. ಆಮೇಲೆ ಹೋರಾಡೋಣ!" ಡ್ರೇಗನ್ ಹೇಳಿತು.

"ಏನೂ ಬೇಕಿಲ್ಲ. ನನಗೆ ಈಗಾಗಲೇ ಸಾಕಷ್ಟು ಶಕ್ತಿ ಇದೆ!"

"ಯಾವ ಆಯುಧ ತಂದಿದೀಯ?"

"ನನ್ನ ಈ ಚಾಟಿ!"

ಹಾಗೆಂದು ಅವನು ಡ್ರೇಗನ್‌ಗೆ ತನ್ನ ಚಾಟಿ ತೋರಿಸಿದ. ಅದರ ಬಾರು ಒಂದು ಇಡೀ ಎತ್ತಿನ ಚರ್ಮದಿಂದ ಮಾಡಲಾಗಿತ್ತು. ಅದರ ತುದಿಗೆ ಎಂಟು ಪೂದ್ ತೂಗುವ ಆ ಕಲ್ಲಿನ ಗುಂಡನ್ನು ಕಟ್ಟಲಾಗಿತ್ತು.

"ಬಾ, ಹಾಗಾದರೆ. ನೀನೇ ಶುರು ಮಾಡು!" ಡ್ರೇಗನ್ ಹೇಳಿತು.

"ಇಲ್ಲ. ನೀನೇ ಶುರು ಮಾಡು!"

ಡ್ರೇಗನ್ ಕುರುಬ ಹುಡುಗನ ಬಳಿ ಬಂದು ತನ್ನ ಖಡ್ಗದಿಂದ ಬಲವಾಗಿ ಹೊಡೆಯಿತು. ಆ ಖಡ್ಗ ಮೂರು ಮೀಟರ್ ಉದ್ದವಾಗಿತ್ತು, ಗಡುಸಾದ ಉಕ್ಕಿನಿಂದ ಮಾಡಿದುದಾಗಿತ್ತು. ಆದರೂ ಅದು ಮುರಿದು ಬಿದ್ದಿತು. ಕುರುಬ ಹುಡುಗ ಎಷ್ಟು ಮಾತ್ರವೂ ಹಾನಿಗೊಳಗಾಗದೆ, ಮಿಸುಕದೆ, ನಿಂತಿದ್ದ.

"ನಿನ್ನದು ಆಯಿತಲ್ಲ. ಈಗ ಹಿಡಿ ನನ್ನ ಹೊಡೆತವನ್ನು!" ಎಂದು ಕುರುಬ ಹುಡುಗ ಕೂಗಿ ಹೇಳಿದ.

ಅವನು ಡ್ರೇಗನ್‌ಗೆ ತನ್ನ ಚಾಟಿಯಿಂದ ಎಂತಹ ಹೊಡೆತ ನೀಡಿದನೆಂದರೆ ಡ್ರೇಗನ್ ನಿಂತ ಸ್ಥಳದಲ್ಲೇ ಸತ್ತು ಬಿದ್ದಿತು. ಅರಮನೆಯ ಹೊಗೆಕೊಳವಿಯ ಮೂಲಕ ಹೊಗೆ ಹೊರ ಬಂದಿತು. ಅದನ್ನು ಕಂಡು ಕುರುಬ ಹುಡುಗನೊಟ್ಟಿಗೆ ಬಂದಿದ್ದ ಸೈನಿಕರು ಅಮಿತಾನಂದಗೊಂಡರು. ವಾದ್ಯಗಾರರು ವಾದನಗಳನ್ನು ನುಡಿಸಿದರು. ಗಾಯಕರು ಹಾಡಿದರು. ಕುರುಬ ಹುಡುಗನನ್ನು ಸಂಧಿಸಲು ದೊರೆಯೇ ಹೊರಬಂದ. ಅವನ ಕೈ ಹಿಡಿದು ತನ್ನ ಅರಮನೆಯೊಳಕ್ಕೆ ಕರೆದೊಯ್ದ. ತನ್ನ ಮಗಳನ್ನು ಅವನಿಗೆ ಮದುವೆ ಮಾಡಿಕೊಟ್ಟ. ಯುವ ದಂಪತಿಗಳಿಗೆ ಪ್ರತ್ಯೇಕವಾಗಿ ಅರಮನೆ ಕಟ್ಟಿಸಿಕೊಟ್ಟ. ಅವರು ಅಲ್ಲಿ ಸುಖವಾಗಿ ಜೀವನ ನಡೆಸುತ್ತಿದ್ದರು.

ಆದರೆ ಇದು ನೆರೆಹೊರೆಯ ಕೆಲವು ರಾಜರುಗಳಿಗೆ ಅತೃಪ್ತಿ ತಂದಿತು. ಸಾಮಾನ್ಯ ಕುರುಬನೊಬ್ಬ ರಾಜಕುಮಾರಿಯನ್ನು ವಿವಾಹವಾಗಲು ಎಂದೂ ಬಿಡಬಾರದಿತ್ತು ಎಂದವರು ಹೇಳಿದರು. ಅವರ ಮಾತುಗಳಿಗೆ ಮರುಳಾಗಿ ದೊರೆಯೂ ಖೇದಗೊಂಡ. ಅವನು ತಕ್ಷಣವೇ ತನ್ನ ರಾಜ್ಯದ ಮೂಲೆಮೂಲೆಗಳಿಗೆ ದೂತರನ್ನಟ್ಟಿ, ಈ ಕುರುಬ ಹುಡುಗನನ್ನು ಕೊಲ್ಲಬಲ್ಲವರು ಮುಂದೆ ಬರಬೇಕೆಂದು ಕರೆಕೊಟ್ಟ. ಅಂಥ ಇಬ್ಬರು ಮುಂದೆ ಬಂದರು. ಅವರನ್ನು ಶಸ್ತ್ರಸಜ್ಜುಗೊಳಿಸಿ ಹೋರಾಡಲು ಕಳಿಸಿಕೊಡಲಾಯಿತು.

ಅವರು ಕುರುಬ ಹುಡುಗನ ಅರಮನೆಗೆ ಬಂದರು. ಕುರುಬ ಹುಡುಗ ಕೇಳಿದ: "ದಿಟ್ಟ ಬಾಲಕರೇ ಇಲ್ಲಿಗೇಕೆ ಬಂದಿರಿ? ನನ್ನ ಜೊತೆ ಹೋರಾಡಲು ಬಂದಿರಾ ಅಥವಾ ಶಾಂತಿ ಮಾಡಿಕೊಳ್ಳಲು ಬಂದಿರಾ?"

"ಹೋರಾಡಲು ಬಂದಿದ್ದೇವೆ."

ಅವರು ತಕ್ಷಣವೇ ಕಾಳಗಕ್ಕಿಳಿದರು.

ಮೊದಲನೆಯ ಯುವಕ ಕುರುಬ ಹುಡುಗನ ಬಳಿ ಬಂದು ತನ್ನ ಖಡ್ಗದಿಂದ ಅವನ ಎಡ ಭುಜದ ಮೇಲೆ ಪ್ರಹಾರ ನೀಡಿದ. ಖಡ್ಗ ಮುರಿದು ಬಿದ್ದಿತು. ಆಮೇಲೆ ಎರಡನೆಯುವ ಅವನ ಬಳಿ ಬಂದು ಅವನ ಬಲ ಭುಜದ ಮೇಲೆ ತನ್ನ ಖಡ್ಗದಿಂದ ಪ್ರಹಾರ ನೀಡಿದ. ಅದು ಕುರುಬ ಹುಡುಗನ ಅಂಗಿಯನ್ನಷ್ಟೆ ಹರಿಯಿತು.

ಈಗ ಕುರುಬ ಹುಡುಗನ ಸರದಿ. ಅವನು ಪೂರ್ಣ ಎತ್ತರ ಎದ್ದು ನಿಂತ. ಇಬ್ಬರು ಯುವಕರನ್ನೂ ಹಿಡಿದು ಒಬ್ಬನನ್ನು ಇನ್ನೊಬ್ಬನಿಗೆ ಎಷ್ಟು ಬಲವಾಗಿ ಒತ್ತಿದನೆಂದರೆ ಇಬ್ಬರೂ ನಜ್ಜುಗುಜ್ಜಾಗಿ ಸತ್ತರು. ಅವರ ಮೂಳೆಗಳು ಸುತ್ತ ಚೆಲ್ಲಾಪಿಲ್ಲಿಯಾಗಿ ಬಿದ್ದವು. ಕುರುಬ ಹುಡುಗ ಆ ಕೆಲವು ಮೂಳೆ ಚೂರುಗಳನ್ನು ಎತ್ತಿಕೊಂಡು ದೊರೆಯ ಬಳಿಗೆ ಹೋದ. ಎಂದಿನಂತೆ ಬಾಗಿ ವಂದಿಸದೆ ನೇರವಾಗಿ ನುಡಿದ:

"ಈ ಮೂಳೆ ತುಂಡುಗಳು ಕಾಣುತ್ತವಾ ನಿನಗೆ? ಎಚ್ಚರ! ನಿನಗೂ ಹೀಗೆಯೇ ಆಗಬಹುದು!"

ಇದರಿಂದ ದೊರೆ ಹೆದರಿ ಓಡಿಹೋದ. ಅಂದಿನಿಂದ ಆ ಕುರುಬ ಹುಡುಗನೇ ಆ ರಾಜ್ಯವನ್ನು ಆಳುತ್ತಿದ್ದಾನೆ.

ಚರ್ಮ ಹದಮಾಡುವ ಕಿರೀಲ್

ಒಂದಾನೊಂದು ಕಾಲದಲ್ಲಿ ಕೀಯೆವ್‌ನಲ್ಲಿ ಒಬ್ಬ ರಾಜ ವಾಸಿಸುತ್ತಿದ್ದ. ಕೀಯೆವ್‌ನ ಬಳಿಯೇ ಒಂದು ಡ್ರೇಗನ್ ಕೂಡ ವಾಸಿಸುತ್ತಿತ್ತು. ಅದು ನಗರದ ಜನರಿಂದ ಬಲವಂತವಾಗಿ ಪೊಗದಿ ಕೀಳುತ್ತಿತ್ತು. ಅವರು ಪ್ರತಿ ವರ್ಷವೂ ಅದಕ್ಕೆ ಒಬ್ಬ ಯುವಕನನ್ನೋ ಒಬ್ಬ ಯುವತಿಯನ್ನೋ ಆಹಾರವಾಗಿ ನೀಡಬೇಕಾಗಿತ್ತು.

ಅವರು ಸರದಿಯ ಮೇಲೆ ಈ ಕೇಳಿಕೆ ಪೂರೈಸುತ್ತಿದ್ದರು. ಒಮ್ಮೆ ರಾಜನ ಸರದಿ ಬಂದಿತು. ಅವನು ತನ್ನ ಮಗಳನ್ನು ಡ್ರೇಗನ್‌ಗೆ ಒಪ್ಪಿಸಬೇಕಾಗಿ ಬಂದಿತು. ವಿಧಿ ಇಲ್ಲದೆ ಅವನು ಅವಳನ್ನು ಕಳುಹಿಸಿಕೊಟ್ಟ. ನಗರದ ಇತರ ಜನರಂತೆಯೇ ಅವನೂ ಮಾಡಬೇಕಿದ್ದಿತು.

ಆ ರಾಜಕುಮಾರಿ ಎಷ್ಟು ಸುಂದರಿಯಾಗಿದ್ದಳೆಂದರೆ ಅವಳ ಸೌಂದರ್ಯವನ್ನು ಮಾತು ಗಳಿಂದ ವರ್ಣಿಸಿ ತಿಳಿಸಲು, ಲೇಖನಿಯಿಂದ ಬರೆದು ತಿಳಿಸಲು ಸಾಧ್ಯವಿಲ್ಲ. ಡ್ರೇಗನ್ ಅವಳನ್ನು ಕಂಡ ಕೂಡಲೇ ಅವಳಲ್ಲಿ ಮೋಹಿತವಾಯಿತು. ಅವಳೂ ಅದನ್ನು ಅರ್ಥಮಾಡಿಕೊಂಡಳು. ಅವಳು ಅದರೊಂದಿಗೆ ಪ್ರೀತಿಯಿಂದ ಮಾತನಾಡಿದಳು. ತಾನೂ ಅದರಲ್ಲಿ ಅನುರಕ್ತಳಾದಂತೆ ವರ್ತಿಸಿದಳು.

ಹೀಗೆ ಅವಳು ಸ್ವಲ್ಪ ದಿನ ಅದರ ಜೊತೆ ಕಳೆದಳು. ಆಮೇಲೆ ಒಂದು ದಿನ ಡ್ರೇಗನ್ ಸುಪ್ರೀತ ಮನೋಭಾವದಲ್ಲಿದ್ದಾಗ ಅವಳು ಅದನ್ನು ಕೇಳಿದಳು: "ನೀನು ಎಷ್ಟೊಂದು ಭಾರಿ ಶಕ್ತಿವಂತ ನಾಗಿದ್ದೀಯ! ಈ ಜಗತ್ತಿನಲ್ಲಿ ನಿನ್ನನ್ನು ಮೀರಿಸುವಂಥ ಶಕ್ತಿವಂತ ಯಾರಾದರೂ ಇದ್ದಾರೆಯೆ?"

"ಇದ್ದಾನೆ. ಅವನು ಕೀಯೆವ್‌ನಲ್ಲೇ, ಡ್ನೀಪರ್ ನದಿಯ ಎತ್ತರದ ದಡದ ಮೇಲೆ ವಾಸಿಸು ತ್ತಿದ್ದಾನೆ" ಎಂದಿತು ಡ್ರೇಗನ್.

"ಅವನೊಬ್ಬ ಚರ್ಮ ಹದಮಾಡುವವ. ಕಿರೀಲ್ ಅಂತ ಅವನ ಹೆಸರು. ಅವನು ಎಷ್ಟು ಬಲಶಾಲಿ ಎಂದರೆ ಯಾವತ್ತೂ ಒಂದೇ ಬಾರಿಗೆ ಹನ್ನೆರಡಕ್ಕೆ ಕಮ್ಮಿ ಇಲ್ಲದಂತೆ ಚರ್ಮಗಳನ್ನು ನೆನಸುತ್ತಾನೆ. ಅವನು ಅವುಗಳನ್ನು ಡ್ನೀಪರ್ ನದಿಯ ನೀರಿನಲ್ಲಿ ನೆನಸುತ್ತಾನೆ. ಒಮ್ಮೆ ನೆನೆದ ವೆಂದರೆ ಅವು ತುಂಬ ಭಾರವಾಗುತ್ತವೆ. ಕೆಲವು ವೇಳೆ ನಾನು ಅವುಗಳನ್ನು ನೀರಿನಡಿ ಭದ್ರವಾಗಿ ಹಿಡಿದು ಇರಿಸಿಕೊಂಡಿದ್ದೆ–ಆಗಲೂ ಅವನ ಕೈಯಲ್ಲಿ ಅವುಗಳನ್ನು ಮೇಲಕ್ಕೆ ಎಳೆದು ಹಾಕಲು ಸಾಧ್ಯವಾಗುವುದಾ ಎಂದು ನೋಡಲೋಸುಗ. ಸದ್ಯಕ್ಕೆ, ಬಿಟ್ಟುಬಿಟ್ಟೆ ! ಇಲ್ಲದಿದ್ದರೆ ಅವನು ಅವು ಗಳ ಜೊತೆಗೆ ನನ್ನನ್ನೂ ಹೊರಕ್ಕೆ ಎಳೆದು ಹಾಕುತ್ತಿದ್ದ. ಇವನೊಬ್ಬನಿಗಷ್ಟೆ ನಾನು ಈ ಪ್ರಪಂಚ ದಲ್ಲಿ ಹೆದರುವುದು."

ರಾಜಕುಮಾರಿ ಈ ಮಾತುಗಳನ್ನೆಲ್ಲ ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡಳು. ಈ ಸಮಾಚಾರ ವನ್ನು ತನ್ನ ತಂದೆಗೆ ಕಳುಹಿಸಿಕೊಡುವ, ಅನಂತರ ತಾನೇ ತನ್ನ ತಂದೆಯ ಬಳಿಗೆ ಹೋಗುವ ರೀತಿಯ ಬಗೆಗೆ ಯೋಚಿಸ ತೊಡಗಿದಳು. ಅವಳು ಒಂಟಿಯಾಗಿದ್ದಳು. ಒಂದು ಪಾರಿವಾಳ ಬಿಟ್ಟು ಬೇರೇನೂ ಅವಳ ಬಳಿ ಇರಲಿಲ್ಲ. ಈ ಪಾರಿವಾಳವನ್ನು ಅವಳು ಕೀಯೆವ್‌ನಲ್ಲಿದ್ದಾಗಲೇ ಸಾಕಿ ಕೊಂಡಿದ್ದಳು ಮತ್ತು ತನ್ನೊಂದಿಗೆ ಕರೆತಂದಿದ್ದಳು. ತುಂಬ ಯೋಚಿಸಿದನಂತರ ಅವಳು ತನ್ನ ತಂದೆಗೆ ಪತ್ರ ಬರೆಯಲು ನಿರ್ಧರಿಸಿದಳು.

"ಕೀಯೆವ್‌ನಲ್ಲಿ ಕಿರೀಲ್ ಅನ್ನುವ ಹೆಸರಿನ ಒಬ್ಬ ಚರ್ಮ ಹದಮಾಡುವವನಿದ್ದಾನೆ" ಎಂದ ವಳು ಬರೆದಳು. "ಅವನೊಬ್ಬನೇ ಈ ಡ್ರೇಗನ್‌ನ ಜೊತೆ ಹೋರಾಡಿ ಗೆಲ್ಲಬಲ್ಲ, ನನ್ನನ್ನು ಬಿಡಿಸ ಬಲ್ಲ. ಆದ್ದರಿಂದ ನೀವೇ ಅವನ ಬಳಿಗೆ ಹೋಗಿ, ಇಲ್ಲವೇ ಬೇರೆ ಯಾರನ್ನಾದರೂ ಅವನಲ್ಲಿಗೆ ಕಳಿಸಿಕೊಡಿ. ಡ್ರೇಗನ್‌ನ ಜೊತೆ ಹೋರಾಡಿ ನನ್ನನ್ನು–ಒಬ್ಬ ಅಸುಖಿ ಯುವತಿಯನ್ನು– ಬಂಧನದಿಂದ ಬಿಡುಗಡೆ ಮಾಡುವಂತೆ ಕೇಳಿಕೊಳ್ಳಿ. ಬರಿ ಮಾತುಗಳಿಂದ ಅವನ ಮನ ಒಲಿಸಲು ಆಗದಿದ್ದಲ್ಲಿ ಅವನಿಗೆ ಬೇಕಾದಷ್ಟು ಬಳುವಳಿ ನೀಡಿ. ಯಾರೂ ಅವನ ಜೊತೆ ಒರಟಾಗಿ ಮಾತ ನಾಡದಂತೆ ನೋಡಿಕೊಳ್ಳಿ. ಇಲ್ಲದಿದ್ದರೆ ಅವನು ಕೋಪಗೊಳ್ಳಬಹುದು. ನನ್ನ ಜೀವಮಾನದ ಕೊನೆಯವರೆಗೂ ನಾನು ನಿಮ್ಮಿಬ್ಬರಿಗಾಗಿ ಪ್ರಾರ್ಥನೆ ಮಾಡುವೆ, ನಿಮ್ಮನ್ನು ರಕ್ಷಿಸುವಂತೆ ದೇವ ರನ್ನು ಕೇಳಿಕೊಳ್ಳುವೆ..."

ಹೀಗೆ ಬರೆದು ಅವಳು ಪತ್ರವನ್ನು ಪಾರಿವಾಳದ ರೆಕ್ಕೆಗೆ ಕಟ್ಟಿ ಕಿಟಕಿಯ ಮೂಲಕ ಅದನ್ನು ಹಾರಿಬಿಟ್ಟಳು. ಪಾರಿವಾಳ ಆಗಸದಲ್ಲಿ ಎತ್ತರಕ್ಕೆ ಹಾರಿಹೋಗಿ ಅನಂತರ ನೇರವಾಗಿ ರಾಜ

ಕುಮಾರಿಯ ಅರಮನೆಯ ಕಡೆಗೆ ತಿರುಗಿತು. ಅರಮನೆಯ ಅಂಗಳದಲ್ಲಿ ಅಡ್ಡಾಡುತ್ತಿದ್ದ ರಾಜನ ಮಕ್ಕಳು ಪಾರಿವಾಳವನ್ನು ಕಂಡು ಕೂಗಿ ಹೇಳಿದರು:

"ಅಪ್ಪ! ಅಪ್ಪ! ಅಕ್ಕನ ಪಾರಿವಾಳ ಬಂದಿದೆ!"

ಈ ಸುದ್ದಿ ಕೇಳಿ ರಾಜನ ಹೃದಯ ಆನಂದದ ಹೊನಲಿನಿಂದ ತುಂಬಿತು. ಆದರೆ ಅವನು ಯೋಚನೆ ಮಾಡಿದ ಮೇಲೆ ಮತ್ತೆ ಅದು ದುಃಖದಿಂದ ಭಾರವಾಯಿತಷ್ಟೆ.

"ನನ್ನ ಮಗಳು ಸತ್ತುಹೋಗಿರಬೇಕು. ಡ್ರೇಗನ್ ಅವಳನ್ನು ಕೊಂದಿರಬೇಕು. ಅದಕ್ಕೇ ಪಾರಿವಾಳ ಹಿಂದಿರುಗಿದೆ" ಎಂದವನು ತನ್ನಲ್ಲೇ ಹೇಳಿಕೊಂಡ.

ಅವನು ಪಾರಿವಾಳವನ್ನು ತನ್ನ ಕೈ ಮೇಲೆ ಬಂದು ಕೂರುವಂತೆ ಪುಸಲಾಯಿಸಿದ. ನೋಡುತ್ತಾನೆ – ಅದರ ರೆಕ್ಕೆಗೆ ಒಂದು ಪತ್ರವನ್ನು ಕಟ್ಟಲಾಗಿದೆ! ಅವನು ಅದನ್ನು ಓದಿ ತಕ್ಷಣವೇ ತನ್ನ ಆಸ್ಥಾನದ ಹಿರಿಯರನ್ನೆಲ್ಲ ಕರೆಸಿದ.

"ಕೀಯೆವ್‌ನಲ್ಲಿ ಚರ್ಮ ಹದಮಾಡುವ ಕಿರೀಲ್ ಎಂಬುವನೊಬ್ಬ ಇದ್ದಾನೆಯೇ?" ಅವನು ಕೇಳಿದ.

"ಹೌದು, ಮಹಾಪ್ರಭು, ಇದ್ದಾನೆ. ಡ್ನೀಪರ್ ನದಿಯ ಎತ್ತರದ ದಡದ ಮೇಲೆ ವಾಸಿಸುತ್ತಿದ್ದಾನೆ" ಅವರು ಉತ್ತರಿಸಿದರು.

"ಅವನಿಗೆ ಈ ವಿಷಯ ತಿಳಿಸುವುದು ಹೇಗೆ? ಅವನಿಗೆ ಒಂದಿಷ್ಟೂ ಕೋಪ ಬರಬಾರದು. ಅವನು ನಾವು ಕೇಳಿದಂತೆ ಮಾಡಬೇಕು. ಹೇಗೆ ಮಾಡುವುದು?"

ಇದಕ್ಕೆ ಅವರ ಬಳಿ ಉತ್ತರವಿರಲಿಲ್ಲ. ಅವರು ತಮ್ಮತಮ್ಮಲ್ಲೇ ಸಮಾಲೋಚಿಸಿ ಕೀಯೆವ್‌ನಲ್ಲೇ ತುಂಬ ಹಿರಿಯರೆನಿಸಿಕೊಂಡಿದ್ದ ಕೆಲವರನ್ನು ಕಿರೀಲ್‌ನ ಬಳಿಗೆ ಕಳಿಸಿಕೊಡಲು ನಿರ್ಧರಿಸಿದರು.

ಅವರು ಕೂಡಲೇ ಹೊರಟರು. ಕಿರೀಲ್‌ನ ಗುಡಿಸಿಲಿಗೆ ಬಂದರು. ಬಾಗಿಲು ತೆರೆದರು. ಘನೀಭೂತರಾಗಿ ನಿಂತರು! ಏಕೆಂದರೆ ಚರ್ಮ ಹದಮಾಡುವ ಕಿರೀಲ್ ಅವರ ಕಡೆಗೆ ಬೆನ್ನು ಮಾಡಿ ಕುಳಿತಿದ್ದ. ಹನ್ನೆರಡು ಕಚ್ಚಾ ತೊಗಲುಗಳನ್ನು ಎಲ್ಲವನ್ನೂ ಒಂದೇ ಬಾರಿಗೆ ತನ್ನ ಬರಿಗೈಗಳಿಂದಲೇ ತಿರುಚುತ್ತಿದ್ದ, ಹಿಂಡುತ್ತಿದ್ದ. ಅವನು ಕೆಲಸ ಮಾಡಿದಂತೆ ಅವನ ಮಂಜಿನಂತೆ ಬೆಳ್ಳಗಿದ್ದ ಗಡ್ಡವಷ್ಟೆ ಮೇಲಿನಿಂದ ಕೆಳಕ್ಕೆ ಕೆಳಗಿನಿಂದ ಮೇಲಕ್ಕೆ ಹೋಗಿಬರುತ್ತಿದ್ದುದು ಅವರಿಗೆ ಕಂಡುಬಂದಿತು.

ಅವರಲ್ಲೊಬ್ಬ ಬೇಕಂತಲೇ ಕೆಮ್ಮಿದ. ಕಿರೀಲ್ ಬೆಚ್ಚಿಬಿದ್ದು ಕೈಯಲ್ಲಿದ್ದ ತೊಗಲುಗಳನ್ನು ಎಷ್ಟು ಗಟ್ಟಿಯಾಗಿ ಹಿಂಡಿದನೆಂದರೆ ಅವು ಹರಿದವು. ಅವನು ಹಿಂದಕ್ಕೆ ತಿರುಗಿ ಹಿರಿಯರನ್ನು ಕಂಡ. ಅವರು ಅವನಿಗೆ ಬಾಗಿ ನಮಸ್ಕರಿಸಿ ತಮ್ಮನ್ನು ಯಾರು ಕಳುಹಿಸಿದ್ದು, ಯಾತಕ್ಕೆ ಕಳುಹಿಸಿದ್ದು ಅನ್ನುವುದನ್ನು ಹೇಳ ತೊಡಗಿದರು. ಆದರೆ ಅವನಿಗೆ ಎಷ್ಟು ಕೋಪ ಬಂದಿತೆಂದರೆ ಅವರನ್ನು

ನೋಡಲಾಗಲೀ ಅವರ ಮಾತುಗಳನ್ನು ಕೇಳಿಸಿಕೊಳ್ಳಲಾಗಲೀ ಬಯಸಲಿಲ್ಲ – ಹನ್ನೆರಡು ತೊಗಲುಗಳು ಹರಿಯುವುದಕ್ಕೆ ಅವರೇ ಕಾರಣರಾಗಿದ್ದರು. ಅವರು ಕೇಳಿಕೊಂಡರು, ಬೇಡಿಕೊಂಡರು, ಮಂಡಿ ಊರಿ ಕುಳಿತು ಯಾಚಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ.

ಈಗೇನು ಮಾಡುವುದು?

ರಾಜನ ಬಳಿಗೆ ಜೋಲುಮುಖ ಹಾಕಿಕೊಂಡು ಹಿಂದಿರುಗಿದರು. ರಾಜ ತುಂಬ ಹೊತ್ತು ಯೋಚಿಸಿ ಕೊನೆಗೆ ನಗರದಲ್ಲಿದ್ದ ಯುವಕರನ್ನು ಕಿರೀಲ್ ಬಳಿಗೆ ಕಳುಹಿಸಲು ನಿರ್ಧರಿಸಿದ.

ಆದರೆ ಈ ಯುವ ದೂತರೂ ಹಿರಿಯ ದೂತರಿಗಿಂತ ಹೆಚ್ಚಿಗೇನೂ ಯಶಸ್ವಿಯಾಗಲಿಲ್ಲ. ಚರ್ಮ ಹದಮಾಡುವವ ಅವರ ಯಾಚನೆಗಳನ್ನೆಲ್ಲ ಮೌನದಿಂದ ಕೇಳಿದ, ಮೋಡದಂತೆ ಕಪ್ಪಾಗಿ ಹುಬ್ಬು ಕಟ್ಟಿ ಕುಳಿತ.

ರಾಜ ಮತ್ತೆ ಯೋಚನೆ ಮಾಡಿದ. ತುಂಬ ಹೊತ್ತು ಯೋಚನೆ ಮಾಡಿದ. ಕೊನೆಗೆ ಕೆಲವು ಮಕ್ಕಳನ್ನು ಕಿರೀಲ್‌ನ ಬಳಿಗೆ ಕಳುಹಿಸಿದ. ಅವರು ಕಿರೀಲ್‌ನ ಗುಡಿಸಿಲಿಗೆ ಹೋಗಿ ಅವನ ಮುಂದೆ ಮಂಡಿಯೂರಿ ಕುಳಿತು ಬೇಡಿಕೊಳ್ಳ ತೊಡಗಿದರು, ಕಣ್ಣೀರು ಕರೆದರು. ಅದನ್ನು ಕಂಡು ಕಿರೀಲ್‌ನ ಕಣ್ಣುಗಳಲ್ಲೂ ನೀರೂರಿತು.

"ಸರಿ, ಅಳುವುದನ್ನು ಸಾಕುಮಾಡಿ! ನೀವು ಹೇಳಿದಂತೆ ನಾನು ಮಾಡುತ್ತೇನೆ" ಅವನೆಂದ.

ಅವನು ರಾಜನ ಬಳಿಗೆ ಹೋಗಿ ಹನ್ನೆರಡು ಪೀಪಾಯಿಗಳ ತುಂಬ ಕೀಲೆಣ್ಣೆಯನ್ನೂ ಹನ್ನೆರಡು ಬಂಡಿಗಳ ತುಂಬ ಕಿತ್ತಾನಾರನ್ನೂ ಕೊಡುವಂತೆ ಕೇಳಿದ. ಅವನ್ನು ತಂದು ಕೊಟ್ಟಾಗ ಅವನು ಕಿತ್ತಾನಾರನ್ನು ತನ್ನ ಮೈ ಸುತ್ತ ಸುತ್ತಿಕೊಂಡು ಅದರ ಮೇಲೆ ಕೀಲೆಣ್ಣೆ ಹಚ್ಚಿಕೊಂಡ. ಆಮೇಲೆ ಹತ್ತು ಪೂದ್‌ಗಳಷ್ಟು ತೂಗುವ ಖಡ್ಗವೊಂದನ್ನು ಎತ್ತಿಕೊಂಡು ಡ್ರೇಗನ್‌ನ ಬಳಿಗೆ ಹೋರಾಡಲು ಹೋದ.

"ನನ್ನ ಬಳಿಗೆ ಯಾಕೆ ಬಂದೆ, ಕಿರೀಲ್? ಹೋರಾಡಲೋ ಅಥವಾ ಶಾಂತಿ ಮಾಡಿಕೊಳ್ಳಲೋ?" ಡ್ರೇಗನ್ ಕೇಳಿತು.

"ಹೋರಾಡಲು ಬಂದಿದ್ದೇನೆ, ಪಾಪಿಷ್ಠ ಪಿಶಾಚಿಯೇ! ನಿನ್ನಂಥವರ ಜೊತೆ ನಾನೆಂದೂ ಶಾಂತಿ ಮಾಡಿಕೊಳ್ಳಲಾರೆ" ಎಂದ ಕಿರೀಲ್.

ಅವರು ಹೋರಾಡ ತೊಡಗಿದರು. ಓಹ್, ಭೂಮಿ ಅವರ ಹೆಜ್ಜೆಗಳ ಕೆಳಗೆ ಹೇಗೆ ನಡುಗುತ್ತಿತ್ತು! ಡ್ರೇಗನ್ ಕಿರೀಲ್‌ನ ಬಳಿಗೆ ಕಚ್ಚಲು ಧಾವಿಸುತ್ತಿತ್ತು. ಆದರೆ ಅದರ ಹಲ್ಲುಗಳಿಗೆ ಕೀಲೆಣ್ಣೆಯ ತುಂಡುಗಳಷ್ಟೆ ಮೆತ್ತಿಕೊಳ್ಳುತ್ತಿದ್ದವು. ಅದು ಮತ್ತೆ ಅವನ ಬಳಿಗೆ ಧಾವಿಸುತ್ತಿತ್ತು. ಈ ಬಾರಿ ಅದರ ಬಾಯಿ ತುಂಬ ಕಿತ್ತಾನಾರು ಮೆತ್ತಿಕೊಳ್ಳುತ್ತಿತ್ತು. ಕಿರೀಲ್ ಡ್ರೇಗನ್‌ನ ಮೇಲೆ

ತನ್ನ ಖಡ್ಗದಿಂದ ಬಲವಾಗಿ ಹೊಡೆಯುತ್ತಿದ್ದ–ಅದು ನೆಲದೊಳಕ್ಕೆ ಹುಗಿಯುವಂತೆ ಮಾಡುತ್ತಿದ್ದ.

ಮೇಲಿಂದ ಮೇಲೆ ಹೊಡೆತಗಳನ್ನು ತಿನ್ನುತ್ತಿದ್ದ ಡ್ರೇಗನ್‌ನ ಒಡಲು ಬೆಂಕಿಯು ಮೇಲಿದ್ದಿತೇನೋ ಅನ್ನುವಂತೆ ಬಿಸಿಯಾಗಿ ಕಾಯ ತೊಡಗಿತು. ಅದು ಆಗಾಗ್ಗೆ ಒಂದು ಮುಳುಗು ಹಾಕಿ, ತಣ್ಣಗಿನ ನೀರನ್ನು ಕುಡಿಯಲೆಂದು ದ್ನೀಪರ್ ನದಿಗೆ ಹೋಗುತ್ತಿತ್ತು. ಆಗ ಕಿರೀಲ್ ಮತ್ತೆ ತನ್ನ ಸುತ್ತ ಇನ್ನಷ್ಟು ಕಿತ್ತಾನಾರು ಸುತ್ತಿಕೊಂಡು ಕೀಲೆಣ್ಣೆ ಹಚ್ಚಿಕೊಳ್ಳುತ್ತಿದ್ದ.

ಪ್ರತಿ ಬಾರಿ ಡ್ರೇಗನ್ ನೀರಿನಿಂದ ಹೊರಬಂದು ಕಿರೀಲ್‌ನ ಕಡೆಗೆ ಧಾವಿಸಿಹೋದಾಗಲೂ ಕಿರೀಲ್ ತನ್ನ ಖಡ್ಗದಿಂದ ಅದಕ್ಕೆ ಪ್ರಹಾರ ನೀಡುತ್ತಿದ್ದ. ಡ್ರೇಗನ್ ಮತ್ತೆ ಅವನ ಕಡೆಗೆ ಧಾವಿಸುತ್ತಿತ್ತು. ಕಿರೀಲ್ ಮತ್ತೆ ಅದಕ್ಕೆ ಎಷ್ಟು ಜೋರಾಗಿ ಖಡ್ಗದ ಪ್ರಹಾರ ನೀಡುತ್ತಿದ್ದನೆಂದರೆ ಅದರ ಶಬ್ದ ಸುತ್ತಲೂ ಪ್ರತಿಧ್ವನಿಸುತ್ತಿತ್ತು.

ಅವರು ಹೀಗೆಯೇ ತುಂಬ ಹೊತ್ತು ಹೋರಾಡಿದರು. ಮುಗಿಲು ಮುಟ್ಟುವಷ್ಟು ಹೊಗೆ ಎದ್ದಿತು. ಸುತ್ತಮುತ್ತ ಕಿಡಿಗಳು ಚಿಮ್ಮಿದವು. ಕಿರೀಲ್‌ನ ಹೊಡೆತಗಳು ಹೆಚ್ಚು ಬಲವಾಗಿ ಹೆಚ್ಚು ಬೇಗಬೇಗ ಬೀಳ ತೊಡಗಿದವು. ಡ್ರೇಗನ್ ಕುಲುಮೆಯಲ್ಲಿನ ನೇಗಿಲ ಗುಳದಂತೆ ಉರಿ ಕಾರುತ್ತಿತ್ತು. ಅದು ಕೆಮ್ಮಿತು, ಉಗುಳು ಸುರಿಸಿತು, ಅದರ ಕೆಳಗಿದ್ದ ಭೂಮಿ ನಡುಗಿತು.

ನಗರದ ಜನರು ಗುಡ್ಡದ ಮೇಲೆ ನಿಂತು ಈ ಕದನವನ್ನು ವೀಕ್ಷಿಸಿದರು. ಅವರು ಅಲ್ಲೇ ಸ್ತಂಭೀಭೂತರಾಗಿ ನಿಂತರು.

ಆಗ ಇದ್ದಕ್ಕಿದ್ದಂತೆ ಭಾರಿ ಸಿಡಿಲು ಬಡಿದಂಥ ಶಬ್ದವಾಯಿತು. ಡ್ರೇಗನ್ ನೆಲದ ಮೇಲೆ ಎಷ್ಟು ಬಲವಾಗಿ ಬಿದ್ದಿತೆಂದರೆ ನೆಲವೇ ಕಂಪಿಸಿತು, ಅದುರಿತು. ಗುಡ್ಡದ ಮೇಲೆ ನಿಂತಿದ್ದ ನಗರದ ಜನರೆಲ್ಲ ಚಪ್ಪಾಳೆ ತಟ್ಟುತ್ತ "ಉಘೇ" ಎಂದು ಜಯಘೋಷ ಮೊಳಗಿಸುತ್ತ ಕಿರೀಲ್‌ನನ್ನು ಅಭಿನಂದಿಸಿದರು.

ಡ್ರೇಗನ್ ಸತ್ತು ಬಿದ್ದಿದ್ದಿತು. ಅದನ್ನು ಕೊಂದ ಕಿರೀಲ್ ರಾಜಕುಮಾರಿಯನ್ನು ಬಂಧನದಿಂದ ಬಿಡಿಸಿ ಅವಳ ತಂದೆಯ ಬಳಿಗೆ ಕರೆದೊಯ್ದ.

ಕಿರೀಲ್‌ಗೆ ಎಷ್ಟು ವಂದಿಸಬೇಕೋ ರಾಜನಿಗೆ ತಿಳಿಯದಾಯಿತು. ಅಂದಿನಿಂದ ಕಿರೀಲ್ ವಾಸಿಸುತ್ತಿದ್ದ ನಗರದ ವಿಭಾಗವನ್ನು ಚರ್ಮ ಹದಮಾಡುವವನ ಮೊಹಲ್ಲಾ ಎಂದೇ ಕರೆಯಲಾಯಿತು.

ಓಹ್

ಬಹಳ ಕಾಲದ ಹಿಂದೆ, ನಮ್ಮ ತಂದೆಯರೂ ಅಜ್ಜಂದಿರೂ ಇನ್ನೂ ಹುಟ್ಟೇ ಇರದಿದ್ದಂಥ ಕಾಲದಲ್ಲಿ, ಒಬ್ಬ ಬಡವ ಮತ್ತು ಅವನ ಹೆಂಡತಿ ವಾಸವಾಗಿದ್ದರು. ಅವರಿಗೊಬ್ಬ ಮಗನಿದ್ದ. ಅವನೊಬ್ಬ ಶುದ್ಧ ಸೋಮಾರಿ. ಅಂಥ ಸೋಮಾರಿ ಇನ್ನೊಬ್ಬನಿರಲಿಲ್ಲ! ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಮೂರು ಹೊತ್ತೂ ಬೆಂಕಿಗೂಡಿನ ಮೇಲೆ ಕೂತಿರೋದು. ಅಮ್ಮ ಅಲ್ಲಿಗೇ ಊಟ ತಿಂಡಿ ತಂದುಕೊಟ್ಟರೆ ತಿನ್ನುತ್ತಿದ್ದ. ಇಲ್ಲದಿದ್ದರೆ ಹಾಗೇ ಉಪವಾಸ ಕೂತಿರುತ್ತಿದ್ದ. ಅದಕ್ಕಾಗಿ ಒಂದು ಬೆರಳನ್ನೂ ಆಡಿಸುತ್ತಿರಲಿಲ್ಲ. ಅಂಥ ಸೋಮಾರಿಯಾಗಿದ್ದ ಅವ!

ಅವನ ಅಮ್ಮ ಅಪ್ಪ ಹೇಳಿದರು:

"ಏನು ಮಾಡೋದು ನಿನ್ನನ್ನು ಕಟ್ಟಿಕೊಂಡು, ಮಗನೇ! ನೀನು ನಮ್ಮ ಪಾಲಿಗೆ ದುಃಖವೇ! ಎಲ್ಲ ಮಕ್ಕಳೂ ತಮ್ಮ ತಂದೆಯರಿಗೆ ಸಹಾಯ ಮಾಡ್ತಾರೆ. ನೀನು ಸುಮ್ಮನೆ ತಿಂದುಕೊಂಡು ಬಿದ್ದಿದೀಯ!"

ಅವರು ತುಂಬ ದುಃಖ ಪಟ್ಟರು. ತುಂಬ ಶೋಕಿಸಿದರು. ಕೊನೆಗೆ ಮುದುಕಿ ಹೇಳಿದಳು:

"ಏನು ಯೋಚನೆ ಮಾಡ್ತಿದೀಯ, ಮುದುಕ? ಮಗ ಆಗಲೇ ಬೆಳೆದಿದಾನೆ. ಆದರೆ ಅವನಿಗೆ ಏನು ಕೆಲಸವೂ ಬರುತ್ತಿಲ್ಲ. ಯಾರ ಹತ್ತಿರವಾದರೂ ಕಳಿಸಿಕೊಟ್ಟು ಒಂದಿಷ್ಟು ಏನಾದರೂ ಕೆಲಸ ಕಲಿಯುವ ಹಾಗೆ ಮಾಡಿದರೆ ಒಳ್ಳೆಯದಲ್ಲವೆ?"

ತಂದೆ ಅವನನ್ನು ಒಬ್ಬ ಬೇಸಾಯಗಾರನ ಬಳಿಗೆ ಕಳಿಸಿಕೊಟ್ಟ. ಅವನು ಅಲ್ಲಿ ಮೂರು ದಿನ ಅಷ್ಟೆ ಇದ್ದ. ಆಮೇಲೆ ಮನೆಗೆ ಓಡಿ ಬಂದ. ಮತ್ತೆ ಹಿಂದಿನಂತೆಯೇ ಬೆಂಕಿಗೂಡಿನ ಮೇಲೆ ಸೋಮಾರಿಯಾಗಿ ಕೂತ!

ತಂದೆ ಅವನನ್ನು ಬಯ್ದು ಹೊಡೆದು ಒಬ್ಬ ದರ್ಜಿಯ ಬಳಿಗೆ ಕೆಲಸ ಕಲಿಯಲು ಕಳಿಸಿಕೊಟ್ಟ. ಅಲ್ಲಿಂದಲೂ ಅವನು ಅದೇ ರೀತಿ ಓಡಿ ಬಂದ. ಆಮೇಲೆ ತಂದೆ ಅವನನ್ನು ಒಬ್ಬ ಕಮ್ಮಾರನ ಬಳಿಗೆ, ಅನಂತರ ಒಬ್ಬ ಮೋಚಿಯ ಬಳಿಗೆ ಕಳಿಸಿಕೊಟ್ಟ – ಎಲ್ಲಿಗೆ ಕಳಿಸಿದರೂ ಒಂದೇ! ಕೆಲವು ದಿನಗಳಷ್ಟೆ ಅಲ್ಲಿರುತ್ತಿದ್ದ. ಮತ್ತೆ ಓಡಿ ಬರುತ್ತಿದ್ದ, ಬೆಂಕಿಗೂಡಿನ ಮೇಲೆ ಕೂರುತ್ತಿದ್ದ! ಏನು ಮಾಡೋದು?

"ಸರಿ, ಇವನನ್ನು ಯಾವುದಾದರೂ ಬೇರೆ ರಾಜ್ಯಕ್ಕೆ ಕರಕೊಂಡು ಹೋಗಿ ಬಿಡ್ತೀನಿ. ಅಲ್ಲಿಂದ ಅಷ್ಟು ಸುಲಭವಾಗಿ ಹಿಂದಿರುಗಿ ಓಡಿ ಬರೋಕೆ ಆಗೊಲ್ಲ" ಹೇಳಿದ ಮುದುಕ.

ಅವರು ಗಂಟುಮೂಟೆ ಕಟ್ಟಿಕೊಂಡು ಹೊರಟರು. ತುಂಬ ಕಾಲ ನಡೆದು ಹೋದರೋ ಸ್ವಲ್ಪ ಕಾಲವೋ ತಿಳಿಯದು. ಕೊನೆಗೆ ಒಂದು ಕತ್ತಲು ಕವಿದ ದಟ್ಟವಾದ ಕಾಡು ತಲುಪಿದರು. ಆ ಕತ್ತಲಿನಲ್ಲೂ ಅವರಿಗೆ ಒಂದು ಸುಟ್ಟ ಮರದ ಮೋಟು ಕಾಣಿಸಿತು. ಮುದುಕ ಆ ಮೋಟಿನ ಮೇಲೆ ಹೋಗಿ ಕುಳಿತು ಹೇಳಿದ:

"ಓಹ್, ನಾನು ಎಷ್ಟು ಬಳಲಿದೀನಿ!"

ಹೇಳಿದ ಅಷ್ಟೆ, ತಕ್ಷಣವೇ ಎಲ್ಲಿಂದಲೋ ಒಬ್ಬ ಗಿಡ್ಡ ಮುದುಕ ಕಾಣಿಸಿಕೊಂಡ. ಅವನ ಮೈ ಎಲ್ಲ ಸುಕ್ಕುಗಟ್ಟಿತ್ತು. ಅವನ ಗಡ್ಡ ಹಸುರಾಗಿತ್ತು. ಅದು ಅವನ ಮೊಣಕಾಲಿನವರೆಗೂ ಇಳಿಬಿದ್ದಿತ್ತು.

"ಏನಪ್ಪ, ಏನು ಕರೆದೆ? ನನ್ನಿಂದ ನಿನಗೆ ಏನು ಬೇಕು?"

ಮುದುಕನಿಗೆ ಆಶ್ಚರ್ಯವಾಯಿತು. ಎಲ್ಲಿಂದ ಬಂತು ಇಂಥ ಪವಾಡ? ಅವನು ಹೇಳಿದ:

"ನಾನೆಲ್ಲಿ ನಿನ್ನನ್ನು ಕರೆದೆ?"

"ಕರೀಲಿಲ್ಲವೇ? ಆ ಮರದ ಮೋಟಿನ ಮೇಲೆ ಕುಳಿತು 'ಓಹ್!' ಅಂತ ಹೇಳಲಿಲ್ಲವೇ?"

"ಹೌದು. ನಾನು ತುಂಬ ಬಳಲಿದ್ದೆ. 'ಓಹ್' ಅಂತ ಅಂದೆ. ನೀನು ಯಾರು?"

"ನಾನೇ ಆ 'ಓಹ್' – ಈ ಕಾಡಿನ ದೊರೆ. ನೀನು ಎಲ್ಲಿಗೆ ಹೊರಟೆ?"

"ನನ್ನ ಮಗನನ್ನು ಎಲ್ಲಾದರೂ ಕೆಲಸಕ್ಕೆ ಸೇರಿಸೋಣ ಇಲ್ಲವೇ ಕೆಲಸ ಕಲಿಯಲಿಕ್ಕೆ ಸೇರಿಸೋಣ ಅಂತ ಕರಕೊಂಡು ಹೊರಟೆ. ಅವನಿಗೆ ಏನಂದರೆ ಏನೂ ಬರದು. ಯಾರಾದರೂ ಪುಣ್ಯಾತ್ಮರು ಇವನ ತಲೆಗೆ ಒಂದಿಷ್ಟು ಬುದ್ಧಿ ತುಂಬಬಹುದು. ಮನೆಯಲ್ಲಿದ್ದರೆ ಇವನು ಏನೂ ಕಲಿಯೊಲ್ಲ. ಎಲ್ಲಿ ಬಿಟ್ಟರೂ ಮತ್ತೆ ಓಡಿ ಬರ್‍ತಾನೆ, ಮೂರು ಹೊತ್ತೂ ಬೆಂಕಿಗೂಡಿನ ಮೇಲೆ ಕೂತಿರ್‍ತಾನೆ."

"ಅವನನ್ನು ನನ್ನ ಬಳಿ ಬಿಡು. ನಾನು ಅವನಿಗೆ ಬುದ್ಧಿ ಕಲಿಸ್ತೀನಿ. ಆದರೆ ಒಂದು ಷರತ್ತಿನ ಮೇಲೆ. ಒಂದು ವರ್ಷ ಆದ ಮೇಲೆ ನೀನು ನಿನ್ನ ಮಗನನ್ನು ಕರೆದುಕೊಂಡು ಹೋಗೋಕೆ ಬಾ. ಅವನನ್ನು ಗುರುತು ಹಿಡಿದರೆ ಕರಕೊಂಡು ಹೋಗು. ಇಲ್ಲವೇ, ಇನ್ನೊಂದು ವರ್ಷ ಅವನು ನನ್ನ ಸೇವೆಯಲ್ಲೇ ಉಳೀತಾನೆ."

ಮುದುಕ ಹೇಳಿದ:

"ಹಾಗೇ ಆಗಲಿ."

ಇಬ್ಬರೂ ಕೈಕುಲುಕಿ ಒಪ್ಪಂದ ಮಾಡಿಕೊಂಡರು. ಮುದುಕ ಮನೆಗೆ ಹಿಂದಿರುಗಿದ. ಮಗ ಓಹ್‌ನ ಬಳಿ ಉಳಿದ.

ಓಹ್ ಹುಡುಗನನ್ನು ನೇರವಾಗಿ ಪಾತಾಳ ಲೋಕಕ್ಕೆ ಕರೆದುಕೊಂಡು ಹೋದ. ಅಲ್ಲಿ ತನ್ನ ಹಸುರು ಮನೆಗೆ ಕರೆದೊಯ್ದ. ಆ ಮನೆಯಲ್ಲಿ ಎಲ್ಲ ಹಸುರೇ – ಗೋಡೆಗಳು ಹಸುರು, ಚಾವಣಿ ಹಸುರು, ಓಹ್‌ನ ಹೆಂಡತಿ ಹಸುರು, ಅವನ ಮಕ್ಕಳೆಲ್ಲ ಹಸುರು. ಅವನ ಕೆಲಸಗಾರರೂ ಸಹ ಹಸುರೇ! ಓಹ್ ಹುಡುಗನಿಗೆ ಕುಳಿತುಕೊಳ್ಳುವಂತೆ ಹೇಳಿದ. ಅವನಿಗೆ ಒಂದಿಷ್ಟು ತಿನ್ನಲು ಕೊಡುವಂತೆ ತನ್ನ ಸೇವಕರಿಗೆ ಆಜ್ಞಾಪಿಸಿದ. ಅವರು ಅವನಿಗೆ ಕೊಟ್ಟ ಮಾಂಸದ ಸಾರೂ ಹಸುರಾಗಿತ್ತು, ಕುಡಿಯಲು ಕೊಟ್ಟ ನೀರೂ ಹಸುರಾಗಿತ್ತು. ಅವನು ಕೊಟ್ಟಿದ್ದನ್ನೆಲ್ಲ ತಿಂದ, ಕುಡಿದ.

"ಸರಿ, ಇನ್ನು ಕೆಲಸಕ್ಕೆ ಹೊರಡು. ಹೋಗಿ ಒಂದಿಷ್ಟು ಕಟ್ಟಿಗೆ ಕಡಿದು ಮನೆಗೆ ತಂದು ಹಾಕು" ಎಂದ ಓಹ್.

ಹುಡುಗ ಹೋದ. ಕಟ್ಟಿಗೆ ಕಡಿದನೋ ಬಿಟ್ಟನೋ ತಿಳಿಯದು, ಆದರೆ ಹೋದ, ಮೃದುವಾದ ಹುಲ್ಲಿನ ಮೇಲೆ ಮಲಗಿದ. ಓಹ್ ಬಂದು ನೋಡ್ತಾನೆ – ಹುಡುಗ ಮಲಗಿದಾನೆ! ಓಹ್ ತನ್ನ ಸೇವಕರನ್ನು ಕೂಗಿ ಕರೆದ. ಕಟ್ಟಿಗೆ ರಾಶಿ ಹಾಕಿ ಅದರ ಮೇಲೆ ಆ ಹುಡುಗನನ್ನು ಮಲಗಿಸಿ ಬೆಂಕಿ ಹಚ್ಚಿ ಅವನನ್ನು ಸುಟ್ಟುಹಾಕಬೇಕೆಂದು ಆಜ್ಞಾಪಿಸಿದ.

ಹುಡುಗ ಸುಟ್ಟು ಬೂದಿಯಾದ! ಓಹ್ ಆ ಬೂದಿಯನ್ನು ಗಾಳಿಯಲ್ಲಿ ತೂರಿದ. ಆದರೆ ಒಂದು ಸಣ್ಣ ಕೆಂಡ ಆ ಬೂದಿಯಿಂದ ಬಿದ್ದಿತು. ಓಹ್ ಅದರ ಮೇಲೆ ಸಂಜೀವಿನಿ ನೀರನ್ನು ಚಿಮುಕಿಸಿದ. ಹುಡುಗ ಜೀವ ತಳೆದು ಎದ್ದು ನಿಂತ – ಅವನಿಗೆ ಏನೂ ಆಗಿರಲಿಲ್ಲವೇನೋ ಅನ್ನುವಂತೆ!

ಮತ್ತೆ ಅವನನ್ನು ಕಟ್ಟಿಗೆ ಕಡಿದು ತರುವಂತೆ ಕಳಿಸಿಕೊಡಲಾಯಿತು. ಅವನು ಮತ್ತೆ ಮಲಗಿದ. ಓಹ್ ಹಿಂದೆ ಮಾಡಿದಂತೆಯೇ ಮಾಡಿದ. ಹುಡುಗನನ್ನು ಸುಟ್ಟು ಬೂದಿ ಮಾಡಿದ. ಬೂದಿಯನ್ನು ಗಾಳಿಯಲ್ಲಿ ತೂರಿದ. ಒಂದು ಕೆಂಡದ ಮೇಲೆ ಸಂಜೀವಿನಿ ನೀರು ಚಿಮುಕಿಸಿದ. ಹುಡುಗ ಮತ್ತೆ ಜೀವಂತನಾದ. ಆದರೆ ಈಗವನು ಬೇರೆಯೇ ರೀತಿಯಿದ್ದ. ಎಷ್ಟು ಮೋಹಕನಾಗಿದ್ದ, ಕಣ್ಣಿಗೆ ಹಬ್ಬವಾಗಿದ್ದ! ಓಹ್ ಇದೇ ರೀತಿ ಮೂರನೆಯ ಬಾರಿ ಹುಡುಗನನ್ನು ಸುಟ್ಟು ಬೂದಿ ಮಾಡಿದ, ಕೆಂಡದ ಮೇಲೆ ಮತ್ತೆ ಸಂಜೀವಿನಿ ನೀರನ್ನು ಚಿಮುಕಿಸಿದ. ಹುಡುಗ ಮೂರನೆಯ ಬಾರಿಗೆ ಪುನರ್ಜನ್ಮ ಪಡೆದ. ಈಗಂತೂ ಅವನು ಎಂಥ ಚೆಲುವನಾಗಿದ್ದನೆಂದರೆ ಅವನ ಸೌಂದರ್ಯವನ್ನು ನಾಲಿಗೆಯಿಂದ ವರ್ಣಿಸುವುದು ಸಾಧ್ಯವಿಲ್ಲ. ಅದು ಊಹೆಗೂ ಮೀರಿದುದಾಗಿತ್ತು. ಎಂದೂ ಕಾಣದಂಥದಾಗಿದ್ದಿತು. ರಮ್ಯ ಕಥೆಗಳಲ್ಲಷ್ಟೆ ಅದು ಸಾಧ್ಯವಿದ್ದಿತು!

ಹುಡುಗ ಓಹ್‌ನ ಬಳಿಗೆ ಬಂದು ಆಗಲೇ ಒಂದು ವರ್ಷವಾಯಿತು. ತಂದೆ ಹುಡುಗನಿಗಾಗಿ ಬಂದ. ಅದೇ ಕತ್ತಲ ಕಾಡಿಗೆ ಬಂದು, ಅದೇ ಸುಟ್ಟ ಮರದ ಮೋಟಿನ ಮೇಲೆ ಕುಳಿತು "ಓಹ್!" ಎಂದ.

ಅಕೋ, ಓಹ್ ಹೊರಬಂದ ಮರದ ಮೋಟಿನ ಕೆಳಗಿನಿಂದ.

"ನಮಸ್ಕಾರ, ಅಜ್ಜ!"

"ನಮಸ್ಕಾರ, ಓಹ್! ನಾನು ಮಗನಿಗಾಗಿ ಬಂದೆ."

"ಸರಿ, ನಡಿ. ಗುರುತು ಹಿಡಿದರೆ – ಅವನು ನಿನ್ನವನು. ಇಲ್ಲವೇ ಅವನು ಇನ್ನೂ ಒಂದು ವರ್ಷ ನನ್ನ ಸೇವೆಯಲ್ಲಿರುತ್ತಾನೆ."

ಅವರು ಹಸುರು ಮನೆಗೆ ಹೋಗುತ್ತಾರೆ. ಓಹ್ ಒಂದು ಚೀಲ ಕಾಳು ತೆಗೆದುಕೊಂಡು ಅಂಗಳದಲ್ಲಿ ಎರಚಿದ. ಗುಬ್ಬಚ್ಚಿಗಳು ಬಂದವು ಮೋಡದಂತೆ ಕವಿದುಕೊಂಡು ಕಾಳು ತಿನ್ನಲು.

"ಹುಂ. ಆರಿಸಿಕೋ. ನಿನ್ನ ಮಗ ಯಾರು?"

ಮುದುಕ ದಿಗ್ಭ್ರಾಂತನಾದ: ಎಲ್ಲ ಗುಬ್ಬಚ್ಚಿಗಳೂ ಒಂದೇ ತರಹ ಇವೆ. ಒಂದರಂತೆ ಎಲ್ಲವೂ. ಅವನು ತನ್ನ ಮಗನನ್ನು ಗುರುತು ಹಿಡಿಯದೆ ಹೋದ.

"ಸರಿ. ಮನೆಗೆ ಹೋಗು!" ಎಂದ ಓಹ್. "ನಿನ್ನ ಮಗನನ್ನು ಇನ್ನೂ ಒಂದು ವರ್ಷ ಇರಿಸಿ ಕೊಂಡಿರುತ್ತೇನೆ."

ಇನ್ನೊಂದು ವರ್ಷವೂ ಆಯಿತು. ಮತ್ತೆ ಮುದುಕ ಓಹ್‌ನ ಬಳಿಗೆ ಬಂದ. ಮರದ ಮೋಟಿನ ಮೇಲೆ ಕುಳಿತು "ಓಹ್!" ಎಂದು ಹೇಳಿದ.

ಓಹ್ ಕಾಣಿಸಿಕೊಂಡ.

"ಸರಿ, ನಡಿ. ನಿನ್ನ ಮಗನನ್ನು ಆರಿಸಿಕೋ."

ಅವನು ಮುದುಕನನ್ನು ಕೊಟ್ಟಿಗೆಗೆ ಕರೆದೊಯ್ದ. ಅಲ್ಲಿ ಟಗರುಗಳು, ಒಂದರಂತೆ ಎಲ್ಲವೂ.

ಮುದುಕ ನೋಡಿದ, ನೋಡಿದ – ಮಗನನ್ನು ಗುರುತು ಹಿಡಿಯದೆ ಹೋದ.

"ನಿನ್ನ ದಾರಿ ಹಿಡಿದು ಹೋಗು!" ಓಹ್ ಹೇಳಿದ. "ಇನ್ನೂ ಒಂದು ವರ್ಷ ನಿನ್ನ ಮಗ ನನ್ನ ಬಳಿ ಇರುತ್ತಾನೆ."

ಮುದುಕನಿಗೆ ಅಪಾರ ದುಃಖವಾಯಿತು. ಆದರೆ ಏನು ಮಾಡುವುದು – ಒಪ್ಪಂದ ಆ ರೀತಿ ಇದೆ. ಬೇರೆ ಏನೂ ಮಾಡಲಾಗದು.

ಮೂರನೆಯ ವರ್ಷವೂ ಕಳೆಯಿತು. ಮುದುಕ ಮತ್ತೆ ಮಗನನ್ನು ಕರೆದುಕೊಂಡು ಬರಲು ಹೋದ. ಆಲೋಚನಾಮಗ್ನನಾಗಿ ಕಾಡಿನಲ್ಲಿ ಹೋಗುತ್ತಿದ್ದ. ಆಗ ಅವನ ಬಳಿಗೆ ಒಂದು ನೊಣ ಝೇಂಗುಟ್ಟಿಕೊಂಡು ಬಂದಿತು.

ಮುದುಕ ಅದನ್ನು ಅಟ್ಟುತ್ತಿದ್ದಾನೆ, ಆದರೆ ಅದು ಮತ್ತೆ ಝೇಂಗುಟ್ಟುತ್ತಿದೆ.

ಅದು ಅವನ ಕಿವಿಯ ಮೇಲೆ ಬಂದು ಕುಳಿತುಕೊಂಡಿತು. ತಕ್ಷಣವೇ ಮುದುಕನಿಗೆ ಕೇಳಿ ಬರುತ್ತೆ:

"ಅಪ್ಪ, ಇದು ನಾನು, ನಿನ್ನ ಮಗ! ಓಹ್ ನನಗೆ ತುಂಬ ವಿದ್ಯೆ ಬುದ್ಧಿ ಕಲಿಸಿದ್ದಾನೆ. ನಾನೀಗ

ಅವನಿಗೆ ತಿರುಮಂತ್ರ ಕಲಿಸುತ್ತೇನೆ. ಅವನು ಮತ್ತೆ ನನ್ನನ್ನು ಆರಿಸಿಕೋ ಅಂತ ನಿನ್ನ ಮುಂದೆ ಅನೇಕ ಪಾರಿವಾಳಗಳನ್ನು ಬಿಡುತ್ತಾನೆ. ನೀನು ಬೇರೆ ಯಾವ ಪಾರಿವಾಳವನ್ನೂ ತೆಗೆದುಕೊಳ್ಳ ಬೇಡ. ಅವನು ಎರಚಿದ ಕಾಳುಗಳನ್ನು ತಿನ್ನದೆ ಪೇರು ಹಣ್ಣಿನ ಮರದ ಕೆಳಗೆ ಒಂಟಿಯಾಗಿ ಕುಳಿ ತಿರುವ ಪಾರಿವಾಳವನ್ನಷ್ಟೆ ತೆಗೆದುಕೋ."

ಮುದುಕನಿಗೆ ಮಹದಾನಂದವಾಯಿತು. ಮಗನೊಂದಿಗೆ ಇನ್ನಷ್ಟು ಮಾತನಾಡ ಬಯಸಿದ್ದ. ಆದರೆ ನೊಣ ಆಗಲೇ ಹಾರಿ ಹೋಗಿತ್ತು.

ಮುದುಕ ಸುಟ್ಟ ಮರದ ಮೋಟಿನ ಬಳಿಗೆ ಬಂದು "ಓಹ್!" ಎಂದು ಹೇಳಿದ.

ಓಹ್ ಹೊರ ಬಂದ. ಮುದುಕನನ್ನು ತನ್ನ ಕಾಡಿನ ಭೂಮಿಯ ಕೆಳಗಿದ್ದ ರಾಜ್ಯಕ್ಕೆ ಕರೆದೊಯ್ದ. ತನ್ನ ಹಸುರು ಮನೆಗೆ ಕರೆದುಕೊಂಡು ಹೋಗಿ ಅಂಗಳದಲ್ಲಿ ಒಂದಿಷ್ಟು ಕಾಳು ಚೆಲ್ಲಿ ಪಾರಿವಾಳಗಳನ್ನು ಕರೆಯ ತೊಡಗಿದ. ಅವು ಎಷ್ಟು ಭಾರಿ ಸಂಖ್ಯೆಯಲ್ಲಿ ಬಂದವು, ಅಬ್ಬಾ, ದೇವರೇ! ಮತ್ತೆ ಎಲ್ಲ ಒಂದೇ ತರಹ. ಒಂದರಂತೆ ಎಲ್ಲ.

"ಸರಿಯಪ್ಪ. ಆರಿಸಿಕೋ, ನಿನ್ನ ಮಗನನ್ನು!"

ಎಲ್ಲ ಪಾರಿವಾಳಗಳೂ ಕಾಳು ತಿನ್ನುತ್ತಿವೆ. ಆದರೆ ಒಂದು ಮಾತ್ರ ಕಾಳು ತಿನ್ನದೆ ಪೇರು ಹಣ್ಣಿನ ಮರದ ಕೆಳಗೆ ಒಂಟಿಯಾಗಿ ಕುಳಿತಿದೆ.

"ಇದು ನನ್ನ ಮಗ."

"ಸರಿ, ಈ ಬಾರಿ ನೀನು ಗೆದ್ದೆ, ಮುದುಕಪ್ಪ! ನಿನ್ನ ಮಗನನ್ನು ಕರೆದುಕೊಂಡು ಹೋಗು."

ಓಹ್ ಆ ಪಾರಿವಾಳವನ್ನು ಹಿಡಿದುಕೊಂಡು ತನ್ನ ಎಡ ಭುಜದ ಮೂಲಕ ಅದನ್ನು ಎಸೆದ. ಆಹ್, ಏನಾಶ್ಚರ್ಯ – ಮುಂದೆ ಎಂತಹ ಸ್ಫುರದ್ರೂಪಿ ಯುವಕ ನಿಂತಿದ್ದ! ಅಂತಹವನನ್ನು ಈ ಪ್ರಪಂಚ ಇನ್ನೂ ಕಂಡುದೇ ಇಲ್ಲ.

ತಂದೆಗೆ ತುಂಬ ಸಂತೋಷವಾಯಿತು. ಮಗನನ್ನು ಅಪ್ಪಿಕೊಂಡ, ಮುದ್ದಾಡಿದ.

ಮಗನೂ ಆನಂದದಿಂದ ತಂದೆಯನ್ನು ಆಲಂಗಿಸಿಕೊಂಡ.

"ಸರಿ, ನಡಿ. ಮನೆಗೆ ಹೋಗೋಣ, ಮಗು!"

ಇಬ್ಬರೂ ಊರ ದಾರಿ ಹಿಡಿದು ಹೋಗುತ್ತಾರೆ. ಮಗ ತಾನು ಓಹ್‌ನ ಮನೆಯಲ್ಲಿ ಹೇಗೆ ವಾಸಿಸುತ್ತಿದ್ದ ಅನ್ನುವುದನ್ನೆಲ್ಲ ವಿವರಿಸಿ ತಿಳಿಸುತ್ತಾನೆ.

ಅಪ್ಪ ಹೇಳುತ್ತಾನೆ:

"ಒಳ್ಳೆಯದು, ಮಗು! ನೀನು ಮೂರು ವರ್ಷ ಆ ಭೂತನ ಸೇವೆಯಲ್ಲಿದ್ದೆ. ಆದರೆ ಏನೂ ಸಂಪಾದನೆ ಮಾಡಲಿಲ್ಲ. ನಾವು ಹಿಂದಿನಂತೆಯೇ ಬಡವರಾಗಿಯೇ ಉಳಿದಿದ್ದೇವೆ. ಹೋಗಲಿ, ಬಿಡು. ಅದೇನೂ ಅಷ್ಟು ದುಃಖದ್ದಲ್ಲ! ನೀನು ಜೀವಂತವಾಗಿದ್ದೀಯಲ್ಲ, ಅಷ್ಟೇ ಸಾಕು!"

"ನೀನು ದುಃಖಪಡಬೇಡ, ಅಪ್ಪ. ಎಲ್ಲ ಬದಲಾಗುತ್ತೆ."

ಅವರು ಮುಂದೆ ಹೋಗುತ್ತಾರೆ. ಕೆಲವು ಬೇಟೆಗಾರರನ್ನು ಕಾಣುತ್ತಾರೆ. ನೆರೆಯ ಗ್ರಾಮದ ಪ್ರಭುಗಳು ನರಿಗಳ ಬೇಟೆಗೆ ಹೊರಟಿದ್ದರು. ಮಗ ತನ್ನನ್ನು ಬೇಟೆ ನಾಯಿಯನ್ನಾಗಿ ಪರಿವರ್ತಿಸಿ ಕೊಂಡು ತಂದೆಗೆ ಹೇಳಿದ:

"ಆ ಪ್ರಭುಗಳು ಬೇಟೆ ನಾಯಿಯನ್ನು ಕೊಳ್ಳಲು ನಿನ್ನ ಬಳಿಗೆ ಬರುತ್ತಾರೆ. ಮುನ್ನೂರು ರೂಬಲ್‌ಗಳಿಗೆ ಮಾರು. ಕೊರಳಪಟ್ಟಿಯನ್ನು ಮಾತ್ರ ಕೊಡಬೇಡ."

ಮಗ ನಾಯಿಯಾಗಿ ತಾನೇ ನರಿಯನ್ನು ಅಟ್ಟಿಸಿಕೊಂಡು ಹೋದ. ಅದನ್ನು ಹಿಡಿದು ತಂದ. ಪ್ರಭುಗಳು ಕಾಡಿನಿಂದ ಹೊರ ಬಂದು ಈ ಮುದುಕನ ಬಳಿ ಬಂದರು.

"ಏನಪ್ಪ, ಆ ನಾಯಿ ನಿನ್ನದೆ?"

"ಹೌದು, ನನ್ನದು."

"ಒಳ್ಳೇ ಬೇಟೆ ನಾಯಿ! ನಮಗೆ ಮಾರುತ್ತೀಯ?"

"ಕೊಂಡುಕೊಳ್ಳಿ."

"ಎಷ್ಟು ಕೊಡಬೇಕು?"

"ಮುನ್ನೂರು ರೂಬಲ್, ಆದರೆ ಕೊರಳಪಟ್ಟಿ ಇಲ್ಲದೆ."

"ನಮಗೇಕೆ ನಿನ್ನ ಕೊರಳಪಟ್ಟಿ! ಅದಕ್ಕಿಂತ ಹೆಚ್ಚು ಉತ್ತಮವಾದುದನ್ನು ಕೊಳ್ಳುತ್ತೇವೆ. ತಗೋ ಹಣ. ನಾಯಿ ನಮ್ಮದು."

ಅವರು ನಾಯಿಯನ್ನು ಪಡೆದುಕೊಂಡು ಮತ್ತೆ ಅದನ್ನು ಮತ್ತೊಂದು ನರಿಯನ್ನು ಹಿಡಿದು ತರುವಂತೆ ಕಳಿಸಿಕೊಟ್ಟರು. ನಾಯಿ ನರಿಯನ್ನೇನೂ ಅಟ್ಟಿಸಿಕೊಂಡು ಹೋಗದೆ ನೇರವಾಗಿ ಕಾಡಿನೊಳಕ್ಕೇ ಓಡಿಕೊಂಡು ಹೋಯಿತು. ಅಲ್ಲಿ ನಾಯಿಯ ರೂಪ ಬದಲಿತು. ಮಗ ಮತ್ತೆ ತನ್ನ ತಂದೆಯ ಬಳಿಗೆ ಬಂದ.

ಇನ್ನಷ್ಟು ದೂರ ಹೋದರು. ತಂದೆ ಮತ್ತೆ ಹೇಳಿದ:

"ಏನು, ಮಗು, ಈ ಮುನ್ನೂರು ರೂಬಲ್ ಯಾವ ಮೂಲೆಗೋ ನಮಗೆ! ಕೇವಲ ಕೆಲವು ದನಕರು, ಉಪಕರಣಗಳನ್ನು ಕೊಳ್ಳಲು ಮತ್ತು ಮನೆ ರಿಪೇರಿ ಕೆಲಸಕ್ಕಷ್ಟೆ ಸಾಲಬಹುದು, ಆಮೇಲೆ ಮತ್ತೆ ನಮ್ಮ ಜೀವನಕ್ಕೆ ದುಡ್ಡೇ ಇರುವುದಿಲ್ಲ."

"ಆಗಲಿ, ಅಪ್ಪ, ದುಃಖಿಸಬೇಡ. ಈಗ ಇನ್ನು ಕೆಲವು ಬೇಡರು ನಮಗೆ ಸಿಕ್ತಾರೆ. ಅವರು ಡೇಗೆಯ ಸಹಾಯದಿಂದ ಪಕ್ಷಿಗಳನ್ನು ಹಿಡಿಯುವಂಥವರು. ನಾನು ಒಂದು ಡೇಗೆಯಾಗಿ ರೂಪ ಬದಲಿಸಿಕೊಳ್ಳುತ್ತೇನೆ. ನೀನು ನನ್ನನ್ನು ಮುನ್ನೂರು ರೂಬಲ್‌ಗೆ ಮಾರು. ಆದರೆ ಜ್ಞಾಪಕದಲ್ಲಿಟ್ಟಿರು, ನನ್ನ ತಲೆಯ ಮೇಲಿನ ತೊಗಲಿನ ಮುಸುಕನ್ನು ಮಾತ್ರ ಕೊಡಬೇಡ!"

ಅವರು ಹೊಲದಲ್ಲಿ ಒಂದಷ್ಟು ದೂರ ಹೋದರು. ಅವರಿಗೆ ಕೆಲವು ಬೇಡರು ಭೇಟಿಯಾದರು. ಮುದುಕನ ಬಳಿ ಒಂದು ಸೊಗಸಾದ ಡೇಗೆ ಇರುವುದನ್ನು ಅವರು ಕಂಡರು.

"ಏನಪ್ಪ, ನಿನಗೇಕೆ ಈ ಡೇಗೆ? ನಮಗೆ ಕೊಟ್ಟು ಬಿಡು!"

"ಕೊಂಡುಕೊಳ್ಳಿ."

"ಎಷ್ಟು ಹಣ ಕೊಡಬೇಕು?"

"ಮುನ್ನೂರು ರೂಬಲ್ ಕೊಡಿ. ಡೇಗೆಯನ್ನು ಕೊಡುತ್ತೇನೆ. ಆದರೆ ಅದರ ತಲೆಯ ಮೇಲಿನ ಮುಸುಕನ್ನು ಮಾತ್ರ ಕೊಡುವುದಿಲ್ಲ."

"ನಮಗೇಕೆ ಆ ಮುಸುಕು! ನಾವದಕ್ಕೆ ಇನ್ನೂ ಸೊಗಸಾದ ಮುಸುಕು ಹಾಕುತ್ತೇವೆ."

ಒಪ್ಪಿಗೆಯಾಯಿತು. ಕೈ-ಕೈ ಕುಲುಕಿದರು. ಮುದುಕ ಮುನ್ನೂರು ರೂಬಲ್ ಪಡೆದುಕೊಂಡ. ಮುಂದೆ ಹೋದ.

ಬೇಡರು ಹೊಸದಾಗಿ ಕೊಂಡ ಡೇಗೆಯನ್ನು ಪಕ್ಷಿ ಹಿಡಿದು ತರಲೆಂದು ಬಿಟ್ಟರು. ಅದು ನೇರವಾಗಿ ಕಾಡಿನೊಳಕ್ಕೆ ಹಾರಿ ಹೋಯಿತು. ಭೂಮಿಗೆ ಇಳಿಯಿತು. ಮತ್ತೆ ಹುಡುಗನಾಯಿತು. ಹುಡುಗ ಅಪ್ಪನನ್ನು ಸೇರಿಕೊಂಡ.

"ಈಗ ಪರವಾಗಿಲ್ಲ! ನಾವು ತಕ್ಕ ಮಟ್ಟಿಗೆ ಜೀವನ ನಡೆಸಬಹುದು!" ಎಂದ ಮುದುಕ.

"ತಾಳು, ಅಪ್ಪ. ನಮಗೆ ಇನ್ನಷ್ಟು ಹಣ ಬರುತ್ತೆ! ನಾವು ಸಂತೆಯ ಸಮೀಪ ಹೋದಾಗ ನಾನು ಒಂದು ಕುದುರೆಯಾಗಿ ರೂಪ ಬದಲಿಸಿಕೊಳ್ಳುತ್ತೇನೆ. ನೀನು ನನ್ನನ್ನು ಮಾರು.

ನಿನಗೆ ಒಂದು ಸಾವಿರ ರೂಬಲ್ ಕೊಡುತ್ತಾರೆ. ಆದರೆ ಲಗಾಮನ್ನು ಮಾತ್ರ ಕೊಡಬೇಡ !"

ಸ್ವಲ್ಪ ಹೊತ್ತಾದ ಮೇಲೆ ಅವರು ಸಂತೆಯ ಬಳಿ ಬಂದರು. ಮಗ ಕುದುರೆಯಾಗಿ ರೂಪ ಬದಲಿಸಿಕೊಂಡ. ಎಂಥ ಜಬರ್ದಸ್ತ ಕುದುರೆ – ಹತ್ತಿರ ಹೋಗಲೇ ಹೆದರಿಕೆ ! ಮುದುಕ ಅದರ ಲಗಾಮನ್ನು ಹಿಡಿದುಕೊಂಡು ಕರೆದೊಯ್ದ. ಆದರೆ ಅದನ್ನು ಅಂಕೆಯಲ್ಲಿರಿಸುವುದು ಅವನಿಗೆ ಕಷ್ಟವಾಗಿತ್ತು. ಅದು ಎಡಬಿಡದೆ ಕುಪ್ಪಳಿಸುತ್ತಿತ್ತು, ಹಿಂಗಾಲುಗಳನ್ನು ಚಿಮ್ಮುತ್ತಿತ್ತು, ನೆಲವನ್ನು ಗೊರಸುಗಳಿಂದ ಬಗೆಯುತ್ತಿತ್ತು. ವರ್ತಕರು ಈ ಕುದುರೆಯನ್ನು ಕಂಡು ಆಕರ್ಷಿತರಾದರು. ಅದರ ಬಳಿಗೆ ಧಾವಿಸಿ ಬಂದರು. ವ್ಯಾಪಾರ ಚೌಕಾಶಿ ಪ್ರಾರಂಭ ವಾಯಿತು.

"ಒಂದು ಸಾವಿರ ರೂಬಲ್, ಆದರೆ ಲಗಾಮಿಲ್ಲದೆ" ಎಂದ ಮುದುಕ. "ಅಷ್ಟಕ್ಕಾದರೆ ಕೊಡ್ತೀನಿ !"

"ನಮಗೇಕೆ ಬೇಕು ನಿನ್ನ ಲಗಾಮು ! ನಾವು ಅದಕ್ಕೆ ಚಿನ್ನದ ಲಗಾಮು ಹಾಕ್ತೀವಿ" ಎಂದರು ವರ್ತಕರು.

ಐನೂರು ರೂಬಲ್ ಕೊಡ್ತಾರೆ. ಆದರೆ ಮುದುಕ ಒಪ್ಪಲಿಲ್ಲ. ಕುದುರೆಯನ್ನು ಕೊಡಲಿಲ್ಲ. ಆಗ ಅವನ ಬಳಿಗೆ ಒಬ್ಬ ವಕ್ರಾಕಾರದ ಜಿಪ್ಸಿ ಬಂದ.

"ಏನಪ್ಪ, ಎಷ್ಟು ಕೊಡಬೇಕು, ನಿನ್ನ ಕುದುರೆಗೆ?"

"ಒಂದು ಸಾವಿರ ರೂಬಲ್. ಆದರೆ ಲಗಾಮಿಲ್ಲದೆ."

"ಹೊ-ಹ್ಹೊ ! ತುಂಬ ದುಬಾರಿ ಕಣಯ್ಯ ! ಐನೂರು ತಗೋ. ಲಗಾಮನ್ನೂ ಕೊಡು."

"ಇಲ್ಲ. ಒಪ್ಪಿಗೆ ಇಲ್ಲ !" ಎಂದ ಮುದುಕ.

"ಹೋಗಲಿ, ಆರು ನೂರು ತಗೋ."

ಹೀಗೆ ಆ ಜಿಪ್ಸಿ ಎಷ್ಟು ಚೌಕಾಶಿ ಮಾಡಿದರೂ ಮುದುಕ ಒಂದು ಹೆಜ್ಜೆಯೂ ಕೆಳಗಿಳಿಯಲಿಲ್ಲ.

"ಹುಂ, ಹೋಗಲಿ, ತಗೋ, ಸಾವಿರ ರೂಬಲ್ ! ಆದರೆ ಲಗಾಮೂ ಸೇರಿ."

"ಇಲ್ಲ. ಲಗಾಮು ನನ್ನದು !"

"ಎಂಥ ಮನುಷ್ಯನಪ್ಪ ನೀನು. ಎಲ್ಲಾದರೂ ಉಂಟೆ, ಕುದುರೆಯನ್ನು ಯಾರಾದರೂ

ಲಗಾಮಿಲ್ಲದೆ ಮಾರುತ್ತಾರೆಯೆ? ಕುದುರೆಯನ್ನು ಕೈಯಿಂದ ಕೈಗೆ ಕೊಡುವುದು ಹೇಗೆ?"

"ನಿನಗೆ ಇಷ್ಟ ಬಂದ ಹಾಗೆ ಮಾಡಿಕೋ. ಆದರೆ ಲಗಾಮು ನನ್ನದು!"

"ಸರಿ, ತಗೋಪ್ಪ. ಇನ್ನೈದು ರೂಬಲ್ ಕೊಡ್ತೀನಿ. ಕುದುರೆಯನ್ನು ಲಗಾಮಿನ ಸಹಿತ ಕೊಟ್ಟು ಬಿಡು!"

ಮುದುಕ ಯೋಚನೆ ಮಾಡಿದ. ಲಗಾಮಿಗೆ ಹೆಚ್ಚೆಂದರೆ ಮೂವತ್ತೋ ಮೂವತ್ತೈದೋ ಕೊಪೆಕ್ ಆಗಬಹುದು. ಮತ್ತೆ ಈ ಜಿಪ್ಸಿ ಐದು ರೂಬಲ್ ಕೊಡ್ತಿದಾನಲ್ಲ!

ಇಸುಕೊಂಡ, ಕೊಟ್ಟು ಬಿಟ್ಟ.

ಇಬ್ಬರೂ ಕೈ-ಕೈ ಕುಲುಕಿದರು. ಮುದುಕ ಮನೆಯ ಕಡೆಗೆ ನಡೆದ. ಜಿಪ್ಸಿ ಕುದುರೆ ಹತ್ತಿ ಕುಳಿತ. ವಾಸ್ತವವಾಗಿ ಅವನು ಜಿಪ್ಸಿ ಆಗಿರಲೇ ಇಲ್ಲ. ಓಹ್‌ನೇ ಆ ರೂಪದಲ್ಲಿ ಬಂದಿದ್ದ. ಅವನು ಮುದುಕನಿಗೆ ಮೋಸ ಮಾಡಿದ್ದ. ಕುದುರೆ ಗಿಡಗಳಿಗೂ ಮೇಲೆ ಮುಗಿಲಿಗೆ ಸ್ವಲ್ಪ ಕೆಳಗೆ ಬಾಣ ದಂತೆ ಹಾರಿ ಹೋಯಿತು. ಅದು ನಾಲ್ಕು ಕಾಲುಗಳನ್ನೂ ಝಾಡಿಸಿತು. ಓಹ್‌ನನ್ನು ಕೆಳಕ್ಕೆ ಬೀಳಿಸಲು ತುಂಬ ಪ್ರಯತ್ನ ಪಟ್ಟಿತು. ಆದರೆ ಅದು ಆಗದಾಯಿತು!

ಹೀಗೆ ಅವರು ಕಾಡಿಗೆ ಬಂದರು, ಅಲ್ಲಿಂದ ಭೂಮಿ ಕೆಳಗಿನ ಅವನ ರಾಜ್ಯ ತಲುಪಿದರು. ಓಹ್ ಮನೆಗೆ ಹೋದ. ಕುದುರೆಯನ್ನು ಲಾಯದಲ್ಲಿ ಕಟ್ಟಿಹಾಕಿದ.

"ಅಂತೂ ಬಡ್ಡಿಮಗನನ್ನು ಹಿಡಿದು ಹಾಕಿದೆ!" ಎಂದು ಹೇಳಿದ ಓಹ್ ತನ್ನ ಹೆಂಡತಿಗೆ. "ಸಂಜೆ ಅದನ್ನು ನೀರಿಗೆ ಕರೆದುಕೊಂಡು ಹೋಗು."

ಸಂಜೆಯಾಯಿತು. ಓಹ್‌ನ ಹೆಂಡತಿ ಕುದುರೆಯನ್ನು ಹೊಳೆಗೆ ಕರೆದೊಯ್ದಳು. ಕುದುರೆ ಹೊಳೆಯಲ್ಲಿ ನಿಂತು ನೀರು ಕುಡಿಯುತ್ತ ಕೊನೆಗೆ ಹೆಚ್ಚು ಹೆಚ್ಚು ಆಳಕ್ಕೆ ಸುಳಿಗಳೊಳಕ್ಕೆ ಎಳೆದುಕೊಂಡು ಹೋಗ ತೊಡಗಿತು. ಆ ಹೆಂಗಸೂ ಅದರ ಹಿಂದೆಯೇ ಓಡಿದಳು, ಕೂಗಿಕೊಂಡಳು, ರೇಗಿದಳು. ಆದರೆ ಅದು ಇನ್ನೂ ಹೆಚ್ಚು ಹೆಚ್ಚು ಆಳಕ್ಕೆ ಹೋಗುತ್ತಿದೆ. ಕೊನೆಗೆ ಅದು ತನ್ನ ತಲೆಯನ್ನೊಮ್ಮೆ ಗಟ್ಟಿಯಾಗಿ ಒದರಿತು. ಅವಳು ಕೈಯಲ್ಲಿ ಹಿಡಿದಿದ್ದ ಲಗಾಮನ್ನು ಬಿಟ್ಟು ಕೊಟ್ಟಳು. ಕುದುರೆ ನೀರಿನಲ್ಲಿ ಮುಳುಗಿ ಪೆರ್ಚ್ ಮೀನಾಗಿ ಪರಿವರ್ತಿತವಾಯಿತು. ಹೆಂಗಸು ಗಟ್ಟಿಯಾಗಿ ಕಿರುಚಿಕೊಂಡಳು. ಓಹ್ ಓಡೋಡಿ ಬಂದ, ಒಂದು ಕ್ಷಣವೂ ಯೋಚನೆ ಮಾಡಲು ನಿಲ್ಲದೆ ಪೈಕ್ ಮೀನಾಗಿ ತನ್ನನ್ನು ಪರಿವರ್ತಿಸಿಕೊಂಡು ಪೆರ್ಚ್ ಮೀನನ್ನು ಅಟ್ಟಿಸಿಕೊಂಡು ಹೋದ.

"ಪೆರ್ಚ್ ಮೀನೇ, ಮುದ್ದಿನ ಮೀನಿನ ಮರಿಯೇ, ನೀನೊಂದು ಒಳ್ಳೆಯ ಮೀನು, ಭಲೆ ಭೇಷ್ ! ನನ್ನ ಬಳಿಗೆ ಹಿಂದಿರುಗಿ ಬಾ. ಕೂಡಿ ಮಾತನಾಡೋಣ !"

ಪೆರ್ಚ್ ಮೀನು ಉತ್ತರಿಸಿತು:

"ನೀನು ಏನಾದರೂ ವದಂತಿ ಹೇಳಲು ಬಯಸಿದ್ದರೆ ಹೇಳು. ನನಗೆ ದೂರದಲ್ಲಿದ್ದೇ ಕೇಳಿಸುತ್ತದೆ."

ಪೈಕ್ ಮೀನು ಪೆರ್ಚ್ ಮೀನನ್ನು ತುಂಬ ಹೊತ್ತು ಅಟ್ಟಿಸಿಕೊಂಡು ಹೋಯಿತು. ಆದರೂ ಅದಕ್ಕೆ ಪೆರ್ಚ್ ಮೀನನ್ನು ಹಿಡಿಯಲಾಗಲಿಲ್ಲ. ಈ ಹೊತ್ತಿಗೆ ಪೆರ್ಚ್ ಮೀನೂ ತುಂಬ ಬಳಲಿತ್ತು.

ಆ ಸಮಯಕ್ಕೆ ಸರಿಯಾಗಿ ಅದಕ್ಕೆ ತೀರದ ಮೇಲೆ ಒಂದು ಸ್ನಾನಗೃಹ ಕಂಡುಬಂದಿತು. ರಾಜನ ಮಗಳು ಆಗಷ್ಟೆ ಸ್ನಾನಕ್ಕೆ ಅಣಿಯಾಗಿ ಹೋಗುತ್ತಿದ್ದಳು. ಪೆರ್ಚ್ ಮೀನು ತೀರದ ಮೇಲೆ ಹಾರಿ ತನ್ನನ್ನು ಒಂದು ವಜ್ರದ ಉಂಗುರವನ್ನಾಗಿ ಪರಿವರ್ತಿಸಿಕೊಂಡಿತು. ರಾಜಕುಮಾರಿಯ ಕಾಲಿನ ಬಳಿಯೇ ಕಾಣಿಸಿಕೊಂಡಿತು. ರಾಜಕುಮಾರಿ ಅದನ್ನು ಕಂಡಳು.

"ಆಹ್ ! ಎಷ್ಟು ಚೆನ್ನಾಗಿದೆ ಈ ಉಂಗುರ !" ಎಂದುಕೊಂಡು ಅದನ್ನು ಎತ್ತಿಕೊಂಡು ತನ್ನ ಬೆರಳಿಗೆ ಹಾಕಿಕೊಂಡಳು.

ಅರಮನೆಗೆ ಓಡಿ ಹೋಗಿ ರಾಜನಿಗೆ ಹೊಗಳುತ್ತ ಹೇಳಿದಳು:

"ನೋಡಪ್ಪ. ನನಗೆ ಎಂಥ ಸುಂದರವಾದ ಉಂಗುರ ಸಿಕ್ಕಿತು !"

ರಾಜನೂ ಆಶ್ಚರ್ಯಪಟ್ಟ.

ಆದರೆ ಪೆರ್ಚ್ ಮೀನು ಉಂಗುರವಾಗಿ ಪರಿವರ್ತಿತವಾದುದನ್ನು ಓಹ್ ಕಂಡಿದ್ದ. ಅವನು ಕೂಡಲೇ ತನ್ನನ್ನು ಒಬ್ಬ ವ್ಯಾಪಾರಿಯನ್ನಾಗಿ ಪರಿವರ್ತಿಸಿಕೊಂಡು ರಾಜನ ಬಳಿಗೆ ಹೋದ.

"ನಮಸ್ಕಾರ, ಮಹಾಪ್ರಭು, ನಮಸ್ಕಾರ ! ನಾನು ತಮ್ಮಲ್ಲಿಗೆ ಒಂದು ಕೆಲಸದ ಮೇಲೆ ಬಂದಿದ್ದೇನೆ. ನನ್ನ ಉಂಗುರ ನಿಮ್ಮ ಮಗಳ ಬಳಿ ಇದೆ. ದಯವಿಟ್ಟು ಅದನ್ನು ನನಗೆ ಕೊಡಲು ಹೇಳಿ. ನಾನು ಅದನ್ನು ನಮ್ಮ ರಾಜನಿಗೋಸ್ಕರ ಪಡೆದುಕೊಂಡಿದ್ದೆ. ನದಿಯ ಬಳಿ ಕಳೆದುಕೊಂಡು ಬಿಟ್ಟೆ. ಅದು ನಿಮ್ಮ ಮಗಳಿಗೆ ಸಿಕ್ಕಿದೆ."

ರಾಜ ತನ್ನ ಮಗಳನ್ನು ಕರೆಸಿದ.

"ಮಗಳೇ, ಆ ಉಂಗುರವನ್ನು ಕೊಟ್ಟು ಬಿಡಮ್ಮ. ಅದು ಇವರದಂತೆ."

ರಾಜನ ಮಗಳು ಅತ್ತಳು, ನೆಲವನ್ನು ಕಾಲಿನಿಂದ ಕುಟ್ಟುತ್ತ ಹೇಳಿದಳು:

"ಇಲ್ಲ, ಕೊಡೊಲ್ಲ! ಈ ವ್ಯಾಪಾರಿಗೆ ಎಷ್ಟು ಹಣ ಬೇಕೋ ಅಷ್ಟು ಕೊಟ್ಟು ಕಳುಹಿಸು. ಉಂಗುರವಂತೂ ನನ್ನದು!"

ಓಹ್‌ನೂ ತನ್ನ ಪಟ್ಟು ಬಿಟ್ಟು ಕೊಡಲಿಲ್ಲ.

"ನಾನು ನನ್ನ ದೊರೆಗೆ ಈ ಉಂಗುರವನ್ನು ಹಿಂದಿರುಗಿಸದೆ ಇದ್ದರೆ ನನ್ನನ್ನು ಈ ಜಗತ್ತಿನಲ್ಲಿ ಜೀವಿಸಿಕೊಂಡಿರಲೇ ಬಿಡುವುದಿಲ್ಲ!"

ರಾಜ ಮತ್ತೆ ತನ್ನ ಮಗಳಿಗೆ ಕೇಳಿಕೊಳ್ಳುತ್ತಾನೆ:

"ಕೊಟ್ಟು ಬಿಡು, ಮಗಳೇ! ಇಲ್ಲದಿದ್ದರೆ ನಮ್ಮಿಂದಾಗಿ ಈ ವ್ಯಕ್ತಿಗೆ ಭಾರಿ ಆಪತ್ತು ಉಂಟಾಗುತ್ತೆ!"

"ಹಾಗಾದರೆ ಇದು ನನಗೂ ಬೇಡ, ಅವನಿಗೂ ಬೇಡ!" ಎಂದು ರಾಜಕುಮಾರಿ ಉಂಗುರವನ್ನು ನೆಲದ ಮೇಲೆ ಬಲವಾಗಿ ಎಸೆದಳು.

ಉಂಗುರ ಚೂರುಚೂರಾಗಿ ಒಡೆದು ಕೋಣೆಯ ತುಂಬ ರತ್ನದ ಕಾಳುಗಳಾಗಿ ಹರಡಿಕೊಂಡಿತು. ಒಂದು ಕಾಳು ರಾಜಕುಮಾರಿಯ ಹಿಮ್ಮಡಿಯ ಕೆಳಗೆ ಹೋಗಿ ಸೇರಿಕೊಂಡಿತು. ಓಹ್ ಕೂಡಲೇ ಒಂದು ಹದ್ದಾಗಿ ಪರಿವರ್ತಿತನಾಗಿ ಕಾಳುಗಳನ್ನು ತಿನ್ನ ತೊಡಗಿದ. ತಿಂದ, ತಿಂದ, ಎಲ್ಲ ಕಾಳುಗಳನ್ನೂ ತಿಂದು ಮುಗಿಸಿದ. ಚಲಿಸಲೂ ಆಗದಷ್ಟು ಭಾರವಾದ. ರಾಜಕುಮಾರಿಯ ಹಿಮ್ಮಡಿಯ ಕೆಳಗೆ ಸೇರಿಕೊಂಡಿದ್ದ ಒಂದು ಕಾಳು ಮಾತ್ರ ಅವನ ಗಮನಕ್ಕೆ ಬರಲಿಲ್ಲ. ಆ ಕಾಳು ಉರುಳಿಕೊಂಡು, ಉರುಳಿಕೊಂಡು ಹೋಯಿತು, ಗಿಡುಗವಾಗಿ ಪರಿವರ್ತಿತವಾಯಿತು, ಹದ್ದಿನ ಮೇಲೆ ಬಂದೆರಗಿತು.

ಹದ್ದಿಗೆ ಹಾರಿ ಹೋಗಲೂ ಆಗಲಿಲ್ಲ. ಗಿಡುಗ ತನ್ನ ಚೂಪಾದ ಕೊಕ್ಕಿನಿಂದ ಹದ್ದಿನ ತಲೆಯ ಮೇಲೆ ಅನೇಕ ಬಾರಿ ಜೋರಾಗಿ ಕುಕ್ಕಿತು. ಹದ್ದಿನ ಪ್ರಾಣ ಹಾರಿಹೋಯಿತು. ಹೀಗೆ ಓಹ್ ಇನ್ನೆಷ್ಟು ಮಾತ್ರವೂ ಇಲ್ಲದಾದ. ಅನಂತರ ಗಿಡುಗ ನೆಲದ ಮೇಲೆ ಬಿದ್ದು ಚೆಲುವಾದ ಯುವಕನಾಗಿ ಪರಿವರ್ತಿತವಾಯಿತು. ಅವನು ಎಷ್ಟು ಚೆಲುವಾಗಿದ್ದನೆಂದರೆ ಅವನನ್ನು ಕಂಡ ಕೂಡಲೇ ರಾಜಕುಮಾರಿ ಅವನಲ್ಲಿ ಅನುರಕ್ತಳಾದಳು. ರಾಜನಿಗೆ ಹೇಳಿದಳು:

"ನೀನು ಏನೇ ಹೇಳು, ನಾನು ಈ ಯುವಕನನ್ನಷ್ಟೆ ಮದುವೆಯಾಗುವುದು. ಬೇರೆ ಯಾರನ್ನೂ ಮದುವೆಯಾಗೊಲ್ಲ."

ಆದರೆ ಈ ಸಾಮಾನ್ಯ ಯುವಕನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುವುದು ರಾಜ

ನಿಗೆ ಇಷ್ಟವಿಲ್ಲ. ಈಗೇನು ಮಾಡುವುದು ! ಯೋಚನೆ ಮಾಡಿ ಮಾಡಿ, ಕೊನೆಗೆ ಒಪ್ಪಿಗೆ ಕೊಟ್ಟ. ಭಾರಿ ಔತಣ ಏರ್ಪಡಿಸಲು ಆಜ್ಞೆ ಮಾಡಿದ. ವಿವಾಹ ಸಮಾರಂಭ ಎಷ್ಟು ಅದ್ಭುತವಾಗಿ ಜರುಗಿತೆಂದರೆ ಜನ ಅದನ್ನು ಇಡೀ ವರ್ಷ ನೆನಪಿನಲ್ಲಿಟ್ಟಿದ್ದರು.

ನಾನೂ ಆ ಸಮಾರಂಭಕ್ಕೆ ಹೋಗಿದ್ದೆ. ಜೇನು ಮದ್ಯ ಸೇವಿಸಿದೆ. ಅದು ಒಂದು ತೊಟ್ಟೂ ನನ್ನ ಬಾಯಿಯೊಳಕ್ಕೆ ಬೀಳಲಿಲ್ಲ. ಎಲ್ಲ ನನ್ನ ಉದ್ದ ಗಡ್ಡದ ಮೂಲಕ ಹರಿದು ಹೋಯಿತು. ಅದಕ್ಕೇ ನೋಡಿ ನನ್ನ ಗಡ್ಡ ಬೆಳ್ಳಗಿರುವುದು !

ಉರುಳುಕಾಳು

ಒಂದಾನೊಂದು ಕಾಲದಲ್ಲಿ ಒಬ್ಬ ವ್ಯಕ್ತಿ ಇದ್ದ. ಅವನಿಗೆ ಆರು ಮಂದಿ ಗಂಡುಮಕ್ಕಳು, ಒಬ್ಬಳು ಮಗಳು. ಗಂಡುಮಕ್ಕಳು ಹೊಲಕ್ಕೆ ಉಳಲು ಹೋದರು. ತಮಗೆ ಊಟ ತಂದು ಕೊಡಬೇಕೆಂದು ತಂಗಿಗೆ ಹೇಳಿದರು.

ಅವಳು ಕೇಳಿದಳು:

"ನೀವು ಹೊಲದಲ್ಲಿ ಎಲ್ಲಿರುತ್ತೀರೋ, ನನಗೆ ಹೇಗೆ ಗೊತ್ತಾಗುವುದು?"

ಅವರು ಹೇಳಿದರು:

"ನಾವು ಮನೆಯಿಂದ ಹಿಡಿದು ಎಲ್ಲಿ ಉಳುತ್ತೇವೋ ಅಲ್ಲಿಯವರೆಗೆ ಚಾಚಿರುವಂತೆ ಒಂದು ನೇಗಿಲ ಸಾಲು ಮಾಡಿರುತ್ತೇವೆ. ನೀನು ಅದನ್ನು ನೋಡಿಕೊಂಡು ಬಾ."

ಹಾಗೆಂದು ಅವರು ಹೊಲಕ್ಕೆ ಉಳಲು ಹೋದರು.

ಈ ಹೊಲದ ಹತ್ತಿರ ಕಾಡಿನಲ್ಲಿ ಒಂದು ಡ್ರೇಗನ್ ವಾಸವಾಗಿತ್ತು. ಅದು ಈ ಹುಡುಗರು ಮಾಡಿದ್ದ ನೇಗಿಲ ಸಾಲನ್ನು ಮಣ್ಣಿನಿಂದ ಮುಚ್ಚಿ ಇನ್ನೊಂದು ಹೊಸ ಸಾಲನ್ನು ಮಾಡಿತು. ಆ ಸಾಲು ನೇರವಾಗಿ ಅದರ ಮನೆಗೆ ಕರೆದೊಯ್ಯುತ್ತಿತ್ತು. ಹುಡುಗಿ ಅಣ್ಣಂದಿರಿಗೆ ಊಟ ತೆಗೆದು ಕೊಂಡು ಈ ಸಾಲು ಅನುಸರಿಸಿಕೊಂಡು ಹೋದಳು. ಅದು ಅವಳನ್ನು ಡ್ರೇಗನ್‌ನ ಮನೆಯ ಅಂಗಳಕ್ಕೆ ಕರೆದೊಯ್ದಿತು. ಅವಳು ಅಲ್ಲಿಗೆ ಹೋದ ಕೂಡಲೇ ಅವಳನ್ನು ಡ್ರೇಗನ್ ಹಿಡಿದು ತನ್ನ ಮನೆಯೊಳಕ್ಕೆ ಎಳೆದೊಯ್ದಿತು.

ಹೊಲ ಉತ್ತನಂತರ ಗಂಡು ಮಕ್ಕಳು ಸಂಜೆ ಮನೆಗೆ ಬಂದು ತಾಯಿಯನ್ನು ಕೇಳಿದರು:

"ನಾವು ಇಡೀ ದಿನ ಉತ್ತೆವು. ನೀನು ನಮಗೆ ತಿನ್ನಲು ಏನನ್ನೂ ಕಳಿಸಿಕೊಡಲೇ ಇಲ್ಲ!"

ಅವರ ತಾಯಿ ಉತ್ತರಿಸುತ್ತಾಳೆ:

"ಏನೋ ಹೀಗಂತೀರಾ? ಅಲ್ಯೋಂಕ ತಂದು ಕೊಡಲಿಲ್ಲವೇ? ಅವಳೂ ನಿಮ್ಮ ಜೊತೆಯೇ ಮನೆಗೆ ಹಿಂದಿರುಗುತ್ತಾಳೆ ಅಂತ ನಾನು ಅಂದುಕೊಂಡಿದ್ದೆ. ದಾರಿ ತಪ್ಪಿಬಿಟ್ಟಳೋ ಏನೋ?"

ಸೋದರರು ಹೇಳಿದರು:

"ಹಾಗಾದರೆ ಹೋಗಿ ಅವಳನ್ನು ಹುಡುಕಬೇಕು."

ಆರು ಮಂದಿಯೂ ಆ ನೇಗಿಲ ಸಾಲನ್ನೇ ಅನುಸರಿಸಿ ಹೋಗಿ ಅದೇ ಡ್ರೇಗನ್‌ನ ಮನೆಯ ಅಂಗಳ ತಲುಪಿದರು. ಅಲ್ಲಿಗೆ ಹೋಗಿ ನೋಡ್ತಾರೆ – ಅವಳು ಅಲ್ಲಿದ್ದಾಳೆ.

ಅವರನ್ನು ನೋಡಿ ಅವಳು ಹೇಳಿದಳು:

"ಓಹ್, ನನ್ನ ಪ್ರೀತಿಯ ಅಣ್ಣಂದಿರೇ! ನಿಮ್ಮನ್ನೆಲ್ಲಿ ಅಡಗಿಸಿ ಇಡಲಿ ಈಗ? ಡ್ರೇಗನ್ ಹೊರಗೆ ಹೋಗಿದೆ. ಬಂದು ಕಂಡರೆ ನಿಮ್ಮನ್ನೆಲ್ಲ ತಿಂದು ಹಾಕುತ್ತದೆ!"

ಅವಳು ಇನ್ನೂ ಹೇಳಿ ಮುಗಿಸಿಲ್ಲ, ಆಗಲೇ ಡ್ರೇಗನ್ ಬಂದೇ ಬಂದಿತು.

"ಓಹೋ, ಮನುಷ್ಯರ ವಾಸನೆ ಬರುತ್ತಿದೆ!" ಎಂದದು ಫೂತ್ಕರಿಸುತ್ತದೆ. "ಏನು, ಹುಡುಗರೇ, ನನ್ನ ಜೊತೆ ಹೋರಾಡುವುದಕ್ಕೆ ಬಂದಿದ್ದೀರೋ, ಶಾಂತಿ ಮಾಡಿಕೊಳ್ಳಲು ಬಂದಿದ್ದೀರೋ?"

ಅವರು ಕೂಗಿ ಹೇಳುತ್ತಾರೆ:

"ಹೋರಾಡಲು!"

ಆಗ ಡ್ರೇಗನ್ ಹೇಳಿತು:

"ಹಾಗಾದರೆ ನಡೆಯಿರಿ ಹೋಗೋಣ, ಕಬ್ಬಿಣದ ಕಣಕ್ಕೆ!"

ಕಬ್ಬಿಣದ ಕಣಕ್ಕೆ ಹೋರಾಡಲು ಹೋದರು. ಹೆಚ್ಚು ಕಾಲವೇನೂ ಹೋರಾಡಬೇಕಾಗಲಿಲ್ಲ. ಡ್ರೇಗನ್ ಅವರಿಗೆ ಎಂಥ ಹೊಡೆತ ನೀಡಿತೆಂದರೆ ಅವರು ಒಂದೇ ಏಟಿಗೆ ಕಬ್ಬಿಣದ ಕಣದೊಳಗೆ ಹೂತು ಹೋದರು. ಅನಂತರ ಅದು ಅವರನ್ನು ಕಿತ್ತು ಹೊರಗೆಳೆಯಿತು. ಅವರು ಜೀವಂತವಾಗಿರುವುದಕ್ಕಿಂತ ಹೆಚ್ಚಾಗಿ ಸತ್ತಂತಿದ್ದರು. ಅವರನ್ನು ಡ್ರೇಗನ್ ಒಂದು ಆಳವಾದ ಕತ್ತಲ ಕೂಪದೊಳಕ್ಕೆ ಎಸೆಯಿತು.

ಮನೆಯಲ್ಲಿ ಅಮ್ಮ ಅಪ್ಪ ಮಕ್ಕಳಿಗಾಗಿ ಕಾದರು. ಆದರೆ ಅವರು ಹಿಂದಿರುಗಲೇ ಇಲ್ಲ.

ಒಂದು ದಿನ ತಾಯಿ ಬಟ್ಟೆ ಒಗೆಯಲು ನದಿಗೆ ಹೋದಳು. ನೋಡುತ್ತಾಳೆ – ದಾರಿಯಲ್ಲಿ ಒಂದು ಕಾಳು ಉರುಳಿಕೊಂಡು ಬರುತ್ತಿದೆ! ಅವಳು ಅದನ್ನು ಎತ್ತಿಕೊಂಡು ತಿಂದಳು.

ಸ್ವಲ್ಪ ಕಾಲವಾದ ಮೇಲೆ ಅವಳಿಗೆ ಒಬ್ಬ ಮಗ ಹುಟ್ಟಿದ. ಅವರು ಅವನಿಗೆ "ಉರುಳು ಕಾಳು" ಎಂದೇ ಹೆಸರಿಟ್ಟರು.

ಈ ಮಗ ಬೇಗನೆಯೇ ಬೆಳೆದ. ದೊಡ್ಡದಾಗಿ ಬೆಳೆದ. ವಯಸ್ಸಿನಲ್ಲಿ ಚಿಕ್ಕವನಾದರೂ ಆಕಾರದಲ್ಲಿ ದೊಡ್ಡದಾಗಿ ಬೆಳೆದ.

ಒಂದು ಸಾರಿ ತಂದೆ ಮಗನೊಂದಿಗೆ ಬಾವಿ ತೋಡಲು ಹೊರಟ. ಕೆಳಗೆ ಅವರಿಗೆ ಒಂದು ದೊಡ್ಡ ಬಂಡೆ ಅಡ್ಡಬಂತು. ಅದನ್ನು ತೆಗೆದು ಹಾಕಲು ಜನರನ್ನು ಕರೆಯೋಣ ಅಂತ ತಂದೆ ನೆರೆಯ ಹೊಲಕ್ಕೆ ಓಡಿದ. ಅವನು ಹಿಂದಿರುಗಿ ಬರುವುದರೊಳಗೇ ಉರುಳುಕಾಳು ಒಬ್ಬನೇ ಆ ಬಂಡೆಯನ್ನು ಮೇಲಕ್ಕೆ ಎತ್ತಿ ಹಾಕಿದ್ದ. ಅಕ್ಕಪಕ್ಕದವರೆಲ್ಲ ಬಂದು ನೋಡಿ ಆಶ್ಚರ್ಯಪಟ್ಟರು. ಆಶ್ಚರ್ಯಕ್ಕಿಂತ ಹೆಚ್ಚಾಗಿ ಅವರಿಗೆ ದಿಗಿಲಾಯಿತು. ಎಂಥ ಶಕ್ತಿ ಇವನದು ಎಂದವರು ತುಂಬ ಹೆದರಿ ಅವನನ್ನು ಕೊಂದು ಹಾಕಬೇಕು ಅಂತ ನಿರ್ಧರಿಸಿದರು. ಆದರೆ ಉರುಳುಕಾಳು ಆ ಬಂಡೆ ಯನ್ನು ಎತ್ತಿ ಒಮ್ಮೆ ಗಾಳಿಯಲ್ಲಿ ಎಸೆದು ಮತ್ತೆ ಅದನ್ನು ಕೈಗಳಲ್ಲಿ ಹಿಡಿದ. ಜನ ಅದನ್ನು ಕಂಡಿದ್ದೇ ಭಯದಿಂದ ಓಟ ಕಿತ್ತರು.

ತಂದೆ ಹಾಗೂ ಮಗ ಬಾವಿಯನ್ನು ಅಗೆಯುವ ಕಾರ್ಯವನ್ನು ಮುಂದುವರಿಸಿದರು. ಅವರಿಗೆ ಮತ್ತೆ ಒಂದು ದೊಡ್ಡ ಕಬ್ಬಿಣದ ತುಂಡು ಅಡ್ಡಬಂದಿತು. ಉರುಳುಕಾಳು ಅದನ್ನು ತೆಗೆದು ಅಡಗಿಸಿಟ್ಟ.

ಸ್ವಲ್ಪ ಕಾಲ ಕಳೆಯಿತು. ಒಮ್ಮೆ ಉರುಳುಕಾಳು ತನ್ನ ತಂದೆ ತಾಯಿಯರಿಗೆ ಹೇಳಿದ:

"ನನಗೆ ಸೋದರಿಸೋದರರು ಇದ್ದರೇ?"

"ಅಯ್ಯೋ, ಏನು ಹೇಳ್ತೀಯ, ಮಗು?" ಎಂದು ಅವರು ದುಃಖದಿಂದ ಉತ್ತರಿಸಿದರು. "ನಿನಗೆ ಸೋದರಿಯೂ ಇದ್ದಳು, ಆರು ಮಂದಿ ಸೋದರರೂ ಇದ್ದರು. ಹೌದು, ಇದ್ದರು ಅಷ್ಟೆ."

ಹಾಗೆಂದು ಅವರು ಅವನಿಗೆ ಎಲ್ಲವನ್ನೂ ಹೇಳಿದರು.

ಅದನ್ನು ಕೇಳಿದ ಮೇಲೆ ಉರುಳುಕಾಳು ಹೇಳಿದ:

"ಸರಿ. ಹಾಗಾದರೆ, ನಾನು ಹೋಗಿ ಅವರನ್ನು ಹುಡುಕುತ್ತೀನಿ."

ಅವನ ಅಪ್ಪ ಅಮ್ಮ ಬೆಚ್ಚಿಬಿದ್ದರು. ಒಟ್ಟಿಗೇ ಹೇಳಿದರು:

"ಬೇಡ, ಮಗು, ಬೇಡ! ಆರು ಮಂದಿ ಹೋದರು, ಏನೂ ಮಾಡೋಕೆ ಆಗಲಿಲ್ಲ. ಮತ್ತೆ ನೀನೊಬ್ಬನೇ ಹೋಗಿ ಏನು ಮಾಡಬಲ್ಲೆ?"

ಆದರೆ ಉರುಳುಕಾಳು ಉತ್ತರಿಸಿದ:

"ಇಲ್ಲ, ನಾನು ಹೋಗೇ ಹೋಗ್ತೀನಿ! ಅವರದು ನನ್ನದೇ ರಕ್ತಮಾಂಸ. ಅವರು ನನ್ನ ಒಡಹುಟ್ಟಿದವರು. ನಾನು ಅವರನ್ನು ಬಿಡಿಸದಿದ್ದರೆ ಹೇಗೆ?"

ಅವನು ಬಾವಿ ಅಗೆದಾಗ ಸಿಕ್ಕಿದ್ದ ಕಬ್ಬಿಣದ ತುಂಡನ್ನು ತೆಗೆದುಕೊಂಡು ಕಮ್ಮಾರನ ಬಳಿಗೆ ಹೋದ.

ಹೋಗಿ ಹೇಳಿದ:

"ಇದರಿಂದ ನನಗೆ ಒಂದು ದೊಡ್ಡ ಖಡ್ಗ ಮಾಡಿ ಕೊಡು! ಎಷ್ಟು ದೊಡ್ಡದಾದರೆ ಅಷ್ಟೂ ಉತ್ತಮ!"

ಕಮ್ಮಾರ ಎಂಥ ದೊಡ್ಡ ಹಾಗೂ ಭಾರವಾದ ಖಡ್ಗ ಮಾಡಿದನೆಂದರೆ ಅದನ್ನು ಕಮ್ಮಾರ ಸಾಲೆಯಿಂದ ಯಾರಿಗೂ ಹೊರಗೊಯ್ಯಲಾಗಲಿಲ್ಲ. ಆದರೆ ಉರುಳುಕಾಳು ಅದನ್ನು ಬಹು ಸುಲಭವಾಗಿ ಎತ್ತಿ ಹೇಗೆ ಗಾಳಿಯಲ್ಲಿ ಎತ್ತರಕ್ಕೆ ಎಸೆದ! ಆಮೇಲೆ ಅಪ್ಪನಿಗೆ ಹೇಳಿದ:

"ನಾನು ನಿದ್ದೆ ಮಾಡೋಕೆ ಹೋಗ್ತೀನಿ. ಹನ್ನೆರಡು ದಿನ ಆದ ಮೇಲೆ ಖಡ್ಗ ಮತ್ತೆ ಹಾರಿ ಕೊಂಡು ಬರುತ್ತೆ. ಆಗ ನನ್ನನ್ನು ಎಬ್ಬಿಸು."

ಅವನು ನಿದ್ದೆ ಹೋದ. ಹದಿಮೂರನೆಯ ದಿನ ಖಡ್ಗ ಹಾರಿಕೊಂಡು ಬಂದಿತು. ತಂದೆ ಮಗ ನನ್ನು ಎಬ್ಬಿಸಿದ. ಉರುಳುಕಾಳು ಎದ್ದು ಕುಳಿತ. ತನ್ನ ಮುಷ್ಟಿಯನ್ನು ಮುಂದಕ್ಕೆ ಚಾಚಿದ. ಖಡ್ಗ ಬಂದು ಅದಕ್ಕೆ ಬಡಿಯಿತು. ಬಡಿದುದೇ ತುಂಡುತುಂಡಾಗಿ ಬಿದ್ದಿತು. ಮಗ ಹೇಳಿದ:

"ಇಂಥ ಖಡ್ಗ ತೆಗೆದುಕೊಂಡು ಸೋದರರನ್ನೂ ಸೋದರಿಯನ್ನೂ ಹುಡುಕಿಕೊಂಡು ಹೋಗೋದು ಹೇಗೆ ಸಾಧ್ಯ? ಇನ್ನೊಂದನ್ನು ಮಾಡಿಸಿಕೊಳ್ಳಬೇಕು."

ಹಾಗೆಂದು ಉರುಳುಕಾಳು ಮುರಿದ ಖಡ್ಗವನ್ನು ಮತ್ತೆ ಕಮ್ಮಾರನ ಬಳಿಗೆ ಕೊಂಡೊಯ್ದ.

"ಇದರಿಂದ ನನಗೆ ಒಂದು ಹೊಸ ಖಡ್ಗ ಮಾಡಿ ಕೊಡು. ನನಗೆ ಸರಿಹೋಗುವಂಥದನ್ನು ಮಾಡಿ ಕೊಡು!"

ಕಮ್ಮಾರ ಮೊದಲಿನದಕ್ಕಿಂತ ಹೆಚ್ಚು ದೊಡ್ಡದಾದ ಖಡ್ಗವನ್ನು ಮಾಡಿದ. ಉರುಳುಕಾಳು ಅದನ್ನೂ ಎತ್ತಿಕೊಂಡು ಗಾಳಿಯಲ್ಲಿ ಎತ್ತರಕ್ಕೆ ಎಸೆದು, ಮತ್ತೆ ಹನ್ನೆರಡು ದಿನ ನಿದ್ದೆ ಹೋದ. ಹದಿಮೂರನೆಯ ದಿನ ಈ ಖಡ್ಗ ಹಿಂದಕ್ಕೆ ಹಾರಿ ಬಂದಿತು. ಅದು ಘೀಳಿಟ್ಟುಕೊಂಡು ಬರುತ್ತಿದ್ದ ಶಬ್ದಕ್ಕೆ ಭೂಮಿಯೇ ನಡುಗಿತು. ಉರುಳುಕಾಳನ್ನು ಎಬ್ಬಿಸಲಾಯಿತು. ಅವನು ಎದ್ದು ಕುಳಿತು ತನ್ನ ಮುಷ್ಟಿಯನ್ನು ಮುಂದಕ್ಕೆ ಚಾಚಿದ. ಖಡ್ಗ ಅದಕ್ಕೆ ಜೋರಾಗಿ ಬಂದು ಬಡಿಯಿತು. ಅದು ಹಿಂದಿನಂತೆ ಮುರಿಯಲಿಲ್ಲ, ಆದರೆ ಸ್ವಲ್ಪವಷ್ಟೆ ಬಳುಕಿತು.

"ಇದೀಗ ನನಗೆ ಸರಿಯಾದ ಖಡ್ಗ. ಇದರೊಂದಿಗೆ ನಾನು ನನ್ನ ಸೋದರರನ್ನೂ ಸೋದರಿಯನ್ನೂ ಹುಡುಕಲು ಹೋಗಬಹುದು. ಅಮ್ಮ, ನನಗೆ ಸ್ವಲ್ಪ ಬ್ರೆಡ್ಡು, ಸ್ವಲ್ಪ ರಸ್ಕ್ ಮಾಡಿಕೊಡು. ನಾನು ಹೊರಡುತ್ತೇನೆ."

ಅವನು ಆ ಖಡ್ಗವನ್ನು ತೆಗೆದುಕೊಂಡು, ತಾಯಿ ಕೊಟ್ಟ ಬುತ್ತಿಯನ್ನು ಕಟ್ಟಿಕೊಂಡು, ತಾಯಿತಂದೆಯರಿಗೆ ವಿದಾಯ ಹೇಳಿ ಮನೆಯಿಂದ ಹೊರಟ.

ಅವನು ಡ್ರೇಗನ್‌ನ ಅದೇ ಹಳೆಯ ನೇಗಿಲ ಸಾಲನ್ನೇ ಅನುಸರಿಸಿ ಹೊರಟ. ಬೇಗನೆಯೇ ಕಾಡಿನ ಒಳ ಹೊಕ್ಕ. ಕಾಡಿನಲ್ಲೇ ಮುಂದೆ ಮುಂದಕ್ಕೆ ನಡೆದುಹೋದ. ಕೊನೆಗೆ ಅವನಿಗೆ ಸುತ್ತ ಬೇಲಿ ಇದ್ದ ದೊಡ್ಡ ಅಂಗಳದ ಮಧ್ಯೆ ಒಂದು ಭಾರಿ ಮನೆ ಕಾಣಬಂದಿತು. ಅವನು ಅಂಗಳದ ಒಳಕ್ಕೆ ಹೋಗಿ ಅನಂತರ ಮನೆಯ ಒಳಕ್ಕೂ ಹೋದ. ಆದರೆ ಡ್ರೇಗನ್ ಮನೆಯಲ್ಲಿರಲಿಲ್ಲ. ಸೋದರಿ ಅಲ್ಯೋಂಕಳಷ್ಟೆ ಒಬ್ಬಳೇ ಮನೆಯಲ್ಲಿದ್ದಳು.

ಅವನು ಹೇಳಿದ:

"ನಮಸ್ಕಾರ, ಚೆಲುವ ಹುಡುಗಿ!"

ಅಲ್ಯೋಂಕ ಉತ್ತರಿಸಿದಳು:

"ನಮಸ್ಕಾರ, ಸದ್ಭಾವದ ಹುಡುಗ! ಯಾತಕ್ಕೆ ಇಲ್ಲಿಗೆ ಬಂದೆ? ಡ್ರೇಗನ್ ಇನ್ನೇನು ಬರುತ್ತೆ, ನಿನ್ನನ್ನು ತಿಂದುಹಾಕುತ್ತೆ."

"ಆಗಲಿ, ತಿನ್ನಲಿ ನೋಡೋಣ! ಅದು ಸರಿ, ನೀನು ಯಾರು?"

"ನಾನು ನನ್ನ ಅಪ್ಪ ಅಮ್ಮನಿಗೆ ಒಬ್ಬಳೇ ಮಗಳು. ಈ ಡ್ರೇಗನ್ ನನ್ನನ್ನು ಕದ್ದು ಇಲ್ಲಿ ಹಿಡಿದಿರಿಸಿದೆ. ನನ್ನ ಆರು ಮಂದಿ ಸೋದರರು ನನ್ನನ್ನು ಬಿಡಿಸಲು ಯತ್ನಿಸಿದರು. ಆದರೆ ಯಶಸ್ವಿಯಾಗಲಿಲ್ಲ."

"ಅವರೆಲ್ಲಿ?"

"ಡ್ರೇಗನ್ ಅವರನ್ನು ಕತ್ತಲ ಕೂಪಕ್ಕೆ ತಳ್ಳಿತು. ಅವರು ಬದುಕಿದ್ದಾರೋ ಇಲ್ಲವೋ ನನಗೆ ತಿಳಿಯದು."

ಉರುಳುಕಾಳು ಹೇಳಿದ:

"ಬಹುಶಃ ನಾನು ನಿನ್ನನ್ನು ಬಿಡಿಸಲು ಸಾಧ್ಯವಾಗಬಹುದು."

ಆದರೆ ಅಲ್ಯೋಂಕ ಹೇಳಿದಳು:

"ನಿನಗೆಲ್ಲಿ ಆಗುತ್ತಪ್ಪ! ನನ್ನ ಆರು ಮಂದಿ ಸೋದರರ ಕೈಲೇ ಆಗಲಿಲ್ಲ. ನೀನು ಒಬ್ಬ, ನಿನ್ನ ಕೈಲಿ ಎಲ್ಲಿ ಆಗುತ್ತೆ?"

"ಪರವಾಗಿಲ್ಲ! ಒಬ್ಬನಾದರೇನಂತೆ" ಉರುಳುಕಾಳು ಉತ್ತರಿಸಿದ.

ಅವನು ಕಿಟಕಿಯ ಬಳಿ ಡ್ರೇಗನ್ ಬರುವುದಕ್ಕಾಗಿಯೇ ಕಾದು ಕುಳಿತ.

ಸ್ವಲ್ಪ ಹೊತ್ತಿಗೆ ಡ್ರೇಗನ್ ಹಾರಿಕೊಂಡು ಬಂದಿತು. ಮನೆಯ ಒಳಹೊಕ್ಕಿತು, ಆಳವಾಗಿ ಉಸಿರೆಳೆದುಕೊಳ್ಳುತ್ತ ಹೇಳಿತು:

"ಹುಂ. ಮನುಷ್ಯರ ವಾಸನೆ ಬರುತ್ತಿದೆಯಲ್ಲ!"

"ಬರದೇ ಏನಂತೆ?" ಉರುಳುಕಾಳು ಹೇಳಿದ. "ನಾನು ಇಲ್ಲೇ ಇದ್ದೇನಲ್ಲ."

"ಆಹ್ಹಾ, ಹುಡುಗ! ನಿನಗೇನು ಬೇಕು – ಯುದ್ಧವೋ ಶಾಂತಿಯೋ?"

ಉರುಳುಕಾಳು ಉತ್ತರಿಸಿದ:

"ಎಲ್ಲಿ ಶಾಂತಿ ಸಾಧ್ಯವಿಲ್ಲವೋ ಅಲ್ಲಿ ಯುದ್ಧ ಮಾಡಲೇ ಬೇಕು!"

"ಸರಿ. ನಡಿ ಹಾಗಾದರೆ. ಕಬ್ಬಿಣದ ಕಣಕ್ಕೆ ಹೋಗೋಣ."

"ನಡಿ, ಹೋಗೋಣ!"

ಹೋದರು. ಡ್ರೇಗನ್ ಹೇಳಿತು:

"ನೀನೇ ಮೊದಲು ಹೊಡಿ!"

"ಇಲ್ಲ, ನೀನೇ ಮೊದಲು ಹೊಡಿ!" ಉರುಳುಕಾಳು ಹೇಳಿದ.

ಡ್ರೇಗನ್ ಎಷ್ಟು ಜೋರಾಗಿ ಪ್ರಹಾರ ನೀಡಿತೆಂದರೆ ಉರುಳುಕಾಳು ಕಾಲಿನ ಹರಡಿನವರೆಗೆ ಆ ಕಬ್ಬಿಣದ ಕಣದೊಳಕ್ಕೆ ಕುಸಿದ. ಆದರೆ ಅವನು ಕ್ಷಣ ಮಾತ್ರದಲ್ಲೇ ಹೊರ ಬಂದು ತನ್ನ ಖಡ್ಗದಿಂದ ಡ್ರೇಗನ್ ಮೇಲೆ ಎಷ್ಟು ಜೋರಾಗಿ ಹೊಡೆದನೆಂದರೆ ಡ್ರೇಗನ್ ಮೊಣಕಾಲಿನ ವರೆಗೆ ಕಣದೊಳಕ್ಕೆ ಕುಸಿಯಿತು. ಅದೂ ತಕ್ಷಣವೇ ಕಣದಿಂದ ಬಿಡಿಸಿಕೊಂಡು ಹೊರಬಂದು ಉರುಳುಕಾಳಿನ ಮೇಲೆ ಮತ್ತೊಂದು ಭಾರಿ ಪ್ರಹಾರ ನೀಡಿತು. ಈಗ ಉರುಳುಕಾಳೂ ಮೊಣ ಕಾಲಿನವರೆಗೆ ಹೂತುಕೊಂಡ. ಆದರೆ ಇದರಿಂದ ಅವನೇನೂ ಭಯಗೊಳ್ಳಲಿಲ್ಲ. ಡ್ರೇಗನ್ ಮೇಲೆ ತಾನೂ ಮತ್ತೊಂದು ಪ್ರಹಾರ ನೀಡಿದ. ಡ್ರೇಗನ್ ಈಗ ಕಣದೊಳಗೆ ಸೊಂಟದವರೆಗೂ ಹೂತುಕೊಂಡಿತು. ತಕ್ಷಣವೇ ಉರುಳುಕಾಳು ಮೂರನೆಯ ಪ್ರಹಾರ ನೀಡಿದ. ಡ್ರೇಗನ್ ಸತ್ತು ಬಿದ್ದಿತು.

ಅನಂತರ ಉರುಳುಕಾಳು ತನ್ನ ಸೋದರರನ್ನು ಕೂಡಿಹಾಕಿದ್ದ ಕತ್ತಲ ಕೂಪಕ್ಕೆ ಹೋಗಿ ಅವರನ್ನು ಬಿಡಿಸಿದ. ಅವರು ಜೀವದಿಂದಿರುವುದಕ್ಕಿಂತ ಹೆಚ್ಚಾಗಿ ಸತ್ತಂತೆಯೇ ಇದ್ದರು. ಅವರನ್ನೂ ಸೋದರಿ ಅಲ್ಯೋಂಕಳನ್ನೂ ಕರೆದುಕೊಂಡು ಉರುಳುಕಾಳು ಡ್ರೇಗನ್‌ನ ಬಳಿ ಇದ್ದ ಚಿನ್ನ ಬೆಳ್ಳಿ ಯನ್ನೆಲ್ಲ ಗಂಟುಮೂಟೆ ಕಟ್ಟಿಕೊಂಡು ಮನೆಯ ಕಡೆಗೆ ಹೊರಟ.

ಆದರೆ ಉರುಳುಕಾಳು ಅವರಿಗೆ ತಾನು ಅವರ ಸೋದರ ಅನ್ನುವ ವಿಷಯ ತಿಳಿಸಲಿಲ್ಲ. ಅವರು ತುಂಬ ದೂರ ಹೋದರೋ ಸ್ವಲ್ಪ ದೂರ ಹೋದರೋ ತಿಳಿಯದು. ಬಳಲಿ ಒಂದು ಮರದ ಕೆಳಗೆ ಆಯಾಸ ಪರಿಹರಿಸಿಕೊಳ್ಳಲು ಕುಳಿತರು. ಡ್ರೇಗನ್‌ನ ಜೊತೆ ನಡೆಸಿದ ಹೋರಾಟದಿಂದ ಉರುಳುಕಾಳು ತುಂಬ ಬಳಲಿದ್ದ. ಬೇಗನೆಯೇ ಗಾಢ ನಿದ್ರೆಯಲ್ಲಿ ಮೈಮರೆತು ಮಲಗಿದ. ಆ ಆರುಮಂದಿ ಸೋದರರೂ ತಮ್ಮತಮ್ಮಲ್ಲೇ ಮಾತನಾಡಿಕೊಂಡರು:

"ನಾವು ಆರು ಮಂದಿಯೂ ಡ್ರೇಗನ್‌ಅನ್ನು ಕೊಲ್ಲಲು ಆಗಲಿಲ್ಲ, ಈ ಒಬ್ಬ ಕೊಂದ, ಅಂತ ತಿಳಿದರೆ ಜನ ನಮ್ಮನ್ನು ನೋಡಿ ನಗುತ್ತಾರಷ್ಟೆ. ಅಲ್ಲದೆ ಡ್ರೇಗನ್‌ನ ಸಿರಿಸಂಪತ್ತೆಲ್ಲ ಇವನದೇ ಆಗುತ್ತಿದೆ."

ಹೀಗೆಂದು ಮಾತನಾಡಿಕೊಂಡು ಅವರು ನಿರ್ಧರಿಸಿದರು: ಈಗ ಇವನು ನಿದ್ದೆ ಮಾಡ್ತಿದಾನೆ, ಮೈ ಮರೆತಿದಾನೆ; ಇವನನ್ನು ಮರಕ್ಕೆ ಕಟ್ಟಿ ಹಾಕಿ, ಕಾಡು ಮೃಗಗಳು ತಿಂದು ಹಾಕೋಕೆ ಬಿಟ್ಟು ಹೋಗೋಣ. ನಿರ್ಧರಿಸಿದರೋ ಇಲ್ಲವೋ ಹಾಗೆಯೇ ಮಾಡಿದರು. ಅವನನ್ನು ಮರಕ್ಕೆ ಕಟ್ಟಿ ಹಾಕಿ ಹೊರಟು ಹೋದರು.

ಉರುಳುಕಾಳು ಮಲಗಿದ್ದ. ಎಷ್ಟು ಗಾಢವಾಗಿ ಮಲಗಿದ್ದನೆಂದರೆ ಅವನಿಗೆ ಇವೆಲ್ಲ ಒಂದಿಷ್ಟೂ ಗೊತ್ತಾಗಲೇ ಇಲ್ಲ. ಒಂದು ದಿನ ಒಂದು ರಾತ್ರಿ ಮಲಗಿದ. ಆಮೇಲೆ ಎಚ್ಚರಗೊಂಡು ನೋಡುತ್ತಾನೆ – ತನ್ನನ್ನು ಮರಕ್ಕೆ ಕಟ್ಟಿ ಹಾಕಲಾಗಿದೆ. ಅವನೊಮ್ಮೆ ಮೈ ಕೊಡವಿ ಎದ್ದು ನಿಂತ – ಮರವೇ ಬುಡ ಸಮೇತ ಕಿತ್ತುಬಂತು. ಉರುಳುಕಾಳು ಆ ಮರವನ್ನು ಹೆಗಲ ಮೇಲೆ ಹೊತ್ತುಕೊಂಡು ಮನೆಗೆ ಬಂದ. ಮನೆಯ ಒಳಹೊಕ್ಕಾಗ ಅವನಿಗೆ ಅವನ ಸೋದರರ ಮಾತು ಕೇಳಿಸಿತು. ಅವರು ತಮ್ಮ ತಾಯಿಯನ್ನು ಕೇಳುತ್ತಿದ್ದರು:

"ಏನಮ್ಮ, ನಾವು ಬಿಟ್ಟು ಹೋದ ಮೇಲೆ ನಿಮಗೆ ಇನ್ನೂ ಮಕ್ಕಳಾದವೆ?"

"ಹೌದು ಕಣ್ರೋ! ಉರುಳುಕಾಳು ಹುಟ್ಟಿದ. ನಿಮ್ಮನ್ನು ಹುಡುಕಿಕೊಂಡು ಬರ್‍ತೀನಿ ಅಂತ ಹೋದ."

ಆಗ ಅವರು ಹೇಳಿದರು:

"ಅಯ್ಯೋ, ಹಾಗೇನು? ನಾವು ಮರಕ್ಕೆ ಕಟ್ಟಿ ಹಾಕಿ ಬಂದವನು ಅವನೇ ಇರಬೇಕು! ಅವನನ್ನು ಕೂಡಲೇ ಹೋಗಿ ಬಿಡಿಸಬೇಕು!"

ಉರುಳುಕಾಳು ತನ್ನೊಂದಿಗೆ ತಂದಿದ್ದ ಮರವನ್ನು ಆ ಮನೆಯ ಚಾವಣಿಯ ಮೇಲೆ ಎಷ್ಟು ಜೋರಾಗಿ ಇರಿಸಿದನೆಂದರೆ ಮನೆಯೇ ಇನ್ನೇನು ಮುರಿದು ಬೀಳುವುದರಲ್ಲಿದ್ದಿತು.

ಹೀಗೆ ಹೇಳಿದ:

“ನೀವೇನೂ ಎಲ್ಲಿಗೂ ಹೋಗಬೇಕಾಗಿಲ್ಲ. ನೀವು ಎಂಥವರು ಅನ್ನುವುದು ನನಗೀಗ ಗೊತ್ತಾಯಿತು. ನೀವು ಮನೆಯಲ್ಲೇ ಸುಖವಾಗಿರಿ. ನಾನು ಈ ವಿಶಾಲ ಜಗತ್ತಿನಲ್ಲಿ ಸುತ್ತಾಡೋಕೆ ಹೋಗ್ತೀನಿ.”

ಅವನು ಖಡ್ಗವನ್ನು ಹೆಗಲ ಮೇಲಿಟ್ಟುಕೊಂಡು ಹೊರಟು ಹೋದ.

ಒಬ್ಬನೇ ಹೋದ, ಹೋದ. ನೋಡ್ತಾನೆ – ಅಲ್ಲಿ ಬೆಟ್ಟ, ಇಲ್ಲಿ ಬೆಟ್ಟ, ಮಧ್ಯೆ ಒಬ್ಬ ವ್ಯಕ್ತಿ. ಆ ವ್ಯಕ್ತಿ ತನ್ನ ಕೈಗಳಿಂದಲೂ ಕಾಲುಗಳಿಂದಲೂ ಬೆಟ್ಟಗಳನ್ನು ದೂರ ಹೋಗುವಂತೆ ತಳ್ಳುತ್ತಿದ್ದಾನೆ.

ಉರುಳುಕಾಳು ಹೇಳಿದ:

“ನಮಸ್ಕಾರ, ಮಿತ್ರ !”

“ನಮಸ್ಕಾರ !”

“ಸಜ್ಜನನೇ, ಏನು ಮಾಡ್ತಿದೀಯ ನೀನು ?”

“ಬೆಟ್ಟಗಳನ್ನು ಸರಿಸುತ್ತಿದೇನೆ. ಮಧ್ಯೆ ದಾರಿ ಆಗಲಿ ಅಂತ.”

“ದಾರಿ ಮಾಡಿಕೊಂಡು ಎಲ್ಲಿಗೆ ಹೋಗಬೇಕೂಂತ ?”

“ಸುಖ ಹುಡುಕಿಕೊಂಡು ಹೊರಟಿದೇನೆ.”

“ನಾನೂ ಹಾಗೇ ಹೊರಟಿದೇನೆ. ನಿನ್ನ ಹೆಸರೇನು ?”

“ಬೆಟ್ಟಸರಿಸು ಅಂತ. ನಿನ್ನ ಹೆಸರು ?”

“ಉರುಳುಕಾಳು ಅಂತ. ಒಟ್ಟಿಗೆ ಹೋಗೋಣವಾ ?”

“ಓಹೋ, ಹೋಗೋಣ ನಡಿ.”

ಇಬ್ಬರೂ ಹೋದರು. ಹೋದರೂ, ಹೋದರೂ... ಕೊನೆಗೆ ಕಾಡಿನಲ್ಲಿ ಒಬ್ಬ ಮನುಷ್ಯನನ್ನು ಕಂಡರು. ಅವನು ಬರಿಗೈಗಳಿಂದಲೇ ಮರಗಳನ್ನು ಬೇರು ಸಹಿತ ಕಿತ್ತು ಹಾಕುತ್ತಿದ್ದ.

ಅವರು ಹೇಳಿದರು:

“ನಮಸ್ಕಾರ !”

“ನಮಸ್ಕಾರ !”

“ಏನು ಮಾಡ್ತಿದೀಯ ನೀನು, ಸಜ್ಜನನೇ ?”

“ಮರಗಳನ್ನು ಕಿತ್ತು ಹಾಕ್ತಿದೀನಿ, ದಾರಿ ಆಗಲಿ ಅಂತ”

“ದಾರಿ ಮಾಡಿಕೊಂಡು ಎಲ್ಲಿಗೆ ಹೋಗಬೇಕೂಂತ ?”

“ಸುಖ ಹುಡುಕಿಕೊಂಡು ಹೊರಟಿದೇನೆ.”

"ನಾವೂ ಹಾಗೇ ಹೊರಟಿದೇವೆ. ನಿನ್ನ ಹೆಸರೇನು?"

"ಮರಕೀಳು ಅಂತ. ನಿಮ್ಮ ಹೆಸರು?"

"ಉರುಳುಕಾಳು, ಬೆಟ್ಟಸರಿಸು ಅಂತ. ಒಟ್ಟಿಗೆ ಹೋಗೋಣವಾ?"

"ಓಹೋ, ಹೋಗೋಣ. ನಡೆಯಿರಿ."

ಮೂವರೂ ಹೊರಟರು. ಹೋದರೂ, ಹೋದರೂ. ಕೊನೆಗೆ ನದಿಯ ದಡದ ಮೇಲೆ ಒಬ್ಬ ಉದ್ದ ಮೀಸೆಯ ವ್ಯಕ್ತಿಯನ್ನು ಕಂಡರು. ಅವನು ಮೀಸೆಯನ್ನು ತಿರುಚಿಕೊಂಡು ಅಡ್ಡ ಹಿಡಿದಂತೆ ನದಿಯ ಹರಿತ ನಿಂತು ಮಧ್ಯೆ ಹೋಗಲು ದಾರಿ ಆಗುತ್ತಿತ್ತು.

ಅವರು ಅವನನ್ನು ಕಂಡು ಹೇಳಿದರು:

"ನಮಸ್ಕಾರ!"

"ನಮಸ್ಕಾರ!"

"ಸಜ್ಜನನೇ, ಏನು ಮಾಡ್ತಿದೀಯ ನೀನು?"

"ನೀರನ್ನು ನಿಲ್ಲಿಸುತ್ತಿದೀನಿ, ನದಿ ದಾಟಲು ಸುಲಭವಾಗಲಿ ಅಂತ."

"ದಾಟಿ ಎಲ್ಲಿಗೆ ಹೋಗಬೇಕೂಂತ?"

"ಸುಖ ಹುಡುಕಿಕೊಂಡು ಹೊರಟಿದೀನಿ."

"ನಾವೂ ಹಾಗೇ ಹೊರಟಿದೀವಿ. ನಿನ್ನ ಹೆಸರೇನು?"

"ಮೀಸೆತಿರುಚು ಅಂತ. ನಿಮ್ಮ ಹೆಸರು?"

"ಉರುಳುಕಾಳು, ಬೆಟ್ಟಸರಿಸು, ಮರಕೀಳು, ಅಂತ. ಒಟ್ಟಿಗೆ ಹೋಗೋಣವಾ?"

"ಓಹೋ, ಹೋಗೋಣ ನಡೆಯಿರಿ."

ಅವರು ಹೊರಟರು. ಎಷ್ಟು ಚೆನ್ನಾಗಿತ್ತು ಅವರ ಪ್ರಯಾಣ. ದಾರಿಗೆ ಬೆಟ್ಟಗುಡ್ಡಗಳೇನಾದರೂ ಅಡ್ಡ ಬಂದರೆ ಬೆಟ್ಟಸರಿಸು ಅವುಗಳನ್ನು ಪಕ್ಕಕ್ಕೆ ಸರಿಸಿ ದಾರಿ ಮಾಡುತ್ತಿದ್ದ; ಕಾಡು ಅಡ್ಡ ಬಂದರೆ ಮರಕೀಳು ಮರಗಳನ್ನು ಕಿತ್ತು ದಾರಿ ಮಾಡುತ್ತಿದ್ದ; ನದಿ ಅಡ್ಡ ಬಂದರೆ ಮೀಸೆ ತಿರುಚು ನೀರಿನ ಹರಿತವನ್ನು ತನ್ನ ಮೀಸೆಗಳಿಂದ ತಡೆದು ದಾರಿ ಮಾಡುತ್ತಿದ್ದ.

ಹೀಗೆ ಅವರು ಕೊನೆಗೆ ಒಂದು ಭಾರಿ ಕಾಡಿಗೆ ಬಂದರು. ಅಲ್ಲಿ ಅವರಿಗೊಂದು ಗುಡಿಸಿಲು ಕಾಣಿಸಿತು. ಒಳಗೆ ಹೋಗಿ ನೋಡಿದರು – ಯಾರೂ ಇಲ್ಲ.

ಉರುಳುಕಾಳು ಹೇಳಿದ:

"ಇವತ್ತು ರಾತ್ರಿ ಇಲ್ಲಿಯೇ ಕಳೆಯೋಣ."

ಅವರು ಅಂದು ರಾತ್ರಿ ಆ ಗುಡಿಸಿಲಿನಲ್ಲೇ ಕಳೆದರು.

ಬೆಳಿಗ್ಗೆ ಉರುಳುಕಾಳು ಹೇಳಿದ:

"ಬೆಟ್ಟಸರಿಸು, ನೀನು ಮನೆಯಲ್ಲೇ ಇದ್ದು ಊಟಕ್ಕೆ ಏರ್ಪಾಟು ಮಾಡು. ನಾವು ಮೂವರೂ ಬೇಟೆಯಾಡಿಕೊಂಡು ಬರುತ್ತೇವೆ."

ಅವರು ಹೊರಟರು. ಬೆಟ್ಟಸರಿಸು ಬೇಯಿಸಿದ, ಕಾಯಿಸಿದ, ಊಟ ಸಿದ್ಧಗೊಳಿಸಿ ವಿಶ್ರಾಂತಿ ತೆಗೆದುಕೊಳ್ಳಲು ಸ್ವಲ್ಪ ಮಲಗಿದ. ಆಗ ಯಾರೋ ಬಾಗಿಲು ತಟ್ಟಿದ ಶಬ್ದವಾಯಿತು.

"ಬಾಗಿಲು ತೆಗಿ!"

ಬೆಟ್ಟಸರಿಸು ಉತ್ತರಿಸಿದ:

"ನೀನು ಯಾವ ಮಹಾ ದೊಡ್ಡ ಮನುಷ್ಯ? ನೀನೇ ತೆಗೆದುಕೋ."

ಬಾಗಿಲು ತೆರೆಯಿತು. ಮತ್ತೆ ಅದೇ ಧ್ವನಿ ಕೇಳಿಸಿತು:

"ನನ್ನನ್ನು ಎತ್ತಿಕೊಂಡು ಹೊಸ್ತಿಲು ದಾಟಿಸು!"

ಆದರೆ ಬೆಟ್ಟಸರಿಸು ಹೇಳಿದ:

"ನೀನು ಯಾವ ಮಹಾ ದೊಡ್ಡ ಮನುಷ್ಯ? ನೀನೇ ದಾಟಿಕೊಂಡು ಬಾ."

ಅಕೋ, ಬಂದ ಹೊಸ್ತಿಲು ದಾಟಿಕೊಂಡು ಒಬ್ಬ ಅತ್ಯಂತ ಪುಟ್ಟ ಅಜ್ಜ. ಅಷ್ಟು ಪುಟ್ಟ ಮನುಷ್ಯ ಹಿಂದೆಂದೂ ಇದ್ದುದೇ ಇಲ್ಲ ಅನ್ನಬಹುದು. ಅವನಿಗೊಂದು ಉದ್ದವಾದ ಗಡ್ಡವಿತ್ತು. ಅದು ನೆಲದ ಮೇಲೆ ಹರಡುವವರೆಗೂ ಬೆಳೆದಿತ್ತು. ಆ ಗಿಡ್ಡ ಅಜ್ಜ ಬೆಟ್ಟಸರಿಸಿನ ಮುಂಗುರುಳನ್ನು ಹಿಡಿದು ಮೇಲೆತ್ತಿ ಗೋಡೆಯ ಮೇಲಿದ್ದ ಒಂದು ಮೊಳೆಗೆ ಅವನನ್ನು ನೇತು ಹಾಕಿದ. ತಾನೇ ಅಲ್ಲಿ ಏನೇನು ಅಡಿಗೆ ಮಾಡಿ ಇರಿಸಲಾಗಿತ್ತೋ ಎಲ್ಲವನ್ನೂ ತಿಂದು, ಕುಡಿದು ಮುಗಿಸಿದ, ಹೊರಟು ಹೋದ.

ಬೆಟ್ಟಸರಿಸು ಒದ್ದಾಡಿ ಹೊರಳಾಡಿ ಕೊನೆಗೂ ಮೊಳೆಯಿಂದ ತನ್ನ ಮುಂಗುರುಳನ್ನು ಬಿಡಿಸಿಕೊಂಡ. ಮತ್ತೆ ಹೊಸ ಅಡಿಗೆ ತಯಾರಿಸುವುದರಲ್ಲಿ ನಿರತನಾದ. ಅವನ ಸಂಗಾತಿಗಳು ಹಿಂದಿರುಗಿದರು. ಅವನು ಇನ್ನೂ ಬೇಯಿಸುತ್ತಲೇ ಇದ್ದಾನೆ!

ಅವರು ಕೇಳಿದರು:

"ಏನು ನೀನು? ಅಡಿಗೆ ಇನ್ನೂ ಮಾಡುತ್ತಿದ್ದೀಯ? ಯಾಕೆ ಇಷ್ಟು ತಡ?"

ಅವನು ಉತ್ತರಿಸಿದ:

"ಸಣ್ಣ ನಿದ್ದೆ ಮಾಡೋಣ ಅಂತ ಮಲಗಿ ಬಿಟ್ಟೆ."

ಎಲ್ಲರೂ ಹೊಟ್ಟೆ ತುಂಬ ತಿಂದರು, ಮಲಗಿದರು. ಮಾರನೆಯ ದಿನ ಎದ್ದು ಉರುಳು ಕಾಳು ಹೇಳಿದ:

"ಮರಕೀಳು, ಇವತ್ತು ನೀನು ಮನೆಯಲ್ಲಿದ್ದು ಅಡಿಗೆ ಮಾಡು. ನಾವು ಬೇಟೆಗೆ ಹೋಗಿ ಬರ್ತೇವೆ."

ಅವರು ಹೊರಟರು. ಮರಕೀಳು ಬೇಯಿಸಿದ, ಕಾಯಿಸಿದ, ಅಡಿಗೆ ಸಿದ್ಧಗೊಳಿಸಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲು ಮಲಗಿದ. ಆಗ ಯಾರೋ ಬಾಗಿಲು ತಟ್ಟಿದ ಶಬ್ದ ಕೇಳಿಬಂದಿತು.

"ಬಾಗಿಲು ತೆಗಿ!"

ಮರಕೀಳು ಹೇಳಿದ:

"ನೀನು ಯಾವ ಮಹಾ ದೊಡ್ಡ ಮನುಷ್ಯ? ನೀನೇ ತೆಗೆದುಕೋ!"

"ನನ್ನನ್ನು ಎತ್ತಿಕೊಂಡು ಹೊಸ್ತಿಲು ದಾಟಿಸು!"

"ನೀನು ಯಾವ ಮಹಾ ದೊಡ್ಡ ಮನುಷ್ಯ? ನೀನೇ ದಾಟಿಕೊಂಡು ಬಾ!"

ಅಕೋ ಬಂದ ಹೊಸ್ತಿಲು ದಾಟಿಕೊಂಡು ಒಬ್ಬ ಅತ್ಯಂತ ಪುಟ್ಟ ಅಜ್ಜ. ಅವನ ಉದ್ದ ಗಡ್ಡ ನೆಲದ ಮೇಲೆ ಎಳೆದುಕೊಂಡು ಬರುತ್ತೆ. ಒಳ ಬಂದವನೇ ಅವನು ಮರಕೀಳುವಿನ ಮುಂಗುರುಳನ್ನು ಹಿಡಿದು ಮೇಲೆತ್ತಿ ಗೋಡೆಯ ಮೇಲಿದ್ದ ಒಂದು ಮೊಳೆಗೆ ಅವನನ್ನು ನೇತುಹಾಕಿದ. ಆಮೇಲೆ ತಾನೇ ಅಲ್ಲಿ ಮಾಡಿರಿಸಿದ್ದ ಅಡಿಗೆ ಎಲ್ಲವನ್ನೂ ತಿಂದ, ಎಲ್ಲವನ್ನೂ ಕುಡಿದ, ಆಮೇಲೆ ಹೊರಟು ಹೋದ.

ಮರಕೀಳು ಒದ್ದಾಡಿ ಹೊರಳಾಡಿ ಕೊನೆಗೂ ಮೊಳೆಯಿಂದ ತನ್ನ ಮುಂಗುರುಳನ್ನು ಬಿಡಿಸಿಕೊಂಡ. ಬೇಗ ಬೇಗ ಹೊಸದಾಗಿ ಅಡಿಗೆ ಮಾಡಲು ಪ್ರಾರಂಭಿಸಿದ.

ಅವನ ಸಂಗಾತಿಗಳು ಬೇಟೆಯಿಂದ ಹಿಂದಿರುಗಿದರು.

"ಏನು ನೀನು? ಅಡಿಗೆ ಇನ್ನೂ ಮಾಡುತ್ತಿದ್ದೀಯ? ಯಾಕೆ ಇಷ್ಟು ತಡ?"

ಅವನು ಉತ್ತರಿಸಿದ:

"ಹೌದು, ಸಣ್ಣ ನಿದ್ದೆ ಮಾಡೋಣ ಅಂತ ಮಲಗಿ ಬಿಟ್ಟೆ."

ಏನು ಜರುಗಿದ್ದಿತು ಅನ್ನುವುದನ್ನು ಊಹಿಸಿ ತಿಳಿದ ಬೆಟ್ಟಸರಿಸು ಸುಮ್ಮನಿದ್ದ.

ಮೂರನೆಯ ದಿನ ಮೀಸೆತಿರುಚು ಮನೆಯಲ್ಲಿ ಉಳಿದ. ಅವನಿಗೂ ಹೀಗೇ ಆಯಿತು. ಉರುಳುಕಾಳು ಹೇಳಿದ:

"ನೀವು ಮೂವರೂ ಅಡಿಗೆ ಮಾಡುವುದರಲ್ಲಿ ತುಂಬ ನಿಧಾನ! ಆಗಲಿ, ನಾಳೆ ನೀವು ಬೇಟೆಗೆ ಹೋಗಿ. ನಾನು ಮನೆಯಲ್ಲೇ ಉಳಿಯುತ್ತೇನೆ."

ಮಾರನೆಯ ದಿವಸ ಹಾಗೇ ಆಯಿತು. ಆ ಮೂವರು ಬೇಟೆಗೆ ಹೋದರು, ಉರುಳುಕಾಳು ಮನೆಯಲ್ಲಿ ಉಳಿದ.

ಅವನೂ ಬೇಯಿಸಿದ, ಕಾಯಿಸಿದ, ಅಡಿಗೆ ಸಿದ್ಧಗೊಳಿಸಿ ಸ್ವಲ್ಪ ವಿರಮಿಸಲು ಹೋದ. ಕೇಳುತ್ತಾನೆ, ಯಾರೋ ಬಾಗಿಲು ತಟ್ಟುತ್ತಿದ್ದಾರೆ.

"ಬಾಗಿಲು ತೆಗೆ!"

ಉರುಳುಕಾಳು ಹೇಳಿದ:

"ಸ್ವಲ್ಪ ತಾಳು. ತೆಗೀತೀನಿ."

ಬಾಗಿಲು ತೆಗೆದು ನೋಡಿದ – ಒಬ್ಬ ಪುಟ್ಟ ಅಜ್ಜ ನಿಂತಿದ್ದಾನೆ. ಅವನ ಗಡ್ಡ ಉದ್ದವಾಗಿ ನೆಲದ ಮೇಲೆಲ್ಲ ಹರಡಿದೆ.

ಆ ಅಜ್ಜ ಹೇಳಿದ:

"ನನ್ನನ್ನು ಎತ್ತಿಕೊಂಡು ಹೊಸ್ತಿಲು ದಾಟಿಸು!"

ಉರುಳುಕಾಳು ಅವನನ್ನು ಎತ್ತಿಕೊಂಡು ಹೊಸ್ತಿಲು ದಾಟಿಸಿ ಒಳಗೆ ಕರೆತಂದ. ನೆಲದ ಮೇಲೆ ಇರಿಸಿದ ಕೂಡಲೇ ಆ ಪುಟ್ಟ ಅಜ್ಜ ಕುಣಿದಾಡ ತೊಡಗಿದ, ಆಗಾಗ್ಗೆ ಉರುಳುಕಾಳಿಗೆ ಡಿಕ್ಕಿ ಹೊಡೆಯ ತೊಡಗಿದ.

ಉರುಳುಕಾಳು ಕೇಳಿದ:

"ನಿನಗೇನು ಬೇಕು?"

"ತಾಳು, ಏನು ಅನ್ನುವುದನ್ನು ನೀನೇ ನೋಡುವಿಯಂತೆ" ಎಂದು ಹೇಳಿ ಆ ಪುಟ್ಟ ಅಜ್ಜ ತನ್ನ ಕೈಯನ್ನು ಉರುಳುಕಾಳಿನ ಮುಂಗುರುಳಿನ ಕಡೆಗೆ ಚಾಚಿ ಅದನ್ನು ಹಿಡಿಯುವುದರಲ್ಲಿದ್ದ.

ಆಗ ಉರುಳುಕಾಳು:

"ಓಹೋ, ಇಂಥವನೋ ನೀನು!"

ಹಾಗೆ ಎಂದು ತಾನೇ ಆ ಅಜ್ಜನ ಗಡ್ಡ ಹಿಡಿದ. ಆಮೇಲೆ ಒಂದು ಕೊಡಲಿಯನ್ನು ತೆಗೆದುಕೊಂಡ, ಆ ಅಜ್ಜನನ್ನು ಹೊರಗೆ ಒಂದು ಓಕ್ ಮರದ ಬಳಿಗೆ ಎಳೆದುಕೊಂಡು ಹೋದ. ಮರವನ್ನು ಎರಡು ಹೋಳುಗಳಾಗಿ ಒಡೆದು ಅಜ್ಜನ ಗಡ್ಡವನ್ನು ಹೋಳುಗಳ ಮಧ್ಯೆ ಒಳಗಿನವರೆಗೂ ತೂರಿಸಿ ಭದ್ರವಾಗಿ ಸಿಕ್ಕಿ ಹಾಕಿಸಿದ.

ಹೀಗೆ ಹೇಳಿದ:

"ನೀನು ಎಂಥ ನೀಚ. ನನ್ನ ಮುಂಗುರುಳು ಹಿಡಿಯ ಬಂದಿದ್ದೆಯಲ್ಲ. ಈಗ ಕೂತಿರು ಇಲ್ಲೇ, ನಾನು ಹಿಂದಿರುಗಿ ಬರುವವರೆಗೂ."

ಅವನು ಗುಡಿಸಿಲಿಗೆ ಹಿಂದಿರುಗಿದ. ಅವನ ಸಂಗಾತಿಗಳು ಆಗಲೇ ಬಂದಿದ್ದರು.

ಅವರು ಕೇಳಿದರು:

"ಅಡಿಗೆ ಆಯಿತಾ?"

ಅವನು ಉತ್ತರಿಸಿದ:

"ಓಹೋ! ಆಗಿ ಎಷ್ಟೋ ಹೊತ್ತಾಯಿತು!"

ಎಲ್ಲರೂ ಊಟ ಮಾಡಿದರು. ಆಮೇಲೆ ಉರುಳುಕಾಳು ಹೇಳಿದ:

"ಬನ್ನಿ ನನ್ನ ಜೊತೆ. ನಾನು ನಿಮಗೆ ಒಂದು ಚಮತ್ಕಾರವನ್ನು ತೋರಿಸುತ್ತೇನೆ."

ಅವರು ಓಕ್ ಮರದ ಬಳಿಗೆ ಬಂದರು. ಆದರೆ ಅಲ್ಲಿ ಆ ಓಕ್ ಮರವೂ ಇಲ್ಲ, ಆ ಅಜ್ಜನೂ ಇಲ್ಲ. ಆ ಅಜ್ಜ ಓಕ್ ಮರವನ್ನು ಬೇರು ಸಹಿತ ಕಿತ್ತು ಮರವನ್ನೂ ಎಳೆದುಕೊಳ್ಳುತ್ತ ಓಡಿ ಹೋಗಿದ್ದ. ಆಗ ಉರುಳುಕಾಳು ತನ್ನ ಸಂಗಾತಿಗಳಿಗೆ ಅವರು ಬೇಟೆಗೆ ಹೋಗಿದ್ದಾಗ ತನಗೆ ಏನಾಯಿತು ಅನ್ನುವುದನ್ನೆಲ್ಲ ವಿವರಿಸಿ ತಿಳಿಸಿದ. ಅವರೂ ಹೇಗೆ ಆ ಅಜ್ಜ ತಮ್ಮನ್ನು ಮುಂಗುರುಳಿನಿಂದ ಮೊಳೆಗೆ ನೇತು ಹಾಕಿದ್ದ ಅನ್ನುವುದನ್ನು ತಿಳಿಸಿದರು.

ಆಗ ಉರುಳುಕಾಳು ಹೇಳಿದ:

"ಹೌದಾ? ಅವನು ಅಂಥವನಾ? ಹಾಗಾದರೆ ಬನ್ನಿ, ಹುಡುಕಿ ಅವನನ್ನು ಹಿಡಿಯೋಣ."

ಆ ಅಜ್ಜ ಓಕ್ ಮರವನ್ನು ಎಲ್ಲಿಗೆ ಎಳೆದುಕೊಂಡು ಹೋಗಿದ್ದನೋ ಅಲ್ಲಿಯವರೆಗೆ ನೆಲದ ಮೇಲೆ ಮರ ಎಳೆದ ಗುರುತಿತ್ತು. ಅವರು ಆ ಗುರುತನ್ನೇ ಅನುಸರಿಸಿಕೊಂಡು ಹೋದರು.

ಅದು ಅವರನ್ನು ಒಂದು ಆಳವಾದ ಕುಳಿಯ ಬಳಿಗೆ ಕರೆದೊಯ್ದಿತು. ಆ ಕುಳಿ ಎಷ್ಟು ಆಳವಾಗಿದ್ದಿತೆಂದರೆ ಅದರ ತಳವೇ ಕಾಣುತ್ತಿರಲಿಲ್ಲ.

ಉರುಳುಕಾಳು ಹೇಳಿದ:

"ಬೆಟ್ಟಸರಿಸು, ನೀನು ಕುಳಿಯ ಒಳಕ್ಕೆ ಇಳಿದು ಹೋಗಿ ನೋಡು!"

ಆದರೆ ಅವನು ಉತ್ತರಿಸಿದ:

"ಅಯ್ಯೋ, ನನ್ನ ಕೈಯಲ್ಲಾಗೊಲ್ಲಪ್ಪ!"

"ಹೋಗಲಿ, ನೀನು ಹೋಗು, ಮರಕೀಳು!"

ಅವನೂ ಹೋಗಲು ಇಷ್ಟಪಡಲಿಲ್ಲ. ಮೀಸೆತಿರುಚುವೂ ಹೋಗಲು ಬಯಸಲಿಲ್ಲ.

ಅದನ್ನು ನೋಡಿ ಉರುಳುಕಾಳು ಹೇಳಿದ:

"ಹಾಗಾದರೆ ನಾನೇ ಹೋಗ್ತೀನಿ. ಆದರೆ ನನಗೊಂದು ಹಗ್ಗ ಬೇಕು. ಬನ್ನಿ ಹೊಸೆಯೋಣ!"

ಅವರು ಒಂದು ಉದ್ದವಾದ ಹಗ್ಗ ಹೊಸೆದರು. ಉರುಳುಕಾಳು ಅದರ ಒಂದು ತುದಿಯನ್ನು ಕೈಯಲ್ಲಿ ಹಿಡಿದು ಹೇಳಿದ:

"ನನ್ನನ್ನು ಕೆಳಕ್ಕೆ ಇಳಿಬಿಡಿ!"

ಅವರು ಇಳಿಬಿಡಲು ಶುರು ಮಾಡಿದರು. ತುಂಬ ಹೊತ್ತು ಇಳಿಬಿಡುತ್ತಲೇ ಹೋದರು. ಎಷ್ಟು ಹೊತ್ತಾದರೂ ತಳವೇ ಸಿಗುತ್ತಿಲ್ಲ. ಅಂತೂ ಕೊನೆಗೆ ತಳ ಸಿಕ್ಕಿತು.

ಉರುಳುಕಾಳು ಅಲ್ಲಿ ಹುಡುಕ ಹೊರಟ. ನೋಡುತ್ತಾನೆ – ಅಲ್ಲೊಂದು ದೊಡ್ಡ ಅರಮನೆ ಇದೆ. ಅವನು ಅದರ ಒಳಗೆ ಹೋದ. ಅಲ್ಲಿ ಎಲ್ಲವೂ ಕಣ್ಣು ಕೋರೈಸುವಂತೆ ಥಳಥಳಿಸುತ್ತಿದ್ದವು – ಅವನ್ನೆಲ್ಲ ಚಿನ್ನದಿಂದ ಮಾಡಲಾಗಿತ್ತು. ಮಧ್ಯೆಮಧ್ಯೆ ಪ್ರಶಸ್ತ ಶಿಲೆಗಳನ್ನಿರಿಸಿ ಅಲಂಕರಿಸಲಾಗಿತ್ತು. ಅವನು ಒಂದು ಕೋಣೆಯಿಂದ ಇನ್ನೊಂದಕ್ಕೆ ಹೋಗುತ್ತ ಹೋದ. ಕೊನೆಗೆ ನೋಡುತ್ತಾನೆ – ಒಬ್ಬ ರಾಜಕುಮಾರಿ ಅವನತ್ತ ಓಡಿ ಬರುತ್ತಿದ್ದಾಳೆ. ಅವಳು ಎಂಥ ಸುಂದರಿಯಾಗಿದ್ದಳೆಂದರೆ ಅವಳ ಸೌಂದರ್ಯವನ್ನು ಕಥೆಗಳಲ್ಲಿ ವಿವರಿಸಿ ತಿಳಿಸಲು ಸಾಧ್ಯವಿಲ್ಲ, ಲೇಖನಿಯಿಂದ ಬರೆದು ತಿಳಿಸಲು ಸಾಧ್ಯವಿಲ್ಲ.

ಅವಳು ಕೇಳಿದಳು:

"ಅಯ್ಯೋ, ಸಜ್ಜನನೇ, ನೀನು ಇಲ್ಲಿಗೇಕೆ ಬಂದೆ?"

ಉರುಳುಕಾಳು ಉತ್ತರಿಸಿದ:

"ನಾನು ಉದ್ದ ಗಡ್ಡದ ಒಬ್ಬ ಗಿಡ್ಡ ಅಜ್ಜನನ್ನು ಹುಡುಕಿಕೊಂಡು ಬಂದಿದ್ದೇನೆ."

ಆ ಹುಡುಗಿ ಹೇಳಿದಳು:

"ಅವನ ಗಡ್ಡ ಒಂದು ಓಕ್ ಮರದ ಸೀಳಿನ ಮಧ್ಯೆ ಸಿಕ್ಕಿಕೊಂಡು ಬಿಟ್ಟಿದೆ. ಅದನ್ನು ಬಿಡಿಸಿ ಕೊಳ್ಳಲು ಯತ್ನಿಸುತ್ತಿದ್ದಾನೆ. ಅವನ ಬಳಿಗೆ ಹೋಗಬೇಡ. ನಿನ್ನನ್ನು ಕೊಂದು ಹಾಕಿ ಬಿಡ್ತಾನೆ! ಅವನಾಗಲೇ ಎಷ್ಟೋ ಜನರನ್ನು ಕೊಂದು ಹಾಕಿದಾನೆ!"

ಆದರೆ ಉರುಳುಕಾಳು ಹೇಳಿದ:

"ಇಲ್ಲ, ನನ್ನನ್ನು ಕೊಲ್ಲೋಕೆ ಆಗೊಲ್ಲ. ನಾನೇ ಅವನ ಗಡ್ಡವನ್ನು ಮರಕ್ಕೆ ಸಿಕ್ಕಿ ಹಾಕಿಸಿ ರೋದು. ನೀನೇಕೆ ಇಲ್ಲಿ ವಾಸಿಸುತ್ತಿದ್ದೀಯ?"

ಅವಳು ಉತ್ತರಿಸಿದಳು:

"ನಾನೊಬ್ಬ ರಾಜಕುಮಾರಿ. ಈ ಮುದುಕ ನನ್ನನ್ನು ಕದ್ದು ತಂದ. ಇಲ್ಲಿ ಬಂಧನದಲ್ಲಿರಿಸಿ ದ್ದಾನೆ."

ಅದನ್ನು ಕೇಳಿ ಉರುಳುಕಾಳು ಹೇಳಿದ:

"ಆಗಲಿ, ನಾನು ನಿನ್ನನ್ನು ಬಿಡಿಸುತ್ತೇನೆ. ನನ್ನನ್ನು ಅವನ ಬಳಿಗೆ ಕರೆದುಕೊಂಡು ಹೋಗು!"

ಅವಳು ಅವನನ್ನು ಅಲ್ಲಿಗೆ ಕರೆದುಕೊಂಡು ಹೋದಳು. ನೋಡುತ್ತಾನೆ – ನಿಜವೇ! ಆ

ಮುದುಕ ಅಲ್ಲಿ ಕುಳಿತಿದ್ದಾನೆ. ಗಡ್ಡವನ್ನು ಓಕ್ ಮರದಿಂದ ಆಗಲೇ ಬಿಡಿಸಿಕೊಂಡಿದ್ದಾನೆ. ಗಡ್ಡವನ್ನು ನೀವಿಕೊಳ್ಳುತ್ತಿದ್ದಾನೆ. ಉರುಳುಕಾಳನ್ನು ಕಂಡ ಕೂಡಲೇ ಕೂಗಿ ಕೇಳುತ್ತಾನೆ:

"ಯಾತಕ್ಕೆ ಬಂದೆ? ಹೋರಾಡಲಲೋ. ಶಾಂತಿ ಮಾಡಿಕೊಳ್ಳಲೋ?"

ಉರುಳುಕಾಳು ಹೇಳುತ್ತಾನೆ:

"ಶಾಂತಿ ನನಗೆ ಬೇಕಿಲ್ಲ. ನಾನು ಹೋರಾಡಲು ಬಂದಿದ್ದೇನೆ."

ಇಬ್ಬರೂ ಹೋರಾಡಲು ಪ್ರಾರಂಭಿಸಿದರು. ಹೋರಾಡಿದರು, ಹೋರಾಡಿದರು. ಕೊನೆಗೆ ಉರುಳುಕಾಳು ತನ್ನ ಖಡ್ಗದಿಂದ ಹೊಡೆದು ಅಜ್ಜನನ್ನು ಕೊಂದು ಹಾಕಿದ. ಆಮೇಲೆ ಉರುಳುಕಾಳೂ ರಾಜಕುಮಾರಿಯೂ ಆ ಅರಮನೆಯಲ್ಲಿದ್ದ ಎಲ್ಲ ಚಿನ್ನ ಮತ್ತು ಪ್ರಶಸ್ತ ಶಿಲೆಗಳನ್ನೂ ಮೂರು ಮೂಟೆಗಳಲ್ಲಿ ಕಟ್ಟಿಕೊಂಡು, ಅವನು ಇಳಿದು ಬಂದಿದ್ದ ಆ ಕುಳಿಯ ಬಳಿಗೆ ಹೋದರು.

ಉರುಳುಕಾಳು ಕೆಳಗಿನಿಂದ ಕೂಗಿ ಹೇಳಿದ:

"ಹೇಯ್, ಸೋದರರೇ, ಇದ್ದೀರ ನೀವು ಅಲ್ಲಿ?"

ಅವರು ಉತ್ತರಿಸಿದರು:

"ಇದೇವಿ."

ಉರುಳುಕಾಳು ಒಂದು ಮೂಟೆಯನ್ನು ಹಗ್ಗಕ್ಕೆ ಕಟ್ಟಿ ಹೇಳಿದ:

"ಎಳೆದುಕೊಳ್ಳಿ, ಸೋದರರೇ! ಈ ಮೂಟೆ ನಿಮಗಾಗಿ!"

ಅವರು ಮೂಟೆಯನ್ನು ಮೇಲಕ್ಕೆ ಎಳೆದುಕೊಂಡು ಹಗ್ಗವನ್ನು ಮತ್ತೆ ಕೆಳಕ್ಕೆ ಇಳಿಬಿಟ್ಟರು.

ಉರುಳುಕಾಳು ಎರಡನೆಯ ಮೂಟೆಯನ್ನು ಅದಕ್ಕೆ ಕಟ್ಟಿದ:

"ಎಳೆದುಕೊಳ್ಳಿ. ಈ ಮೂಟೆಯೂ ನಿಮ್ಮದೇ!"

ಇದೇ ರೀತಿ ಅವನು ಮೂರನೆಯ ಮೂಟೆಯನ್ನೂ ಕಳಿಸಿಕೊಟ್ಟ. ಆಮೇಲೆ ರಾಜಕುಮಾರಿಯನ್ನು ಕಟ್ಟಿದ.

"ಎಳೆದುಕೊಳ್ಳಿ. ಈ ರಾಜಕುಮಾರಿ ನನ್ನವಳು!" ಕೂಗಿ ಹೇಳಿದ.

ಅವರು ಮೂವರೂ ರಾಜಕುಮಾರಿಯನ್ನೂ ಮೇಲಕ್ಕೆ ಎಳೆದುಕೊಂಡರು. ಇನ್ನು ಉರುಳುಕಾಳನ್ನಷ್ಟೆ ಎಳೆದುಕೊಳ್ಳಬೇಕು. ಅಷ್ಟರಲ್ಲೇ ಅವರು ಯೋಚಿಸಿದರು:

"ಅವನನ್ನೇಕೆ ಮೇಲಕ್ಕೆ ಎಳೆಯಬೇಕು? ಅವನನ್ನು ಅಲ್ಲೇ ಬಿಟ್ಟುಬಿಡುವುದೇ ಮೇಲು. ರಾಜಕುಮಾರಿಯೂ ನಮ್ಮವಳೇ ಆಗುತ್ತಾಳೆ. ಅವನನ್ನು ಮೇಲಿನವರೆಗೂ ಎಳೆದು ಆಮೇಲೆ ಹಗ್ಗವನ್ನು ಬಿಟ್ಟು ಬಿಡೋಣ. ಅವನು ಕೆಳಕ್ಕೆ ಬಿದ್ದು ಸಾಯುತ್ತಾನೆ."

ಅವರು ಏನು ಮಾಡಲಿದ್ದರೆಂಬುದನ್ನು ಉರುಳುಕಾಳು ಊಹಿಸಿ ತಿಳಿದ. ಅವನು ಹಗ್ಗಕ್ಕೆ ಒಂದು ದೊಡ್ಡ ಕಲ್ಲು ಕಟ್ಟಿ ಕೂಗಿ ಹೇಳಿದ:

"ಹುಂ. ನನ್ನನ್ನು ಎಳೆದುಕೊಳ್ಳಿ!"

ಅವರು ಮೇಲಿನವರೆಗೂ ಎಳೆದು ಆಮೇಲೆ ಹಗ್ಗವನ್ನು ಬಿಟ್ಟು ಬಿಟ್ಟರು. ಕಲ್ಲು ದೊಪ್ಪನೆ ಬಿದ್ದಿತು.

"ಎಂಥ ಸ್ನೇಹಿತರು ನೀವು! ಆಗಲಿ, ಆಗಲಿ!" ಅಂದುಕೊಂಡ ಉರುಳುಕಾಳು.

ಅವನು ಆ ಕುಳಿ ತಳದ ಅಧೋಲೋಕದಲ್ಲಿ ಅಲೆಯ ತೊಡಗಿದ.

ಹೋದ, ಹೋದ. ಆಗ ಇದ್ದಕ್ಕಿದ್ದಂತೆ ಆಕಾಶದಲ್ಲೆಲ್ಲ ಮೋಡ ಮುಸುಕಿತು. ಭಾರಿ ಆಲಿ ಕಲ್ಲಿನ ಮಳೆ ಬೀಳ ತೊಡಗಿತು. ಉರುಳುಕಾಳು ಒಂದು ಓಕ್ ಮರದ ಮರೆ ಮಾಡಿಕೊಂಡು ನಿಂತ. ಅಲ್ಲಿ ನಿಂತಿದ್ದಾಗ ಅವನಿಗೆ ಮರದ ಮೇಲಿನ ಗೂಡೊಂದರಿಂದ ಹದ್ದಿನ ಮರಿಗಳು ಚಿಲಿಪಿಲಿ ಗುಟ್ಟುತ್ತಿದ್ದುದು ಕೇಳಿಸಿತು. ಅವನು ಮರ ಹತ್ತಿ ಹೋಗಿ ತನ್ನ ಕೋಟನ್ನೇ ಬಿಚ್ಚಿ ಆ ಮರಿಗಳ ಮೇಲೆ ಹೊದಿಸಿದ.

ಮಳೆ ನಿಂತಿತು. ಒಂದು ದೊಡ್ಡ ಹಕ್ಕಿ – ಹದ್ದು, ಆ ಮರಿಗಳ ತಂದೆ – ಹಾರಿ ಬಂದಿತು. ಮರಿಗಳ ಮೇಲೆ ಕೋಟು ಹೊದಿಸಿರುವುದನ್ನು ಕಂಡು ಕೇಳಿತು:

"ಯಾರು ನಿಮಗೆ ಇದನ್ನು ಹೊದಿಸಿದವರು?"

ಮರಿಗಳು ಉತ್ತರಿಸಿದವು:

"ನೀನು ತಿಂದು ಹಾಕುವುದಿಲ್ಲ ಅಂತ ಮಾತು ಕೊಟ್ಟರೆ ಹೇಳುತ್ತೇವೆ."

ಅದು ಹೇಳಿತು:

"ಇಲ್ಲ. ತಿನ್ನುವುದಿಲ್ಲ. ಹೇಳಿ."

ಆಗ ಮರಿಗಳು ಎಂದವು:

"ಅಲ್ಲಿ ಮರದ ಕೆಳಗೆ ಕುಳಿತಿದ್ದಾನಲ್ಲ, ಆ ವ್ಯಕ್ತಿಯೇ ನಮಗೆ ಹೊದಿಸಿದುದು."

ಹದ್ದು ಉರುಳುಕಾಳಿನ ಬಳಿಗೆ ಹಾರಿ ಬಂದು ಹೇಳಿತು:

"ನಿನಗೆ ಏನು ಬೇಕೋ ಹೇಳು. ನಾನು ಎಲ್ಲ ನಿನಗೆ ಕೊಡುತ್ತೇನೆ. ಇದೇ ಮೊದಲ ಬಾರಿಗೆ ನನ್ನ ಒಂದು ಮರಿಯೂ ಇಂಥ ಭಾರಿ ಮಳೆಯಲ್ಲಿ ಸತ್ತಿಲ್ಲ – ಅದೂ ನಾನು ಮನೆಯಲ್ಲಿಲ್ಲದಿರುವಾಗ."

ಉರುಳುಕಾಳು ಉತ್ತರಿಸುತ್ತಾನೆ:

"ನಾನು ಎಲ್ಲಿಂದ ಇಲ್ಲಿಗೆ ಬಂದೆನೋ ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗು."

"ಓಹ್, ನೀನು ನನಗೆ ಒಂದು ಅಸಾಧ್ಯ ಕೆಲಸವನ್ನೇ ಕೊಡುತ್ತಿದ್ದೀಯಲ್ಲ! ಆದರೂ ಇನ್ನೇನು ಮಾಡುವುದು! ಹಾರಿ ಹೋಗಲೇ ಬೇಕು. ನಮ್ಮ ಜೊತೆಗೆ ಆರು ಪೀಪಾಯಿ ತುಂಬ ಮಾಂಸ. ಆರು ಪೀಪಾಯಿ ತುಂಬ ನೀರು ಕೊಂಡೊಯ್ಯಬೇಕು. ಹಾರಿ ಹೋಗುವಾಗ ನಾನು ತಲೆಯನ್ನು ಬಲ ಗಡೆ ತಿರುಗಿಸಿದಾಗ ನೀನು ನನ್ನ ಬಾಯಿಗೆ ಒಂದು ತುಂಡು ಮಾಂಸ ಹಾಕಬೇಕು. ಎಡಗಡೆಗೆ ತಿರುಗಿಸಿದಾಗ ಸ್ವಲ್ಪ ನೀರು ಕೊಡಬೇಕು. ಇಲ್ಲದಿದ್ದರೆ ನಾವು ಅಲ್ಲಿಗೆ ಹೋಗಲು ಆಗುವುದೇ ಇಲ್ಲ. ನಾನು ಮಧ್ಯದಲ್ಲೇ ಸಾಯುತ್ತೇನೆ."

ಅವರು ಆರು ಪೀಪಾಯಿ ತುಂಬ ಮಾಂಸ, ಆರು ಪೀಪಾಯಿ ತುಂಬ ನೀರು ತೆಗೆದುಕೊಂಡು ಹೊರಟರು. ಉರುಳುಕಾಳು ಹದ್ದಿನ ಬೆನ್ನಿನ ಮೇಲೆ ಕುಳಿತ. ಹಾರಿ ಹೋದರು, ಹಾರಿ ಹೋದರು. ಹದ್ದು ತಲೆಯನ್ನು ಬಲಗಡೆಗೆ ತಿರುಗಿಸಿದಾಗಲೆಲ್ಲ ಉರುಳುಕಾಳು ಅದರ ಬಾಯಿಯೊಳಕ್ಕೆ ತುಂಡು ಮಾಂಸ ಹಾಕುತ್ತಿದ್ದ. ಎಡಗಡೆಗೆ ತಿರುಗಿಸಿದಾಗಲೆಲ್ಲ ನೀರು ಕೊಡುತ್ತಿದ್ದ. ಹೀಗೆ ತುಂಬ ಕಾಲ ಹಾರಿ ಹೋದರು. ಇನ್ನೇನು ತಾವು ತಲುಪಬೇಕಾದ ಸ್ಥಳ ತಲುಪಲಿದ್ದರು. ಆಗ ಹದ್ದು ತಲೆಯನ್ನು ಬಲಗಡೆಗೆ ತಿರುಗಿಸಿತು. ಆದರೆ ಪೀಪಾಯಿಯಲ್ಲಿ ಮಾಂಸವೆಲ್ಲ ಮುಗಿದುಹೋಗಿದೆ. ಆಗ ಉರುಳುಕಾಳು ತನ್ನ ಕಾಲಿನಿಂದಲೇ ಒಂದು ಚೂರು ಮಾಂಸ ಕಿತ್ತು ತೆಗೆದು ಹಕ್ಕಿಯ ಬಾಯಿಗೆ ಹಾಕಿದ. ಹದ್ದು ಮತ್ತೆ ಮೇಲಕ್ಕೆ ಹಾರಿತು.

ಅದು ಕೇಳಿತು:

"ನೀನು ಈಗ ನನಗೆ ಕೊಟ್ಟೆಯಲ್ಲ ಆ ಮಾಂಸ ಯಾವುದು? ಎಷ್ಟು ರುಚಿಯಾಗಿತ್ತು!"

ಉರುಳುಕಾಳು ತನ್ನ ಕಾಲು ತೋರಿಸಿ ಹೇಳಿದ:

"ಈ ಮಾಂಸ."

ಆಗ ಹದ್ದು ತಾನು ತಿಂದಿದ್ದ ಮಾಂಸದ ಚೂರನ್ನು ಹೊರಕ್ಕೆ ಉಗುಳಿತು. ಹಾರಿ ಹೋಗಿ ಸಂಜೀವಿನಿ ನೀರು ತಂದಿತು. ಆ ಚೂರು ಮಾಂಸವನ್ನು ಉರುಳುಕಾಳಿನ ಕಾಲಿನಲ್ಲಿ ಅದರ ಸ್ಥಳ ದಲ್ಲಿ ಇರಿಸಿ ಅದರ ಮೇಲೆ ಈ ನೀರನ್ನು ಚಿಮುಕಿಸಿತು. ಆ ಮಾಂಸದ ಚೂರು ಮತ್ತೆ ಕಾಲಿಗೆ ಬೇಗ ಸೇರಿಕೊಂಡಿತು.

ಹದ್ದು ಅನಂತರ ತನ್ನ ಮನೆಗೆ ಹಿಂದಿರುಗಿತು. ಉರುಳುಕಾಳು ತನ್ನ ಮಿತ್ರರನ್ನು ಹುಡುಕಿ ಕೊಂಡು ಹೊರಟ.

ಅವರು ಆಗಲೇ ಆ ರಾಜಕುಮಾರಿಯ ತಂದೆಯ ಮನೆಗೆ ಹೋಗಿ ಅಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಒಬ್ಬೊಬ್ಬರೂ ರಾಜಕುಮಾರಿಯನ್ನು ಮದುವೆಯಾಗಲು ಇಚ್ಛಿಸಿ ತಮ್ಮತಮ್ಮಲ್ಲೇ ಜಗಳವಾಡುತ್ತಿದ್ದರು.

ಆಗ ಇದ್ದಕ್ಕಿದ್ದಂತೆ ಅಲ್ಲಿ ಉರುಳುಕಾಳು ಕಾಣಿಸಿಕೊಳ್ಳುತ್ತಾನೆ. ಅವನು ತಮ್ಮನ್ನು ಕೊಲ್ಲು ತ್ತಾನೆಂದು ಅವರು ಹೆದರಿದರು. ಆದರೆ ಅವನು ಹೇಳಿದ:

"ನನ್ನ ಒಡಹುಟ್ಟಿದ ಸೋದರರೇ ನನಗೆ ಮೋಸ ಮಾಡಿದರು. ಇನ್ನು ನಿಮ್ಮ ವಿಷಯ ಏನು! ನಿಮ್ಮನ್ನು ಕ್ಷಮಿಸುವುದೇ ವಾಸಿ."

ಅವನು ಅವರನ್ನು ಕ್ಷಮಿಸಿದ.

ತಾನೇ ಆ ರಾಜಕುಮಾರಿಯನ್ನು ಮದುವೆಯಾಗಿ ಸುಖದಿಂದ ಜೀವನ ನಡೆಸ ತೊಡಗಿದ.

ವಿಜಯೀ ಇವಾನ್

ತುಂಬ ತುಂಬ ಕಾಲದ ಹಿಂದೆ, ಪುರಾತನ ಕಾಲದಲ್ಲಿ, ಒಂದು ಭಯಂಕರ ಡ್ರೇಗನ್ ವಾಸಿಸುತ್ತಿತ್ತು. ಅದು ಆಗಾಗ್ಗೆ ಒಂದಾನೊಂದು ಹಳ್ಳಿಗೆ ಬಂದು ಅಲ್ಲಿದ್ದ ಜನರನ್ನು ತಿಂದು ಹಾಕುತ್ತಿತ್ತು. ಕೊನೆಗೆ ಆ ಹಳ್ಳಿಯಲ್ಲಿ ಒಬ್ಬನೇ ಒಬ್ಬ ಉಳಿದ. ಅವನೂ ಮುದುಕ. ಡ್ರೇಗನ್ ತನ್ನಲ್ಲೇ ಹೇಳಿಕೊಂಡಿತು:

"ಇವನನ್ನು ನಾಳೆಯವರೆಗೆ ಬಿಟ್ಟಿರ್ತೀನಿ. ನಾಳೆ ಬೆಳಗಿನ ಉಪಾಹಾರಕ್ಕೆ ಸರಿಹೋಗುತ್ತೆ !"

ಅದೇ ದಿನ ಒಬ್ಬ ಬಡ ಯುವಕ ಅಕಸ್ಮಾತ್ತಾಗಿ ಆ ಹಳ್ಳಿಗೆ ಬಂದ. ಅವನು ಮುದುಕನ ಗುಡಿಸಿಲಿನ ಬಾಗಿಲು ತಟ್ಟಿ ಅಂದು ರಾತ್ರಿ ಅಲ್ಲಿ ಕಳೆಯಲು ಅವಕಾಶ ಕೊಡಬೇಕೆಂದು ಕೇಳಿಕೊಂಡ.

"ಇಲ್ಲಿ ಇರಬೇಕೂಂತ ಯಾಕಪ್ಪ ನಿನಗೆ ಇಷ್ಟ? ನಿನಗೇನು ಜೀವನ ಸಾಕಾಗಿಹೋಗಿದೆಯಾ ?" ಮುದುಕ ಕೇಳಿದ.

"ಯಾಕೆ ಹಾಗೆ ಕೇಳ್ತೀಯ, ಅಜ್ಜ ?" ಯುವಕ ಮರು ಪ್ರಶ್ನೆ ಹಾಕಿದ.

ಮುದುಕ ಅವನಿಗೆ ಡ್ರೇಗನ್‌ನ ವಿಷಯ ತಿಳಿಸಿದ. ಅದು ಹಳ್ಳಿಯಲ್ಲಿದ್ದ ಸಮಸ್ತರನ್ನೂ ತಿಂದು ಹಾಕಿದ್ದಿತೆಂದೂ ತನ್ನನ್ನೂ ತಿನ್ನಲು ಮಾರನೆಯ ಬೆಳಿಗ್ಗೆ ಬರಲಿದ್ದಿತೆಂದೂ ತಿಳಿಸಿದ.

ಯುವಕ ಹೇಳಿದ: "ಪರವಾಗಿಲ್ಲ ! ಅದು ನಿನ್ನನ್ನೇನೂ ತಿನ್ನೊಲ್ಲ. ಅದೇ ಉಸಿರು ಕಟ್ಟಿ ಸಾಯುತ್ತೆ !"

ಮಾರನೆಯ ಬೆಳಿಗ್ಗೆ ಡ್ರೇಗನ್ ಹಳ್ಳಿಗೆ ಹಾರಿಕೊಂಡು ಬಂದಿತು. ಹುಡುಗನನ್ನು ಕಂಡು ಸಂತೋಷಪಟ್ಟಿತು:

"ಓಹೋ, ಒಳ್ಳೆಯದೇ ಆಯಿತು. ನಿನ್ನೆ ಒಬ್ಬನೇ ಒಬ್ಬ ಇದ್ದ. ಇವತ್ತು ಇಬ್ಬರು ಇದ್ದಾರೆ."

"ಹುಷಾರಾಗಿರು!" ಯುವಕ ಹೇಳಿದ. "ನಮ್ಮನ್ನು ತಿನ್ನೋಕೆ ಮುಂಚೆ ನೀನೇ ಉಸಿರು ಕಟ್ಟಿ ಸಾಯಬಹುದು."

ಡ್ರೇಗನ್ ಅವನತ್ತ ಆಶ್ಚರ್ಯದಿಂದ ನೋಡಿತು.

"ನನಗಿಂತ ನೀನು ಹೆಚ್ಚು ಬಲಶಾಲಿ ಅಂದುಕೊಂಡು ಬಿಟ್ಟೆಯಾ?" ಅದು ಕೇಳಿತು.

"ಅಂದುಕೊಳ್ಳೋದು ಅಷ್ಟೇ ಅಲ್ಲ. ನಿಜಕ್ಕೂ ಹಾಗೇ ಇದೀನಿ!"

"ನೀನು – ಬಲಶಾಲಿ? ನಾನು ನಂಬೊಲ್ಲ. ನೋಡು ನಾನು ಏನು ಮಾಡಬಲ್ಲೆ ಅಂತ!"

ಹಾಗೆಂದು ಅದು ಒಂದು ಕಲ್ಲುಗುಂಡನ್ನು ತೆಗೆದುಕೊಂಡು ಗಟ್ಟಿಯಾಗಿ ಹಿಸುಕಿತು. ಕಲ್ಲು ಗುಂಡು ಪುಡಿಪುಡಿಯಾಯಿತು.

"ಇದೇನು ಮಹಾ!" ಅಂದ ಯುವಕ. "ಕಲ್ಲುಗುಂಡನ್ನು ಹಿಸುಕಿ ನೀರು ತರಿಸಬೇಕು. ಅದೀಗ ನಿಜವಾದ ಶೌರ್ಯ. ನೋಡು ನನ್ನನ್ನು."

ಹಾಗೆಂದು ಯುವಕ ಆಗಷ್ಟೆ ಮಾಡಿದ್ದ ಹಸನಾದ ಒಂದು ತುಂಡು ಕಾಟೇಜ್ ಚೀಸ್ ತೆಗೆದುಕೊಂಡ. ಅದನ್ನು ಒಣಗಲೆಂದು ಒಂದು ತುಂಡು ಬಟ್ಟೆಯಲ್ಲಿ ಕಟ್ಟಿ ಇರಿಸಲಾಗಿತ್ತು. ಅದು ಕಲ್ಲುಗುಂಡನ್ನು ಹೋಲುವಂತಿತ್ತು. ಯುವಕ ಅದನ್ನು ತೆಗೆದುಕೊಂಡು ಗಟ್ಟಿಯಾಗಿ ಅವುಕಿದ. ಅದರಿಂದ ನೀರು ಹೊರ ಸುರಿಯ ತೊಡಗಿತು.

"ಬಲ ಅಂದರೆ ನೋಡು ಇದು!" ಅವನೆಂದ.

"ಹೌದು. ನೋಡಿದೆಯಾ ನೀನೀಗ ನಿಜಕ್ಕೂ ಬಲಶಾಲಿ!" ಡ್ರೇಗನ್ ಹೇಳಿತು. "ಹೋಗಲಿ ಬಿಡು. ನಾವಿಬ್ಬರೂ ಸ್ನೇಹಿತರಾಗಿರೋಣ."

"ಆಗಲಿ. ಆದರೆ ನಾನು ಹೇಳಿದ ಹಾಗೆ ನೀನು ಮಾಡೋದಾದರೆ!"

ಅವರಿಬ್ಬರೂ ಒಟ್ಟಿಗೇ ಡ್ರೇಗನ್‌ನ ಮನೆಗೆ ಹೋದರು. ಡ್ರೇಗನ್ ಯುವಕನನ್ನು "ನಿನ್ನ ಹೆಸರೇನು?" ಎಂದು ಕೇಳಿತು.

"ನನ್ನನ್ನು ವಿಜಯಿ ಇವಾನ್ ಅಂತ ಕರೀತಾರೆ."

ಅದನ್ನು ಕೇಳಿ ಡ್ರೇಗನ್‌ಗೆ ಆಗಲೇ ಪುಕ್ಕಲು. "ಅಯ್ಯೋ, ಇವನು ನನ್ನನ್ನೂ ಕೊಂದು ಬಿಡುತ್ತಾನೋ ಏನೋ!" ಎಂದು ತನ್ನಲ್ಲೇ ಹೇಳಿಕೊಂಡಿತು.

ಊಟದ ಸಮಯ ಬಂದಿತು. ಡ್ರೇಗನ್ ಹೇಳಿತು:

"ಹೋಗು. ಇವಾನ್! ಒಂದು ಎತ್ತನ್ನು ಹಿಡಿದುಕೊಂಡು ಬಾ. ಇವತ್ತಿನ ಅಡಿಗೆಗೆ!"

ಯುವಕ ಡ್ರೇಗನ್‌ನ ಪಶುಗಳ ಮಂದೆ ಮೇಯುತ್ತಿದ್ದ ಸ್ಥಳಕ್ಕೆ ಹೋದ. ಅಲ್ಲಿದ್ದ ಎಲ್ಲ ಪಶುಗಳ ಬಾಲಗಳನ್ನೂ ಒಟ್ಟಿಗೆ ಕಟ್ಟ ತೊಡಗಿದ. ಡ್ರೇಗನ್ ತುಂಬ ಹೊತ್ತು ಕಾಯಿತು. ಆಮೇಲೆ ಯಾಕೆ ಇಷ್ಟು ಹೊತ್ತಾದರೂ ಬರಲಿಲ್ಲ ಎಂದು ನೋಡಲು ಓಡಿ ಬಂದಿತು.

"ಏನು ಮಾಡುತ್ತಿದ್ದೀಯ, ಇವಾನ್?" ಅದು ಕೇಳಿತು.

"ಒಂದೇ ಒಂದು ಎತ್ತನ್ನು ತರುವುದು ನನಗೆ ಇಷ್ಟವಿಲ್ಲ. ಎಲ್ಲವನ್ನೂ ಒಟ್ಟಿಗೇ ತರಬೇಕೆಂಬ ಆಸೆ" ಅವನೆಂದ.

"ಹಾಳಾಗಿ ಹೋಗ! ನೀನು ಹಾಗೇನಾದರೂ ಮಾಡಿದರೆ ನನ್ನ ಬಳಿ ಒಂದು ಎತ್ತೂ ಉಳಿಯೊಲ್ಲ!" ಡ್ರೇಗನ್ ಕೂಗಿ ಹೇಳಿತು.

ಅದು ಒಂದು ಎತ್ತನ್ನು ಕೊಂದು, ಚರ್ಮ ಸುಲಿದು, ಮಾಂಸವನ್ನೂ ಚರ್ಮವನ್ನೂ ಮನೆಗೆ ಎಳೆದುಕೊಂಡು ಹೋಯಿತು. ಮನೆ ತಲುಪಿದ ಮೇಲೆ ಚರ್ಮವನ್ನು ಇವಾನ್‌ಗೆ ಕೊಟ್ಟು ಹೇಳಿತು:

"ತಗೋ. ಈ ಚರ್ಮದಲ್ಲಿ ಒಂದಿಷ್ಟು ನೀರು ಹಿಡಿದುಕೊಂಡು ಬಾ."

ಇವಾನ್ ಚರ್ಮವನ್ನು ತೆಗೆದುಕೊಂಡ. ಬಾವಿಯ ಬಳಿಗೆ ಅದನ್ನು ಕಷ್ಟದಿಂದ ಎಳೆದುಕೊಂಡು ಹೋದ. ಆಮೇಲೆ ಬಾವಿಯೊಳಕ್ಕೆ ಇಳಿಬಿಟ್ಟ. ಅಷ್ಟೆ ಅವನು ಮಾಡಿದ್ದು. ನೀರು ತುಂಬಿದ ಆ ಚರ್ಮವನ್ನು ಹೊರಕ್ಕೆ ಎಳೆಯುವುದು ಅವನ ಕೈಲಿ ಆಗಲಿಲ್ಲ. ಆಗ ಅವನು ಮರದಿಂದ ಒಂದು ಗುದ್ದಲಿಯನ್ನು ಮಾಡಿಕೊಂಡು ಬಾವಿಯ ಸುತ್ತ ಅಗೆಯ ತೊಡಗಿದ.

ಎಷ್ಟು ಹೊತ್ತಾದರೂ ಬರಲಿಲ್ಲವಲ್ಲ, ಇವನು ಏನು ಮಾಡುತ್ತಿದ್ದಾನೆ ಎಂದು ನೋಡಲು ಡ್ರೇಗನ್ ಓಡಿ ಬಂದಿತು.

"ಇದೇನು ಮಾಡುತ್ತಿದ್ದೀಯ, ಇವಾನ್?" ಅದು ಕೇಳಿತು.

"ಅಯ್ಯೋ. ಆ ಪುಟ್ಟ ಚರ್ಮದಲ್ಲಿ ಯಾರು ನೀರು ಹೊರುತ್ತಾರೆ! ಇಡೀ ಬಾವಿಯನ್ನೇ ತೆಗೆದು ತರುತ್ತೇನೆ."

"ಹಾಳಾಗಿ ಹೋಗ!" ಡ್ರೇಗನ್ ಎಂದಿತು. ಇವಾನ್‌ನ ಭಾರಿ ಬಲವನ್ನು ಕಂಡು ದಿಗಿಲು ಬಿದ್ದಿತು. ತಾನೇ ಚರ್ಮದಲ್ಲಿ ನೀರು ತುಂಬಿಕೊಂಡು ಒಯ್ದಿತು.

"ಹೋಗಲಿ. ಹೋಗಿ ಒಂದಿಷ್ಟು ಸೌದೆಯನ್ನಾದರೂ ಕಡಿದು ತಾ!" ಎಂದದು ಇವಾನ್‌ಗೆ ಹೇಳಿತು. "ಒಂದೇ ಒಂದು ಒಣಗಿದ ಓಕ್ ಮರವನ್ನು ಕಿತ್ತು ತಾ. ಸಾಕು!"

"ನನಗದೆಲ್ಲ ಆಗೊಲ್ಲ. ಸುಮ್ಮನೆ ಒಂದು ಓಕ್ ಮರವನ್ನು ಯಾರು ಕಿತ್ತು ತರುತ್ತಾರೆ?

ಹತ್ತಿಪ್ಪತ್ತು ಮರಗಳನ್ನಾದರೂ ಕಿತ್ತು ತಾ ಅಂದರೆ ಅದು ಪರವಾಗಿಲ್ಲ" ಇವಾನ್ ಕೋಪಗೊಂಡ ವನಂತೆ ನಟಿಸಿ ಹೋಗಲೇ ಇಲ್ಲ.

ಡ್ರೇಗನ್ ಅಡಿಗೆ ಮಾಡಿತು. ಆಮೇಲೆ ಊಟಕ್ಕೆ ಕುಳಿತು ತಿನ್ನ ತೊಡಗಿತು. ಆದರೆ ಇವಾನ್ ಅದರ ಜೊತೆ ಊಟಕ್ಕೆ ಕೂರಲಿಲ್ಲ. ತಾನು ತಿನ್ನುವುದು ಎಷ್ಟು ಸ್ವಲ್ಪ ಎಂದು ಅದಕ್ಕೆ ತಿಳಿದರೆ ತಾನು ಅಷ್ಟು ಬಲಶಾಲಿಯಲ್ಲ ಎಂದು ಅದು ಊಹಿಸಿ ತಿಳಿದು ಬಿಡುವುದು ಎಂದು ಅವನು ಹೆದರಿದ್ದ. ಡ್ರೇಗನ್ ಹೆಚ್ಚಿನ ಮಾಂಸವನ್ನೆಲ್ಲ ತಿಂದು ಪಾತ್ರೆಯಲ್ಲಿ ತೀರ ಸ್ವಲ್ಪವಷ್ಟೆ ಉಳಿದಾಗ ಯುವಕ ಮೇಜಿನ ಮುಂದೆ ಕುಳಿತು ಎಳ್ಳಷ್ಟು ತಿಂದು ಹೇಳಿದ:

"ಏನು ಇಷ್ಟೇ ಇದೆ. ಇದು ಯಾರಿಗೆ ಸಾಕು?"

"ಹೋಗಲಿ. ಬಾ, ನಮ್ಮ ಅಮ್ಮನ ಮನೆಗೆ ಹೋಗೋಣ. ಅವಳು ಸೀಕಡುಬು ಮಾಡಿ ಕೊಡುತ್ತಾಳೆ!" ಡ್ರೇಗನ್ ಹೇಳಿತು.

"ಹುಂ. ನಡಿ, ಹೋಗೋಣ!" ಇವಾನ್ ಹೇಳಿದ. ತನ್ನಲ್ಲೇ ಹೇಳಿಕೊಂಡ: "ಅಯ್ಯೋ, ಇನ್ನು ನನ್ನ ಕತೆ ಮುಗೀತು ಅಂತಲೇ!"

ಅವರು ಡ್ರೇಗನ್‌ನ ತಾಯಿಯ ಮನೆಗೆ ಬಂದರು. ಅಲ್ಲಿ ಇವರಿಗೆ ಇಪ್ಪತ್ತು ಪೀಪಾಯಿಗಳ ತುಂಬ ಸೀಕಡುಬು ತಿನ್ನಲು ಕೊಡಲಾಯಿತು.

ಇವಾನ್‌ನೂ ಡ್ರೇಗನ್ನೂ ಮೇಜಿನ ಮುಂದೆ ಕುಳಿತರು. ಡ್ರೇಗನ್ ಒಂದಾದ ಮೇಲೊಂದ ರಂತೆ ಸೀಕಡುಬನ್ನು ನುಂಗ ತೊಡಗಿತು. ಇವಾನ್ ತಿನ್ನುತ್ತಿರುವಂತೆ ಸೋಗುಹಾಕಿದ. ಅಷ್ಟೆ. ಸೀಕಡುಬುಗಳನ್ನು ತೆಗೆದುಕೊಂಡು ತನ್ನ ಅಂಗಿಯ ತೋಳುಗಳೊಳಕ್ಕೂ ಎದೆಯ ಬಳಿಯೂ ತುರುಕಿಕೊಂಡ. ಇಪ್ಪತ್ತು ಪೀಪಾಯಿಗಳು ಬೇಗನೆಯೇ ಬರಿದಾದವು. ಡ್ರೇಗನ್ ಎದ್ದು ನಿಂತು ಹೇಳಿತು:

"ಬಾ. ಕಲ್ಲಿನ ಬಂಡೆಗೆ ಹೋಗಿ ಸುತ್ತಿಕೊಳ್ಳೋಣ. ಯಾರು ಹೆಚ್ಚು ಬಲಶಾಲಿ ಅನ್ನೋ ದನ್ನು ನೋಡೋಣ."

"ಹುಂ. ನಡಿ, ಹೋಗೋಣ!" ಇವಾನ್ ಒಪ್ಪಿದ.

ಅವರು ಹೊಲದಲ್ಲಿ ಒಂದು ದೊಡ್ಡ ಕಲ್ಲಿನ ಬಂಡೆಯನ್ನು ಕಂಡರು. ಡ್ರೇಗನ್ ಅದರ ಸುತ್ತ ಎಷ್ಟು ಬಲವಾಗಿ ಸುತ್ತಿಕೊಂಡಿತೆಂದರೆ ಆ ಕಲ್ಲಿನ ಬಂಡೆಯಿಂದ ಕಿಡಿಗಳು ಹಾರಿದವು!

"ಅದು ಏನು ಮಹಾ!" ಇವಾನ್ ಹೇಳಿದ. "ನೀನು ಕಲ್ಲು ಬಂಡೆಯಿಂದ ನೀರು ಹೊರ ಬರುವ ಹಾಗೆ ಸುತ್ತಿಕೊಂಡಿದ್ದರೆ ಪರವಾಗಿರಲಿಲ್ಲ."

ಅವನು ತಾನೇ ಕಲ್ಲು ಬಂಡೆಯ ಸುತ್ತ ಕೈಗಳನ್ನು ಬಳಸಿ ತಂದು ತನ್ನ ಶರೀರವನ್ನು ಅದಕ್ಕೆ

ಬಲವಾಗಿ ಒತ್ತಿದ. ಅವನ ಅಂಗಿಯ ತೋಳುಗಳಲ್ಲೂ ಎದೆಯ ಬಳಿಯೂ ಇದ್ದ ಸೀಕಡುಬುಗಳು ಜಜ್ಜಿ ಹೋದಂತಾಗಿ ನೀರು ಹೊರ ಸುರಿಯ ತೊಡಗಿತು.

"ನೋಡಿದೆಯಾ, ಹೀಗೆ ಮಾಡಬೇಕು!" ಅವನೆಂದ.

ಡ್ರೇಗನ್ ಹೆದರಿ ನಡುಗ ತೊಡಗಿತು.

"ಹೋಗಲಿ, ಬಾ. ಇವಾನ್. ನಾವು ಶಿಳ್ಳೆ ಹಾಕಿ ನೋಡೋಣ. ಯಾರು ಹೆಚ್ಚು ಗಟ್ಟಿಯಾಗಿ ಶಿಳ್ಳೆ ಹಾಕಬಲ್ಲರು. ನೋಡೋಣ" ಡ್ರೇಗನ್ ಹೇಳಿತು. ಅದು ಎಷ್ಟು ಗಟ್ಟಿಯಾಗಿ ಶಿಳ್ಳೆ ಹಾಕಿ ತೆಂದರೆ ಸುತ್ತ ಇದ್ದ ಗಿಡಮರಗಳೆಲ್ಲ ಬುಡದವರೆಗೂ ಬಾಗಿದವು.

"ಈಗ ನಾನೇನು ಮಾಡುವುದು?" ಎಂದು ಇವಾನ್ ತನ್ನಲ್ಲೇ ಹೇಳಿಕೊಂಡ. ಸುತ್ತ ನೋಡಿದ. ಹತ್ತಿರದಲ್ಲೇ ನೆಲದ ಮೇಲೆ ಒಂದು ಕಬ್ಬಿಣದ ತುಂಡು ಬಿದ್ದಿದ್ದಿತು. ಅವನೆಂದ:

"ನಿನ್ನ ಕಣ್ಣುಗಳನ್ನು ಮುಚ್ಚಿಕೋ, ಡ್ರೇಗನ್! ನಾನೀಗ ಎಷ್ಟು ಜೋರಾಗಿ ಶಿಳ್ಳೆ ಹಾಕು ತ್ತೇನೆಂದರೆ ನಿನ್ನ ಕಣ್ಣುಗುಡ್ಡೆಗಳು ಕಿತ್ತು ಬಂದು ಬಿಡುತ್ತವೆ!"

ಡ್ರೇಗನ್ ಕಣ್ಣು ಮುಚ್ಚಿಕೊಂಡಿತು. ಇವಾನ್ ಶಿಳ್ಳೆ ಹಾಕುತ್ತ ಕಬ್ಬಿಣದ ತುಂಡನ್ನು ಎತ್ತಿ ಕೊಂಡು ಅದರಿಂದ ಡ್ರೇಗನ್‌ನ ಹಣೆಯ ಮೇಲೆ ಬಲವಾಗಿ ಬಾರಿಸಿದ. ಡ್ರೇಗನ್ ನೋವಿನಿಂದ ನುಲಿಯಿತು.

"ಹೌದು, ನೀನು ಹೇಳಿದ್ದು ಸರಿ" ಎಂದಿತು ಅದು. "ಕಣ್ಣು ಮುಚ್ಚಿಕೊಂಡಿದ್ದರೂ ನನ್ನ ಕಣ್ಣುಗುಡ್ಡೆಗಳು ಇನ್ನೇನು ಕಿತ್ತು ಬಂದು ಬಿಡಲಿದ್ದವು!"

ಅದು ಇವಾನ್‌ಗೆ ಎಷ್ಟು ಹೆದರಿದ್ದಿತೆಂದರೆ ಇವಾನ್‌ನ ಜೊತೆ ಒಂದೇ ಮನೆಯಲ್ಲಿ ವಾಸಿ ಸಲೂ ಬಯಸಲಿಲ್ಲ. ಹಾಗಾಗಿ ಇವಾನ್‌ನಿಗೇ ಒಂದು ಮನೆಯನ್ನು ಹಳ್ಳಿಯ ಸರಹದ್ದಿನಲ್ಲಿ ಕಟ್ಟಿ ಕೊಟ್ಟಿತು. ಅನಂತರ ಅದೂ ಅದರ ತಾಯಿಯೂ ಜೊತೆಗೂಡಿ ಇವಾನ್‌ನನ್ನು ಹೇಗೆ ಸಾಯಿ ಸುವುದು ಅಂತ ಹಂಚಿಕೆ ಮಾಡ ತೊಡಗಿದವು.

"ಅವನು ಒಳಗೆ ಮಲಗಿದ್ದಾಗ ಅವನ ಜೊತೆಗೇ ಅವನ ಮನೆಯನ್ನು ಸುಟ್ಟು ಹಾಕಿ ಬಿಡೋಣ" ಎಂದವು ತೀರ್ಮಾನಿಸಿದವು.

ಆದರೆ ಇವಾನ್ ಅವುಗಳ ಈ ಮಾತನ್ನು ಕೇಳಿಸಿಕೊಂಡು ಬಿಟ್ಟ. ತನ್ನ ಮನೆಯ ಹೊರಗೆ ಅವಿತು ಕುಳಿತ.

ಅವು ಅವನ ಮನೆಯನ್ನು ಸುಟ್ಟು ಹಾಕಿದವು. ಅವನು ಕೂಡಲೇ ಅಡಗಿದ್ದ ಸ್ಥಳದಿಂದ ಅವುಗಳಿಗೆ ಕಾಣದಂತೆ ಹೊರಬಂದು ಬೂದಿಯಾಗಿದ್ದ ಮನೆಯ ಮಧ್ಯೆ ನಿಂತ. ತನ್ನ ಬಟ್ಟೆಗೆ ಮೆತ್ತಿದ್ದ ಬೂದಿಯನ್ನು ಕೊಡವಿಕೊಳ್ಳುವವನಂತೆ ನಟಿಸುತ್ತ ನಿಂತ.

ಅವನನ್ನು ಕಂಡು ಡ್ರೇಗನ್ ಬೆಕ್ಕಸಬೆರಗಾಗಿ ನಿಂತಿತು.

"ಏನು, ನೀನು ಇನ್ನೂ ಜೀವಂತವಾಗಿದ್ದೀಯ, ಇವಾನ್?" ಎಂದದು ಆಶ್ಚರ್ಯ ಭಯಗಳಿಂದ ಕೇಳಿತು.

"ಯಾಕಿರಬಾರದು!" ಇವಾನ್ ಹೇಳಿದ. "ಆದರೆ ರಾತ್ರಿ ನನಗೇಕೋ ಅಷ್ಟು ಚೆನ್ನಾಗಿ ನಿದ್ದೆ ಬರಲಿಲ್ಲ. ಸೊಳ್ಳೆ ಕಚ್ಚಿತು ಅಂತ ಕಾಣುತ್ತೆ."

"ಇವನು ಎಂಥ ಮನುಷ್ಯನಪ್ಪ! ಬೆಂಕಿ ಉರಿಯೂ ಇವನಿಗೆ ಏನೂ ಮಾಡಲಾರದಲ್ಲ!" ಎಂದು ಡ್ರೇಗನ್ ತನ್ನಲ್ಲೇ ಹೇಳಿಕೊಂಡಿತು. ಅವನಿಗೆ ಹೆದರಿ ಅದು ಆ ಸ್ಥಳವನ್ನೇ ಬಿಟ್ಟು ಹೋಯಿತು. ಅದು ಆ ಪ್ರದೇಶಗಳಲ್ಲಿ ಮತ್ತೆಂದೂ ಕಂಡುಬರಲಿಲ್ಲ.

ಹಾರುವ ಹಡಗು

ಒಂದಾನೊಂದು ಕಾಲದಲ್ಲಿ ಒಬ್ಬ ಮುದುಕ ಒಬ್ಬ ಮುದುಕಿ ವಾಸವಾಗಿದ್ದರು. ಅವರಿಗೆ ಮೂರು ಗಂಡು ಮಕ್ಕಳು. ಇಬ್ಬರು ಬುದ್ಧಿವಂತರು. ಮೂರನೆಯವ ದಡ್ಡ. ಮುದುಕ ಮುದುಕಿ ಬುದ್ಧಿವಂತ ಮಕ್ಕಳನ್ನು ಪ್ರೀತಿಸುತ್ತಿದ್ದರು. ಮುದುಕಿ ಪ್ರತಿವಾರವೂ ಅವರಿಗೆ ತೊಟ್ಟುಕೊಳ್ಳಲು ಹೊಸ ಹೊಸ ಅಂಗಿ ಕೊಡುತ್ತಿದ್ದಳು. ಮೂರನೆಯವನನ್ನು ಎಲ್ಲರೂ ಪೆದ್ದ. ದಡ್ಡ ಎಂದು ಗೇಲಿ ಮಾಡುತ್ತಿದ್ದರು. ಎಲ್ಲರೂ ಅವನ ಮೇಲೆ ರೇಗುತ್ತಿದ್ದರು. ಅವನು ಸದಾ ಬೆಂಕಿಗೂಡಿನ ಮೇಲೆ ತೇಪೆ ಹಾಕಿದ ಹರಕು ಅಂಗಿ ತೊಟ್ಟು ಕುಳಿತಿರುತ್ತಿದ್ದ. ಮುದುಕಿ ತಿನ್ನಲು ಕೊಟ್ಟರೆ ತಿನ್ನುತ್ತಿದ್ದ. ಇಲ್ಲದಿದ್ದರೆ ಹಸಿದೇ ಇರುತ್ತಿದ್ದ.

ಒಂದು ಸಾರಿ ಹಳ್ಳಿಯಲ್ಲೆಲ್ಲ ಒಂದು ಸುದ್ದಿ ಹರಡಿತು: ರಾಜ ತನ್ನ ಮಗಳನ್ನು ಮದುವೆ ಮಾಡಿ ಕೊಡಲಿದ್ದಾನೆ. ಔತಣ ಸಮಾರಂಭಕ್ಕೆ ಎಲ್ಲರೂ ರಾಜಧಾನಿಗೆ ಬರಬೇಕು. ಅಂತ. ಯಾರು ಹಾರುವ ಹಡಗು ನಿರ್ಮಿಸಿ ಅದರಲ್ಲೇ ರಾಜಧಾನಿಗೆ ಯಾನ ಮಾಡಿಕೊಂಡು ಬರುತ್ತಾರೋ ಅವರಿಗೆ ರಾಜ ತನ್ನ ಮಗಳನ್ನು ಮದುವೆ ಮಾಡಿ ಕೊಡಲಿದ್ದ.

ಬುದ್ಧಿವಂತ ಸೋದರರು ಕಾಡಿಗೆ ಹೋದರು.

ಒಂದು ಮರವನ್ನು ಕಡಿದು. ಅದರಿಂದ ಹಾರುವ ಹಡಗು ಹೇಗೆ ಮಾಡುವುದು ಅಂತ ಯೋಚನೆ ಮಾಡುತ್ತ ಕುಳಿತರು.

ಅವರ ಬಳಿಗೆ ಒಬ್ಬ ಹಣ್ಣುಹಣ್ಣು ಮುದುಕ ಬಂದ.

"ದೇವರು ನಿಮಗೆ ಸಹಾಯ ಮಾಡಲಿ, ಮಕ್ಕಳೇ! ನನಗೆ ಸ್ವಲ್ಪ ಬೆಂಕಿ ಕೊಡ್ತೀರ? ಹೊಗೆ ಬತ್ತಿ ಸೇದಬೇಕಾಗಿದೆ."

"ಅದಕ್ಕೆಲ್ಲ ನಮಗೆ ಸಮಯವಿಲ್ಲ, ಹೋಗು, ಹೋಗು, ಮುದುಕಪ್ಪ!"

ಹಾಗೆಂದು ಅವರು ಮತ್ತೆ ತಮ್ಮ ಯೋಜನೆಯಲ್ಲೇ ತೊಡಗಿದರು.

ಮುದುಕ ಹೇಳಿದ: "ಹಡಗನ್ನು ಮಾಡಲು ನಿಮ್ಮ ಕೈಲಿ ಎಲ್ಲಾಗುತ್ತೆ. ಹಂದಿ ಬಾನೆಯನ್ನಷ್ಟೆ ನೀವು ಮಾಡಬಲ್ಲಿರಿ. ರಾಜಕುಮಾರಿಯನ್ನು ನೀವೆಂದೂ ಕಾಣಲಾರಿರಿ – ನಿಮ್ಮ ಕಿವಿಯನ್ನು ಹೇಗೆ ಕಾಣಲಾರಿರೋ ಹಾಗೆ."

ಹಾಗೆ ಹೇಳಿ ಮುದುಕ ಅಲ್ಲಿ ನಿಲ್ಲದೆ ಹೊರಟು ಹೋದ. ಸೋದರರು ಹಡಗು ಮಾಡಲು ತುಂಬ ಯತ್ನ ಮಾಡಿದರು. ಏನು ಮಾಡಿದರೂ ಯಶಸ್ವಿಯಾಗಲಿಲ್ಲ.

"ಹೋಗಲಿ, ರಾಜಧಾನಿಗೆ ಕುದುರೆ ಮೇಲೇ ಹೋಗೋಣ" ಎಂದ ಹಿರಿಯವ. "ರಾಜ ಕುಮಾರಿಯನ್ನು ಮದುವೆಯಾಗದೆ ಹೋದರೆ ಅಷ್ಟೇ ಹೋಯಿತು. ಚೆನ್ನಾಗಿ ಊಟವನ್ನಾ ದರೂ ಉಂಡು ಬರೋಣ."

ಮುದುಕ ಮುದುಕಿ ಅವರಿಗೆ ಹರಸಿ ಕಳುಹಿಸಿಕೊಟ್ಟರು. ದಾರಿ ಮಧ್ಯದಲ್ಲಿ ತಿನ್ನಲೆಂದು ಬುತ್ತಿ ಕಟ್ಟಿ ಕೊಟ್ಟರು. ಅವರಿಗಾಗಿ ಮುದುಕಿ ಘಮಘಮಿಸುವ ಬ್ರೆಡ್ ಮಾಡಿಕೊಟ್ಟಳು. ರುಚಿಯಾದ ಹಂದಿಮಾಂಸ ಬೇಯಿಸಿ ಕೊಟ್ಟಳು, ಒಂದು ಫ್ಲಾಸ್ಕಿನಲ್ಲಿ ಉಕ್ರೈನಿನ ವೋಡ್ಕ ತುಂಬಿ ಕೊಟ್ಟಳು.

ಇಬ್ಬರು ಸೋದರರೂ ಕುದುರೆ ಹತ್ತಿ ಹೊರಟರು.

ಅಣ್ಣಂದಿರು ಹೋದ ವಿಷಯ ತಿಳಿದು ದಡ್ಡ ಹುಡುಗ ತಾನೂ ಹೇಳಿದ:

"ಅಣ್ಣಂದಿರು ಎಲ್ಲಿಗೆ ಹೋದರೋ ಅಲ್ಲಿಗೆ ನಾನೂ ಹೋಗ್ತೀನಿ!"

"ನೀನೆಲ್ಲಿಗೆ ಹೋಗ್ತೀಯೋ, ಪೆದ್ದ!" ಎಂದಳು ತಾಯಿ. "ನಿನ್ನನ್ನು ಕಾಡಿನಲ್ಲಿ ತೋಳಗಳು ತಿಂದು ಹಾಕುತ್ತವೆ."

"ಇಲ್ಲ, ತಿನ್ನಲ್ಲ!"

"ಹೋಗ್ತೀನಿ, ಹೋಗ್ತೀನಿ!" ಅಂತ ಹಟ ಹಿಡಿದ.

ಮುದುಕಿ ಅವನಿಗೆ ಒಂದು ತುಂಡು ಹಳಸಲು ಕಪ್ಪು ಬ್ರೆಡ್, ಒಂದು ಡಬ್ಬಿ ನೀರು ಚೀಲದ ಲ್ಲಿಟ್ಟು ಕಳುಹಿಸಿಕೊಟ್ಟಳು.

ಪೆದ್ದ ಕಾಡಿಗೆ ಹೋದ. ದಾರಿಯಲ್ಲಿ ಒಬ್ಬ ಹಣ್ಣುಹಣ್ಣು ಮುದುಕನನ್ನು ಸಂಧಿಸಿದ. ಎಂಥ

ಮುದುಕನೆಂದರೆ ಅವನ ಗಡ್ಡವೆಲ್ಲ ಸಂಪೂರ್ಣವಾಗಿ ನರೆತಿತ್ತು. ಅದು ಸೊಂಟದ ವರೆಗೂ ಇಳಿ ಬಿದ್ದಿತ್ತು.

"ಆರೋಗ್ಯವೇ, ಅಜ್ಜ !"

"ಆರೋಗ್ಯ, ಮಗು !"

"ಎಲ್ಲಿಗೆ ಹೊರಟಿರಿ, ಅಜ್ಜ ?"

"ಕಷ್ಟದಲ್ಲಿರೋರಿಗೆ ಸಹಾಯ ಮಾಡುತ್ತ ಪ್ರಪಂಚ ಸುತ್ತುತ್ತಿದೀನಿ. ನೀನು ಎಲ್ಲಿಗೆ ಹೊರಟೆ ?"

"ನಾನು ಅರಮನೆಯಲ್ಲಿ ಔತಣಕ್ಕೆ ಹೊರಟಿದೀನಿ."

"ನಿನಗೆ ಹಾರುವ ಹಡಗು ಮಾಡೋದಕ್ಕೆ ಬರುತ್ತೆಯೆ ?"

"ಇಲ್ಲ, ಬರೊಲ್ಲ."

"ಹಾಗಾದರೆ ಯಾಕೆ ಹೋಗ್ತೀಯ ?"

"ನನ್ನ ಅಣ್ಣಂದಿರು ಹೋದರು. ನಾನೂ ಹೋಗ್ತಿದೀನಿ. ಬಹುಶಃ ಅಲ್ಲಿ ನನಗೆ ಭಾಗ್ಯ ಲಭಿಸಬಹುದು."

"ಸರಿ. ಕೂತುಕೋ. ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳೋಣ. ನಿನ್ನ ಚೀಲದಲ್ಲೇನಿದೆ, ತೆಗಿ ನೋಡೋಣ."

"ಅಯ್ಯೋ, ಅಜ್ಜ, ನೀವು ಅದನ್ನು ತಿನ್ನಲಾರಿರಿ. ಅಲ್ಲಿ ಗಟ್ಟಿಯಾದ ಹಳಸಲು ಕಪ್ಪು ಬ್ರೆಡ್ ಅಷ್ಟೆ ಇರೋದು."

"ಪರವಾಗಿಲ್ಲ. ಏನಿದೆಯೋ ಅದನ್ನೇ ಕೊಡು."

ಪೆದ್ದ ಚೀಲದೊಳಕ್ಕೆ ಕೈ ಹಾಕಿ ಬ್ರೆಡ್ಡನ್ನು ಹೊರ ತೆಗೆದ. ಅದು ಇನ್ನೆಷ್ಟು ಮಾತ್ರವೂ ಅಮ್ಮ ಕೊಟ್ಟಿದ್ದ ಗಟ್ಟಿಯಾದ ಹಳಸಲು ಕಪ್ಪು ಬ್ರೆಡ್ ಆಗಿರಲಿಲ್ಲ. ಆದರೆ ಹಸನಾದ ಘಮಘಮಿಸುವ ಬಿಳಿ ಬ್ರೆಡ್ ಆಗಿತ್ತು. ಶ್ರೀಮಂತರು ಔತಣ ಕೂಟಗಳಲ್ಲಷ್ಟೆ ತಿನ್ನುವಂಥ ಬ್ರೆಡ್ ಆಗಿತ್ತು. ಪೆದ್ದ ದಿಗ್ಭ್ರಾಂತನಾದ. ಮುದುಕ ಮುಗುಳ್ನಕ್ಕ.

ಅವರು ವಿಶ್ರಾಂತಿ ತೆಗೆದುಕೊಂಡರು, ಹೊಟ್ಟೆ ತುಂಬ ತಿಂದರು. ಮುದುಕ ಪೆದ್ದನಿಗೆ ವಂದನೆ ತಿಳಿಸಿ, ಹೇಳಿದ:

"ಇಲ್ಲಿ ಕೇಳು, ಮಗು. ನಾನು ಹೇಳುವುದನ್ನು ಗಮನವಿಟ್ಟು ಕೇಳು. ಕಾಡಿಗೆ ಹೋಗು. ಅಲ್ಲಿ ಅತ್ಯಂತ ದೊಡ್ಡ ಓಕ್ ಮರವನ್ನು ಕಂಡುಹಿಡಿ. ಅದರ ಕೊಂಬೆಗಳು ಮೂಲೆಮೂಲೆಯಾಗಿ ಹರಡಿಕೊಂಡಿರಬೇಕು. ಆ ಮರಕ್ಕೆ ಮೂರು ಬಾರಿ ಕೊಡಲಿಯಿಂದ ಪೆಟ್ಟು ಕೊಡು. ಆಮೇಲೆ ನೀನೇ ನೆಲದ ಮೇಲೆ ಬಿದ್ದು ಯಾರಾದರೂ ಬಂದು ನಿನ್ನನ್ನು ಎಬ್ಬಿಸುವವರೆಗೂ ಹಾಗೆಯೇ

ಮಲಗಿರು. ಆಗ ನಿನ್ನ ಹಡಗು ನಿರ್ಮಾಣವಾಗಿರುತ್ತೆ. ನೀನು ಅದರಲ್ಲಿ ಕುಳಿತು ಎಲ್ಲಿಗೆ ಬೇಕೋ ಅಲ್ಲಿಗೆ ಹೋಗಬಹುದು. ಆದರೆ ಒಂದು ವಿಷಯ – ದಾರಿಯಲ್ಲಿ ನಿನಗೆ ಯಾರು ಯಾರು ಸಿಕ್ತಾರೋ ಅವರನ್ನೆಲ್ಲ ಕರೆದುಕೊಂಡು ಹೋಗು!"

ಪೆದ್ದ ಅಜ್ಜನಿಗೆ ವಂದನೆ ಸಲ್ಲಿಸಿದ. ಅವರು ತಮ್ಮತಮ್ಮ ದಾರಿ ಹಿಡಿದು ಹೋದರು. ಪೆದ್ದ ಕಾಡಿಗೆ ಹೋದ, ಕೊಂಬೆಗಳು ಮೂಲೆಮೂಲೆಯಾಗಿ ಹರಡಿಕೊಂಡಿದ್ದ ದೊಡ್ಡ ಓಕ್ ಮರವನ್ನು ಕಂಡುಹಿಡಿದ, ಅದಕ್ಕೆ ಕೊಡಲಿಯಿಂದ ಮೂರು ಬಾರಿ ಪೆಟ್ಟು ಕೊಟ್ಟ, ತಾನೇ ನೆಲದ ಮೇಲೆ ಬಿದ್ದು ನಿದ್ರೆ ಮಾಡ ತೊಡಗಿದ. ಮಲಗಿದ, ಮಲಗಿದ, ಆಗ ಇದ್ದಕ್ಕಿದ್ದಂತೆ ಯಾರೋ ಅವನನ್ನು ಕರೆಯುತ್ತಿದ್ದಂತೆ ಕೇಳಿಸಿತು.

"ಏಳು, ಮಿತ್ರ, ಏಳು. ನಿನ್ನ ಭಾಗ್ಯ ನೌಕೆ ಸಿದ್ಧವಾಗಿದೆ!"

ಅವನು ಕಣ್ಣುಬಿಟ್ಟು ನೋಡುತ್ತಾನೆ – ಹಡಗು ನಿಂತಿದೆ. ಎಲ್ಲ ಚಿನ್ನದ್ದು. ಅದರ ಕೂವೆ ಕಂಬಗಳು ಬೆಳ್ಳಿಯವು. ಹಾಯಿಗಳು ರೇಷ್ಮೆಯವು. ಕೂತುಕೋ, ಹಾರಿ ಹೋಗು, ಎಂದು ಹೇಳುತ್ತಿವೆಯೋ ಅನ್ನುವಂತೆ ಪಟಗುಟ್ಟುತ್ತಿವೆ!

ಅವನು ಹೆಚ್ಚು ಹೊತ್ತು ಯೋಚನೆ ಮಾಡುತ್ತ ಕೂರಲಿಲ್ಲ. ತಕ್ಷಣವೇ ಹಡಗು ಹತ್ತಿ ಕುಳಿತ. ಹಾಯಿಗಳನ್ನು ಬಿಚ್ಚಿದ, ಹಾರಿಕೊಂಡು ಹೊರಟ.

ಅಬ್ಬಾ, ಎಷ್ಟು ವೇಗವಾಗಿ ಹಾರಿ ಹೋಗುತ್ತಿತ್ತು ಆ ಹಡಗು! ಹಾರಿತು, ಹಾರಿತು. ಅದರ ಮೇಲಿನಿಂದ ಇಡೀ ಭೂಮಂಡಲವೇ ಕಾಣುತ್ತಿತ್ತು. ನೋಡುತ್ತಾನೆ – ವ್ಯಕ್ತಿಯೊಬ್ಬ ಭೂಮಿಗೆ ಕಿವಿಗೊಟ್ಟು ಏನನ್ನೋ ಕೇಳುತ್ತಿದ್ದಾನೆ. ಪೆದ್ದ ಕೂಗಿ ಕೇಳಿದ:

"ನಮಸ್ಕಾರ, ಪೂಜ್ಯರೇ! ನೀವು ಏನು ಮಾಡುತ್ತಿದ್ದೀರ?"

"ಕೇಳುತ್ತಿದ್ದೇನೆ – ಜನ ರಾಜನ ಅರಮನೆಯಲ್ಲಿ ಔತಣಕ್ಕೆ ನೆರೆದರೋ ಇಲ್ಲವೋ ಅನ್ನುವುದನ್ನು ಕೇಳುತ್ತಿದ್ದೇನೆ."

"ನೀವೂ ಅರಮನೆಗೆ ಹೋಗುತ್ತಿದ್ದೀರ?"

"ಹೌದು."

"ಹಾಗಾದರೆ ಬನ್ನಿ ನನ್ನ ಜೊತೆಗೆ. ನಾನು ಕರೆದುಕೊಂಡು ಹೋಗುತ್ತೇನೆ."

ಅವನು ಕುಳಿತುಕೊಂಡ. ಅವರು ಮುಂದಕ್ಕೆ ಹೋದರು.

ಹಾರಿದರು, ಹಾರಿದರು. ನೋಡುತ್ತಾರೆ – ರಸ್ತೆಯಲ್ಲಿ ಒಬ್ಬ ವ್ಯಕ್ತಿ ಹೋಗುತ್ತಿದ್ದಾನೆ. ಅವನು ತನ್ನ ಒಂದು ಕಾಲನ್ನು ತನ್ನ ಕಿವಿಯವರೆಗೂ ಎತ್ತಿ ಕಟ್ಟಿಕೊಂಡಿದ್ದಾನೆ, ಇನ್ನೊಂದು ಕಾಲಿನಿಂದ ಕುಪ್ಪಳಿಸಿಕೊಂಡು ಹೋಗುತ್ತಿದ್ದಾನೆ. ಪೆದ್ದ ಮತ್ತೆ ಕೂಗಿ ಕೇಳುತ್ತಾನೆ:

"ನಮಸ್ಕಾರ, ಪೂಜ್ಯರೇ! ಯಾಕೆ ನೀವು ಒಂದೇ ಕಾಲಿನಲ್ಲಿ ಕುಪ್ಪಳಿಸಿಕೊಂಡು ಹೋಗುತ್ತಿದ್ದೀರ?"

"ಯಾಕೆಂದರೆ, ಇನ್ನೊಂದು ಕಾಲನ್ನೂ ಉಪಯೋಗಿಸಿದರೆ ಒಂದೇ ಹೆಜ್ಜೆಗೆ ಇಡೀ ಭೂಮಂಡಲವನ್ನೇ ದಾಟಿ ಬಿಡುತ್ತೇನೆ. ಅದು ನನಗೆ ಇಷ್ಟವಿಲ್ಲ."

"ಎಲ್ಲಿಗೆ ಹೊರಟಿರಿ?"

"ರಾಜನ ಅರಮನೆಗೆ, ಔತಣಕ್ಕೆ."

"ಹಾಗಾದರೆ ಬನ್ನಿ, ನಮ್ಮ ಹಡಗಿನಲ್ಲಿ ಕುಳಿತುಕೊಳ್ಳಿ!"

"ಸರಿ, ಒಳ್ಳೆಯದೇ ಆಯಿತು!"

ಅವನು ಕುಳಿತುಕೊಂಡ. ಅವರು ಮತ್ತೆ ಮುಂದಕ್ಕೆ ಹೋದರು.

ಹೋದರು, ಹೋದರು. ನೋಡುತ್ತಾರೆ – ರಸ್ತೆಯಲ್ಲಿ ಒಬ್ಬ ಬಿಲ್ಲುಗಾರ ನಿಂತಿದ್ದಾನೆ. ಅವನು ಬಿಲ್ಲನ್ನು ಎಳೆದು ಬಾಣ ಹೊಡೆಯಲು ಸಿದ್ಧನಾಗುತ್ತಿದ್ದಾನೆ. ಆದರೆ ಸುತ್ತಮುತ್ತ ಏನೂ ಕಾಣುತ್ತಿಲ್ಲ – ಹಕ್ಕಿಯಾಗಲೀ ಮೃಗವಾಗಲೀ ಏನೂ ಇಲ್ಲ. ಖಾಲಿ ಹೊಲವಷ್ಟೆ ಕಾಣುತ್ತಿದೆ.

"ನಮಸ್ಕಾರ, ಪೂಜ್ಯರೇ! ನೀವು ಎಲ್ಲಿಗೆ ಗುರಿ ಇಟ್ಟಿದ್ದೀರ? ಯಾವ ಪಕ್ಷಿಯಾಗಲೀ ಮೃಗವಾಗಲೀ ಕಾಣುತ್ತಿಲ್ಲವಲ್ಲ!"

"ನಿಮಗೆ ಏನೂ ಕಾಣಿಸದೆ ಇರಬಹುದು. ನನಗೆ ಕಾಣಿಸುತ್ತೆ."

"ಎಲ್ಲಿ ಕಾಣಿಸುತ್ತಿದೆ?"

"ಹಹ್ಹಾ! ಅದು ಆ ಕಾಡಿನ ಹಿಂದೆ, ನೂರು ವೆರ್ಸ್ಟ್* ದೂರದಲ್ಲಿದೆ. ಅಲ್ಲಿ ಓಕ್ ಮರದ ಮೇಲೆ ಒಂದು ಹದ್ದು ಕೂತಿದೆ."

"ಬನ್ನಿ, ನಮ್ಮ ಹಡಗಿನಲ್ಲಿ ಕುಳಿತುಕೊಳ್ಳಿ!"

ಅವನು ಕುಳಿತುಕೊಂಡ. ಮತ್ತೆ ಎಲ್ಲರೂ ಹಾರಿ ಹೊರಟರು. ಹೋದರು, ಹೋದರು. ನೋಡುತ್ತಾರೆ – ಮಾರ್ಗದಲ್ಲಿ ಒಬ್ಬ ಮುದುಕ ಹೋಗುತ್ತಿದ್ದಾನೆ. ಅವನು ಒಂದು ದೊಡ್ಡ ಚೀಲದ ತುಂಬ ಬ್ರೆಡ್ ಹೊತ್ತುಕೊಂಡು ಹೋಗುತ್ತಿದ್ದಾನೆ.

"ಎಲ್ಲಿಗೆ ಹೊರಟಿರಿ, ಅಜ್ಜ? ಇಷ್ಟು ಬೇಗ ಬೇಗ ಹೆಜ್ಜೆ ಹಾಕಿಕೊಂಡು ಹೋಗುತ್ತಿದ್ದೀರ."

"ನನ್ನ ಊಟಕ್ಕೆ ಸ್ವಲ್ಪ ಬ್ರೆಡ್ ಪಡೆದುಕೊಳ್ಳೋಣ, ಅಂತ ಹೋಗ್ತಿದೀನಿ!"

---

* ಒಂದು ರಷ್ಯನ್ ಉದ್ದಳತೆ, ಸುಮಾರು 1ಕಿ.ಮೀ.ಗೆ ಸಮ. – ಸಂ.

"ಹೌದೆ? ಆದರೆ ನಿಮ್ಮ ಬಳಿ ಆಗಲೇ ಒಂದು ಚೀಲ ಬ್ರೆಡ್ ಇದೆಯಲ್ಲ!"

"ಇದು ಸಾಲದು! ನನಗೆ ಇದು ಒಂದು ತುತ್ತಿಗೂ ಸಾಲದು."

"ಬನ್ನಿ, ನಮ್ಮ ಹಡಗಿನಲ್ಲಿ ಕುಳಿತುಕೊಳ್ಳಿ!"

ಆ ಮುದುಕನೂ ಹತ್ತಿ ಕುಳಿತ. ಅವರು ಮತ್ತೆ ಹಾರಿ ಹೊರಟರು.

ನೋಡುತ್ತಾರೆ – ಒಂದು ಸರೋವರದ ಬಳಿ ಯಾರೋ ಒಬ್ಬ ಮುದುಕ ಹೋಗುತ್ತಿದ್ದಾನೆ. ಅವನು ಏನನ್ನೋ ಹುಡುಕುತ್ತಿದ್ದಾನೆ.

"ಏನು ನೀವು ಇಲ್ಲಿ ಹುಡುಕುತ್ತಿದ್ದೀರ, ಅಜ್ಜ?" ಪೆದ್ದ ಕೂಗಿ ಕೇಳಿದ.

"ನನಗೆ ಬಾಯಾರಿಕೆಯಾಗಿದೆ. ನೀರಿಗಾಗಿ ಹುಡುಕುತ್ತಿದ್ದೇನೆ."

"ಇದೇನು, ನಿಮ್ಮ ಮುಂದೆ ಒಂದು ಇಡೀ ಸರೋವರವೇ ಇದೆ! ಅದನ್ನೇಕೆ ನೀವು ಕುಡಿಯುತ್ತಿಲ್ಲ?"

"ಅಯ್ಯೋ, ಇದು ಯಾವ ಮೂಲೆಗೆ? ಇದು ನನಗೆ ಒಂದು ಗುಟುಕಿಗೂ ಸಾಲದು."

"ಬನ್ನಿ, ನಮ್ಮ ಹಡಗಿನಲ್ಲಿ ಕುಳಿತುಕೊಳ್ಳಿ!"

ಮುದುಕ ಕುಳಿತುಕೊಂಡ. ಮುಂದೆ ಹಾರಿಕೊಂಡು ಹೋದರು. ಇನ್ನೊಬ್ಬ ಮುದುಕನನ್ನು ಸಂಧಿಸಿದರು. ಅವನು ಹಳ್ಳಿಗೆ ಹೋಗುತ್ತಿದ್ದ. ಹೆಗಲಿನ ಮೇಲೆ ಹುಲ್ಲಿನ ಹೊರೆ ಹೊತ್ತಿದ್ದ.

"ನಮಸ್ಕಾರ, ಅಜ್ಜ! ಹುಲ್ಲಿನ ಹೊರೆಯನ್ನು ಎಲ್ಲಿಗೆ ಒಯ್ಯುತ್ತಿದ್ದೀರ?"

"ಹಳ್ಳಿಗೆ."

"ಅಯ್ಯೋ, ಏನು ನೀವು! ಹಳ್ಳಿಯಲ್ಲೇನು ಹುಲ್ಲಿಗೆ ಬರವೇ?"

"ಹಹ್ಹಾ. ಇದು ಆ ತರಹ ಹುಲ್ಲಲ್ಲ!"

"ಮತ್ತೆ, ಯಾವ ತರಹ ಹುಲ್ಲು?"

"ಯಾವ ತರಹ ಅಂದರೆ, ಬೆಚ್ಚಗಿನ ಬೇಸಿಗೆ ದಿನದಲ್ಲೂ ಈ ಹುಲ್ಲನ್ನು ಹರಡಿದರೆ ಕೂಡಲೇ ಹಿಮಶೈತ್ಯ ಉಂಟಾಗಿ ಮಂಜು ಬೀಳ ತೊಡಗುತ್ತೆ."

"ಬನ್ನಿ, ನಮ್ಮ ಹಡಗಿನಲ್ಲಿ ಕುಳಿತುಕೊಳ್ಳಿ. ರಾಜನ ಅರಮನೆಗೆ ಹೋಗೋಣ!"

"ಅದಕ್ಕೇನಂತೆ! ನಡೆಯಿರಿ ಹೋಗೋಣ."

ಕುಳಿತುಕೊಂಡ. ಅವರು ಮುಂದೆ ಹಾರಿ ಹೊರಟರು.

ತುಂಬ ಕಾಲ ಹಾರಿ ಹೋದರೋ, ಸ್ವಲ್ಪ ಕಾಲವೋ, ಯಾರು ಬಲ್ಲರು. ಅಂತೂ ಔತಣದ ಹೊತ್ತಿಗೆ ಸರಿಯಾಗಿ ರಾಜನ ಅರಮನೆಯನ್ನು ಬಂದು ಸೇರಿದರು. ಅಲ್ಲಿ ಆಗಲೇ ಅಂಗಳದಲ್ಲಿ ಊಟದ ಮೇಜುಗಳನ್ನು ಇರಿಸಲಾಗಿತ್ತು. ಮೇಜುಗಳ ಮೇಲೆ ನಾನಾ ರೀತಿಯ ಭಕ್ಷ್ಯಭೋಜ್ಯ

ಗಳನ್ನು – ಹಿಟ್ಟಿನಿಂದ ಮಾಡಿದವು, ಮಾಂಸದಿಂದ ಮಾಡಿದವು, ಕೋಳಿ ಮತ್ತು ಪಕ್ಷಿಗಳಿಂದ ಮಾಡಿದವು ಹೀಗೇ ತರಹೇವಾರಿ ಭಕ್ಷ್ಯಭೋಜ್ಯಗಳನ್ನು – ಇರಿಸಲಾಗಿತ್ತು. ಪಕ್ಕದಲ್ಲೇ ದೊಡ್ಡ ದೊಡ್ಡ ಪೀಪಾಯಿಗಳಲ್ಲಿ ನಾನಾ ರೀತಿಯ ಪೇಯಗಳು – ಮದ್ಯ, ಸಾರಾಯಿ, ವೋಡ್ಕ, ಇತ್ಯಾದಿ, ಇತ್ಯಾದಿ. ಎಲ್ಲರೂ ಹೊಟ್ಟೆ ತುಂಬುವಷ್ಟು, ಬೇಕಾದಷ್ಟು ತಿನ್ನಬಹುದಿತ್ತು, ಕುಡಿಯಬಹುದಿತ್ತು. ಹಾಗಿದ್ದ ಮೇಲೆ ಬಂದಿದ್ದ ಜನರ ಸಂಖ್ಯೆ ಕಮ್ಮಿಯೇ? – ಇಡೀ ರಾಜ್ಯದ ಜನರೆಲ್ಲ ಅಲ್ಲಿ ನೆರೆದಿದ್ದರು! ಮುದುಕರು, ಮಕ್ಕಳು, ಯುವಕರು, ಬಡವರು, ಬಲ್ಲಿದರು, ಒಟ್ಟಿನಲ್ಲಿ ಅಲ್ಲಿಗೆ ಬರದೇ ಇದ್ದವರೇ ಇಲ್ಲ! ಪೆದ್ದನ ಅಣ್ಣಂದಿರೂ ಆಗಲೇ ಅಲ್ಲಿ ಕುಳಿತಿದ್ದರು.

ಆ ಸಮಯಕ್ಕೆ ಸರಿಯಾಗಿ ಪೆದ್ದ ಬಂದ ತನ್ನ ಸಂಗಾತಿಗಳೊಂದಿಗೆ, ಚಿನ್ನದ ಹಾರುವ ಹಡಗಿನಲ್ಲಿ. ಅವನ ಹಡಗು ರಾಜನ ಕೋಣೆಯ ಕಿಟಕಿಯ ಮುಂದೇ ಸರಿಯಾಗಿ ಬಂದಿಳಿಯಿತು. ಪೆದ್ದ ಮತ್ತು ಅವನ ಸಂಗಾತಿಗಳು ಹಡಗಿನಿಂದ ಇಳಿದು ಭೋಜನಕ್ಕೆ ಹೊರಟರು.

ಅದನ್ನು ಕಂಡು ರಾಜ ಬೆಕ್ಕಸಬೆರಗಾದ. ಚಿನ್ನದ ಹಡಗಿನಲ್ಲಿ ಸಾಮಾನ್ಯ ರೈತ. ಅವನ ಅಂಗಿಯೋ ರಂಧ್ರಮಯ, ತೇಪೆಗಳಿಂದ ತುಂಬಿತ್ತು. ಷರಾಯಿ ಹಳೆಯದು, ಸಾಮಾನ್ಯದ್ದು. ಹೋಗಲಿ ಪಾದರಕ್ಷೆ – ಏನೇನೂ ಇಲ್ಲ. ಬರಿಗಾಲು!

ರಾಜ ತಲೆ ಅಲ್ಲಾಡಿಸುತ್ತ ಹೇಳಿದ:

"ನನ್ನ ಮಗಳನ್ನು ಇಂಥ ಹರಕು ಚಿಂದಿ ತೊಟ್ಟ ಹೊಲಸು ಮನುಷ್ಯನಿಗೆ ನೀಡುವುದೆ? ಎಂದಿಗೂ ಸಾಧ್ಯವಿಲ್ಲ!"

ಈ ರೈತನಿಂದ ಹೇಗೆ ಪಾರಾಗುವುದು ಎಂದು ಯೋಚನೆ ಮಾಡುತ್ತ ಕುಳಿತ. ಅವನಿಗೆ ಒಂದಿಷ್ಟು ಅಸಾಧ್ಯವಾದ ಕಾರ್ಯಭಾರಗಳನ್ನು ನೀಡುವುದೆಂದು ಯೋಚಿಸಿದ. ತನ್ನ ಸೇವಕನನ್ನು ಕರೆದು ಹೇಳಿದ:

"ಹೋಗು, ಹೇಳು ಆ ಜೀತದಾಳಿಗೆ, ಅವನು ಚಿನ್ನದ ಹಡಗಿನಲ್ಲಿ ಬಂದಿದ್ದರೇನಂತೆ, ನನ್ನ ಅತಿಥಿಗಳು ಊಟ ಮುಗಿಸುವುದರೊಳಗೆ ಸಂಜೀವಿನಿ ನೀರನ್ನು ತರದೆ ಹೋದರೆ ನನ್ನ ಮಗಳನ್ನು ಅವನಿಗೆ ಕೊಡುವುದಿಲ್ಲ, ಅಂತ. ಆ ನೀರು ತರದೆ ಹೋದರೆ ನನ್ನ ಕತ್ತಿ ಅವನ ತಲೆಯನ್ನು ತುಂಡರಿಸುತ್ತೆ!"

ಸೇವಕ ಹೋದ.

ರಾಜ ಹೇಳಿದುದನ್ನು ಪೆದ್ದನ ಜೊತೆ ಬಂದಿದ್ದ ಚುರುಕುಕಿವಿಯ ಮುದುಕ ಕೇಳಿಸಿಕೊಂಡುಬಿಟ್ಟ. ಅವನು ಪೆದ್ದನಿಗೆ ಎಲ್ಲವನ್ನೂ ಹೇಳಿದ. ಪೆದ್ದ ಗರಬಡಿದವನಂತೆ ಕುಳಿತ. ತಿನ್ನಲಿಲ್ಲ, ಕುಡಿಯಲಿಲ್ಲ, ಸುಮ್ಮನೆ ತಲೆ ತಗ್ಗಿಸಿಕೊಂಡು ಬೆಂಚಿನ ಮೇಲೆ ಕುಳಿತಿದ್ದ.

ಭೀಮಹೆಜ್ಜೆಯ ಮುದುಕ ಕೇಳಿದ:

"ಯಾಕೆ, ಮಿತ್ರ, ದುಃಖಿತನಾಗಿ ಕುಳಿತಿದ್ದೀಯ?"

"ರಾಜ ನನಗೆ ಅಸಾಧ್ಯದ ಕೆಲಸ ಕೊಟ್ಟಿದ್ದಾನೆ. ಈ ಅತಿಥಿಗಳೆಲ್ಲ ಊಟ ಮುಗಿಸುವುದರ ಒಳಗೆ ಅವನಿಗೆ ಸಂಜೀವಿನಿ ನೀರು ತಂದು ಕೊಡಬೇಕಂತೆ. ಹೇಗೆ ತಂದು ಕೊಡಲಿ?"

"ದುಃಖಿಸಬೇಡ. ನಾನು ನಿನಗೆ ತಂದು ಕೊಡುತ್ತೇನೆ."

"ಸರಿ, ನೋಡು, ಆಗುತ್ತದ ಅಂತ."

ಸೇವಕ ರಾಜನ ಆಜ್ಞೆ ತಿಳಿಸಲು ಬಂದ. ಆದರೆ ಪೆದ್ದ ಅದನ್ನು ಆಗಲೇ ತಿಳಿದಿದ್ದ.

"ತಂದು ಕೊಡುವೆನೆಂದು ರಾಜನಿಗೆ ಹೇಳು!" ಅವನೆಂದ.

ಭೀಮಹೆಜ್ಜೆಯ ಮುದುಕ ಕಿವಿಗೆ ಕಟ್ಟಿಕೊಂಡಿದ್ದ ತನ್ನ ಕಾಲನ್ನು ಬಿಚ್ಚಿ ಒಂದು ಹೆಜ್ಜೆ ಮುಂದಿಟ್ಟ – ಆಗಲೇ ಸಂಜೀವಿನಿ ನೀರಿದ್ದ ಸ್ಥಳದಲ್ಲಿದ್ದ! ನೀರನ್ನು ಸಂಗ್ರಹಿಸಿಕೊಂಡ, ಬಳಲಿದ.

"ಇನ್ನೂ ಅವರೆಲ್ಲ ಊಟ ಮಾಡುತ್ತಿದ್ದಾರೆ. ಸಮಯ ಇದೆ. ಈ ಪೊದೆಯ ಕೆಳಗೆ ಕುಳಿತು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ" ಅಂದುಕೊಂಡ.

ಕೂತ, ಹಾಗೆಯೇ ನಿದ್ದೆ ಹೋಗಿ ಬಿಟ್ಟ. ಅರಮನೆಯಲ್ಲಿ ಔತಣ ಇನ್ನೇನು ಮುಗಿಯುತ್ತಲಿದೆ, ಅವನು ಬರಲೇ ಇಲ್ಲ. ಪೆದ್ದ ಜೀವಂತನಾಗಿ ಅಲ್ಲ ಆದರೆ ನಿರ್ಜೀವಿಯಾದವನಂತೆ ಕುಳಿತು ಬಿಟ್ಟ. "ನನ್ನ ಕಥೆ ಮುಗಿಯಿತು" ಅವನೆಂದುಕೊಂಡ. ಚುರುಕುಕಿವಿ ಮುದುಕ ಭೂಮಿಗೆ ಕಿವಿ ಇಟ್ಟು ಕೇಳಿದ. ಕೇಳಿದ, ಕೇಳಿದ...

ಕೊನೆಗೆ ಹೇಳಿದ: "ದುಃಖಪಡಬೇಡ. ಅವನು ಯಾವುದೋ ಪೊದೆಯ ಕೆಳಗೆ ಮಲಗಿ ನಿದ್ರಿಸುತ್ತಿದ್ದಾನೆ."

"ಈಗ ನಾವೇನು ಮಾಡುವುದು?" ಪೆದ್ದ ಕೇಳಿದ. "ಅವನನ್ನು ಎಚ್ಚರಗೊಳಿಸುವುದು ಹೇಗೆ?"

ಬಿಲ್ಲುಗಾರ ಹೇಳಿದ:

"ಹೆದರಬೇಡ. ನಾನು ಅವನನ್ನು ಈಗಲೇ ಎಚ್ಚರಗೊಳಿಸುತ್ತೇನೆ."

ಹಾಗೆಂದು ಅವನು ಬಿಲ್ಲನ್ನು ಎತ್ತಿಕೊಂಡು ಪೊದೆಗೆ ಗುರಿ ಇಟ್ಟು ಬಾಣ ಬಿಟ್ಟ. ಅದು ಪೊದೆಯ ಕೊಂಬೆಗಳನ್ನು ಥರಥರನೆ ನಡುಗಿಸಿತು. ಕೊಂಬೆಗಳು ಕೆಳಗೆ ಮಲಗಿದ್ದ ಭೀಮಹೆಜ್ಜೆಯ ಮುದುಕನಿಗೆ ತರಚಿದವು. ಅವನು ಎಚ್ಚರಗೊಂಡ. ಒಂದು ಹೆಜ್ಜೆ ಇಟ್ಟ. ಆಗಲೇ ಅರಮನೆಯಲ್ಲಿದ್ದ. ಅತಿಥಿಗಳು ಇನ್ನೂ ಊಟ ಮುಗಿಸಿರಲಿಲ್ಲ, ಆಗಲೇ ಅವನು ಸಂಜೀವಿನಿ ನೀರನ್ನು ತಂದಿದ್ದ.

ರಾಜ ಅತ್ಯಾಶ್ಚರ್ಯಗೊಂಡ. ಆದರೆ ತಕ್ಷಣವೇ ಏನೂ ಹೇಳಲಿಲ್ಲ.

ಆಮೇಲೆ ತನ್ನ ಸೇವಕನಿಗೆ ಹೇಳಿದ: "ಹೋಗು, ಹೇಳು ಆ ಜೀತದಾಳಿಗೆ, ಅವನು ತನ್ನ ಸಂಗಾತಿಗಳೊಂದಿಗೆ ಒಂದೇ ಬಾರಿಗೆ ಹನ್ನೆರಡು ಜೊತೆ ಕರಿದ ಎತ್ತುಗಳನ್ನೂ ಹನ್ನೆರಡು ಒಲೆಗಳಲ್ಲಿ ಬೇಯಿಸಿದ ಬ್ರೆಡ್ಡನ್ನೂ ತಿಂದು ಮುಗಿಸಿದರಷ್ಟೆ ನನ್ನ ಮಗಳನ್ನು ಮದುವೆ ಮಾಡಿಕೊಡುವುದು, ಅಂತ. ಅವನು ತಿನ್ನದೆ ಹೋದರೆ, ನನ್ನ ಕತ್ತಿ ಅವನ ತಲೆಯನ್ನು ತುಂಡರಿಸುತ್ತೆ!"

ಚುರುಕುಕಿವಿ ಮುದುಕ ಕೇಳಿಸಿಕೊಂಡು ಮತ್ತೆ ಪೆದ್ದನಿಗೆ ಎಲ್ಲವನ್ನೂ ಹೇಳಿದ.

"ಈಗ ನಾನೇನು ಮಾಡಲಿ? ನಾನೋ ಒಂದು ಬಾರಿಗೆ ಒಂದು ತುಂಡು ಬ್ರೆಡ್ಡನ್ನೂ ಪೂರ್ತಿ ತಿಂದು ಮುಗಿಸಲಾರೆ!" ಪೆದ್ದ ಹೇಳಿದ.

ಮತ್ತೆ ತಲೆ ತಗ್ಗಿಸಿಕೊಂಡು ಚಿಂತಾಕ್ರಾಂತನಾಗಿ ಕುಳಿತ.

ಹೊಟ್ಟೆಬಾಕ ಮುದುಕ ಹೇಳಿದ:

"ದುಃಖಪಡಬೇಡ, ಗೆಳೆಯ. ನಿಮಗಾಗಿ ನಾನೇ ಎಲ್ಲವನ್ನೂ ತಿಂದು ಮುಗಿಸುತ್ತೇನೆ. ಅವರು ಕೊಡುವುದು ಇನ್ನೂ ಕಮ್ಮಿಯೇ ಆಗುತ್ತೆ."

ರಾಜನ ಸೇವಕ ಬಂದ. ಪೆದ್ದ ಅವನಿಗೆ ಹೇಳಿದ:

"ಗೊತ್ತಾಯಿತು, ಗೊತ್ತಾಯಿತು ರಾಜನ ಆಜ್ಞೆ! ಹೋಗಿ ಹೇಳು ತಿನ್ನುವುದಕ್ಕೆ ಸಿದ್ಧತೆ ಮಾಡಲಿ."

ತಕ್ಷಣವೇ ಹನ್ನೆರಡು ಜೊತೆ ಎತ್ತುಗಳನ್ನು ಎಣ್ಣೆಯಲ್ಲಿ ಕರಿಯಲಾಯಿತು, ಹನ್ನೆರಡು ಒಲೆಗಳಲ್ಲಿ ಬೇಯಿಸಿದ ಬ್ರೆಡ್ಡನ್ನು ತಂದಿರಿಸಲಾಯಿತು. ಅವರು ತಂದಿಟ್ಟರೋ ಇಲ್ಲವೋ ಹೊಟ್ಟೆಬಾಕ ಮುದುಕ ಎಲ್ಲವನ್ನೂ ಒಂದೇ ಬಾರಿಗೆ ತಿಂದು ಮುಗಿಸಿ ಚೊಕ್ಕಟ ಮಾಡಿದ, ಇನ್ನೂ ಬೇಕೆಂದು ಕೇಳಿದ.

"ಅಯ್ಯೋ, ಇದೇನು ಮಹಾ! ಇನ್ನೂ ಇಷ್ಟು ಕೊಟ್ಟರೂ ತಿನ್ನುತ್ತೀನಿ!" ಅವನೆಂದ.

ರಾಜನಿಗೆ ಕೋಪ ಬಂದಿತು. ಇನ್ನೂ ಒಂದು ಕೆಲಸ ಕೊಟ್ಟ. ಹನ್ನೆರಡು ಪೀಪಾಯಿ ತುಂಬ ಸಾರಾಯಿಯನ್ನೂ, ಹನ್ನೆರಡು ಪೀಪಾಯಿ ತುಂಬ ದ್ರಾಕ್ಷಾರಸವನ್ನೂ ತರಿಸಿದ. ಎಲ್ಲವನ್ನೂ ಒಂದೇ ಬಾರಿಗೆ ಕುಡಿಯಬೇಕೆಂದು ಆಜ್ಞಾಪಿಸಿದ.

"ಕುಡಿಯದೆ ಹೋದರೆ, ನನ್ನ ಕತ್ತಿ ಅವನ ತಲೆಯನ್ನು ತುಂಡರಿಸುತ್ತೆ!"

ಚುರುಕುಕಿವಿ ಮುದುಕ ಕೇಳಿಸಿಕೊಂಡು ಬಿಟ್ಟ. ವಿಷಯವನ್ನು ಪೆದ್ದನಿಗೆ ತಿಳಿಸಿದ. ಅತಿ ಬಾಯಾರಿಕೆಯ ಮುದುಕ ಹೇಳಿದ:

"ಆಗಲಿ, ಗೆಳೆಯ. ದುಃಖಪಡಬೇಡ. ನಾನೇ ಎಲ್ಲವನ್ನೂ ಕುಡಿಯುತ್ತೇನೆ. ಅವರು ಕೊಡೋದು ಇನ್ನೂ ಕಮ್ಮಿಯೇ ಆಗುತ್ತೆ."

ಹನ್ನೆರಡು ಪೀಪಾಯಿ ತುಂಬ ಸಾರಾಯಿ, ಹನ್ನೆರಡು ಪೀಪಾಯಿ ತುಂಬ ದ್ರಾಕ್ಷಾರಸ ತಂದಿರಿಸಲಾಯಿತು. ತಂದಿಟ್ಟಿದ್ದೇ ತಡ ಅತಿಬಾಯಾರಿಕೆಯ ಮುದುಕ ಎಲ್ಲವನ್ನೂ ಕೊನೆಯ ಹನಿಯವರೆಗೂ ಕುಡಿದು ಮುಗಿಸಿ ಹೇಳಿದ:

"ರಾಜರ ಆತಿಥ್ಯ ಯಾಕೆ ಇಷ್ಟು ಅಲ್ಪ! ನಾನು ಇನ್ನೂ ಇಷ್ಟು ಕೊಟ್ಟರೂ ಕುಡೀತೀನಿ."

ರಾಜ ನೋಡುತ್ತಾನೆ – ತಾನು ಮಾಡಿದ್ದೆಲ್ಲ ವಿಫಲ. ಮತ್ತೆ ಯೋಚನೆ ಮಾಡುತ್ತಾನೆ: "ಈ ಪೆದ್ದನನ್ನು ಈ ಜಗತ್ತಿನಿಂದಲೇ ಅಳಿಸಿ ಹಾಕಬೇಕು!"

ಸೇವಕನಿಗೆ ಹೇಳುತ್ತಾನೆ:

"ಹೋಗಿ ಹೇಳು. ಮದುವೆಗೆ ಮುನ್ನ ಅವನು ಶುಭ್ರವಾಗಿ ಆವಿ ಸ್ನಾನ ಮಾಡಬೇಕು, ಅಂತ."

ಆಮೇಲೆ ಎರಕ ಹೊಯ್ದ ಕಬ್ಬಿಣದ ಸ್ನಾನಗೃಹವನ್ನು ಕೆಂಪಗಾಗುವವರೆಗೂ ಕಾಯಿಸು ವಂತೆ ಹೇಳಿದ. ಅದರ ಬಳಿಗೆ ಹೋಗಲೇ ಆಗುತ್ತಿಲ್ಲ. ಸ್ನಾನ ಮಾಡುವುದು ಹೇಗೆ?

ಪೆದ್ದನಿಗೆ ಸ್ನಾನ ಮಾಡುವಂತೆ ತಿಳಿಸಲಾಯಿತು. ಅವನು ಸ್ನಾನಗೃಹಕ್ಕೆ ಹೋದ. ಅವನಿಗೂ ಮುಂದೆ ಹಿಮಶೈತ್ಯದ ಮುದುಕ ಹುಲ್ಲಿನ ಕಂತೆಗಳನ್ನು ಹೊತ್ತು ನಡೆದ. ಅವರು ಸ್ನಾನಗೃಹದ ಒಳ ಹೋದರು. ಅದು ಬೆಂಕಿಯಂತೆ ಕೆಂಪಗೆ ಕಾದಿದೆ. ಧಗೆಯಿಂದ ಉಸಿರಾಡಲೇ ಆಗುತ್ತಿಲ್ಲ. ಹಿಮಶೈತ್ಯದ ಮುದುಕ ಹುಲ್ಲಿನ ಕಂತೆಗಳನ್ನು ಹರಡಿದ. ತಕ್ಷಣವೇ ಎಷ್ಟು ತಂಪಾಯಿತೆಂದರೆ ಪೆದ್ದ ಕಷ್ಟದಿಂದ ಸ್ನಾನ ಮಾಡಬೇಕಾಯಿತು. ಅವನು ಒಲೆಗೂಡಿನ ಮೇಲೆ ಹತ್ತಿ ಹೋಗಿ ಮೈ ಬೆಚ್ಚಗೆ ಮಾಡಿಕೊಳ್ಳಲು ಕುಳಿತ.

ರಾಜನು ಸೇವಕನಿಗೆ ಸ್ನಾನಗೃಹದ ಬಾಗಿಲು ತೆರೆಯುವಂತೆ ಹೇಳಿದ. ಅವನು ಅಂದು ಕೊಂಡಿದ್ದ, ಅದರೊಳಗೆ ಪೆದ್ದನ ಶರೀರದ ಬೂದಿಯಷ್ಟೆ ಉಳಿದಿರುತ್ತದೆ, ಅಂತ. ಆದರೆ ಪೆದ್ದ ಒಲೆಗೂಡಿನ ಮೇಲೆ ಕುಳಿತು ಮೈ ಕಾಯಿಸಿಕೊಳ್ಳುತ್ತಿದ್ದಾನೆ!

"ರಾಜನ ಸ್ನಾನಗೃಹ ಎಷ್ಟು ಕೆಟ್ಟುದಾಗಿದೆ! ಎಷ್ಟು ತಣ್ಣಗಿದೆ, ಇಡೀ ಚಳಿಗಾಲ ಇವನ್ನು ಬೆಚ್ಚಗಾಗಿಸಲೇ ಇಲ್ಲವೇನೋ ಅನ್ನುವಂತೆ!"

ರಾಜ ಗೊಂದಲಕ್ಕೊಳಗಾದ. ಈ ಜೀತದಾಳನ್ನು ಕೊನೆಗಾಣಿಸಲು ಇನ್ನೇನು ಮಾಡ ಬಹುದು?

ಯೋಚನೆ ಮಾಡಿದ, ಮಾಡಿದ. ಕೊನೆಗೆ ಹೇಳಿದ:

"ನಮ್ಮ ನೆರೆಯ ರಾಜ ನಮ್ಮ ಮೇಲೆ ಯುದ್ಧಕ್ಕೆ ಬರುತ್ತಿದ್ದಾನೆ. ಯುದ್ಧದಲ್ಲಿ ಅತ್ಯಂತ ಹೆಚ್ಚಿನ ಶೌರ್ಯ ತೋರಿದ ವೀರನಿಗೆ ನನ್ನ ಮಗಳನ್ನು ಮದುವೆ ಮಾಡಿಕೊಡುತ್ತೇನೆ."

ಅನೇಕ ವೀರರು ಯುದ್ಧಕ್ಕೆ ಹೋಗಲು ಅಣಿಯಾದರು. ಪೆದ್ದನ ಅಣ್ಣಂದಿರೂ ಕುದುರೆ ಹತ್ತಿ ಹೊರಟರು. ಆದರೆ ಪೆದ್ದನ ಬಳಿ ಕುದುರೆಯೇ ಇಲ್ಲ. ರಾಜನ ಅಶ್ವಪಾಲನನ್ನು ಒಂದು ಕುದುರೆ ಕೊಡುವಂತೆ ಕೇಳಿದ. ಅವನು ಪೆದ್ದನಿಗೆ ಒಂದು ಮುದಿ ಗೊಡ್ಡು ಕುದುರೆ ಕೊಟ್ಟ. ಅದು ಬೀದಿಯಲ್ಲಿ ಕುಂಟಿಕೊಂಡು ಹೋಗುತ್ತಿತ್ತು. ಎಲ್ಲ ವೀರರೂ ಆಗಲೇ ಇವನನ್ನು ದಾಟಿ ಹೋದರು. ಇವನಿನ್ನೂ ದೇಕಿಕೊಂಡು ಹೋಗುತ್ತಿದ್ದಾನೆ. ಆ ಸ್ಥಳ ತಲುಪೇ ಇಲ್ಲ.

ಆಗ ಕಾಡಿನಿಂದ ಒಬ್ಬ ಹಣ್ಣುಹಣ್ಣು ಮುದುಕ ಬಂದ – ಪೆದ್ದನಿಗೆ ಹಡಗು ಪಡೆಯಲು ನೆರವಾಗಿದ್ದ ಮುದುಕ.

"ದುಃಖಿಸಬೇಡ, ಮಗು. ನಾನು ನಿನಗೆ ಸಹಾಯ ಮಾಡುತ್ತೇನೆ" ಎಂದ ಮುದುಕ. "ನೀನು ಅಕೋ ಅಲ್ಲಿ ಕಾಣುತ್ತಲ್ಲ ಆ ದೊಡ್ಡ ಕಾಡಿಗೆ ಹೋಗು. ಬಲಗಡೆ ನಿನಗೆ ಕೊಂಬೆಗಳು ಚೆನ್ನಾಗಿ ಹರಡಿಕೊಂಡಿರುವ ಒಂದು ಲಿಂಡನ್ ಮರ ಕಂಡುಬರುತ್ತೆ. ನೀನು ಅದರ ಬಳಿಗೆ ಹೋಗಿ ಹೇಳು: 'ಲಿಂಡನ್ ಮರ, ಲಿಂಡನ್ ಮರ, ಇಬ್ಭಾಗವಾಗು !' ಲಿಂಡನ್ ಮರ ಇಬ್ಭಾಗವಾಗಿ ಒಡೆಯುತ್ತೆ. ಅದರೊಳಗಿಂದ ಸಜ್ಜು ಹಾಕಿದ ಒಂದು ಕುದುರೆ ಹೊರ ಬರುತ್ತೆ. ಆ ಕುದುರೆಯ ಸಜ್ಜಿಗೆ ಒಂದು ಚೀಲವನ್ನು ಲಗತ್ತಿಸಿರಲಾಗುತ್ತೆ. ನೀನು 'ಚೀಲದಿಂದ ಹೊರ ಬಾ' ಅಂದರೆ ಸಾಕು ನಿನಗೆ ಸಹಾಯ ಸಿಗುತ್ತೆ. ಆಗ ಏನಾಗುತ್ತೆ ಅನ್ನುವುದನ್ನು ನೀನೇ ನೋಡುವಿಯಂತೆ. ಸರಿ, ಹೋಗಿ ಬಾ !"

ಪೆದ್ದನಿಗೆ ಅಪಾರ ಸಂತೋಷವಾಯಿತು. ಆ ಚಿಕ್ಕ ಕುದುರೆಯ ಮೇಲಿನಿಂದ ಕೆಳಕ್ಕೆ ನೆಗೆದ – ಆ ಕುದುರೆ ಅವನಿಗೆ ತೊಂದರೆಯಷ್ಟೆ ಆಗಿದ್ದಿತು. ತಾನೇ ಕಾಡಿಗೆ ಓಡಿ ಹೋದ. ಲಿಂಡನ್ ಮರವನ್ನು ಕಂಡುಹಿಡಿದ.

"ಲಿಂಡನ್ ಮರ, ಲಿಂಡನ್ ಮರ, ಇಬ್ಭಾಗವಾಗು !"

ಲಿಂಡನ್ ಮರ ಇಬ್ಭಾಗವಾಯಿತು. ಅದರೊಳಗಿಂದ ಒಂದು ಅದ್ಭುತ ಕುದುರೆ ಹೊರ ಬಂದಿತು. ಅದರ ಕತ್ತಿನ ಮೇಲೆ ಬಂಗಾರದ ಕೂದಲಿತ್ತು. ಅದರ ಸಜ್ಜು ಪ್ರಕಾಶಮಾನವಾಗಿ ಬೆಳಗುತ್ತಿತ್ತು. ಜೀನಿನ ಮೇಲೆ ಯುದ್ಧ ಕವಚವಿದ್ದಿತು. ಜೀನಿಗೆ ಒಂದು ಚೀಲವನ್ನೂ ತಗುಲಿ ಹಾಕಲಾಗಿತ್ತು.

ಪೆದ್ದ ಆ ಯುದ್ಧ ಕವಚವನ್ನು ತೊಟ್ಟುಕೊಂಡು, ಅನಂತರ ಹೇಳಿದ:

"ಹೇಯ್, ಚೀಲದಿಂದ ಹೊರ ಬಾ !"

ತಕ್ಷಣವೇ ಒಂದು ಭಾರಿ ಸೈನ್ಯದಳ ಹೊರಬಂದಿತು...

ಪೆದ್ದ ತನ್ನ ಸೈನ್ಯದಳದ ಮುಂದೆ ಕುದುರೆಯ ಮೇಲೆ ಕುಳಿತು ಶತ್ರುಗಳನ್ನು ಸಂಧಿಸಲು ಹೊರಟ.

ಬೇಗನೆಯೇ ಅವನು ಶತ್ರುಗಳನ್ನು ಸಂಧಿಸಿದ. ತನ್ನ ಸೈನ್ಯದಳವನ್ನು ಅವರ ಮೇಲೆ ಹರಿಬಿಟ್ಟ. ಅವನ ಸೈನಿಕರು ಶತ್ರುಗಳನ್ನು ಹೇಗೆ ಖಂಡ ತುಂಡರಿಸಿದರು. ಯುದ್ಧ ಇನ್ನೇನು ಕೊನೆಗಾಣುತ್ತಿದೆ ಅನ್ನುವಾಗ ಅವನಿಗೆ ಕಾಲಿನಲ್ಲಿ ಗಾಯವಾಯಿತು.

ಈ ಹೊತ್ತಿಗೆ ರಾಜನೂ ರಾಜಕುಮಾರಿಯೂ ಯುದ್ಧ ಹೇಗೆ ಜರುಗುತ್ತಿದೆ ಅನ್ನುವುದನ್ನು ನೋಡಲು ಬಂದರು. ಈ ವೀರನಿಗೆ ಗಾಯವಾದುದನ್ನು ಕಂಡು ರಾಜಕುಮಾರಿ ತನ್ನ ಕರವಸ್ತ್ರವನ್ನೇ ಎರಡು ಭಾಗ ಮಾಡಿ ಒಂದು ಭಾಗವನ್ನು ತಾನು ಇರಿಸಿಕೊಂಡು, ಇನ್ನೊಂದನ್ನು ವೀರನ ಕಾಲಿನ ಗಾಯಕ್ಕೆ ಪಟ್ಟಿ ಕಟ್ಟಿದಳು.

ಯುದ್ಧ ಮುಗಿಯಿತು. ಪೆದ್ದ ಕಾಡಿಗೆ ಲಿಂಡನ್ ಮರದ ಬಳಿಗೆ ಹೋಗಿ ಹೇಳಿದ:

"ಲಿಂಡನ್ ಮರ, ಲಿಂಡನ್ ಮರ, ಇಬ್ಭಾಗವಾಗು!"

ಲಿಂಡನ್ ಮರ ಇಬ್ಭಾಗವಾಯಿತು. ಅವನು ಎಲ್ಲವನ್ನೂ – ಆ ಕುದುರೆ, ಆ ಚೀಲ, ಆ ಯುದ್ಧ ಕವಚ ಎಲ್ಲವನ್ನೂ – ಅದರಲ್ಲಿ ಮುಚ್ಚಿಟ್ಟ. ತಾನೇ ಮತ್ತೆ ತನ್ನ ಚಿಂದಿ ಅಂಗಿಯನ್ನೂ ಹಳೆಯ ಷರಾಯಿಯನ್ನೂ ತೊಟ್ಟ.

ರಾಜ ಆಗಲೇ ವಿಜಯಗೊಂಡ ವೀರನನ್ನು ತನ್ನ ಬಳಿಗೆ ಬರುವಂತೆ ಆಹ್ವಾನಿಸಿದ್ದ. ರಾಜಕುಮಾರಿಯ ಕರವಸ್ತ್ರವನ್ನು ಗಾಯಕ್ಕೆ ಕಟ್ಟಲಾಗಿದ್ದ ವೀರನನ್ನು ಹುಡುಕುವಂತೆ ದೂತರನ್ನು ಮೂಲೆಮೂಲೆಗೆ ಅಟ್ಟಿದ. ಅವರಿಗೆ ಎಲ್ಲೂ ಅಂಥವನು ಕಂಡುಬರಲಿಲ್ಲ. ಆಗ ರಾಜ ಅಂಥವನಿಗಾಗಿ ಶ್ರೀಮಂತರ ಮಧ್ಯೆಯಷ್ಟೆ ಅಲ್ಲ ಸಾಮಾನ್ಯ ಪ್ರಜೆಗಳ ಮಧ್ಯೆಯೂ ಹುಡುಕಬೇಕೆಂದು ಆಜ್ಞಾಪಿಸಿದ. ಅವನ ಸೇವಕರು ಬಡ ಜನರ ಮನೆಗಳಲ್ಲೆಲ್ಲ ಹುಡುಕ ತೊಡಗಿದರು. ತುಂಬ ಕಾಲ ಅವರು ಅಂಥ ಯಾರನ್ನೂ ಕಂಡುಹಿಡಿಯದಾದರು. ಕೊನೆಗೆ ರಾಜನ ಇಬ್ಬರು ಸೇವಕರು ಊರಿನ ತುದಿಯಲ್ಲಿದ್ದ ಮನೆಗೆ ಬಂದರು. ಆ ಮನೆಯಲ್ಲಿ ಆ ಸಮಯದಲ್ಲಿ ಪೆದ್ದನ ಅಣ್ಣಂದಿರು ಊಟಕ್ಕೆ ಅಣಿಯಾಗಿ ಕುಳಿತಿದ್ದರು. ಪೆದ್ದನೇ ಅವರಿಗೆ ರೊಟ್ಟಿ ಬೇಯಿಸಿ ಕೊಡುತ್ತಿದ್ದ. ಅವನ ಒಂದು ಕಾಲಿಗೆ ರಾಜಕುಮಾರಿಯ ಕರವಸ್ತ್ರದ ಪಟ್ಟಿ ಕಟ್ಟಿದ್ದಿತು. ರಾಜನ ಸೇವಕರು ತಕ್ಷಣವೇ ಅವನನ್ನು ರಾಜನ ಅರಮನೆಗೆ ಕರೆದೊಯ್ಯಲು ಬಯಸಿದರು.

ಆದರೆ ಅವನು ಕೇಳಿಕೊಂಡ:

"ಸೋದರರೇ, ನಾನು ಹೇಗೆ ಈ ಅಂದಗೆಟ್ಟ ರೀತಿಯಲ್ಲಿ ರಾಜನ ಬಳಿಗೆ ಹೋಗಲಿ? ಸ್ನಾನವನ್ನಾದರೂ ಮಾಡುತ್ತೇನೆ. ಸ್ನಾನಗೃಹಕ್ಕೆ ಹೋಗಲು ಬಿಡಿ. ನೀವು ಇಲ್ಲಿ ನನಗಾಗಿ ಊಟಕ್ಕೆ ಕಾಯುತ್ತಿರಿ."

"ಆಗಲಿ. ಬೇಗ ಮೈ ತೊಳೆದುಕೊಂಡು ಬಾ."

ಹಾಗೆಂದು ಅವರು ಮೇಜಿನ ಮುಂದೆ ಕುಳಿತು ಗಬಗಬನೆ ತಿನ್ನ ತೊಡಗಿದರು. ಹಾಗೆ ತಿನ್ನು ವಾಗ ಅವರ ಎರಡು ಕೆನ್ನೆಗಳೂ ಉಬ್ಬಿಕೊಂಡಿದ್ದವು. ಈ ಮಧ್ಯೆ ಪೆದ್ದ ಕಾಡಿಗೆ ಓಡಿದ. ಲಿಂಡನ್ ಮರದ ಬಳಿ ಹೋಗಿ ಹೇಳಿದ:

"ಲಿಂಡನ್ ಮರ, ಲಿಂಡನ್ ಮರ, ಇಬ್ಭಾಗವಾಗು !"

ಲಿಂಡನ್ ಮರ ಇಬ್ಭಾಗವಾಯಿತು. ಕುದುರೆ ಹೊರ ಬಂದಿತು. ಪೆದ್ದ ತನ್ನ ಬಟ್ಟೆ ಬದಲಾಯಿಸಿದ. ಎಷ್ಟು ಆಕರ್ಷಕನಾಗಿ, ಎಷ್ಟು ಸುಂದರನಾಗಿ ಆದನೆಂದರೆ ಅವನನ್ನು ನೋಡುವುದು ಕಣ್ಣುಗಳಿಗೆ ಹಬ್ಬವೆನಿಸುತ್ತಿತ್ತು. ಕುದುರೆಯ ಮೇಲೆ ಕುಳಿತು ರಾಜನ ಅರಮನೆಗೆ ಬಂದ.

ರಾಜನೂ ರಾಜಕುಮಾರಿಯೂ ಪರಮಾನಂದಗೊಂಡರು. ಆ ವೀರನನ್ನು ರಾಜಮರ್ಯಾದೆ ಗೌರವಗಳೊಂದಿಗೆ ಬರಮಾಡಿಕೊಂಡರು. ತಕ್ಷಣವೇ ಮದುವೆಯ ಸಮಾರಂಭವೂ ಪ್ರಾರಂಭವಾಯಿತು.

ರೈತನ ಮಗ ಇವಾನ್

ಒಮ್ಮೆ ಒಬ್ಬ ರಾಜ, ಒಬ್ಬಳು ರಾಣಿ ವಾಸಿಸುತ್ತಿದ್ದರು. ಅವರಿಗೆ ತುಂಬ ಕಾಲ ಮಕ್ಕಳೇ ಆಗಲಿಲ್ಲ. ಆದರೆ ವಯಸ್ಸಾದಾಗ ಅವರಿಗೆ ಒಬ್ಬ ಮಗ ಹುಟ್ಟಿದ. ಅದರಿಂದ ಅವರಿಗೆ ತುಂಬ ಸಂತೋಷವಾಯಿತು. ಮಗ ಬೆಳೆದು ದೊಡ್ಡವನಾದ. ಅವನಿಗೆ ಮದುವೆ ಮಾಡಬೇಕೆಂದು ನಿರ್ಧರಿಸಿದರು. ಆದರೆ ಮಗ ಹೇಳಿದ:

"ನನಗೊಂದು ಕುದುರೆ ಬಳುವಳಿಯಾಗಿ ಕೊಡಿ. ಅದು ಬೆಂಕಿ ತಿನ್ನುವಂಥದಾಗಿರಬೇಕು, ಉರಿ ಕುಡಿಯುವಂಥದಾಗಿರಬೇಕು. ಅದು ಓಡಿದಾಗ ನೆಲ ನಡುಗಬೇಕು. ಗುಡುಗು ಮೊಳಗಬೇಕು, ಓಕ್ ಮರಗಳ ಎಲೆಗಳೆಲ್ಲ ಉದುರಬೇಕು. ಅಂಥ ಕುದುರೆ ಕೊಟ್ಟರಷ್ಟೆ ನಾನು ಮದುವೆಗೆ ಒಪ್ಪೋದು."

ರಾಜ ತನ್ನ ರಾಜ್ಯದಲ್ಲಿದ್ದ ಅತ್ಯುತ್ತಮರಾದ ಅತ್ಯಂತ ಧೈರ್ಯಶಾಲಿಗಳಾದ ಯೋಧರನ್ನೆಲ್ಲ ಕರೆದು, ಅವರು ಎಂದಾದರೂ ಅಂತಹ ಕುದುರೆ ಕಂಡಿದ್ದರೆ ಅಥವಾ ಅಂತಹ ಕುದುರೆಯ ವಿಷಯ ಕೇಳಿದ್ದರೆ. ಎಂದು ವಿಚಾರಿಸಿದ. ಅವರೆಲ್ಲ "ಇಲ್ಲ" ಎಂದೇ ಹೇಳಿದರು. ಆಮೇಲೆ ರಾಜ ತನ್ನ ರಾಜ್ಯದ ಮೂಲೆಮೂಲೆಗಳಿಗೂ ಸಂದೇಶ ಕಳುಹಿಸಿದ. ಅಂತಹ ಕುದುರೆಯ ವಿಷಯವನ್ನು ಎಂದಾದರೂ ಕೇಳಿದಂಥ ಅಥವಾ ತಾನು ಪತ್ತೆಹಚ್ಚಬಲ್ಲ ಎಂದು ಭಾವಿಸಿದಂಥ ಯಾರೇ ಆಗಲಿ ತಕ್ಷಣವೇ ಅರಮನೆಗೆ ಬರಬೇಕೆಂದು ಡಂಗುರ ಹೊಡೆಸಿದ.

ಸಂದೇಶ ದೂರದೂರ ಹಳ್ಳಿಗಳಿಗೂ ತಲುಪಿತು. ರೈತರೂ ಈ ಸಂದೇಶ ಓದಿದರು. ಅವರಲ್ಲೊಬ್ಬ ಅನಂತರ ಈ ವಿಷಯವನ್ನು ತನ್ನ ಹೆಂಡತಿಗೆ ಹೇಳಿದ.

"ನೋಡಿದೆಯಾ! ಅಂಥ ಕುದುರೆ ಎಲ್ಲಿದೆ ಅನ್ನೋದು ಗೊತ್ತಿದೆ ಅಂತ ಹೇಳಿದರೆ ಸಾಕು. ಅರಮನೆಗೆ ಹೋಗಿ ರಾಜನನ್ನು ಕಾಣಬಹುದಲ್ಲ!" ಎಂದವನು ಹೇಳಿದ.

ಈ ರೈತನಿಗೆ ಇವಾನ್ ಎಂಬ ಹೆಸರಿನ ಒಬ್ಬ ಮಗನಿದ್ದ. ಅವನು ಹೇಳಿದ:

"ನನಗೆ ಗೊತ್ತು ಅಂಥ ಕುದುರೆ ಎಲ್ಲಿದೆ ಅಂತ!"

"ಹುಚ್ಚು ಮಾತನಾಡಬೇಡ!" ತಂದೆ ಹೇಳಿದ. "ಗೇಟಿನಿಂದ ಹೊರಗೆ ಹೋದರೆ ಸಾಕು ನೆರೆಯವರ ಮಕ್ಕಳೂ ನಿನ್ನನ್ನು ಚೆನ್ನಾಗಿ ಚಚ್ಚಿ ಹಾಕ್ತಾರೆ. ನೀನಿಲ್ಲಿ ಅಂಥ ಕುದುರೆಯ ಬಗ್ಗೆ ಹರಟುತ್ತೀಯಲ್ಲ!"

ಆದರೆ ಇವಾನ್ ಸುಮ್ಮನಿರದಾದ. ಮತ್ತೆ ಹೇಳಿದ: "ಹೊರಗೆ. ಅಂಗಳಕ್ಕೆ. ಬಾ, ಅಪ್ಪ. ನಾನು ನಿನಗೆ ಒಂದು ವಿಷಯ ತೋರಿಸಬೇಕು!"

ಅವರು ಹೊರಗೆ ಹೋದರು. ಮಗ ಓಕ್ ಮರವೊಂದನ್ನು ಹಿಡಿದು ಒಂದೇ ಕೈಯಿಂದ ಅದನ್ನು ನೆಲಕ್ಕೆ ತಾಗುವಂತೆ ಬಾಗಿಸಿದ. ಅದನ್ನು ಕಂಡು ತಂದೆ ಅಂಜಿಕೆಯಿಂದ ಬಿಳಿಚಿಕೊಂಡು ನಿಂತ. ಅವನ ಕಣ್ಣುಗುಡ್ಡೆಗಳು ಹೊರಕ್ಕೆ ಕಿತ್ತು ಬರುವಂತೆ ಕಂಡುಬಂದವು.

"ಈಗ ನಿನ್ನ ಮಾತನ್ನು ನಾನು ನಂಬುತ್ತೇನೆ. ಮಗು!" ಅವನೆಂದ.

ಅವರು ಜಿಲ್ಲಾ ಮುಖ್ಯಾಧಿಕಾರಿಗಳ ಬಳಿಗೆ ಹೋದರು. ತಂದೆ ಇವಾನ್‌ನನ್ನು ಹೊರಗೆ ಅಂಗಳದಲ್ಲೇ ಬಿಟ್ಟು ತಾನೊಬ್ಬನೇ ಒಳ ಹೋದ.

"ನನ್ನ ಮಗ ರಾಜನಿಗೆ ಬೇಕಾದಂಥ ಕುದುರೆಯನ್ನು ತಂದು ಕೊಡಬಲ್ಲ" ಅವನೆಂದ.

ಇದನ್ನು ಕೇಳಿ ಅವರೆಲ್ಲ ಅವನನ್ನು ಬಯ್ಯ ತೊಡಗಿದರು. ಇಂಥ ಸುಳ್ಳು ವದಂತಿಗಳನ್ನು ಹರಡುತ್ತಿರುವುದಕ್ಕಾಗಿ ರೈತನನ್ನೂ ಅವನ ಮಗನನ್ನೂ ಜೈಲಿಗೆ ದಬ್ಬಬೇಕಷ್ಟೆ, ಎಂದವರು ಹೇಳಿದರು.

"ನಿನ್ನ ಮಗ ಒಬ್ಬ ಮೂರ್ಖ ಬಡಾಯಿಕೋರ!" ಅವರು ಕೂಗಿ ಹೇಳಿದರು. "ಅವನು ಗೇಟಿನಿಂದ ಹೊರಗೆ ಬಂದರೆ ಸಾಕು ನೆರೆಯ ಮಕ್ಕಳೇ ಅವನನ್ನು ಚಚ್ಚಿ ಹಾಕುತ್ತಾರೆ!"

ಅಪ್ಪನನ್ನೂ ಮಗನನ್ನೂ ಜೈಲಿಗೆ ದಬ್ಬಲಾಯಿತು. ಕೊನೆಗೆ ಜಿಲ್ಲಾ ಮುಖ್ಯಾಧಿಕಾರಿಗಳು ಪುನರಾಲೋಚಿಸಿ. ಹೇಳಿದರು: "ಅವನು ರಾಜನಿಗೆ ಸುಳ್ಳು ಹೇಳಿದರೆ ನಮಗೇನಂತೆ? ಶಿಕ್ಷೆಗೆ ಗುರಿಯಾಗುವವನು ಅವನಷ್ಟೆ, ನಾವಲ್ಲ!"

ಅವರು ಅಪ್ಪನನ್ನೂ ಮಗನನ್ನೂ ಬಿಟ್ಟು ಬಿಟ್ಟರು. ತಾವೇ ರಾಜನಿಗೆ ಸಂದೇಶ ಕಳುಹಿಸಿದರು. ರಾಜ ಸಂದೇಶ ಓದಿದ. ತನ್ನ ಅತ್ಯುತ್ತಮ ಯೋಧರೂ ಮಾಡಲಾಗದುದನ್ನು ಸಾಮಾನ್ಯ

ರೈತನೊಬ್ಬನ ಮಗ ಮಾಡಬಲ್ಲನೇ ಎಂದು ನಂಬಲಾಗದಾದರೂ ಅವನು ಆ ರೈತನ ಮಗನನ್ನು ಕರೆದು ವಿಚಾರಿಸಲು ನಿರ್ಧರಿಸಿದ.

ರಾಜನ ಸೇವಕರು ಇವಾನ್‌ನನ್ನು ಅರಮನೆಗೆ ಕರೆತಂದರೋ ಇಲ್ಲವೋ ಕೂಡಲೇ ಅವನನ್ನು ರಾಜನ ಮುಂದೆ ಹಾಜರು ಪಡಿಸಲಾಯಿತು.

"ನೀನು ನಿಜಕ್ಕೂ ನನಗೆ ಬೇಕಾದ ಕುದುರೆಯನ್ನು ತಂದು ಕೊಡಬಲ್ಲೆಯಾ?" ರಾಜ ಕೇಳಿದ.

"ತಂದು ಕೊಡಬಲ್ಲೆ!" ಇವಾನ್ ಉತ್ತರಿಸಿದ.

"ನಿನ್ನ ಕೆಲಸ ಸುಲಭವಾಗುವಂತೆ ನಾವೇನಾದರೂ ಮಾಡುವುದಿದೆಯೆ?"

"ಏನಿಲ್ಲ. ನನಗೊಂದು ಒಳ್ಳೆಯ ಕುದುರೆ, ಒಂದು ಭಾರಿ ಬಡಿಗೆ ಕೊಡಿ, ಸಾಕು."

ರಾಜನು ತನ್ನ ಪ್ರಧಾನ ಅಶ್ವಪಾಲನಿಗೆ ಒಂದು ಚೀಟಿ ಬರೆದು ಅದನ್ನು ಇವಾನ್‌ನಿಗೆ ಕೊಟ್ಟು ಹೇಳಿದ: "ಈ ಚೀಟಿಯನ್ನು ನನ್ನ ಅಶ್ವಪಾಲನಿಗೆ ಕೊಡು. ಅವನು ನಿನಗೆ ಒಂದು ಒಳ್ಳೆಯ ಕುದುರೆಯನ್ನು ಹುಡುಕಿ ಕೊಡುತ್ತಾನೆ."

ಇವಾನ್ ಅಶ್ವಪಾಲನನ್ನು ಕಂಡು ರಾಜನ ಚೀಟಿಯನ್ನು ಅವನ ಕೈಗಿತ್ತ. ಅವನು ಅದನ್ನು ಓದಿದನಂತರ ಹೇಳಿದ:

"ತಾಳು. ನಾನು ನನ್ನ ಕುದುರೆಗಳನ್ನೆಲ್ಲ ನೀರಿಗೆ ಒಯ್ಯುತ್ತೇನೆ. ಆಗ ನೀನೇ ಅವುಗಳಲ್ಲಿ ಅತ್ಯುತ್ತಮವಾದುದನ್ನು ಆರಿಸಿಕೋ."

ಅಶ್ವಪಾಲ ಕುದುರೆಗಳನ್ನು ನೀರಿಗೆ ಕರೆದೊಯ್ದ. ಇವಾನ್ ಅವುಗಳನ್ನು ಪರೀಕ್ಷಿಸ ತೊಡಗಿದ. ಅವನು ಕುದುರೆಯೊಂದರ ಬಾಲವನ್ನೋ ಕೇಸರವನ್ನೋ ಹಿಡಿದ ಕೂಡಲೇ ಅವು ಅವನ ಕೈಗೆ ಕಿತ್ತು ಬರುತ್ತಿದ್ದವು. ಹೀಗೆ ಅವನು ಇಪ್ಪತ್ತು ಚರ್ಮಗಳನ್ನು ಸುಲಿದ, ಆದರೆ ಕುದುರೆಯನ್ನು ಆರಿಸಿಕೊಳ್ಳಲಿಲ್ಲ.

ಮನೆಗೆ ಹಿಂದಿರುಗಲು ನಿರ್ಧರಿಸಿದ. ಮಾರ್ಗ ಮಧ್ಯದಲ್ಲಿ ಅವನು ಒಂದು ಬಡಕಲು ಗುಡಿಸಿಲನ್ನು ಕಂಡ. ಅದರ ಚಾವಣಿಯೆಲ್ಲ ತೂತುಗಳಿಂದ ತುಂಬಿತ್ತು. ಆಗ ಇದ್ದಕ್ಕಿದ್ದಂತೆ ಆಕಾಶದಲ್ಲಿ ಕಪ್ಪು ಮೋಡಗಳು ಕಾಣಿಸಿಕೊಂಡವು. ಮಳೆ ಹುಯ್ಯುವಂತೆ ಕಂಡುಬಂದಿತು. ಗುಡಿಸಿಲಿನ ಪಕ್ಕದಲ್ಲಿ ಕುಳಿತಿದ್ದ ಮುದುಕಿ ಅವನನ್ನು ಕಂಡು ಕೇಳುತ್ತಾಳೆ:

"ಹುಡುಗ! ಈ ಮುದುಕಿಗೆ ಒಂದಿಷ್ಟು ಸಹಾಯ ಮಾಡಪ್ಪ. ಯಾರೂ ನನ್ನ ವಿಷಯ ಯೋಚಿಸುತ್ತಲೇ ಇಲ್ಲ. ಮಳೆ ಬಂದರೆ ನೀರೆಲ್ಲ ನನ್ನ ಮನೆಯೊಳಗೇ ಸುರಿಯುತ್ತೆ."

ಇವಾನ್ ತನ್ನ ಬಳಿ ಇದ್ದ ಕುದುರೆಯ ಚರ್ಮಗಳನ್ನೆಲ್ಲ ಗುಡಿಸಿಲಿನ ಚಾವಣಿಯ ಮೇಲೆ ಹೊದಿಸಿ ಮಳೆಯ ನೀರು ಒಳಕ್ಕೆ ಸುರಿಯದಂತೆ ಮಾಡಿದ. ಮುದುಕಿ ಅವನಿಗೆ ತುಂಬ ಉಪಕಾರ

ಹೇಳಿದಳು. ಇವಾನ್ ಅವಳಿಗೆ ಶುಭ ಕೋರಿ ಮುಂದುವರಿದ.

ಅವನು ಅರಮನೆಗೆ ಬಂದ. ರಾಜನನ್ನು ಸಂಧಿಸಿದ. ಅವನಿಗೆ ಬೇಕಾದಂಥ ಕುದುರೆ ಸಿಗದಿದ್ದ ವಿಷಯ ಕೇಳಿ ರಾಜ ಆಶ್ಚರ್ಯಗೊಂಡ.

"ರೈತನ ಮಗ ಇವಾನ್! ನನ್ನ ಕುದುರೆಲಾಯಕ್ಕೆ ಹೋಗಿ ನೋಡು. ಬಹುಶಃ ಅಲ್ಲಿ ನೀನು ನಿನಗೆ ಇಷ್ಟವಾದಂಥ ಕುದುರೆ ಕಂಡುಕೊಳ್ಳಬಹುದು!" ಅವನೆಂದ.

ಇವಾನ್ ರಾಜನ ಕುದುರೆಲಾಯಕ್ಕೆ ಹೋದ. ಅವನು ಕುದುರೆಯೊಂದನ್ನು ಮುಟ್ಟಿದರೆ ಸಾಕು ಅದು ನೆಲಕ್ಕೆ ಕುಸಿದು ಬೀಳುತ್ತಿತ್ತು. ಹಾಗಾಗಿ ಅಲ್ಲಿ ಕೂಡ ಬೇಕಾದಂಥ ಕುದುರೆ ಸಿಗಲಿಲ್ಲ.

ರಾತ್ರಿಯಾಯಿತು. ಇವಾನ್ ಬೆಂಗಾಡಿಗೆ ಹೋಗಿ ಗಟ್ಟಿಯಾಗಿ ಶಿಳ್ಳೆ ಹಾಕಿದ. ಕೂಡಲೇ ಎಲ್ಲಿಂದಲೋ ಒಂದು ಕುದುರೆ ಅವನತ್ತ ಓಡಿಕೊಂಡು ಬಂದಿತು.

"ನೀವು ನನ್ನನ್ನು ಕರೆದಿರಾ, ಒಡೆಯ?" ಅದು ಕೇಳಿತು.

"ಹೌದು. ನಾವು ನಮ್ಮ ದಾರಿ ಹಿಡಿದು ಹೋಗುವ ಸಮಯ ಬಂದಿದೆ."

"ನೀವು ಸಿದ್ಧವಾಗಿದ್ದರೆ ನಾನೂ ಸಿದ್ಧ!"

ಇವಾನ್ ಆ ಕುದುರೆಯನ್ನು ರಾಜನ ಕುದುರೆಲಾಯಕ್ಕೆ ಕರೆದೊಯ್ದ. ಆ ಕುದುರೆ ಎಷ್ಟು ದೊಡ್ಡದಾಗಿದ್ದಿತೆಂದರೆ ಲಾಯದ ಎಲ್ಲ ಗೋಡೆಗಳೂ ಮುರಿದು ಬಿದ್ದವು. ಆದರೂ ಅವನು ಹೇಗೋ ಅಂತೂ ಅದನ್ನು ಒಳಗೆ ಕರೆದೊಯ್ದು ಗೂಟಕ್ಕೆ ಕಟ್ಟಿದ. ಅದಕ್ಕೆ ಬಿಳಿಯ ಅತ್ಯುತ್ತಮವಾದ ಗೋಧಿಯನ್ನು ತಿನ್ನಲು ಕೊಟ್ಟು, ತಾನೇ ಮಲಗಲು ಹೋದ.

ರಾಜನು ಬೆಳಿಗ್ಗೆ ಬೇಗನೆಯೇ ಎದ್ದು ಇವಾನ್‌ನು ಏನಾದರೂ ಕುದುರೆಯನ್ನು ಕಂಡನೇ ಎಂಬುದನ್ನು ತಿಳಿಯುವಂತೆ ಆಜ್ಞಾಪಿಸಿದ.

ಇವಾನ್ ಹೇಳಿದ: "ನನ್ನ ಬಳಿ ಆಗಲೇ ಒಂದು ಕುದುರೆ ಇದೆ. ಅದನ್ನು ಲಾಯದಲ್ಲಿ ಕಟ್ಟಿ ಹಾಕಿದ್ದೇನೆ..."

ಅವರು ಲಾಯಕ್ಕೆ ಹೋಗಿ ನೋಡಿದರು. ರಾಜನು ಆ ಕುದುರೆಯನ್ನು ಕಂಡು ದಿಗಿಲುಗೊಂಡ. ಅವನು ಹಿಂದೆಂದೂ ಅಂಥ ಭಾರಿ ಕುದುರೆಯನ್ನು ಕಂಡಿರಲಿಲ್ಲ.

"ಈಗ ನನಗೆ ಒಂದು ದೊಡ್ಡ ಬಡಿಗೆ ಬೇಕಾಗಿದೆ. ಅದು ಎಷ್ಟು ದೊಡ್ಡದಾಗಿರಬೇಕೆಂದರೆ ಅದನ್ನು ಕಾಡಿನಿಂದ ಎಳೆದು ತರಲು ಎರಡು ಜೊತೆ ಎತ್ತುಗಳು ಬೇಕಾಗುತ್ತವೆ" ಎಂದು ಇವಾನ್ ಹೇಳಿದ.

ಬಡಿಗೆಯನ್ನು ತರಿಸಿ ಕೊಡಲಾಯಿತು. ಅವನು ಅದನ್ನು ಆಕಾಶಕ್ಕೆ ಎಸೆದು, ತಾನೇ ಮಲಗಲು ಹೋದ. ಅವನು ಒಂದು ಹಗಲು ಒಂದು ರಾತ್ರಿ ಮಲಗಿದ. ಆಮೇಲೆ ಇನ್ನೊಂದು ದಿನ

ಮಲಗಿದ. ಅವನು ಎದ್ದಾಗ ಬಡಿಗೆ ಅವನತ್ತವೇ ಹಾರಿ ಬರುತ್ತಿದ್ದುದನ್ನು ಕಂಡ. ಹಾರಿ ಬರುತ್ತ ಅದು ಸುಯ್ಯೆಂದು ಶಬ್ದ ಮಾಡುತ್ತಿತ್ತು. ಅವನು ತನ್ನ ಕಿರುಬೆರಳನ್ನು ಎತ್ತಿಹಿಡಿದ. ಬಡಿಗೆ ಕಿರುಬೆರಳಿಗೆ ಬಡಿದು ಚೂರುಚೂರಾಗಿ ಬಿದ್ದಿತು.

"ಇದು ಅಷ್ಟು ಒಳ್ಳೆಯ ಬಡಿಗೆಯಲ್ಲ!" ಇವಾನ್ ಎಂದ. "ನನಗೆ ಇನ್ನೊಂದು ಮಾಡಿ ಕೊಡಿ. ಅದು ಎಷ್ಟು ದೊಡ್ಡದಾಗಿರಬೇಕೆಂದರೆ, ಅದನ್ನು ಕಾಡಿನಿಂದ ಎಳೆದು ತರಲು ನಾಲ್ಕು ಜೊತೆ ಎತ್ತುಗಳು ಬೇಕಾಗುತ್ತವೆ."

ಅಂತೆಯೇ ಅವರು ಒಂದು ನೂರು ವರ್ಷದ ದೊಡ್ಡ ಓಕ್ ಮರವನ್ನು ಕಡಿದು ಅದರಿಂದ ಬಡಿಗೆ ಮಾಡಿದರು. ಅದನ್ನು ಕಾಡಿನಿಂದ ನಾಲ್ಕು ಜೊತೆ ಎತ್ತುಗಳು ಎಳೆದು ತಂದವು. ಇವಾನ್ ಅದನ್ನೂ ಆಕಾಶಕ್ಕೆ ಎಸೆದು ತಾನೇ ಮಲಗಲು ಹೋದ. ಅವನು ಮೂರು ಹಗಲು ಮೂರು ರಾತ್ರಿ ಮಲಗಿದ. ಎದ್ದಾಗ ಬಡಿಗೆ ತನ್ನತ್ತವೇ ಹಾರಿಕೊಂಡು ಬರುತ್ತಿದ್ದುದನ್ನು ಕಂಡ. ಹಾರಿ ಬಂದಂತೆ ಅದು ಸುಯ್ಯೆಂದು ಶಬ್ದ ಮಾಡುತ್ತಿತ್ತು. ಅವನು ತನ್ನ ಒಂದು ಮಧ್ಯಬೆರಳನ್ನು ಎತ್ತಿ ಹಿಡಿದ. ಬಡಿಗೆ ಬೆರಳಿಗೆ ಬಡಿದು ಕೆಳಕ್ಕೆ ಬಿದ್ದಿತು. ಬಿದ್ದ ಭಾರಕ್ಕೆ ಅದು ನೆಲದಲ್ಲಿ ಐದು ಅಡಿ ಆಳಕ್ಕೆ ಹೂತುಕೊಂಡಿತು.

"ಇದೀಗ ಸರಿಯಾದ ಬಡಿಗೆ" ಎಂದ ಇವಾನ್.

ಅವನು ಪ್ರಯಾಣ ಹೊರಡಲು ಸಿದ್ಧನಾದ. ರಾಜ ಅವನಿಗೆ ಹೇಳಿದ: "ಅಂಥ ಕುದುರೆಯನ್ನು ತಂದು ಕೊಟ್ಟರೆ ನಾನು ನಿನಗೆ ಕೇಳಿದುದನ್ನು ಕೊಡುವೆ. ನಿನಗೆ ಮಾತು ಕೊಡುವೆ– ನಾನೆಂದೂ ನಿನಗೆ ಹಾನಿ ಮಾಡುವುದಿಲ್ಲ."

ಇವಾನ್ ಕುದುರೆ ಹತ್ತಿ ಹೊರಟ. ಆದರೂ ರಾಜನಿಗೆ ರೈತನ ಮಗನೊಬ್ಬ ಅಂಥ ಮಹತ್ಕಾರ್ಯ ಎಸಗಬಲ್ಲನೆ ಎಂಬ ಸಂದೇಹ ಇದ್ದೇ ಇದ್ದಿತು. ಆದ್ದರಿಂದ ಅವನು ತನ್ನ ಇಬ್ಬರು ಭೀಮಕಾಯದ ಯೋಧರನ್ನು ಇವಾನ್‌ನ ಹಿಂದೆಯೇ ಹೋಗುವಂತೆ ಹೇಳಿ ಕಳುಹಿಸಿ ಕೊಟ್ಟ. ಅವರಿಬ್ಬರೂ ಕುಲೀನರಾಗಿದ್ದರು.

"ಆ ರೈತನ ಮಗ ಇವಾನ್‌ನ ಸಮಸಮಕ್ಕೇ ಹೋಗುತ್ತಿರಿ. ಅವನು ಎಲ್ಲಿಗೆ ಹೋದರೆ ನೀವೂ ಅಲ್ಲಿಗೇ ಹೋಗಿ" ಎಂದವನು ಆಜ್ಞಾಪಿಸಿದ.

ತನ್ನ ಕೆಳಗೆ ಭೂಮಿ ಕಂಪಿಸುತ್ತಿದ್ದುದನ್ನು ಕೇಳಿದ ಇವಾನ್ ತನ್ನಲ್ಲೇ ಹೇಳಿಕೊಂಡ: "ನನ್ನ ಹಿಂದೆ ಡ್ರೇಗನ್ನೋ ಅಥವಾ ಯಾರೋ ಭೀಮಕಾಯರು ಹಿಂಬಾಲಿಸಿಕೊಂಡು ಬರುತ್ತಿರಬೇಕು."

ರಾಜನ ಇಬ್ಬರು ಯೋಧರೂ ಇವಾನ್‌ನ ಬಳಿ ಬಂದರು. ಅವನಿಗೆ ಶುಭಾಶಯ ಹೇಳಿದರು.

"ಯಾರು ನೀವು?" ಎಂದು ಇವಾನ್ ಅವರನ್ನು ಕೇಳಿದ.

"ರಾಜ ನಮ್ಮನ್ನು ಕಳುಹಿಸಿದ್ದಾನೆ. ನೀನು ಹೋದೆಡೆಯಲ್ಲೆಲ್ಲ ನಾವೂ ಹೋಗಬೇಕೆಂದು ಆಜ್ಞಾಪಿಸಿದ್ದಾನೆ" ಅವರೆಂದರು.

"ಸರಿ. ಆದರೆ ಒಂದು ವಿಷಯ. ನಮ್ಮ ಮಧ್ಯೆ ಶಿಸ್ತು ಇರಬೇಕಾದರೆ ನಮ್ಮಲ್ಲೊಬ್ಬರು ನಾಯಕರಾಗಿರಬೇಕು, ಉಳಿದವರು ಅವನು ಹೇಳಿದ ಹಾಗೆ ಕೇಳಬೇಕು" ಇವಾನ್ ಎಂದ.

"ಹಾಗಾದರೆ ನಾನು ನಾಯಕನಾಗುತ್ತೇನೆ!" ಮೊದಲನೆಯ ಯೋಧ ಹೇಳಿದ. "ಇಲ್ಲ. ನಾನು ಆಗುತ್ತೇನೆ!" ಎರಡನೆಯವನೆಂದ.

ಆದರೆ ರೈತನ ಮಗ ಇವಾನ್ ಹೇಳಿದ: "ಇಲ್ಲ, ಮಿತ್ರರೇ. ಜಗಳ ಮಾಡಿ ಪ್ರಯೋಜನ ವಿಲ್ಲ. ಇದನ್ನು ಹೀಗೆ ತೀರ್ಮಾನಿಸೋಣ. ನಮ್ಮಲ್ಲಿ ಒಬ್ಬೊಬ್ಬರೂ ಸರದಿಯಲ್ಲಿ ನಮ್ಮ ಬಡಿಗೆ ಗಳನ್ನು ಎಸೆಯೋಣ. ಯಾರು ಹೆಚ್ಚು ದೂರ ಎಸೆಯುತ್ತಾರೋ ಅವರು ನಾಯಕರಾಗೋಣ. ಏನಂತೀರ?"

ಇದಕ್ಕೆ ಅವರು ಒಪ್ಪಿಕೊಂಡರು. ಅವರಲ್ಲೊಬ್ಬ ಮುಂದೆ ಬಂದು ತನ್ನ ಬಡಿಗೆಯನ್ನು ಜೋರಾಗಿ ಎಸೆದ. ಅದು ಕಣ್ಣಿಗೆ ಕಾಣದಷ್ಟು ದೂರ ಹೋಗಿ ಬಿದ್ದಿತು. ಅವರು ಒಂದು ದಿನ, ಎರಡು ದಿನ ಪ್ರಯಾಣ ಮಾಡಿಕೊಂಡು ಹೋಗುತ್ತಾರೆ – ಬಡಿಗೆ ಇಲ್ಲ... ಮೂರನೆಯ ದಿನ ನೋಡುತ್ತಾರೆ – ಅದು ದಾರಿಯಲ್ಲಿ ಬಿದ್ದಿದೆ.

ಆಮೇಲೆ ಎರಡನೆಯವ ತನ್ನ ಬಡಿಗೆಯನ್ನು ಬೀಸಿ ಎಸೆದ. ಅವರು ಒಂದು ದಿನ, ಎರಡು ದಿನ, ಮೂರು ದಿನ ಪ್ರಯಾಣ ಮಾಡಿಕೊಂಡು ಹೋದರು. ಆದರೂ ಅದು ಕಾಣಬರಲಿಲ್ಲ. ಒಂದು ಇಡೀ ವಾರ ಪ್ರಯಾಣ ಮಾಡಿದನಂತರವಷ್ಟೆ ಅದು ಕಾಣಬಂದಿತು.

ಈಗ ರೈತನ ಮಗ ಇವಾನ್‌ನ ಸರದಿ. ಅವನು ತನ್ನ ಬಡಿಗೆಯನ್ನು ಎಸೆದ. ಅನಂತರ ಮೂವರೂ ಅದನ್ನು ಹುಡುಕಿಕೊಂಡು ಪ್ರಯಾಣ ಹೊರಟರು. ಒಂದು ವಾರ ಹೋದರು, ಎರಡು ವಾರ ಹೋದರು, ಮೂರು ವಾರ ಹೋದರು. ಆದರೂ ಅದು ಕಾಣಬರಲೇ ಇಲ್ಲ.

"ನಮ್ಮ ಕಣ್ಣು ತಪ್ಪಿ ಹೋಗಿರಬೇಕು. ಎಲ್ಲೋ ದಾಟಿ ಬಿಟ್ಟೆವೋ ಏನೋ" ಎಂದು ಆ ಇಬ್ಬರು ಯೋಧರೂ ಹೇಳಿದರು. "ಇಲ್ಲ, ಇಲ್ಲ!" ಇವಾನ್ ಎಂದ. "ಯಾರೋ ಅದನ್ನು ಕಂಡು ತೆಗೆದುಕೊಂಡು ಹೋಗಿರಬೇಕು."

ಅವರು ಪ್ರಯಾಣ ಮಾಡಿಕೊಂಡು ಹೋದರು. ಮತ್ತೊಂದು ವಾರ ಹೋಗಿರಬೇಕು, ಆಗ ಅವರಿಗೆ ಒಂದು ದೊಡ್ಡ ಮನೆ ಕಾಣಬಂದಿತು. ಅದರ ಸುತ್ತ ತಾಮ್ರದ ಬೇಲಿ ಇತ್ತು. ಆ ಮನೆಯ ಬಳಿಗೆ ಒಂದು ತಾಮ್ರದ ಸೇತುವೆ ದಾಟಿ ಹೋಗಬೇಕಿತ್ತು. ಇವರು ಒಳಗೆ ಹೋಗಿ

ನೋಡುತ್ತಾರೆ – ಅಕೋ, ಅಲ್ಲಿದೆ ಇವಾನ್‌ನ ಬಡಿಗೆ! ಅದು ಮನೆಯ ಪಕ್ಕದಲ್ಲಿ ನೆಲದ ಮೇಲೆ ಬಿದ್ದಿದೆ. ಅದು ಸುತ್ತ ಇದ್ದ ತಾಮ್ರದ ಬೇಲಿಯ ಮೇಲೆ ಹಾರಿ ಬಂದು ಕೆಳಗೆ ಬೀಳುವಾಗ ಮನೆಯ ಒಂದು ಮೂಲೆಯನ್ನು ಮುರಿದಿದ್ದಿತು.

ಈ ಮನೆ ಡ್ರೇಗನ್‌ಗಳ ಒಂದು ಕುಟುಂಬಕ್ಕೆ ಸೇರಿದ್ದಿತು. ಅವು ಭಯಂಕರ ಡ್ರೇಗನ್‌ಗಳಾಗಿದ್ದವು. ಆದರೆ ಅವು ಆಗ ಮನೆಯಲ್ಲಿರಲಿಲ್ಲ. ಅವೆಲ್ಲ ಎಲ್ಲಿಯೋ ಯುದ್ಧ ಮಾಡಲು ಹೋಗಿದ್ದವು.

ಮನೆಯೊಳಗೆ ಯಾರೂ ಇರದಿದ್ದುದನ್ನು ಕಂಡು ಇವಾನ್ ಅಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳಲು ನಿರ್ಧರಿಸಿದ. ಅವನು ಒಬ್ಬ ಯೋಧನಿಗೆ ಹೊರಗೆ ತಾಮ್ರದ ಸೇತುವೆಯ ಬಳಿ ಕಾವಲು ನಿಲ್ಲಲು ಹೇಳಿದ. ಇನ್ನೊಬ್ಬನಿಗೆ ಕುದುರೆಗಳನ್ನು ಕಾಯುವಂತೆ ಹೇಳಿದ. ತಾನೇ ಒಳಗೆ ಮಲಗಲು ಹೋದ.

ಸೇತುವೆ ಕಾಯುತ್ತಿದ್ದವ ಸ್ವಲ್ಪ ಹೊತ್ತು ಪಹರೆ ನಡೆಸಿದ. ಆದರೆ ದೀರ್ಘ ಪ್ರಯಾಣದಿಂದ ಬಳಲಿದ್ದ ಅವನು ನಂತರ ಮಲಗಿ ಬಿಟ್ಟ. ಮಧ್ಯರಾತ್ರಿಯಲ್ಲಿ ಇವಾನ್‌ಗೆ ಎಚ್ಚರವಾಗಿ ಬಂದು ನೋಡುತ್ತಾನೆ – ಸೇತುವೆ ಕಾಯುವವ ಗಾಢ ನಿದ್ರೆಯಲ್ಲಿ ಮುಳುಗಿದ್ದಾನೆ.

ಆಗ ಇದ್ದಕ್ಕಿದ್ದಂತೆ ಭೂಮಿ ಅದುರಿತು... ಆರು ತಲೆಗಳ ಒಂದು ಡ್ರೇಗನ್ ಕುದುರೆಯ ಮೇಲೆ ಸವಾರಿ ಮಾಡಿಕೊಂಡು ಮನೆಯ ಕಡೆಗೆ ಬರುತ್ತಿದ್ದಿತು. ಅದು ತನ್ನ ಕುದುರೆಗೆ ಹೀಗೆ ಹೇಳಿತು:

"ನಿಶ್ಚಲವಾಗಿ ನಿಲ್ಲು, ಕೆನೆಯಬೇಡ! ಇಲ್ಲಿ ನಮ್ಮ ಎದುರು ನಿಲ್ಲಬಲ್ಲಂಥವರು ಯಾರೂ ಇಲ್ಲ. ರೈತನ ಮಗ ಇವಾನ್‌ನಷ್ಟೆ ನಮ್ಮ ಎದುರು ನಿಲ್ಲಬಲ್ಲ. ಆದರೆ ಅವನಿನ್ನೂ ಬಾಲಕ. ಅಲ್ಲದೆ ಇಲ್ಲಿಂದ ತುಂಬ ದೂರದಲ್ಲಿದ್ದಾನೆ, ರಣಹದ್ದೂ ಅಷ್ಟು ದೂರ ಹಾರಿ ಹೋಗಿ ಅವನ ಮೂಳೆಗಳನ್ನು ತರಲಾರದು."

"ಹಾಗೇನು? ರಣಹದ್ದು ಮಾಡಲಾಗದುದನ್ನು ಕೆಚ್ಚೆದೆಯ ಮನುಷ್ಯ ಮಾಡಬಲ್ಲ!" ಎಂದ ರೈತನ ಮಗ ಇವಾನ್.

"ಯಾತಕ್ಕೆ ಬಂದಿದ್ದೀಯ? ನನ್ನ ಜೊತೆ ಹೋರಾಡಲೋ ಅಥವಾ ಶಾಂತಿ ಮಾಡಿಕೊಳ್ಳಲೋ?" ಡ್ರೇಗನ್ ಕೇಳಿತು.

"ಹೋರಾಡಲು ಬಂದಿದ್ದೇನೆ. ನಿನ್ನಂಥವರ ಜೊತೆ ಶಾಂತಿ ಮಾಡಿಕೊಳ್ಳುವೆ ಅಂದುಕೊಂಡೆಯಾ?"

"ಸರಿ ಹಾಗಾದರೆ. ನೀನೇ ಮೊದಲ ಪ್ರಹಾರ ನೀಡು."

"ಇಲ್ಲ, ನೀನೇ ನೀಡು. ನೀನಷ್ಟೆ ನಿನ್ನ ಇಡೀ ರಾಜ್ಯದಲ್ಲಿ ಎಲ್ಲರಿಗಿಂತ ಹೆಚ್ಚು ಹಿರಿಯವ!"

ಆರು ತಲೆಗಳ ಡ್ರೇಗನ್ ಇವಾನ್‌ನ ಮೇಲೆ ಎರಗಿ ಬಂದು ಅವನಿಗೆ ಭಾರಿ ಪ್ರಹಾರ ನೀಡಿತು. ಆದರೆ ಇವಾನ್ ನಿಂತ ಸ್ಥಳದಿಂದ ಸ್ವಲ್ಪ ಮಿಸುಕಿದ, ಅಷ್ಟೆ. ಈಗ ಇವಾನ್‌ನ ಸರದಿ. ಅವನು

ತನ್ನ ಬಡಿಗೆಯಿಂದ ಡ್ರೇಗನ್‌ನ ಮೇಲೆ ಭಾರಿ ಪ್ರಹಾರ ನೀಡಿದ – ಓಹ್, ಒಂದೇ ಹೊಡೆತಕ್ಕೆ ಡ್ರೇಗನ್‌ನ ಆರು ತಲೆಗಳೂ ನೆಲಕ್ಕೆ ಉರುಳಿದವು!

ಬೆಳಗಾಯಿತು. ಇವಾನ್ ಸೇತುವೆ ಕಾಯುತ್ತಿದ್ದವನನ್ನು ಕರೆದು ಅವನು ರಾತ್ರಿಯಲ್ಲಿ ಸೇತುವೆಯನ್ನು ಎಷ್ಟು ಚೆನ್ನಾಗಿ ಕಾದ, ಎಂದು ಕೇಳಿದ.

"ತುಂಬ ಚೆನ್ನಾಗಿಯೇ ಕಾದೆ. ಒಂದು ಹಕ್ಕಿಯೂ ಹಾದು ಬರಲು ಸಾಧ್ಯವಿರಲಿಲ್ಲ" ಅವನೆಂದ.

ಹಗಲು ಕಳೆಯಿತು. ರಾತ್ರಿ ಬಂದಿತು. ರೈತನ ಮಗ ಇವಾನ್ ಮೊದಲ ಯೋಧನನ್ನು ಕುದುರೆಗಳನ್ನು ಕಾಯಲು ಕಳುಹಿಸಿ ಕುದುರೆಗಳನ್ನು ಕಾಯುತ್ತಿದ್ದವನನ್ನು ಸೇತುವೆ ಕಾಯಲು ಕಳುಹಿಸಿಕೊಟ್ಟ.

ಆ ಎರಡನೆಯವನೂ ನಿದ್ರೆ ಮಾಡಿಬಿಟ್ಟ. ಆದರೆ ಇವಾನ್ ಸಕಾಲದಲ್ಲೇ ಎಚ್ಚೆತ್ತು ತಾನೇ ಸೇತುವೆ ಬಳಿ ಕಾಯಲು ಹೋದ. ಆಗ ಇದ್ದಕ್ಕಿದ್ದಂತೆ ಭೂಮಿ ಅದುರಿತು, ನಡುಗ ತೊಡಗಿತು. ಗುಡುಗಿನಂಥ ಶಬ್ದ ಕೇಳಿ ಬಂದಿತು. ಒಂಬತ್ತು ತಲೆಗಳ ಒಂದು ಡ್ರೇಗನ್ ಸವಾರಿ ಮಾಡಿಕೊಂಡು ಬಂದಿತು.

"ನಿಶ್ಚಲವಾಗಿ ನಿಲ್ಲು, ಕೆನೆಯಬೇಡ" ಎಂದದು ತನ್ನ ಕುದುರೆಗೆ ಹೇಳಿತು. "ನಮ್ಮ ಎದುರು ನಿಲ್ಲಬಲ್ಲಂಥವರು ಇಲ್ಲಿ ಯಾರೂ ಇಲ್ಲ. ರೈತನ ಮಗ ಇವಾನ್‌ನಷ್ಟೆ ನಮ್ಮ ಎದುರು ನಿಲ್ಲಬಲ್ಲ. ಆದರೆ ಅವನಿನ್ನೂ ಬಾಲಕ. ಅಲ್ಲದೆ ಇಲ್ಲಿಂದ ತುಂಬ ದೂರದಲ್ಲಿದ್ದಾನೆ. ರಣಹದ್ದೂ ಅಷ್ಟು ದೂರ ಹಾರಿ ಹೋಗಿ ಅವನ ಮೂಳೆಗಳನ್ನು ತರಲಾರದು."

"ಹಾಗೇನು? ರಣಹದ್ದು ಮಾಡಲಾಗದುದನ್ನು ಕೆಚ್ಚೆದೆಯ ಮನುಷ್ಯ ಮಾಡಬಲ್ಲ!" ಎಂದ ರೈತನ ಮಗ ಇವಾನ್.

"ಯಾತಕ್ಕೆ ಬಂದಿದ್ದೀಯ? ನನ್ನ ಜೊತೆ ಹೋರಾಡಲೋ ಅಥವಾ ಶಾಂತಿ ಮಾಡಿಕೊಳ್ಳಲೋ?" ಡ್ರೇಗನ್ ಕೇಳಿತು.

"ಹೋರಾಡಲು ಬಂದಿದ್ದೇನೆ. ನಿನ್ನಂಥವರ ಜೊತೆ ಶಾಂತಿ ಮಾಡಿಕೊಳ್ಳುವೆ ಅಂದುಕೊಂಡೆಯಾ?"

"ಸರಿ, ಹಾಗಾದರೆ. ನೀನೇ ಮೊದಲ ಪ್ರಹಾರ ನೀಡು!"

"ಇಲ್ಲ. ನೀನೇ ನೀಡು. ನೀನಷ್ಟೆ ಜಗತ್ತಿನ ಈ ಭಾಗದಲ್ಲಿ ಎಲ್ಲರಿಗಿಂತ ಹೆಚ್ಚು ಹಿರಿಯವ!"

ಒಂಬತ್ತು ತಲೆಗಳ ಡ್ರೇಗನ್ ಹೆಚ್ಚಿಗೆ ಕಾಯಲಿಲ್ಲ. ಅದು ಇವಾನ್‌ನ ಮೇಲೆ ಎರಗಿ ಬಂದು ಎಷ್ಟು ಜೋರಾಗಿ ಪ್ರಹಾರ ನೀಡಿತೆಂದರೆ ಇವಾನ್ ಕಾಲಿನ ಹರಡಿನವರೆಗೆ ನೆಲದೊಳಕ್ಕೆ ಕುಸಿದ.

ಆದರೂ ಹೋರಾಡಿದ. ಡ್ರೇಗನ್‌ಗೆ ಎಂಥ ಪ್ರಹಾರ ಕೊಟ್ಟನೆಂದರೆ, ಒಂದೇ ಏಟಿಗೆ ಅದರ ಏಳು ತಲೆಗಳು ಉರುಳಿ ಬಿದ್ದವು. ಇನ್ನೊಂದು ಪ್ರಹಾರ ಕೊಟ್ಟು ಅವನು ಅದರ ಉಳಿದ ಎರಡು ತಲೆಗಳನ್ನೂ ಕೊಚ್ಚಿ ಹಾಕಿದ... ಇವಾನ್ ಮನೆಗೆ ಹಿಂದಿರುಗಿ ಮಲಗಿದ.

ಬೆಳಗಾಯಿತು. ಇವಾನ್ ಸೇತುವೆ ಕಾಯುತ್ತಿದ್ದವನನ್ನು ಕರೆದು ಅವನು ರಾತ್ರಿಯಲ್ಲಿ ಹೇಗೆ ಸೇತುವೆಯನ್ನು ಕಾದ ಎಂದು ಕೇಳಿದ.

"ತುಂಬ ಚೆನ್ನಾಗಿ ಕಾದೆ. ಒಂದು ಇಲಿಯನ್ನೂ ಹೋಗಲು ಬಿಡಲಿಲ್ಲ" ಅವನೆಂದ.

ಮೂರನೆಯ ರಾತ್ರಿ ಇವಾನ್ ಇಬ್ಬರು ಯೋಧರನ್ನೂ ಮನೆಗೆ ಕರೆದು, ತನ್ನ ಕೈಗವಸನ್ನು ಗೋಡೆಯ ಮೇಲೆ ನೇತು ಹಾಕಿ, ಹೇಳಿದ:

"ಇವತ್ತು ರಾತ್ರಿ ನಾನೇ ಸೇತುವೆ ಕಾಯಲು ಹೋಗುತ್ತೇನೆ. ನೀವು ನನ್ನ ಈ ಕೈಗವಸನ್ನು ನೋಡುತ್ತಿರಿ. ಅದರಿಂದ ಬೆವರು ಹೊರ ಸೂಸಿದರೆ ಆಗ ನೀವು ಪ್ರಶಾಂತವಾಗಿ ಕುಳಿತುಕೊಳ್ಳಿ! ಅದರಿಂದ ರಕ್ತ ಹೊರ ಸೂಸಿದರೆ ನನ್ನ ಕುದುರೆಯನ್ನು ಬಿಚ್ಚಿ ಅದಕ್ಕೆ ಇಷ್ಟವಾದಲ್ಲಿಗೆ ಹೋಗಲು ಬಿಟ್ಟು ಬಿಡಿ."

ಅವನು ಸೇತುವೆಯ ಕೆಳಗೆ ನಿಂತು ಕಾದ. ಮಧ್ಯರಾತ್ರಿಗೆ ಸ್ವಲ್ಪ ಮುನ್ನ ಭೂಮಿ ನಡುಗ ತೊಡಗಿತು, ಗುಡುಗುಟ್ಟಿತು. ಓಕ್ ಮರಗಳಿಂದ ಎಲೆಗಳು ಉದುರಿದವು. ಅಲ್ಲಿನ ಡ್ರೇಗನ್ ಗಳಲ್ಲೆಲ್ಲ ಅತ್ಯಂತ ಹಿರಿಯ ಡ್ರೇಗನ್ ಬಂದಿತು. ಅದು ಬೆಂಕಿ ತಿನ್ನುವ, ಉರಿಯನ್ನು ಕುಡಿಯುವ, ಇವಾನ್‌ನಿಗೆ ಬೇಕಿದ್ದ ಅದೇ ಕುದುರೆಯ ಮೇಲೆ ಕುಳಿತಿತ್ತು. ಸೇತುವೆ ಹತ್ತಿರ ಬಂದಾಗ ಅದು ಕುದುರೆಗೆ ಹೇಳಿತು:

"ನಿಶ್ಚಲವಾಗಿ ನಿಲ್ಲು. ಮುಗ್ಗರಿಸಬೇಡ. ರೈತನ ಮಗ ಇವಾನ್‌ನನ್ನು ಬಿಟ್ಟು ಬೇರಾರೂ ನಮ್ಮ ಎದುರು ನಿಲ್ಲಲಾರರು. ಇವಾನ್ ಇನ್ನೂ ಬಾಲಕ. ಒಲೆಯ ಗೂಡಿನ ಮೇಲೆ ಕುಳಿತು ಕೊಳ್ಳುವುದು ಬಿಟ್ಟು ಅವನಿಗೆ ಬೇರೇನೂ ಕೆಲಸ ಇಲ್ಲ. ಅವನೂ ಎಷ್ಟು ದೂರ ಇದ್ದಾನೆಂದರೆ ರಣ ಹದ್ದೂ ಅಷ್ಟು ದೂರ ಹಾರಿ ಹೋಗಿ ಅವನ ಮೂಳೆಗಳನ್ನು ತರಲಾರದು."

ಅದರ ಮಾತನ್ನು ಕೇಳಿಸಿಕೊಂಡು ರೈತನ ಮಗ ಇವಾನ್ ಹೇಳಿದ: "ರಣಹದ್ದು ಮಾಡಲಾಗ ದುದನ್ನು ಕೆಚ್ಚೆದೆಯ ಮನುಷ್ಯ ಮಾಡಬಲ್ಲ!"

"ಯಾತಕ್ಕೆ ಬಂದಿದ್ದೀಯ? ನನ್ನ ಜೊತೆ ಹೋರಾಡಲೋ ಅಥವಾ ಶಾಂತಿ ಮಾಡಿ ಕೊಳ್ಳಲೋ?" ಡ್ರೇಗನ್ ಕೇಳಿತು.

"ಹೋರಾಡಲು ಬಂದಿದ್ದೇನೆ. ನಿನ್ನಂಥವರ ಜೊತೆ ಶಾಂತಿ ಮಾಡಿಕೊಳ್ಳುವೆ ಅಂದು ಕೊಂಡೆಯಾ?"

"ಸರಿ, ಹಾಗಾದರೆ. ನೀನೇ ಮೊದಲ ಪ್ರಹಾರ ನೀಡು !" ಡ್ರೇಗನ್ ಹೇಳಿತು.

"ಇಲ್ಲ. ನೀನೇ ನೀಡು ! ನೀನೇ ಅಲ್ಲವೇ ಇಡೀ ಜಗತ್ತಿನಲ್ಲಿ ಬೇರೆ ಯಾರಿಗಿಂತ ಹೆಚ್ಚು ಶಕ್ತಿವಂತ !"

ಡ್ರೇಗನ್ ಹೆಚ್ಚು ಕಾಲ ಕಾಯಲಿಲ್ಲ. ಇವಾನ್‌ನ ಮೇಲೆ ಎರಗಿ ಬಿದ್ದಿತು. ಎಷ್ಟು ಜೋರಾಗಿ ಪ್ರಹಾರ ನೀಡಿತೆಂದರೆ ಇವಾನ್‌ನ ಮುಖ ಬಿಳಚಿಕೊಂಡಿತು. ಆದರೆ ಅವನು ತತ್ತರಿಸಲಿಲ್ಲ. ಹೋರಾಡುತ್ತಲೇ ಹೋದ. ಕೊನೆಗೆ ಡ್ರೇಗನ್‌ನ ಹನ್ನೆರಡು ತಲೆಗಳಲ್ಲಿ ಮೂರಷ್ಟೆ ಉಳಿದವು. ಆದರೆ ಡ್ರೇಗನ್ ಇವಾನ್‌ನ ಮೇಲೆ ಒಂದೇ ಸಮನಾಗಿ ಪ್ರಹಾರ ನೀಡಿ ಅವನು ಸೊಂಟದವರೆಗೂ ನೆಲದಡಿ ಕುಸಿಯುವಂತೆ ಮಾಡಿತು. ಯುವಕನ ಶಕ್ತಿ ಕುಗ್ಗುತ್ತ ಹೋಯಿತು. ಇನ್ನೇನು ಪೂರ್ತಿ ಹೋಗುವುದರಲ್ಲಿತ್ತು.

"ಇಲ್ಲಿ ಕೇಳು. ನಿನಗೆ ಅಪ್ಪ ಇದ್ದನೆ?" ಡ್ರೇಗನ್ ಕೇಳಿತು.

"ಇದ್ದ."

"ಅವನ ಬಳಿ ಎತ್ತುಗಳಿದ್ದವೆ?"

"ಇದ್ದವು."

"ಅವುಗಳಿಂದ ಅವನು ಭೂಮಿ ಉಳುತ್ತಿದ್ದನೆ?"

"ಉಳುತ್ತಿದ್ದ."

"ಅವುಗಳಿಗೆ ವಿಶ್ರಾಂತಿ ತೆಗೆದುಕೊಳ್ಳಲು ಬಿಡುತ್ತಿದ್ದನೆ?"

"ಬಿಡುತ್ತಿದ್ದ."

"ಹಾಗಾದರೆ ನಾವು ವಿಶ್ರಾಂತಿ ತೆಗೆದುಕೊಳ್ಳೋಣ."

ಇವಾನ್ ಅದಕ್ಕೆ ಒಪ್ಪಿಕೊಂಡ. ತನ್ನ ಬಡಿಗೆಯನ್ನು ಕೆಳಗೆ ಹಾಕಿದ. ಎಷ್ಟು ಜೋರಾಗಿ ಹಾಕಿದನೆಂದರೆ ಅದು ಅವನು ಉದ್ದೇಶಿಸಿದ್ದುದಕ್ಕಿಂತ ಹೆಚ್ಚು ದೂರ ಹಾರಿ ಹೋಗಿ ಬಿದ್ದಿತು. ಅದು ಲಾಯಕ್ಕೆ ಹೋಗಿ ಬಡಿದು ಅದರ ಗೋಡೆಗಳಲ್ಲೊಂದನ್ನು ಮುರಿದು ಬೀಳಿಸಿತು. ಅಲ್ಲಿದ್ದ ಅವನ ಕುದುರೆ ಹಗ್ಗ ಕಿತ್ತುಕೊಂಡು ಇವಾನ್ ಇದ್ದ ಬಳಿಗೆ ಬಂದಿತು. ಅದು ತನ್ನ ಗೊರಸುಗಳಿಂದ ಇವಾನ್‌ನ ಸುತ್ತ ಇದ್ದ ಮಣ್ಣನ್ನು ಅಗೆದು ಹಾಕ ತೊಡಗಿತು.

ಮನೆಯಲ್ಲಿದ್ದ ಇಬ್ಬರು ಯೋಧರೂ ಎಚ್ಚರಗೊಂಡರು. ನೋಡುತ್ತಾರೆ – ಇವಾನ್‌ನ ಕೈಗವಸಿನಿಂದ ರಕ್ತ ಒಸರುತ್ತಿದೆ. ಅವರಿಗೆ ತುಂಬ ಗಾಬರಿಯಾಯಿತು. ಅವರು ಇವಾನ್‌ನ ಸಹಾಯಕ್ಕೆ ಹೋಗ ಬಯಸಲಿಲ್ಲ.

ಈಮಧ್ಯೆ ಇವಾನ್‌ನ ಕುದುರೆ ಅವನ ಸುತ್ತ ಇದ್ದ ಮಣ್ಣನ್ನೆಲ್ಲ ಅಗೆದು ಹಾಕಿ ಅವನನ್ನು

ಬಿಡಿಸಿತು. ಇವಾನ್ ಡ್ರೇಗನ್‌ಗೆ ಹೇಳಿದ: "ಇದೇ ನಿನ್ನ ಕೊನೆ, ಡ್ರೇಗನ್. ನಿನ್ನನ್ನೀಗ ಕೊಂದು ಹಾಕುತ್ತೇನೆ."

"ಆಗಲಿ. ಕೊಂದು ಹಾಕು. ಸಾಯುವ ಮುನ್ನ ನಿನಗೆ ಒಂದು ಮಾತು ಹೇಳ್ತೀನಿ, ಕೇಳು. ನಿನಗೆ ಬೇಕಾದ ಮಾಂತ್ರಿಕ ಕುದುರೆಯನ್ನು ನೀನು ಪಡೆದುಕೊಂಡರೂ ದೊರೆಯ ಬಳಿಗೆ ಕೊಂಡೊಯ್ಯಲಾರೆ, ತಿಳಿ. ನನಗೆ ಇನ್ನೂ ಮೂವರು ತಂಗಿಯರಿದ್ದಾರೆ, ಅಮ್ಮ, ಅಪ್ಪ ಇದ್ದಾರೆ. ನನ್ನ ಅಪ್ಪ ದೊರೆ ಹೆರೋದ್. ಅವರು ನಿನ್ನನ್ನೂ ನಿನ್ನ ಯೋಧರನ್ನೂ ಮುಗಿಸುತ್ತಾರೆ."

ಇವಾನ್ ಡ್ರೇಗನ್‌ನ ಉಳಿದ ಮೂರು ತಲೆಗಳನ್ನೂ ಕಡಿದು ಹಾಕಿದ. ಆಮೇಲೆ ಡ್ರೇಗನ್ ಹೇಳಿದ್ದ ಮಾತುಗಳನ್ನು ನೆನಪು ಮಾಡಿಕೊಂಡು ಯೋಚನೆ ಮಾಡುತ್ತ ನಿಂತ. ಅವನಿಗೆ ಏನು ಮಾಡಬೇಕೋ ತಿಳಿಯದಾಯಿತು. ಆಗ ಅವನು ಹಿಂದೆ ಮಳೆ ಬಂದಾಗ ತನ್ನ ಕುದುರೆ ಚರ್ಮಗಳನ್ನೇ ಗುಡಿಸಿಲಿನ ಮೇಲೆ ಹೊದಿಸಿ ಸಹಾಯ ಮಾಡಿದ್ದನಲ್ಲ ಆ ಮುದುಕಿ ಅವನಿಗೆ ಸಹಾಯ ಮಾಡಿದಳು. ಅವಳಿಗೆ ಈ ಜಗತ್ತಿನಲ್ಲಾಗುತ್ತಿದ್ದುದೆಲ್ಲ ಗೊತ್ತಿಗೆ ಬರುತ್ತಿತ್ತು. ಇವಾನ್ ಅಪಾಯದಲ್ಲಿದ್ದನೆಂದು ತಿಳಿದು ಅವನ ಬಳಿಗೆ ತನ್ನ ಪುಟ್ಟ ನಾಯಿಯನ್ನು ಕಳುಹಿಸಿ ಕೊಟ್ಟಳು.

ನಾಯಿ ಅವನಿಗೆ ಹೇಳಿತು: "ನೀವು ಮನೆಗೆ ಹಿಂದಿರುಗುವಾಗ ನಿಮಗೆ ತುಂಬ ಬಾಯಾರಿಕೆಯಾಗುತ್ತೆ. ದಾರಿಯ ಬಲಗಡೆ ಒಂದು ಕೊಳ ಇರುತ್ತೆ. ಅದರ ನೀರು ಗಾಜಿನಷ್ಟು ಶುಭ್ರವಾಗಿ ತಿಳಿಯಾಗಿ ಇರುತ್ತೆ. ನಿಮಗೆ ಬಾಯಾರಿಕೆಯಿಂದ ನಾಲಿಗೆ ಅಂಗುಳಿಗೆ ಅಂಟಿಕೊಳ್ಳುವಂತಾದರೂ ಆ ಕೊಳದ ನೀರನ್ನು ಕುಡಿಯಬೇಡಿ. ನೀನು ನಿನ್ನ ಬಡಿಗೆಯಿಂದ ಅದರ ಮೇಲೆ ಅಡ್ಡವಾಗಿ ಪ್ರಹಾರ ನೀಡು. ಆಗ ಏನಾಗುತ್ತೆ ಅನ್ನೋದು ನಿನಗೇ ಗೊತ್ತಾಗುತ್ತೆ. ಆಮೇಲೆ ಮುಂದಕ್ಕೆ ಹೋಗಿ. ಒಂದು ಚೌಬೀನೆ ಮರ ಕಾಣುತ್ತೆ. ಅದರ ಕೆಳಗೆ ಒಂದು ಮೇಜು ಇರುತ್ತೆ. ಮೇಜಿನ ಮೇಲೆ ತುಂಬ ತಿಂಡಿ ತೀರ್ಥ ಇರಿಸಿರಲಾಗುತ್ತೆ. ಎಷ್ಟೇ ಹಸಿವಾದರೂ ಅದನ್ನು ತಿನ್ನೋಕೆ ಮಾತ್ರ ಹೋಗಬೇಡಿ. ಮೇಜಿನ ಮೇಲೆ ನಿನ್ನ ಬಡಿಗೆಯಿಂದ ಪ್ರಹಾರ ನೀಡು. ಏನಾಗುತ್ತೆ ಅನ್ನೋದು ನಿನಗೇ ಗೊತ್ತಾಗುತ್ತೆ. ಆಮೇಲೆ ನಿಮಗೆ ಇನ್ನೊಂದು ಚೌಬೀನೆ ಮರ ಕಾಣುತ್ತೆ. ಅದರ ಕೆಳಗೆ ಹಾಸಿಗೆಗಳು ಇರುತ್ತವೆ. ನಿಮಗೆ ತುಂಬ ಬಳಲಿಕೆಯಾಗಿ ಕಣ್ಣು ಎಳೆದುಕೊಂಡು ಹೋಗುತ್ತಿದ್ದರೂ ಅವುಗಳ ಮೇಲೆ ಮಲಗಬೇಡಿ. ಬದಲು ಅವುಗಳ ಮೇಲೆ ನಿನ್ನ ಬಡಿಗೆಯಿಂದ ಬಡಿ. ಏನಾಗುತ್ತೆ ಅನ್ನೋದು ನಿನಗೇ ಗೊತ್ತಾಗುತ್ತೆ !"

ಇವಾನ್ ಮುದುಕಿಯ ನಾಯಿಯ ಮಾತುಗಳನ್ನೆಲ್ಲ ಕೇಳಿಸಿಕೊಂಡು ಅದಕ್ಕೆ ವಂದನೆ ತಿಳಿಸಿದ. ಆಮೇಲೆ ಡ್ರೇಗನ್‌ನ ಮಾಂತ್ರಿಕ ಕುದುರೆಯನ್ನು ತೆಗೆದುಕೊಂಡು ಅವನು ರಾಜನ ಅರಮನೆಯ ಕಡೆಗೆ ಹೊರಟ. ರಾಜನ ಇಬ್ಬರು ಯೋಧರೂ ಅವನ ಜೊತೆ ಹೊರಟರು. ಅವರು

ಪ್ರಯಾಣ ಮಾಡುತ್ತ ಮಾಡುತ್ತ ಹೋದರು. ಅವರಿಗೆ ತುಂಬ ಬಾಯಾರಿಕೆಯಾಯಿತು. ರಸ್ತೆಯ ಬಲ ಬದಿಯಲ್ಲಿ ಒಂದು ಕೊಳ ಕಂಡುಬಂದಿತು. ಆ ಇಬ್ಬರು ಯೋಧರೂ ಅದರ ನೀರು ಕುಡಿಯ ಹೋದರು. ಆದರೆ ಇವಾನ್ ಹೇಳಿದ:

"ತಾಳಿ, ತಾಳಿ. ಮೊದಲು ಅದು ಏನು ಎಂದು ನೋಡಿ."

ಹಾಗೆಂದು ಅವನು ಆ ಕೊಳದ ಮೇಲೆ ತನ್ನ ಬಡಿಗೆಯಿಂದ ಪ್ರಹಾರ ನೀಡಿದ. ಆಗ ಏನಾಯಿತು ಅಂತೀರಿ – ಕೊಳದ ನೀರೆಲ್ಲ ರಕ್ತವಾಯಿತು. ವಾಸ್ತವವಾಗಿ ಆ ಕೊಳ ಕೊಳವಾಗಿರಲಿಲ್ಲ. ಡ್ರೇಗನ್‌ನ ತಂಗಿ ಆ ಕೊಳದ ರೂಪದಲ್ಲಿ ಅಲ್ಲಿದ್ದಳು.

ಅವರು ಮುಂದೆ ಹೋದರು. ಇವಾನ್‌ನು ಡ್ರೇಗನ್‌ನ ಉಳಿದ ಇಬ್ಬರು ಸೋದರಿಯರನ್ನೂ ಕೊಂದ: ಅವರಲ್ಲೊಬ್ಬಳು ತಿಂಡಿತೀರ್ಥಗಳಿಂದ ತುಂಬಿದ ಮೇಜಿನ ರೂಪದಲ್ಲಿದ್ದಳು, ಇನ್ನೊಬ್ಬಳು ಹಾಸಿಗೆಗಳ ರೂಪದಲ್ಲಿದ್ದಳು. ಆಮೇಲೆ ಅವರು ಮುಂದುವರಿಯುತ್ತಿದ್ದಂತೆ ಆಕಾಶ ಇದ್ದಕ್ಕಿದ್ದಂತೆ ಕಪ್ಪಾಯಿತು. ಕಾರ್ಮುಗಿಲೊಂದು ಅದನ್ನು ಆವರಿಸುತ್ತಿದ್ದುದನ್ನು ಅವರು ಕಂಡರು. ಮತ್ತೆ ನೋಡಿದಾಗ ಅದು ಕಪ್ಪು ಮೋಡವಾಗಿರಲಿಲ್ಲ, ಆದರೆ ಡ್ರೇಗನ್‌ನ ಮುದುಕಿ ತಾಯಿ ಎಂಬುದು ಅವರಿಗೆ ತಿಳಿದು ಬಂದಿತು. ಅವಳ ಮೇಲು ತುಟಿ ಆಕಾಶವನ್ನು ಮುಟ್ಟಿದ್ದರೆ ಕೆಳ ತುಟಿ ಭೂಮಿಯನ್ನು ಮುಟ್ಟಿದ್ದಿತು.

ರೈತನ ಮಗ ಇವಾನ್ ಹೇಳಿದ: "ಬನ್ನಿ, ಸೋದರರೇ. ನಾವು ಈ ತಾಯಿ-ಡ್ರೇಗನ್ ವಿರುದ್ಧ ಜೊತೆಗೂಡಿ ಹೋರಾಡೋಣ. ನಾನು ಒಬ್ಬನೇ ಹೋರಾಡೋದು ಕಷ್ಟ."

ಆದರೆ ಅವರು ತುಂಬ ಹೆದರಿ ಓಡಿ ಹೋದರು. "ಇನ್ನು ನನ್ನ ಕತೆ ಮುಗಿಯಿತು" ಇವಾನ್ ಅಂದುಕೊಂಡ. ಆದರೆ ಹತ್ತಿರದಲ್ಲೇ ಒಂದು ಕಮ್ಮಾರಶಾಲೆ ಇದ್ದಿತೆಂಬುದು ಅವನಿಗೆ ಜ್ಞಾಪಕಕ್ಕೆ ಬಂದಿತು. ಅವನು ಕುದುರೆಯನ್ನು ನಾಗಾಲೋಟ ಓಡಿಸಿಕೊಂಡು ಅಲ್ಲಿಗೆ ಹೋದ. ಆ ಇಬ್ಬರು ಯೋಧರೂ ಅಡಗಿಕೊಳ್ಳಲು ಬೇರೆಲ್ಲೂ ಸ್ಥಳ ಕಾಣದೆ ಅಲ್ಲಿಗೇ ಬಂದರು.

ಅವರು ಕಮ್ಮಾರಶಾಲೆ ತಲುಪಿ ಒಳಗಿದ್ದ ಕಮ್ಮಾರರಿಗೆ ತಮ್ಮನ್ನು ಒಳ ಬಿಡುವಂತೆ ಕೇಳಿಕೊಂಡರು. ಆ ಕಮ್ಮಾರಶಾಲೆಗೆ ಹನ್ನೆರಡು ಕಬ್ಬಿಣದ ಬಾಗಿಲುಗಳಿದ್ದವು. ಕಮ್ಮಾರರು ಅವುಗಳನ್ನು ತೆರೆದರು. ಇವಾನ್‌ನೂ ಆ ಇಬ್ಬರು ಯೋಧರೂ ಒಳ ಹೊಕ್ಕ ಕೂಡಲೇ ಬಾಗಿಲುಗಳು ಮುಚ್ಚಿಕೊಂಡವು. ಆದರೆ ಆ ತಾಯಿ-ಡ್ರೇಗನ್‌ಗೆ ಸುಳಿವು ತಿಳಿದು ಹೋಯಿತು. ಅದು ಕಮ್ಮಾರಶಾಲೆಯ ಬಳಿಗೆ ಬಂದು ಅದರ ಬಾಗಿಲುಗಳನ್ನು ತನ್ನ ಉರಿಯ ನಾಲಿಗೆಗಳಿಂದ ನೆಕ್ಕ ತೊಡಗಿತು.

ಅದೇನೂ ತಮಾಷಿಯ ಸಂಗತಿಯಾಗಿರಲಿಲ್ಲವೆಂದು ರೈತನ ಮಗ ಇವಾನ್ ಕಂಡುಕೊಂಡ. ಅವನು ಕಮ್ಮಾರರಿಗೆ ಹೇಳಿದ: "ಬೇಗ ಒಂದು ದೊಡ್ಡ ನೇಗಿಲನ್ನೂ ಈ ಕಮ್ಮಾರಶಾಲೆಯಷ್ಟು

ಗಾತ್ರದ ಒಂದು ಇಕ್ಕಳವನ್ನೂ ತಯಾರಿಸಿ ಕೊಡಿ!"

ಕಮ್ಮಾರರು ತಕ್ಷಣವೇ ತಯಾರಿಸ ತೊಡಗಿದರು. ಅವರಿಗೆ ಅತ್ಯಲ್ಪ ಸಮಯವಷ್ಟೆ ಇದ್ದಿತು. ಏಕೆಂದರೆ ತಾಯಿ-ಡ್ರೇಗನ್ ಆಗಲೇ ಹೆಚ್ಚಿನ ಬಾಗಿಲುಗಳನ್ನೆಲ್ಲ ಸುಟ್ಟು ಹಾಕಿದ್ದಿತು. ಆದರೆ ಅವರು ಬೇಗಬೇಗ ಮಾಡಿದರು. ತಾಯಿ-ಡ್ರೇಗನ್ ಹತ್ತನೆಯ ಬಾಗಿಲು ನೆಕ್ಕಿ ಸುಟ್ಟು ಹಾಕುತ್ತಿದ್ದ ಹೊತ್ತಿಗಾಗಲೇ ಅವರು ನೇಗಿಲನ್ನೂ ಇಕ್ಕಳವನ್ನೂ ಸಿದ್ಧಗೊಳಿಸಿದ್ದರು.

ತಾಯಿ-ಡ್ರೇಗನ್ ಕೊನೆಯ ಬಾಗಿಲನ್ನೂ ಸುಟ್ಟು ಹಾಕಿ ತನ್ನ ತಲೆಯನ್ನು ಒಳಕ್ಕೆ ತೂರಿಸಿತು. ಇವಾನ್‌ನು ಅದರ ತುಟಿಗಳನ್ನು ಕೆಂಪಗೆ ಕಾದ ಇಕ್ಕಳದಿಂದ ಗಟ್ಟಿಯಾಗಿ ಹಿಡಿದು ತನ್ನೆಲ್ಲ ಶಕ್ತಿಯನ್ನೂ ಬಿಟ್ಟು ಅವುಕಿದ. ಆಮೇಲೆ ಅವನು ಆ ತಾಯಿ-ಡ್ರೇಗನ್ನನ್ನು ನೇಗಿಲಿಗೆ ಕಟ್ಟಿ, ಬಲವಂತದಿಂದ ಹೊಲಕ್ಕೆ ಎಳೆದೊಯ್ದು ಉಳುವಂತೆ ಮಾಡಿದ. ಅದು ಉಳುತ್ತಿದ್ದಾಗ ಮನೆ ಗಾತ್ರದ ಮಣ್ಣಿನ ಹೆಂಟೆಗಳು ತಳಮೇಲಾಗುತ್ತಿದ್ದವು. ಹೀಗೆ ಅವನು ಅನೇಕ ಗಂಟೆಗಳವರೆಗೆ ಉತ್ತ. ಕೊನೆಗೆ ತಾಯಿ-ಡ್ರೇಗನ್ ಶಕ್ತಿಯನ್ನೆಲ್ಲ ಕಳೆದುಕೊಂಡು ಮೈ ಒಡೆದುಕೊಂಡು ಸತ್ತು ಬಿದ್ದಿತು. ಆಗ ಅವನು ಅದನ್ನು ಎತ್ತಿಕೊಂಡು ಹೋಗಿ ಸಮುದ್ರಕ್ಕೆ ಹಾಕಿದ, ತನ್ನ ಕುದುರೆಯನ್ನು ಹುಲ್ಲುಗಾವಲೊಂದರಲ್ಲಿ ಸ್ವತಂತ್ರವಾಗಿ ಹೋಗುವಂತೆ ಬಿಟ್ಟುಕೊಟ್ಟ, ತನ್ನನ್ನು ಹಿಂಬಾಲಿಸಿ ಬರುತ್ತಿದ್ದ ಆ ಯೋಧರಿಬ್ಬರನ್ನೂ ಅಟ್ಟಿದ.

"ಹೋಗಿ ಆಚೆಗೆ, ಹೇಡಿಗಳೇ!" ಅವನೆಂದ. "ನೀವು ಕುಲೀನ ರಕ್ತ ಹೊಂದಿರಬಹುದು. ಆದರೆ ನೀವು ನನ್ನನ್ನು ಸಾಕಷ್ಟು ಸತಾಯಿಸಿದ್ದೀರ. ನಿಮ್ಮಿಂದ ನನಗೆ ಸಹಾಯಕ್ಕೆ ಬದಲು ತೊಂದರೆಯೇ ಬೇಕಾದಷ್ಟಾಗಿದೆ!"

ಹಾಗೆ ಹೇಳಿ ಅವನು ಮಾಂತ್ರಿಕ ಕುದುರೆ ಹತ್ತಿ ಹೊರಟ.

ಸ್ವಲ್ಪ ದೂರ ಹೋದ ಮೇಲೆ ಅವನಿಗೆ ಒಬ್ಬ ವೃದ್ಧ ಎದುರಾದ. ಇವಾನ್ ಅವನಿಗೆ ನಮಸ್ಕರಿಸದೆ ಮುಂದೆ ಹೋದ. ಆದರೆ ಆಮೇಲೆ ಯೋಚನೆ ಮಾಡಿದ: "ಅಯ್ಯೋ ಏನು ಮಾಡಿಬಿಟ್ಟೆ! ನಾನು ಚಿಕ್ಕವ. ಆ ವಯಸ್ಸಾದವರಿಗೆ ಗೌರವ ತೋರುವುದು ನನ್ನ ಧರ್ಮ."

ಮುದುಕನ ಬಳಿಗೆ ಬಂದು ಹೇಳಿದ:

"ನಮಸ್ಕಾರ, ಅಜ್ಜ, ನನ್ನನ್ನು ಕ್ಷಮಿಸಿ. ನಾನು ನಿಮಗೆ ವಂದಿಸಬೇಕಿತ್ತು. ನೋಡದೆ ಹಾಗೆಯೇ ಹೊರಟು ಹೋದೆ."

"ನಿಜ, ಯುವಕನೊಬ್ಬ ಯಾವಾಗಲೂ ತನಗಿಂತ ಹಿರಿಯರಾದವರಿಗೆ ಮೊದಲು ನಮಸ್ಕರಿಸಬೇಕು. ಇದನ್ನು ನೀನು ಎಂದೂ ಮರೆಯಬೇಡ" ಮುದುಕ ಹೇಳಿದ. "ಈಗ ನನ್ನ ಮಾತು ಕೇಳು. ನೀನು ಮುಂದೆ ಹೋಗುತ್ತಿರುವಂತೆ ನಿನಗೆ ಒಬ್ಬ ಮುದುಕ ಇದಿರಾಗುತ್ತಾನೆ. ಅವನಿ

ಗೊಂದು ಮರದ ಕಾಲಿರುತ್ತೆ. ಅವನು ನಿನ್ನನ್ನು ನಿಲ್ಲಿಸಿ ಹೇಳುವನು: 'ನಿನ್ನ ಬಳಿ ಸೊಗಸಾದ ಕುದುರೆ ಇದೆಯಲ್ಲ, ಹುಡುಗ. ಆದರೂ ನೀನೇನೂ ನನ್ನನ್ನು ಮೀರಿಸಿ ಹೋಗಲಾರೆ!' ಇವನ ಜೊತೆಗೆ ನೀನು ಎಷ್ಟು ಮಾತ್ರವೂ ಓಟದ ಪೈಪೋಟಿಗೆ ಇಳಿಯಬಾರದು, ತಿಳಿಯಿತಾ? ಇದು ಮೊದಲನೆಯ ಸಂಗತಿ. ಎರಡನೆಯದು, ದಾರಿಯಲ್ಲಿ ಯಾರು ಕೇಳಿದರೂ ಅವರನ್ನು ನೀನು ನಿನ್ನ ಜೊತೆ ಕುದುರೆಯ ಮೇಲೆ ಕರೆದೊಯ್ಯಬೇಕು. ಇವೆರಡು ಸಂಗತಿಗಳನ್ನೂ ನೆನಪಿನಲ್ಲಿಟ್ಟಿರು."

ಇವಾನ್ ಮುಂದೆ ಹೊರಟ. ನೋಡುತ್ತಾನೆ – ಅವನ ಬಳಿಗೆ ಒಬ್ಬ ಮರದ ಕಾಲಿನ ಮುದುಕ ಕುಂಟುತ್ತ ಬರುತ್ತಿದ್ದಾನೆ.

"ನಿನ್ನ ಬಳಿ ಸೊಗಸಾದ ಕುದುರೆ ಇದೆಯಲ್ಲ, ಹುಡುಗ!" ಅವನೆಂದ. "ನಾನೊಬ್ಬ ರೋಗಿ ಮುದುಕ. ಆದರೂ ನೀನೇನೂ ಓಟದಲ್ಲಿ ನನ್ನನ್ನು ಮೀರಿಸಲಾರೆ, ತಿಳಿ!"

"ಇರಬಹುದು. ನಾನೇನೂ ಅಲ್ಲಗಳೆಯುವುದಿಲ್ಲ. ನಾನು ನಿಮ್ಮೊಂದಿಗೆ ಓಟವನ್ನೂ ಓಡುವುದಿಲ್ಲ!" ಇವಾನ್ ಹೇಳಿದ.

ಈ ಮಾತುಗಳು ಅವನ ಬಾಯಿಯಿಂದ ಹೊರ ಬಂದವೋ ಇಲ್ಲವೋ, ಆ ಕುಳ್ಳ ಮುದುಕ ತನ್ನ ಮರದ ಕಾಲನ್ನು ಇವಾನ್‌ನ ರಿಕಾಪಿನೊಳಕ್ಕೆ ತೂರಿಸಿ, ಇವಾನ್‌ನ ತೋಳಿಗೆ ಒಂದು ಬಾಣ ಚುಚ್ಚಿ ಅವನನ್ನು ಜೀನಿನಿಂದ ಬೀಳಿಸಿದ. ಆಮೇಲೆ ತಾನೇ ಕುದುರೆಯ ಬೆನ್ನಿನ ಮೇಲೆ ಹಾರಿ ಕುಳಿತು ಮಿಂಚಿನ ವೇಗದಲ್ಲಿ ಹೊರಟು ಹೋದ. ಇದೆಲ್ಲ ಹೇಗೆ ಜರುಗಿತು ಅನ್ನುವುದು ಇವಾನ್‌ನಿಗೆ ತಿಳಿಯುವ ಮುನ್ನವೇ ಎಲ್ಲ ಆಗಿ ಹೋಗಿತ್ತು. ಆ ಮುದುಕ ಬೇರೆ ಯಾರೂ ಆಗಿರಲಿಲ್ಲ – ಡ್ರೇಗನ್‌ನ ತಂದೆ ರಾಜ ಹೆರೋದ್‌ನೇ ಆ ರೂಪದಲ್ಲಿ ಬಂದಿದ್ದ!

ಇವಾನ್‌ನಿಗೆ ಕೋಪದಿಂದ ಮೈ ಮರೆಯುವಂತಾಯಿತು.

"ಆಗಲಿ, ಹಾಳಾದ ರಾಜ ಹೆರೋದ್‌ನೇ! ನಾನಿದಕ್ಕಾಗಿ ನಿನ್ನನ್ನು ಎಂದೂ ಸುಮ್ಮನೆ ಬಿಡುವುದಿಲ್ಲ!" ಎಂದ ಅವನು. "ತಾಳು, ನೀನು ಎಲ್ಲೇ ಇರು ನಿನ್ನನ್ನು ಹುಡುಕಿ ಹಿಡಿಯುತ್ತೇನೆ. ಕಾಲು ನಡಿಗೆಯಲ್ಲಾದರೂ ಸರಿಯೆ ನಿನ್ನ ಬಳಿಗೆ ಬಂದೇ ಬರುತ್ತೇನೆ!"

ತನ್ನ ಬಡಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಇವಾನ್ ಆ ಮುದುಕನನ್ನು ಹುಡುಕಿಕೊಂಡು ಹೊರಟ. ತೋಳಿನಲ್ಲಾದ ಗಾಯ ಬೆಂಕಿಯಂತೆ ಸುಡುತ್ತಿತ್ತು. ಶಕ್ತಿಯೂ ಉಡುಗುತ್ತಿದ್ದಂತೆ ಕಂಡುಬಂದಿತು.

"ಈ ಹೆರೋದ್‌ನ ಬಾಣದ ತುದಿ ವಿಷ ಹಚ್ಚಿದುದಾಗಿರಬೇಕು!" ಎಂದವನು ತನ್ನಲ್ಲೇ ಹೇಳಿಕೊಂಡ.

ಅವನು ಇನ್ನಷ್ಟು ದೂರ ನಡೆದು ಹೋದ. ಬಲವೆಲ್ಲ ಕುಗ್ಗುತ್ತಿರುವಂತೆ ಅವನಿಗೆ ಭಾಸವಾಯಿತು.

“ಈಗ ನಾನೆಂದೂ ಹೆರೋದ್‌ನನ್ನು ಸೋಲಿಸಲಾರೆ” ಎಂದವನು ಹೇಳಿಕೊಂಡ. “ಅವನು ಕಿರುಬೆರಳಿನಿಂದ ನನ್ನ ಜೀವವನ್ನು ಹೊಸಕಿ ಹಾಕಬಲ್ಲ.”

ಹೀಗೆ ಚಿಂತಿಸುತ್ತ ಇವಾನ್ ತಲೆ ತಗ್ಗಿಸಿಕೊಂಡು ನಡೆಯುತ್ತ ಹೋದ. ಮಾರ್ಗ ಮಧ್ಯದಲ್ಲಿ ಅವನು ಒಬ್ಬ ಮುದುಕನನ್ನು ಸಂಧಿಸಿದ. ಅವನ ಗಡ್ಡ ಎಷ್ಟು ಉದ್ದವಾಗಿದ್ದಿತೆಂದರೆ ಅದು ನೆಲಕ್ಕೆ ತಾಕುತ್ತಿತ್ತು. ಅವರು ಪರಸ್ಪರ ಕುಶಲ ಪ್ರಶ್ನೆ ಮಾಡಿದರು. ಇವಾನ್ ಎತ್ತ ಹೊರಟಿದ್ದು ಎಂದು ತಿಳಿದ ಮುದುಕ ತಾನೂ ಅವನೊಟ್ಟಿಗೆ ಹೋಗುವುದಾಗಿ ಹೇಳಿದ.

“ನೀವು ಯಾರು?” ಇವಾನ್ ಕೇಳಿದ.

“ನಾನೊಬ್ಬ ನಾಯಿ ಬೇಟೆಗಾರ. ಎಲ್ಲ ನಾಯಿಗಳೂ ನನಗೆ ಹೆದರುತ್ತವೆ” ಮುದುಕ ಹೇಳಿದ.

ಇವಾನ್ ಅವನತ್ತ ಆಶ್ಚರ್ಯದಿಂದ ನೋಡಿದ. ಮೊದಲ ಮುದುಕ ನೀಡಿದ ಬುದ್ಧಿವಾದ ನೆನಪಿಗೆ ಬಂದು ಅವನು ಈ ಮುದುಕನನ್ನೂ ತನ್ನೊಂದಿಗೆ ಕರೆದೊಯ್ದ.

ಇಬ್ಬರೂ ಸ್ವಲ್ಪ ದೂರ ಹೋದರು. ಆಮೇಲೆ ಮತ್ತೊಬ್ಬ ಮುದುಕ ಇವರನ್ನು ಸೇರಿಕೊಂಡ. ಅವನ ಹೆಸರು “ಹಿಮಶೈತ್ಯ”ಅಂತ.

ಮೂವರೂ ಮುಂದೆ ಹೋದರು. ಅವರಿಗೆ ಇನ್ನೊಬ್ಬ ಮುದುಕ ಸಿಕ್ಕಿದ. ಇವರು ಎತ್ತ ಹೊರಟಿದ್ದರೆಂಬುದನ್ನು ತಿಳಿದ ಅವನೂ ಇವರೊಂದಿಗೆ ಹೋಗುವುದಾಗಿ ತಿಳಿಸಿದ.

“ನಾನು ಸಮುದ್ರವನ್ನು ತರಿದು ಹಾಕಬಲ್ಲೆ. ಅಲೆಗಳನ್ನೆಲ್ಲ ಒಂದುಗೂಡಿಸಿ ತೆನೆ ಕಟ್ಟಬಲ್ಲೆ.”

ಅವರು ನಾಲ್ವರೂ ಮುಂದೆ ಹೋದರು. ಅವರ ಜೊತೆಗೆ ಇನ್ನೂ ಐದು ಮಂದಿ ಮುದುಕರು ಸೇರಿಕೊಂಡರು. ಅವರಲ್ಲೊಬ್ಬ ಹೊಟ್ಟೆಬಾಕನಿದ್ದ. ಅವನಿಗೆ ಎಷ್ಟು ತಿಂದರೂ ಇನ್ನಷ್ಟು ಬೇಕು ಅನಿಸುತ್ತಿತ್ತು. ಇನ್ನೊಬ್ಬ ತುಂಬ ಕುಡಿಯುತ್ತಿದ್ದ. ಎಷ್ಟು ಕುಡಿದರೂ ಅವನ ಹೊಟ್ಟೆ ತುಂಬುತ್ತಲೇ ಇರಲಿಲ್ಲ. ಇನ್ನೊಬ್ಬ ಓಟಗಾರ. ಒಮ್ಮೆ ಓಡಲು ಹೊರಟರೆ ನಿಲ್ಲುತ್ತಲೇ ಇರಲಿಲ್ಲ. ಏಳನೆಯುವನ ಬಳಿ ಇಪ್ಪತ್ತು ವೆರ್ಸ್ಟ್ ಉದ್ದದ ಚಾಟಿ ಇದ್ದಿತು. ಎಂಟನೆಯವ ಇಪ್ಪತ್ತು ವೆರ್ಸ್ಟ್ ದೂರ ನೋಡಬಲ್ಲವನಿದ್ದ.

ಹೀಗೆ ಅವರೆಲ್ಲರೂ ಒಟ್ಟಿಗೇ ಹೋಗುತ್ತ ಹೆರೋದ್‌ನ ರಾಜ್ಯ ತಲುಪಿದರು. ಬೇಗನೆಯೇ ಅದರ ಗಡಿ ದಾಟಿ ಒಳ ಹೋದರು.

ಅವರನ್ನು ಕಂಡು ಡ್ರೇಗನ್ ರಾಜ ಹೆರೋದ್‌ಗೆ ತುಂಬ ಆಶ್ಚರ್ಯವಾಯಿತು. ಏಕೆಂದರೆ ಅದುವರೆವಿಗೂ ಹೊರಗಿನವರು ಯಾರೂ ಅವನ ರಾಜ್ಯದ ನೆಲ ತುಳಿಯುವುದು ಹಾಗಿರಲಿ

ಅದರ ಬಳಿ ಸುಳಿಯುವ ಸಾಹಸವನ್ನೂ ಮಾಡಿರಲಿಲ್ಲ. ಅವನು ತನ್ನ ಸೇವಕರನ್ನು ಕರೆದು ಇವಾನ್ ಹಾಗೂ ಅವನ ಮಿತ್ರರ ವಿರುದ್ಧ ತನ್ನ ಏಳು ಸಾವಿರ ಇತ್ತಲೆ ನಾಯಿಗಳನ್ನು ಛೂಬಿಡುವಂತೆ ಹೇಳಿದ. ಈ ನಾಯಿಗಳು ತಮ್ಮ ರೌದ್ರತೆಗೆ ಹೆಸರುವಾಸಿಯಾಗಿದ್ದವು. ಅವು ಕಾರ್ಮುಗಿಲಿನಂತೆ ಇವರ ಮೇಲೆ ಎರಗಿ ಬಂದವು. ರೈತನ ಮಗ ಇವಾನ್ ಹೇಳಿದ:

"ಏನು ಮಾಡುವುದು ? ಈ ನಾಯಿಗಳು ನಮ್ಮನ್ನು ಸಿಗಿದು ಹಾಕುವುದು ಖಂಡಿತ. ನಾನಂತೂ ತುಂಬ ನಿಶ್ಶಕ್ತನಾಗಿದ್ದೇನೆ. ನನಗೆ ಚಲಿಸುವುದೂ ಕಷ್ಟವಾಗಿದೆ."

"ಯಾಕೆ ಅಷ್ಟು ಯೋಚನೆ ಮಾಡುತ್ತೀಯ ? ನನಗೆ ಎಲ್ಲ ನಾಯಿಗಳೂ ಹೆದರುತ್ತವೆ ಅನ್ನು ವುದನ್ನು ನೀನು ಮರೆತುಬಿಟ್ಟೆಯಾ ?" ಎಂದ ನಾಯಿ ಬೇಟೆಗಾರ ಮುದುಕ.

ಅವನು ಮುಂದೆ ಹೋಗಿ ಎಲ್ಲ ನಾಯಿಗಳನ್ನೂ ಕೊಂದು ಹಾಕಿದ.

ಈಗ ಇವಾನ್ ಮತ್ತು ಅವನ ಮಿತ್ರರು ಮುಂದೆ ಹೋಗಲು ಸ್ವತಂತ್ರರಾಗಿದ್ದರು. ಅವರು ನೇರವಾಗಿ ಹೆರೋದ್‌ನ ಅರಮನೆಗೇ ಹೋದರು. ಅವರು ಕಬ್ಬಿಣದಿಂದ ಮಾಡಿದ್ದ, ಅತ್ಯಂತ ದೊಡ್ಡದಾಗಿದ್ದ ಗೇಟುಗಳನ್ನು ತೆರೆದು ಅಂಗಳಕ್ಕೆ ಬಂದರು. ಅವರ ಹಿಂದೆ ಗೇಟುಗಳು ಮುಚ್ಚಿ ಕೊಂಡವು. ಹೀಗೆ ಅವರು ಕಬ್ಬಿಣದ ಗೋಡೆಗಳ ಬೋನಿನಲ್ಲಿ ಸಿಕ್ಕಿಬಿದ್ದಂತಾದರು. ಬೋನಿಗೆ ಬೆಂಕಿ ಹಚ್ಚಿ ಅವರನ್ನು ಜೀವಂತವಾಗಿ ಸುಟ್ಟು ಹಾಕುವಂತೆ ಹೆರೋದ್ ತನ್ನ ಸೇವಕರಿಗೆ ಆಜ್ಞಾ ಪಿಸಿದ.

ಆದರೆ "ಹಿಮಶೈತ್ಯ" ಎಂದು ಕರೆದುಕೊಳ್ಳುತ್ತಿದ್ದ ಮುದುಕ ಗೋಡೆಗಳ ಮೇಲೆ ತಣ್ಣ ಗಿನ ಗಾಳಿ ಊದಿದ. ಸೇವಕರು ಹೊರಗಡೆ ಗೋಡೆಗಳ ಸುತ್ತ ಕಟ್ಟಿಗೆಗಳನ್ನು ರಾಶಿರಾಶಿ ಹಾಕಿ ಭಾರಿ ಬೆಂಕಿ ಹೊತ್ತಿಸಿದ್ದರೂ ಒಳಗಡೆ ಇವರು ಬಿಳಿಯ ಮಂಜುಮುಬ್ಬಿನಿಂದ ಆವೃತರಾಗಿದ್ದರು.

ಇದು ಹೀಗೆಂದು ಹೆರೋದ್ ಕನಸುಮನಸಿನಲ್ಲೂ ಎಣಿಸಿರಲಿಲ್ಲ. ಕಟ್ಟಿಗೆಯೆಲ್ಲ ಉರಿದು ಬೂದಿಯಾದ ಮೇಲೆ ಅವನು ತನ್ನ ಸೇವಕರಿಗೆ ಹೇಳಿದ:

"ಈಗ ಗೇಟುಗಳನ್ನು ತೆರೆದು ನನ್ನ ಶತ್ರು ರೈತನ ಮಗ ಇವಾನ್‌ನ ಬೂದಿಯನ್ನು ಹೊರಕ್ಕೆ ಗುಡಿಸಿ ಹಾಕಿ."

ಗೇಟುಗಳನ್ನು ತೆರೆದು ನೋಡುತ್ತಾರೆ – ಒಳಗೆ ಎಲ್ಲ ಜೀವಂತವಾಗಿಯೇ ಇದ್ದಾರೆ !

"ಏನು, ರಾಜ, ನಿನಗೆ ಸ್ವಲ್ಪವೂ ಕರುಣೆಯೇ ಇಲ್ಲವಲ್ಲ. ಎಷ್ಟು ತಣ್ಣಗಿನ ಗುಡಿಸಿಲಿನಲ್ಲಿ ನಮ್ಮನ್ನು ಕೂಡಿ ಹಾಕಿದ್ದೀಯ. ನಾವು ಸೆಡೆತುಕೊಂಡು ಸಾಯಲಿದ್ದೆವು !"

"ಎಲ್ಲ ಒಂದೇ. ನೀನಂತೂ ಈಗ ಸಾಯಲಿದ್ದೀಯ" ಎಂದ ಹೆರೋದ್. "ಈಗ ನಾನೇ ನೇರವಾಗಿ ನಿಮ್ಮೆಲ್ಲರ ತಲೆಗಳನ್ನೂ ತುಂಡರಿಸುತ್ತೇನೆ. ನಿನಗೆ ಚುಚ್ಚಿದ ಬಾಣದ ತುದಿಗೆ ನಾನು

ವಿಷ ಲೇಪಿಸಿದ್ದೆ. ಅದು ನಿನ್ನ ಶಕ್ತಿಯನ್ನೆಲ್ಲ ನಾಶಮಾಡಿ ಬಿಟ್ಟಿದೆ. ಈಗ ನೀನೇನೂ ಮಾಡಲಾರೆ." ಆಮೇಲೆ ಅವನು ತನ್ನೊಳಗೇ ಹೇಳಿಕೊಂಡ: "ಇವನನ್ನು ನಾನು ಯಾವಾಗಲೇ ಆಗಲಿ ಕೊಲ್ಲ ಬಹುದು. ಅದಕ್ಕೆ ಮುಂಚೆ ಸ್ವಲ್ಪ ವಿನೋದವನ್ನೇಕೆ ಮಾಡಬಾರದು?"

ಹಾಗೆಂದುಕೊಂಡು ಅವನು ಗಟ್ಟಿಯಾಗಿ ಹೇಳಿದ: "ನಾನು ಈಗ ನಿನಗೂ ನಿನ್ನ ಜನರಿಗೂ ಒಂದು ಕೆಲಸ ಕೊಡುತ್ತೇನೆ. ನೀನು ಅದನ್ನು ಮಾಡಿದರೆ ಸ್ವತಂತ್ರನಾಗುವೆ. ಇಲ್ಲದಿದ್ದರೆ ನಾನು ನಿನ್ನ ತಲೆಯನ್ನು ಕಡಿದು ಹಾಕುತ್ತೇನೆ. ಇದು ಆ ಕೆಲಸ: ನೀನು ಸಮುದ್ರವನ್ನೆಲ್ಲ ತರಿದು ಹಾಕಿ ಅದರ ಅಲೆಗಳನ್ನು ತೆನೆಗಳಾಗಿ ಒಂದುಗೂಡಿಸಬೇಕು. ಎಲ್ಲವನ್ನೂ ಒಂದೇ ರಾತ್ರಿಯಲ್ಲಿ ಮಾಡಿ ಮುಗಿಸಬೇಕು!"

ಹೀಗೆ ಹೇಳಿ ಹೆರೋದ್ ಮಲಗಲು ಹೋದ. ಕೂಡಲೇ ಸಮುದ್ರವನ್ನು ತರಿದು ಹಾಕಬಲ್ಲ ಮುದುಕ ಕಾರ್ಯನಿರತನಾದ. ಬೆಳಗಿನ ಹೊತ್ತಿಗೆ ಸಮುದ್ರವನ್ನೆಲ್ಲ ತರಿದು ಹಾಕಲಾಗಿತ್ತು, ಅಲೆಗಳನ್ನು ತೆನೆಗಳನ್ನಾಗಿ ಕಟ್ಟಲಾಗಿತ್ತು. ಹೆರೋದ್ ಬೆಳಿಗ್ಗೆ ಎದ್ದು ನೋಡುತ್ತಾನೆ – ಸಮುದ್ರ ಇದ್ದ ಕಡೆ ಒಂದು ಹನಿಯೂ ನೀರಿಲ್ಲ! ಅವನಿಗೆ ಭಾರಿ ಆಶ್ಚರ್ಯವಾಯಿತು. ಅವನು ಹೇಳಿದ:

"ಇಷ್ಟಕ್ಕೆ ಮುಗಿಯಿತು ಅಂದುಕೊಳ್ಳಬೇಡ. ಇನ್ನೊಂದು ಕೆಲಸ ಕೊಡುತ್ತೇನೆ. ನನ್ನ ಬಳಿ ಭಾರಿ ದನದ ಮಂದೆ ಇದೆ. ಅವುಗಳನ್ನೆಲ್ಲ ಕೊಂದು ಅವುಗಳ ಮಾಂಸವನ್ನು ಬೇಯಿಸುವಂತೆ ನನ್ನ ಸೇವಕರಿಗೆ ಹೇಳುತ್ತೇನೆ. ನೀವು ಆ ಮಾಂಸವನ್ನೆಲ್ಲ ತಿಂದು ಮುಗಿಸಬೇಕು. ಹಾಗೆ ಮಾಡಿ ದರೆ ನೀವು ಸ್ವತಂತ್ರ. ಇಲ್ಲದಿದ್ದರೆ ನಿಮ್ಮ ತಲೆಗಳು ಉರುಳುತ್ತವೆ!"

ಇದನ್ನು ಕೇಳಿ ರೈತನ ಮಗ ಇವಾನ್ ಯೋಚನೆ ಮಾಡುತ್ತ ನಿಂತ.

"ನಾನು ಇಷ್ಟು ನಿಶ್ಶಕ್ತನಾಗಿರದಿದ್ದರೆ ನಮ್ಮನ್ನು ನಗೆಗೀಡು ಮಾಡಿದರೆ ಏನಾಗುತ್ತೆ ಅನ್ನು ವುದನ್ನು ಅವನಿಗೆ ತೋರಿಸುತ್ತಿದ್ದೆ!"

ಡ್ರೇಗನ್ ರಾಜ ಹೆರೋದ್‌ನ ಬಳಿ ಅನೇಕ ಮಂದಿ ಸ್ತ್ರೀಯರೂ ಪುರುಷರೂ ಬಂದಿ ಗಳಾಗಿದ್ದರು. ಅವರಲ್ಲಿ ಒಬ್ಬ ಚೆಲುವಾದ ಯುವತಿ ಇದ್ದಳು. ಅವಳಿಗೆ ಗಿಡಗಳ ಹಾಗೂ ಮೂಲಿಕೆ ಗಳ ಗುಣಕಾರಕ ವಿಷಯಗಳೆಲ್ಲ ಚೆನ್ನಾಗಿ ತಿಳಿದಿದ್ದವು. ಅವಳು ಇವಾನ್‌ನನ್ನು ಗುಣಪಡಿಸುವ ಕಾರ್ಯ ಕೈಕೊಂಡಳು. ಆದರೆ ಅವಳು ಈ ಕಾರ್ಯ ಪೂರೈಸುವ ಮುನ್ನವೇ ರಾಜ ಹೆರೋದ್ ಸಾವಿರಾರು ಪೀಪಾಯಿಗಳಲ್ಲಿ ಮದ್ಯವನ್ನೂ ಭಾರಿ ಪಾತ್ರೆಗಳಲ್ಲಿ ಬೇಯಿಸಿದ ಮಾಂಸವನ್ನೂ ಅಂಗಳ ದಲ್ಲಿ ಆಗಲೇ ತಂದು ಇರಿಸಿದ.

ಇವಾನ್‌ನೂ ಅವನ ಮಿತ್ರರೂ ಮೇಜಿನ ಮುಂದೆ ಕುಳಿತು ತಿನ್ನ ತೊಡಗಿದರು. ಆದರೆ ಒಂದು ದನದ ಬೇಯಿಸಿದ ಮಾಂಸವೇ ಅವರಿಗೆಲ್ಲ ಸಾಕು ಬೇಕಾದಷ್ಟಾಯಿತು. ಹೆಚ್ಚಿಗೆ ತಿನ್ನಲು

ಅವರಿಗೆ ಆಗದಾಯಿತು. ಅವರು ದುಃಖಭರಿತರಾಗಿ ತಲೆ ತಗ್ಗಿಸಿ ಕುಳಿತರು.

"ನಾವು ಮೂರು ವರ್ಷ ಕೂತು ತಿಂದರೂ ಈ ಎಲ್ಲ ಮಾಂಸವನ್ನೂ ತಿಂದು ಮುಗಿಸಲಾರೆವು!" ಎಂದ ಇವಾನ್.

ಆಗ ಅವರಿಗೆ ಒಂದು ವಿಷಯ ಜ್ಞಾಪಕಕ್ಕೆ ಬಂದಿತು. ಅವರಲ್ಲಿ ಇಬ್ಬರು ಇನ್ನೂ ಅವರ ಜೊತೆ ಊಟಕ್ಕೆ ಕುಳಿತಿರಲಿಲ್ಲ. ಹೊಟ್ಟೆಬಾಕ ಹಾಗೂ ಎಷ್ಟು ಕುಡಿದರೂ ಬಾಯಾರಿಕೆ ಹಿಂಗದವ – ಇವರೇ ಆ ಇಬ್ಬರಾಗಿದ್ದರು. ಅವರಿಬ್ಬರೂ ಬಂದು ಕುಳಿತುದೇ ತಡ ಮಾಂಸದ ಪಾತ್ರೆಗಳೆಲ್ಲ ಖಾಲಿಯಾದವು, ಮದ್ಯದ ಪೀಪಾಯಿಗಳೆಲ್ಲ ಖಾಲಿಯಾದವು. ಆದರೂ ಅವರಿಗೆ ತೃಪ್ತಿಯಾಗಲಿಲ್ಲ. ಅವರು ಇನ್ನಷ್ಟು ತಿನ್ನಲು ಇನ್ನಷ್ಟು ಕುಡಿಯಲು ಸಿದ್ಧವಾಗಿದ್ದರು.

ಇವಾನ್‌ನೂ ಅವನ ಮಿತ್ರರೂ ಮಾಡಲಾಗದ ಕಾರ್ಯ ಯಾವುದೂ ಇರಲಿಲ್ಲ ಎಂದು ಹೆರೋದ್ ಕಂಡುಕೊಂಡ. ನೇರವಾಗಿ ಅವರನ್ನು ಕೊಲ್ಲುವುದೇ ಯುಕ್ತವೆಂದು ನಿರ್ಧರಿಸಿದ. ಆದರೂ ಇನ್ನಷ್ಟು ತಮಾಷಿ ಮಾಡೋಣವೆಂದು ಅವನಿಗೆ ಮನಸ್ಸಾಯಿತು.

"ನಾನು ನಿಮಗೆ ಇನ್ನೊಂದು ಕೆಲಸ ಕೊಡುತ್ತೇನೆ" ಅವನೆಂದ. "ನಾಳೆ ಬೆಳಿಗ್ಗೆ ನೀವು ಸಮುದ್ರ ತೀರಕ್ಕೆ ಹೋಗಿ ನನಗೆ ಸ್ವಲ್ಪ ನೀರು ತಂದು ಕೊಡಬೇಕು. ನನ್ನ ಶೀಘ್ರಗಾಮಿ ಮಗಳಿಗಿಂತ ಬೇಗ ತಂದು ಕೊಟ್ಟರೆ ನೀವು ಬದುಕಿಕೊಳ್ಳುತ್ತೀರ. ಇಲ್ಲದಿದ್ದರೆ ಸಾಯುತ್ತೀರ!"

ಇಡೀ ಕಾಲ ರೈತನ ಮಗ ಇವಾನ್ ತನ್ನ ಗಾಯ ಬೇಗ ವಾಸಿಯಾಗಬಾರದೆ, ತಾನು ಆಗ ಈ ನೀಚ ಹೆರೋದ್‌ನನ್ನು ಕೊಂದು ಹಾಕಲು ಸಾಧ್ಯವಾಗಬಹುದು ಎಂದೇ ಯೋಚಿಸುತ್ತಿದ್ದ. ಅವನ ಮನಸ್ಸಿನಲ್ಲಿದ್ದುದನ್ನು ತಿಳಿದು ಹೆರೋದ್‌ನ ಬಂದಿಯಾಗಿದ್ದ ಆ ಸುಂದರ ಯುವತಿ ಅವನಿಗೆ ಹೇಳಿದಳು:

"ಖಿನ್ನನಾಗಬೇಡ, ಇವಾನ್. ನೀನು ಬೇಗನೆಯೇ ಗುಣವಾಗುವೆ."

ರಾತ್ರಿ ಕಳೆಯಿತು. ಹಗಲಾಯಿತು. ಡ್ರೇಗನ್ ರಾಜ ಹೆರೋದ್‌ನ ಮಗಳು ಶೀಘ್ರಗಾಮಿ ತನ್ನ ಏಳು ಗಾವುದ ಉದ್ದದ ಬೂಟುಗಳನ್ನು ತೊಟ್ಟಳು. ಅಂತರ್ಧಾನ ಟೋಪಿ ತೊಟ್ಟಳು, ಒಂದೇ ಓಟದಲ್ಲಿ ಸಮುದ್ರ ತೀರಕ್ಕೆ ಹೋದಳು. ಇವಾನ್ ಮತ್ತವನ ಗೆಳೆಯರು ನೀರನ್ನು ತರಲು ಯಾರನ್ನು ಕಳುಹಿಸಲು ಸಾಧ್ಯ ಎಂದು ಯೋಚಿಸುತ್ತ ಕುಳಿತರು. ಆಗ ತಮ್ಮಲ್ಲೊಬ್ಬ ಓಟಗಾರನಿದ್ದನೆಂಬುದನ್ನು ಒಬ್ಬ ನೆನಪಿಸಿಕೊಂಡ. ಅವರು ಅವನನ್ನು ಕರೆದರು. ಅವನು ಒಮ್ಮೆಗೇ ಹಾರಿ ಕುಳಿತು ಸಮುದ್ರ ತೀರಕ್ಕೆ ಓಡಿದ. ಅವನು ಅಲ್ಲಿಗೆ ಹೋಗಿ ಒಂದು ಬಕೆಟ್ ನೀರು ತುಂಬಿಕೊಂಡು ಹೆರೋದ್‌ನ ಮಗಳು ಶೀಘ್ರಗಾಮಿ ಬರುವುದಕ್ಕೆ ತುಂಬ ಮುನ್ನವೇ ಹಿಂದಿರುಗಿ ಮನೆಗೆ ಓಡಿ ಬರುತ್ತಿದ್ದ. ಅದನ್ನು ಕಂಡ ಶೀಘ್ರಗಾಮಿ ಒಂದು ಹಂಚಿಕೆ ಹೂಡಿದಳು. ಅವಳು ಅವನ

ಪಾದಗಳ ಕೆಳಗೆ ಒಂದು ಹಿಡಿ ನಿದ್ರೆ ಬರಿಸುವ ಪುಡಿ ಚೆಲ್ಲಿದಳು. ಆ ಓಟಗಾರ ಕೂಡಲೇ ನೆಲದ ಮೇಲೆ ಬಿದ್ದು ಗಾಢ ನಿದ್ರೆಯಲ್ಲಿ ಮುಳುಗಿದ.

ಇವಾನ್‌ನೂ ಅವನ ಮಿತ್ರರೂ ಶೀಘ್ರಗಾಮಿಯೇ ಮೊದಲು ಓಡಿ ಬರುತ್ತಿದ್ದುದನ್ನು ಕಂಡು ಸ್ತಂಭೀಭೂತರಾದರು. ತಮ್ಮ ಓಟಗಾರ ಮುದುಕ ಎಲ್ಲೂ ಕಾಣಬರಲೇ ಇಲ್ಲ. ಆದರೆ ದೂರದೃಷ್ಟಿಯ ಮುದುಕ ದೂರಕ್ಕೆ ದೃಷ್ಟಿ ಹರಿಸಿ ಓಟಗಾರ ಮಾರ್ಗ ಮಧ್ಯದಲ್ಲೇ ಮಲಗಿದ್ದುದನ್ನು ಕಂಡುಕೊಂಡು ವಿಷಯ ತಿಳಿಸಿದ. ಆಗ ಉದ್ದ ಚಾಟಿಯುವ ತನ್ನ ಚಾಟಿಯಿಂದ ಓಟಗಾರ ಮುದುಕನಿಗೆ ಪೆಟ್ಟುಕೊಟ್ಟ. ಅವನು ತಕ್ಷಣ ಎದ್ದವನೇ ನೀರು ತುಂಬಿದ ಬಕೆಟ್ ಎತ್ತಿಕೊಂಡು ಶೀಘ್ರಗಾಮಿ ಬರುವುದಕ್ಕೆ ತುಂಬ ಮುನ್ನವೇ ಮನೆ ತಲುಪಿದ್ದ.

ಇವಾನ್ ಮತ್ತು ಅವನ ಮಿತ್ರರು ಮಾಡಲಾಗದೆ ಇರುವ ಕೆಲಸ ಯಾವುದೂ ಇಲ್ಲವೆಂಬುದನ್ನು ಕಂಡುಕೊಂಡ ಹೆರೋದ್ ತನ್ನ ಖಡ್ಗವನ್ನು ಒರೆಯಿಂದ ಹಿರಿದು ಇವಾನ್‌ನನ್ನೂ ಅವನ ಮಿತ್ರರನ್ನೂ ಕಬ್ಬಿಣದ ಕಣಕ್ಕೆ ಕರೆದೊಯ್ಯುವಂತೆ ತನ್ನ ಸೇವಕರಿಗೆ ಆಜ್ಞಾಪಿಸಿದ. ಆದರೆ ಅವರನ್ನು ಕರೆದೊಯ್ಯುತ್ತಿದ್ದಂತೆ ಇವಾನ್‌ನಿಗೆ ರೋಗೋಪಚಾರ ನೀಡುತ್ತಿದ್ದ ಆ ಸುಂದರ ಯುವತಿ ಇವಾನ್‌ನ ಗಾಯ ಮಾಯಿತೆಂದು ಅವನಿಗೆ ಪಿಸುಮಾತಿನಲ್ಲಿ ಹೇಳಿದಳು. ಡ್ರೇಗನ್ ರಾಜ ಹೆರೋದ್ ಅವನ ತಲೆ ಕತ್ತರಿಸಿ ಹಾಕಲು ಬಂದಾಗ ಇವಾನ್ ಅವನನ್ನು ಬಲವಾಗಿ ಹಿಡಿದು ಎತ್ತಿ ಅರಮನೆಯ ಗೋಪುರದ ಚೂಪಾದ ತುದಿಯ ಮೇಲಕ್ಕೆ ಎಸೆದ. ಚೂಪು ತುದಿ ಹೆರೋದ್‌ನ ಹೃದಯಕ್ಕೆ ನಾಟಿತು. ಅವನು ತಕ್ಷಣವೇ ಸತ್ತ.

ಅನಂತರ ಇವಾನ್ ತನ್ನಿಂದ ಹೆರೋದ್ ಕಸಿದುಕೊಂಡಿದ್ದ ಮಾಂತ್ರಿಕ ಕುದುರೆಯನ್ನು ತೆಗೆದುಕೊಂಡು ತನ್ನ ಸ್ವಂತ ರಾಜ್ಯದ ಕಡೆಗೆ ಹೊರಟ. ಅವನ ಗಾಯವನ್ನು ಗುಣಪಡಿಸಿ ಅವನ ಪ್ರಾಣ ರಕ್ಷಿಸಿದ್ದ ಸುಂದರ ಯುವತಿಯೂ ಅವನ ಜೊತೆ ಹೊರಟಳು. ತನಗೆ ಸಹಾಯ ಮಾಡಿದ್ದ ಆ ವೃದ್ಧರೂ ತನ್ನ ಜೊತೆ ಬರಬೇಕೆಂದು ಇವಾನ್ ಬಯಸಿದ್ದ. ಆದರೆ ಅವರು ಹೇಳಿದರು:

"ನಿನಗೆ ಅವಶ್ಯವಿದ್ದಾಗ ಸಹಾಯ ಮಾಡಲೆಂದು ಬಂದೆವು, ಇವಾನ್. ಈಗ ನಿನಗೆ ನಮ್ಮ ಸಹಾಯದ ಅವಶ್ಯವಿಲ್ಲ. ನಾವೀಗ ಇತರ ಸಜ್ಜನರಿಗೆ ಸಹಾಯವಾಗಲು ಹೋಗುತ್ತೇವೆ."

ಅವರು ಇವಾನ್‌ನನ್ನು ಆಲಂಗಿಸಿಕೊಂಡು ಅವನಿಗೆ ಒಳ್ಳೆಯದಾಗಲೆಂದು ಹರಸಿ ತಮ್ಮ ದಾರಿ ಹಿಡಿದು ಹೊರಟರು.

ಇವಾನ್‌ನು ಯುವತಿಯೊಂದಿಗೆ ತನ್ನ ಮನೆಗೆ ಹಿಂದಿರುಗಿದ. ಕೂಡಲೇ ರಾಜನ ಬಳಿಗೆ ಆ ಬೆಂಕಿ ತಿನ್ನುವ, ಉರಿ ಕುಡಿಯುವ ಮಾಂತ್ರಿಕ ಕುದುರೆಯನ್ನು ಕೊಂಡೊಯ್ದ. ಆದರೆ ಇವಾನ್‌ನ ಜೊತೆಗೆ ಹೋಗಿರೆಂದು ರಾಜ ಕಳುಹಿಸಿದ್ದ ಆ ಇಬ್ಬರು ಯೋಧರು ಇವಾನ್

ತನ್ನೊಂದಿಗೆ ಕರೆತಂದಿದ್ದ ಸುಂದರ ಯುವತಿಯನ್ನು ಕಂಡು ಇವಾನ್‌ನ ಹಿಂದೆಯೇ ಅರಮನೆಗೆ ಧಾವಿಸಿದರು. ಅಲ್ಲಿ ರಾಜನ ಮುಂದೆ ಬಿನ್ನವಿಸಿಕೊಂಡರು:

"ನೋಡಿ, ಮಹಾಪ್ರಭು! ಇವಾನ್ ಕೇವಲ ಒಬ್ಬ ರೈತನ ಮಗ. ಅವನು ಒಬ್ಬ ಸುಂದರ ಯುವತಿಯನ್ನು ಮದುವೆಯಾಗುವುದು ತರವೇ? ಕುಲೀನ ರಕ್ತದವರಷ್ಟೆ ಅಂಥ ಸುಂದರಿಯನ್ನು ಮದುವೆಯಾಗಲು ತಕ್ಕವರು."

ಈ ಮಾತನ್ನು ಕೇಳಿ ಇವಾನ್ ವಿವರ್ಣನಾದ.

"ನಾನು ಆ ಯುವತಿಯನ್ನು ಬಂಧನದಿಂದ ಬಿಡಿಸಿದ್ದೇನೆ. ನಾವು ಪರಸ್ಪರ ಪ್ರೇಮಿಸುತ್ತೇವೆ. ನಾನೆಂದಿಗೂ ಯಾರಿಗೂ ಅವಳನ್ನು ಬಿಟ್ಟು ಕೊಡುವುದಿಲ್ಲ!" ಅವನೆಂದ.

"ನಾನು ಹೇಳಿದರೆ ಬಿಟ್ಟು ಕೊಡಲೇ ಬೇಕು!" ರಾಜ ಹೇಳಿದ.

ಇವಾನ್‌ಗೆ ತುಂಬ ಕೋಪ ಬಂದಿತು. ಅವನು ಹೇಳಿದ:

"ಏನು, ರಾಜ, ನಾನು ಏನು ಕೇಳಿದರೂ ಬಳುವಳಿಯಾಗಿ ಕೊಡುವೆ ಅಂತ ಮಾತು ಕೊಟ್ಟಿದ್ದೆಯಲ್ಲ, ಅದು ಮರೆತು ಹೋಯಿತೆ? ಅಲ್ಲದೆ ನನಗೆ ಮಾತಿನಲ್ಲಾಗಲೀ ಕೃತಿಯಲ್ಲಾಗಲೀ ಹಾನಿ ಮಾಡುವುದಿಲ್ಲ ಅಂತಲೂ ಆಶ್ವಾಸನೆ ನೀಡಿದ್ದೆ. ನಾನು ಮೂರು ಡ್ರೇಗನ್‌ಗಳನ್ನೂ ಅವುಗಳ ಇಡೀ ಕುಟುಂಬವನ್ನೂ ಸಂಹರಿಸಿ ಬಂದಿದ್ದೇನೆ. ನೀನು ಈಗ ಕೊಟ್ಟ ಮಾತನ್ನು ಪಾಲಿಸದೆ ಹೋದರೆ ನಿನ್ನನ್ನೂ ನಿನಗೆ ಪ್ರೀತಿಪಾತ್ರರಾದವರೆಲ್ಲರನ್ನೂ ಈ ಬಡಿಗೆಯ ಒಂದೇ ಏಟಿನಿಂದ ಕೊಲ್ಲಬಲ್ಲೆ!"

ಅವನು ತನ್ನ ಬಡಿಗೆಯನ್ನು ಗಾಳಿಯಲ್ಲಿ ಬೀಸಿದ. ಅದರ ಪ್ರಭಾವಕ್ಕೆ ಸುತ್ತಮುತ್ತ ಇದ್ದ ಗಿಡಮರಗಳೆಲ್ಲ ನೆಲದ ವರೆಗೂ ಬಾಗಿದವು. ರಾಜನ ಅರಮನೆಯೂ ತೂರಾಡಿತು, ಕಂಪಿಸಿತು.

ರಾಜ ತುಂಬ ಹೆದರಿದ. ಹೆಚ್ಚಿಗೆ ಒಂದು ಮಾತನ್ನೂ ಆಡಲಿಲ್ಲ. ರೈತನ ಮಗ ಇವಾನ್ ತಾನು ಪ್ರೀತಿಸಿದ ಯುವತಿಯನ್ನು ಮದುವೆಯಾಗಿ ಸುಖ ಸಂತೋಷಗಳಿಂದ ಬಾಳ ತೊಡಗಿದ. ಅವನು ಅನಂತರ ರಾಜನ ಅಥವಾ ಕುಲೀನರ ಮಾತನ್ನು ಎಂದಿಗೂ ನಂಬಲಿಲ್ಲ.

ಲಿಂಡನ್ ಗಿಡ
ಹಾಗೂ ದುರಾಶೆಯ ಮುದುಕಿ

ಒಂದಾನೊಂದು ಕಾಲದಲ್ಲಿ ಒಬ್ಬ ಮುದುಕ ಒಬ್ಬಳು ಮುದುಕಿ ವಾಸಿಸುತ್ತಿದ್ದರು. ಅವರು ತುಂಬ ಬಡವರಾಗಿದ್ದರು. ಒಂದು ದಿನ ಮುದುಕಿ ಮುದುಕನಿಗೆ ಹೇಳಿದಳು:

"ಮುದುಕ, ಕಾಡಿಗೆ ಹೋಗಿ ಒಂದು ಲಿಂಡನ್ ಮರ ಕಡಿದುಕೊಂಡು ಬಾ. ಅದನ್ನು ಉರಿಸಿ ನಮ್ಮ ಮನೆಯನ್ನು ಸ್ವಲ್ಪ ಬೆಚ್ಚಗಾದರೂ ಇರಿಸಬಹುದು."

"ಆಗಲಿ" ಮುದುಕ ಹೇಳಿದ. ಕೊಡಲಿ ತೆಗೆದುಕೊಂಡು ಕಾಡಿಗೆ ಹೋದ.

ಕಾಡಿಗೆ ಬಂದವನೇ ಒಂದು ಒಳ್ಳೆಯ ಲಿಂಡನ್ ಮರವನ್ನು ಆಯ್ಕೆ ಮಾಡಿದ. ಅದನ್ನು ಕಡಿದು ಕೆಡವಲೆಂದು ಕೊಡಲಿಯನ್ನು ಮೇಲಕ್ಕೆತ್ತಿದ. ಕೂಡಲೇ ಅವನಿಗೆ ಕೇಳಿಸಿತು – ಲಿಂಡನ್ ಮರ ಮನುಷ್ಯರ ಧ್ವನಿಯಲ್ಲಿ ಮಾತನಾಡುತ್ತಿದೆ:

"ಓಯ್, ದಯವಿಟ್ಟು ನನ್ನನ್ನು ಕೆಡವಬೇಡ, ಮುದುಕಪ್ಪ. ನಿನಗೆ ಕಷ್ಟ ಬಂದಾಗ ನಾನು ಸಹಾಯ ಮಾಡ್ತೀನಿ!"

ಮುದುಕ ಹೆದರಿ ಕೊಡಲಿಯನ್ನು ಕೆಳಗೆ ಬೀಳಿಸಿದ. ಸ್ವಲ್ಪ ಹೊತ್ತು ಹಾಗೇ ನಿಂತ, ಯೋಚನೆ ಮಾಡಿದ. ಆಮೇಲೆ ಮನೆಗೆ ಹಿಂದಿರುಗಿದ.

ಮನೆಗೆ ಹಿಂದಿರುಗಿದವನೇ ತನಗಾದುದನ್ನೆಲ್ಲ ಮುದುಕಿಗೆ ತಿಳಿಸಿದ. ಮುದುಕಿ ಹೇಳಿದಳು:

"ನೀನು ಎಂಥ ಮೂರ್ಖ! ಈಗಿಂದೀಗಲೇ ಲಿಂಡನ್ ಮರದ ಬಳಿಗೆ ಹೋಗಿ ನಮಗೆ ಒಂದು ಕುದುರೆ, ಒಂದು ಗಾಡಿ ಕೊಡು ಅಂತ ಕೇಳು. ನಾವು ಇಷ್ಟು ದಿನದವರೆಗೂ ನಡೆದದ್ದು ಸಾಲದೆ?"

"ಆಗಲಿ. ನಿನಗೆ ಅದು ಇಷ್ಟವಾದರೆ ಹಾಗೇ ಮಾಡ್ತೀನಿ" ಎಂದು ಮುದುಕ ಹೇಳಿದ. ಟೋಪಿ ಹಾಕಿಕೊಂಡು ಕಾಡಿಗೆ ಹೊರಟ.

ಲಿಂಡನ್ ಮರದ ಬಳಿ ಬಂದು ಹೇಳಿದ:

"ಲಿಂಡನ್ ಮರ, ಲಿಂಡನ್ ಮರ ! ನನ್ನ ಮುದುಕಿ ಹೇಳ್ತಾಳೆ ನೀನು ನಮಗೆ ಒಂದು ಕುದುರೆ, ಒಂದು ಗಾಡಿ ಕೊಡು ಅಂತ."

"ಆಗಲಿ" ಎಂದಿತು ಲಿಂಡನ್ ಮರ. "ಮನೆಗೆ ಹೋಗು."

ಮುದುಕ ಮನೆಗೆ ಹಿಂದಿರುಗಿದ. ನೋಡ್ತಾನೆ – ಮನೆಯ ಮುಂದೆ ಒಂದು ಕುದುರೆ, ಒಂದು ಗಾಡಿ ನಿಂತಿವೆ.

"ನೋಡು, ಮುದುಕ" ಎಂದಳು ಮುದುಕಿ. "ಇದೀಗ ನಾವೂ ಜನ ಅಂತ ಆದಿವಿ. ಆದರೆ ನಮ್ಮ ಮನೆ ಎಲ್ಲ ಮುರುಕಲು. ಹೋಗು ಕಾಡಿಗೆ, ಹೋಗಿ ಲಿಂಡನ್ ಮರವನ್ನು ಕೇಳು, ನಮಗೆ ಒಂದು ಹೊಸ ಮನೆ ಕೊಡು, ಅಂತ. ಅದು ಕೊಟ್ಟರೂ ಕೊಡಬಹುದು."

ಮುದುಕ ಲಿಂಡನ್ ಮರದ ಬಳಿಗೆ ಹೋಗಿ ಹೊಸ ಮನೆ ಬೇಕು ಅಂತ ಕೇಳಿದ.

"ಆಗಲಿ, ಮನೆಗೆ ಹೋಗು" ಅಂದಿತು ಲಿಂಡನ್ ಮರ.

ಮುದುಕ ಮನೆಗೆ ಹಿಂದಿರುಗಿದ. ಅವನಿಗೆ ಗುರುತೇ ಸಿಗಲಿಲ್ಲ. ಹಳೆಯ ಮನೆಯ ಸ್ಥಳದಲ್ಲಿ ಒಂದು ಹೊಸತಾದ ಸುಂದರವಾದ ಮನೆ ನಿಂತಿದೆ. ಇಬ್ಬರೂ ಮಕ್ಕಳಷ್ಟು ಸಂತೋಷಪಟ್ಟರು.

"ಏನು, ಮುದುಕ, ನೀನು ಮತ್ತೆ ಆ ಮರದ ಬಳಿಗೆ ಹೋಗಿ ಒಂದಿಷ್ಟು ದನಕರು, ಕೋಳಿ ಕೊಡು ಅಂತ ಕೇಳಿದರೆ ಹೇಗೆ? ಅದು ಕೊಟ್ಟರೆ ಸಾಕು. ಆಮೇಲೆ ನಮಗೆ ಹೆಚ್ಚಿಗೆ ಏನೂ ಬೇಕಾಗೊಲ್ಲ" ಎಂದಳು ಮುದುಕಿ.

ಮುದುಕ ಲಿಂಡನ್ ಮರದ ಬಳಿಗೆ ಹೋಗಿ, ದನಕರು ಬೇಕು ಅಂತ ಕೇಳಿದ.

"ಆಗಲಿ. ಮನೆಗೆ ಹೋಗು" ಎಂದಿತು ಲಿಂಡನ್ ಮರ.

ಮುದುಕ ಹಿಂದಿರುಗಿದ. ಅವನಿಗೆ ಅಮಿತಾನಂದವಾಯಿತು – ಅಂಗಳದಲ್ಲೆಲ್ಲ ದನಕರುಗಳು, ಕೋಳಿಗಳು ನಿಂತಿವೆ.

"ಸರಿ. ಇನ್ನು ನಮಗೆ ಹೆಚ್ಚಿಗೆ ಏನೂ ಬೇಡ" ಎಂದ ಮುದುಕ.

"ಇಲ್ಲ, ಮುದುಕ. ಮತ್ತೆ ಹೋಗಿ, ಸ್ವಲ್ಪ ಹಣ ಬೇಕು ಅಂತ ಕೇಳು."

ಮುದುಕ ಲಿಂಡನ್ ಮರದ ಬಳಿಗೆ ಹೋಗಿ ಹಣ ಬೇಕು ಅಂತ ಕೇಳಿದ.

"ಆಗಲಿ, ಮನೆಗೆ ಹೋಗು" ಎಂದಿತು ಅದು.

ಮುದುಕ ಮನೆಗೆ ಹಿಂದಿರುಗಿದ. ನೋಡ್ತಾನೆ – ಮುದುಕಿ ಹಣ ಎಣಿಸ್ತಿದಾಳೆ, ಚೀಲಗಳಲ್ಲಿ ತುಂಬಿ ಮೇಜಿನ ಮೇಲೆ ಪೇರಿಸ್ತಿದಾಳೆ !

"ಈಗ ನೋಡಿದೆಯಾ, ಮುದುಕ, ನಾವೆಷ್ಟು ಶ್ರೀಮಂತರು !" ಎಂದಳು ಮುದುಕಿ. "ಆದರೆ

ಇದೂ ಸ್ವಲ್ಪವೇ. ನಮಗೆ ಇನ್ನೂ ಬೇಕು. ಎಲ್ಲ ಜನರೂ ನಮ್ಮನ್ನು ಕಂಡರೆ ಭಯಪಡೋ ಹಾಗೆ ಆಗಬೇಕು. ಆಗಷ್ಟೆ ನಾವು ನಿಜಕ್ಕೂ ಶ್ರೀಮಂತರಾಗ್ತೀವಿ! ಹೋಗು, ಮುದುಕ, ಲಿಂಡನ್ ಮರದ ಬಳಿಗೆ. ಹೋಗಿ, ನಮ್ಮನ್ನು ಕಂಡರೆ ಎಲ್ಲರೂ ಭಯಪಡೋ ಹಾಗೆ ಏನಾದರೂ ಮಾಡು, ಅಂತ ಕೇಳು."

ಮುದುಕ ಲಿಂಡನ್ ಮರದ ಬಳಿಗೆ ಹೋದ. ಹಾಗೆ ಮಾಡುವಂತೆ ಲಿಂಡನ್ ಮರವನ್ನು ಕೇಳಿಕೊಂಡ.

"ಹಾಗೇ ಆಗಲಿ. ಮನೆಗೆ ಹೋಗು" ಎಂದಿತು ಲಿಂಡನ್ ಮರ.

ಮುದುಕ ಮನೆಗೆ ಹಿಂದಿರುಗಿದ. ನೋಡ್ತಾನೆ – ಮನೆಯ ಸುತ್ತ ತುಂಬ ಮಂದಿ ಭಟರಿದ್ದಾರೆ, ಎಲ್ಲರೂ ಮನೆಯನ್ನು ಕಾಯುತ್ತಿದ್ದಾರೆ. ಆದರೆ ಮುದುಕಿಗೆ ಇನ್ನೂ ಸಾಲದು.

"ಏನು, ಮುದುಕ" ಎಂದವಳು ಹೇಳಿದಳು. "ಈಗ ಏನು ಆಗಬೇಕೂಂದರೆ, ಹಳ್ಳಿಯ ಸಮಸ್ತರೂ ನಮಗಾಗಿ ದುಡಿಯುವಂತೆ ಮಾಡಬೇಕು. ಅದು ಬಿಟ್ಟರೆ ನಮಗೆ ಬೇಕಾದುದು ಬೇರೇನೂ ಇಲ್ಲ. ಈಗ ನಮ್ಮ ಬಳಿ ಎಲ್ಲ ಇದೆ."

ಮುದುಕ ಲಿಂಡನ್ ಮರದ ಬಳಿಗೆ ಹೋಗಿ ತನ್ನ ಹೆಂಡತಿ ಹೇಳಿದಂತೆ ಮಾಡುವ ಹಾಗೆ ಕೇಳಿಕೊಂಡ. ಲಿಂಡನ್ ಮರ ತುಂಬ ಹೊತ್ತು ಮೌನದಿಂದಿತ್ತು. ಆಮೇಲೆ ಹೇಳಿತು: "ಸರಿ, ಮನೆಗೆ ಹೋಗು. ಇದೇ ಕೊನೆಯ ಬಾರಿಗೆ ನಾನು ನಿಮ್ಮ ಅಪೇಕ್ಷೆಯನ್ನು ಪೂರೈಸುವುದು."

ಮುದುಕ ಮನೆಗೆ ಹಿಂದಿರುಗುತ್ತಾನೆ. ನೋಡುತ್ತಾನೆ – ಅಲ್ಲಿ ಏನೂ ಇಲ್ಲ. ಅದೇ ಹಳೆಯ ಮನೆಯಷ್ಟೆ ಇದೆ. ಅದರಲ್ಲಿ ಅವನ ಮುದುಕಿ ಹೆಂಡತಿ ಕುಳಿತಿದ್ದಾಳೆ. ಎಲ್ಲ ಜನರೂ ತಮಗೆ ಸೇವೆ ಸಲ್ಲಿಸಬೇಕು ಅಂತ ಬಯಸಿದ ಆ ದುರಾಶೆಯ ಮುದುಕಿಗೆ ಲಿಂಡನ್ ಮರ ಹೀಗೆ ಶಿಕ್ಷೆ ನೀಡಿತ್ತು.

ಮುದುಕನ ಮಗಳು ಹಾಗೂ ಮುದುಕಿಯ ಮಗಳು

ಒಂದಾನೊಂದು ಕಾಲದಲ್ಲಿ ಒಬ್ಬ ಮುದುಕ. ಒಬ್ಬ ಮುದುಕಿ ವಾಸವಾಗಿದ್ದರು. ಅವರಿಗೊಬ್ಬ ಮಗಳಿದ್ದಳು. ಮುದುಕಿ ತುಂಬ ಕಾಲ ಜೀವಿಸಿದ್ದಳೋ ಅಲ್ಪ ಕಾಲ ಜೀವಿಸಿದ್ದಳೋ ತಿಳಿಯದು, ಅಂತೂ ಅವಳ ಸಾವಿನ ಸಮಯ ಸಮೀಪಿಸಿತು. ಸಾಯುವ ಮುನ್ನ ಅವಳು ಮುದುಕನಿಗೆ ಹೇಳಿದಳು:

"ಮುದುಕ, ನೀನು ಮತ್ತೆ ಮದುವೆಯಾಗಬೇಕೂಂತ ಅಂದುಕೊಂಡರೆ, ನೋಡು. ಪಕ್ಕದ ಮನೆಯಲ್ಲಿ ಮಗಳ ಜೊತೆ ವಾಸ ಮಾಡ್ತಿದಾಳಲ್ಲ ಆ ವಿಧವೆಯನ್ನೆಂದೂ ಮದುವೆಯಾಗಬೇಡ. ಅವಳು ನಿನಗೇನೋ ಒಳ್ಳೆಯ ಹೆಂಡತಿಯಾಗಬಹುದು, ಆದರೆ ನಮ್ಮ ಮಗಳಿಗೆ ಒಳ್ಳೆಯ ತಾಯಿಯಾಗೊಲ್ಲ !"

"ಆಗಲಿ. ನಾನು ಅವಳನ್ನೂ ಮದುವೆಯಾಗೊಲ್ಲ, ಯಾರನ್ನೂ ಮದುವೆಯಾಗೊಲ್ಲ" ಎಂದ ಮುದುಕ.

ಮುದುಕಿ ಸತ್ತಳು. ಮುದುಕ ಅವಳ ಶವಸಂಸ್ಕಾರ ನಡೆಸಿದ. ಒಬ್ಬನೇ ಮಗಳೊಂದಿಗೆ ವಾಸ ಮಾಡ ತೊಡಗಿದ. ಸ್ವಲ್ಪ ಕಾಲ ಕಳೆಯಿತು. ಒಂದು ದಿನ ಯಾವುದೋ ಕೆಲಸದ ಮೇಲೆ, ಮುದುಕಿ ಹೇಳಿದ್ದಳಲ್ಲ ಆ ವಿಧವೆಯ ಮನೆಗೆ ಹೋದ. ತಾನು ಯಾರನ್ನೂ ಮದುವೆಯಾಗುವುದಿಲ್ಲ ಅಂತ ಮುದುಕಿಗೆ ಹೇಳಿದ್ದ ಮಾತನ್ನು ಮರೆತ. ವಿಧವೆಯ ಮನೆಯಲ್ಲಿ ಕುಳಿತು ಅದೂ ಇದೂ ಮಾತನಾಡುತ್ತ ಕೊನೆಗೆ ಮದುವೆಯ ವಿಷಯವನ್ನು ಎತ್ತಿದ. ವಿಧವೆಗೆ ಪರಮಾನಂದವಾಯಿತು.

"ನಾನು ಬಹಳ ಕಾಲದಿಂದ ಇದಕ್ಕಾಗಿಯೇ ಕಾಯುತ್ತಿದ್ದೆ" ಎಂದಳು ಅವಳು.

ಅವನು ಅಂದಿದ್ದೇ ತಡ ಅವಳು ತನ್ನೆಲ್ಲ ವಸ್ತುಗಳನ್ನೂ ಗಂಟುಮೂಟೆ ಕಟ್ಟಿಕೊಂಡು ತನ್ನ ಮಗಳೊಂದಿಗೆ ಮುದುಕನ ಮನೆಗೆ ಅವನ ಜೊತೆಯಲ್ಲಿ ವಾಸಿಸಲು ಹೋದಳು.

ಅವರು ಒಟ್ಟಿಗೆ ವಾಸಿಸುತ್ತಾರೆ – ಮುದುಕನ ಮಗಳು ಹಾಗೂ ಮುದುಕಿಯ ಮಗಳು. ದುಷ್ಟ ಮುದುಕಿಗೆ ಮುದುಕನ ಮಗಳನ್ನು ಕಂಡರಾಗದು. ಮೂರು ಹೊತ್ತೂ ಆ ಬಡಪಾಯಿ ಹುಡುಗಿಯನ್ನು ಬಯ್ಯುತ್ತಿದ್ದಳು. ಅಲ್ಲದೆ ಮುದುಕನ ಮಗಳು ಮುದುಕಿಯ ಮಗಳು ಇಬ್ಬರೂ ತಮ್ಮತಮ್ಮಲ್ಲೇ ತುಂಬ ಆಗಾಗ್ಗೆ ಜಗಳ ಆಡುತ್ತಿದ್ದರು.

ಅವರು ಆಗಾಗ್ಗೆ ಹಳ್ಳಿ ಕೂಟಗಳಿಗೆ ಹೋಗುತ್ತಿದ್ದರು. ಆಗ ಮುದುಕನ ಮಗಳು ಹೆಚ್ಚಾಗಿ ರಾಟೆಯಿಂದ ನೂಲು ತೆಗೆಯುತ್ತ ಹೆಣೆಯುತ್ತ ಕುಳಿತಿರುತ್ತಿದ್ದಳು. ಮುದುಕಿಯ ಮಗಳಾದರೋ ಇಡೀ ರಾತ್ರಿ ಹಳ್ಳಿಯ ಹೈದರೊಂದಿಗೆ ಸರಸ ವಿನೋದಗಳಲ್ಲಿ ಕಳೆಯುತ್ತಿದ್ದಳು. ಸರಸದಲ್ಲಿ ಮೈ ಮರೆತು ಅವಳು ಹೆಣಿಗೆಯನ್ನೆಲ್ಲ ಗೋಜು ಮಾಡಿ ಬಿಟ್ಟು, ಎಳೆಗಳನ್ನು ಹರಿಯುತ್ತಿದ್ದಳು. ಮುಂಜಾನೆ ಮನೆಗೆ ಹಿಂದಿರುಗುತ್ತಿದ್ದರು. ಬೇಲಿಯವರೆಗೂ ಬರುತ್ತಿದ್ದರು. ಈಗ ಬೇಲಿ ದಾಟಬೇಕು. ಆಗ ಮುದುಕಿಯ ಮಗಳು ಹೇಳುತ್ತಿದ್ದಳು:

"ನಿನಗೆ ಈ ಹೆಣಿಗೆಯನ್ನೆಲ್ಲ ಹಿಡಿದುಕೊಂಡು ದಾಟುವುದು ಕಷ್ಟವಾಗುತ್ತೆ. ನನಗೆ ಕೊಡು. ನೀನು ದಾಟುವಾಗ ನಾನು ಹಿಡಿದುಕೊಂಡಿರ್ತೇನೆ."

"ಆಗಲಿ" ಅನ್ನುತ್ತಿದ್ದಳು ಮುದುಕನ ಮಗಳು. "ಹುಂ, ತಗೋ. ಹಿಡಿದುಕೊಂಡಿರು."

ಮುದುಕನ ಮಗಳು ಬೇಲಿ ದಾಟುವ ಸಮಯದಲ್ಲಿ ಮುದುಕಿಯ ಮಗಳು ಹೆಣಿಗೆಯನ್ನೆಲ್ಲ ತೆಗೆದುಕೊಂಡು ತಾಯಿಯ ಬಳಿಗೆ ಓಡುತ್ತಿದ್ದಳು, ಇಲ್ಲಸಲ್ಲದ ಸುಳ್ಳುಗಳನ್ನು ಪೋಣಿಸಿ ಕಥೆ ನೇಯ್ದು ಹೇಳುತ್ತಿದ್ದಳು – ಮಲಸೋದರಿ ಇಡೀ ರಾತ್ರಿ ಹುಡುಗರೊಂದಿಗೆ ಚಕ್ಕಂದವಾಡಿದಳು, ಎಳೆ ಹರಿದು ಬಿಟ್ಟಳು, ಗೋಜು ಮಾಡಿ ಬಿಟ್ಟಳು ಎಂದೆಲ್ಲ ಹೇಳುತ್ತಿದ್ದಳು.

"ನಾನಾದರೋ ನೆಟ್ಟಗೆ ಕೂತು ನೇಯ್ದೆ, ನೇರವಾಗಿ ಮನೆಗೆ ಬಂದೆ. ನೋಡು, ಅವಳು ಎಷ್ಟು ಸೋಮಾರಿ ! ಎಷ್ಟು ನಿರ್ಲಕ್ಷ್ಯ ಅವಳದು !"

ಮುದುಕನ ಮಗಳು ಮನೆಗೆ ಬಂದಾಗ ಮಲತಾಯಿ ಅವಳನ್ನು ಚೆನ್ನಾಗಿ ಬಯ್ಯುತ್ತಿದ್ದಳು, ಹೊಡೆಯುತ್ತಿದ್ದಳು. ಮುದುಕನಿಗೆ ದೂರುತ್ತಿದ್ದಳು:

"ನಿನ್ನ ಮಗಳಂಥವಳನ್ನು ಎಲ್ಲೂ ಕಂಡಿಲ್ಲ. ಇವಳಿಗೆ ಕೆಲಸ ಮಾಡಲೇ ಇಷ್ಟವಿಲ್ಲವಲ್ಲ ! ನೀನೂ ಅವಳಿಗೆ ಏನೂ ಹೇಳಿಕೊಡುವುದೂ ಇಲ್ಲ !"

ಮಲತಾಯಿ ಎಷ್ಟೇ ಬೈದರೂ ಹೊಡೆದರೂ, ಮಲಸೋದರಿ ಎಷ್ಟೇ ಕುಚೇಷ್ಟೆ ಮಾಡಿ

ದರೂ ಮುದುಕನ ಮಗಳಂತೂ ತನ್ನ ತಂದೆಗೆ ಒಂದಿಷ್ಟೂ ಚಾಡಿ ಹೇಳುತ್ತಿರಲಿಲ್ಲ. ಎಲ್ಲವನ್ನೂ ಸಹಿಸಿಕೊಂಡು ತನ್ನಷ್ಟಕ್ಕೆ ತಾನು ಮೌನದಿಂದ ಕೆಲಸ ಮಾಡುತ್ತಲೇ ಹೋಗುತ್ತಿದ್ದಳು. ಮುದುಕ ಅವಳನ್ನು ಪ್ರೀತಿಸುತ್ತಿದ್ದುದನ್ನು ಕಂಡು ಮಲತಾಯಿಯೂ ಮಲಸೋದರಿಯೂ ಇನ್ನಷ್ಟು ಕೆರಳುತ್ತಿದ್ದರು. ಅವಳನ್ನು ಈ ಜಗತ್ತಿನಲ್ಲೇ ಇಲ್ಲದಂತೆ ಮಾಡಲು ಏನು ಮಾಡಬೇಕು ಎಂದು ಯೋಚಿಸ ತೊಡಗಿದರು.

ಮುದುಕಿ ಮುದುಕನನ್ನು ಛೇಡಿಸ ತೊಡಗಿದಳು. ಪದೇಪದೇ ಹೇಳ ತೊಡಗಿದಳು:

"ನಿನ್ನ ಮಗಳು ಶುದ್ಧ ಸೋಮಾರಿ. ಅವಳಿಗೆ ಏನು ಮಾಡಲೂ ಇಷ್ಟವಿಲ್ಲ. ಸುಮ್ಮನೆ ಬೀದಿ ಅಲೀತಾಳೆ, ಮನೆಗೆ ಬರ್ತಾಳೆ, ತಿಂತಾಳೆ, ಮಲಗುತಾಳೆ. ಇಷ್ಟಾದರೂ ನೀನು ಅವಳಿಗೆ ದಂಡಿಸೊಲ್ಲ, ಒಂದು ಮಾತೂ ಹೇಳೊಲ್ಲ! ಅವಳನ್ನು ಯಾರಿಗಾದರೂ ಕೆಲಸದ ತೊತ್ತನ್ನಾಗಿ ಕೊಟ್ಟುಬಿಡೋದು ವಾಸಿ."

"ಆದರೆ ಯಾರು ತಗೋತಾರೆ?" ಮುದುಕ ಕೇಳಿದ.

"ಎಲ್ಲಿಗಾದರೂ ಸರಿ ಕರಕೊಂಡು ಹೋಗಿ ಬಿಟ್ಟು ಬಿಡು! ಸದ್ಯಕ್ಕೆ ಅವಳು ನಮ್ಮ ಮನೆಯಲ್ಲಿಲ್ಲದಿದ್ದರೆ ಸಾಕು!"

ಮುದುಕಿ ಮುದುಕನನ್ನು ತುಂಬ ಪೀಡಿಸ ತೊಡಗಿದಳು, ದಿನದಿನವೂ ಅದೇ ಹಾಡು – "ಮಗಳನ್ನು ಎಲ್ಲಾದರೂ ಕರೆದುಕೊಂಡು ಹೋಗಿ ಬಿಟ್ಟು ಬಿಡು!" ಮುದುಕ ಬೇಸತ್ತ. ಮಗಳ ಬಗೆಗೆ ಎಷ್ಟೇ ಪ್ರೀತಿ ಕರುಣೆ ಇದ್ದರೂ, ಅವನು ಏನೂ ಮಾಡದಾದ.

ಅವರು ಗಂಟುಮೂಟೆ ಕಟ್ಟಿಕೊಂಡು ಹೊರಟರು. ದಟ್ಟವಾದ ಕಾಡಿನ ಬಳಿ ಬಂದರು. ಮಗಳು ತಂದೆಗೆ ಹೇಳಿದಳು:

"ನೀನು ಮನೆಗೆ ಹೋಗಪ್ಪ. ನಾನು ಮುಂದೆ ಒಬ್ಬಳೇ ಹೋಗುತ್ತೇನೆ. ಎಲ್ಲಾದರೂ ಕೆಲಸ ಕಂಡುಕೊಳ್ಳುತ್ತೇನೆ."

"ಹಾಗೇ ಆಗಲಿ, ಮಗಳೇ!" ಎಂದ ಮುದುಕ.

ಮಗಳಿಗೆ ವಿದಾಯ ಹೇಳಿದ. ಅವನು ಒಂದು ದಾರಿ ಹಿಡಿದ, ಮಗಳು ಇನ್ನೊಂದು ದಾರಿ ಹಿಡಿದಳು.

ಹುಡುಗಿ ಆ ದಟ್ಟವಾದ ಕಾಡಿನಲ್ಲಿ ಹೊರಟಳು. ನೋಡುತ್ತಾಳೆ – ಅಲ್ಲೊಂದು ಸೇಬಿನ ಗಿಡ ಇದೆ. ಅದರ ಸುತ್ತಮುತ್ತ ಎಷ್ಟು ಕಳೆ ಬೆಳೆದಿದೆ ಎಂದರೆ ಸೇಬಿನ ಗಿಡವೇ ಕಾಣುತ್ತಿಲ್ಲ, ಅಷ್ಟು!

"ಪ್ರೀತಿಯ ಹುಡುಗಿ! ನನ್ನ ಸುತ್ತಮುತ್ತ ಬೆಳೆದಿರೋ ಈ ಕಳೆಯನ್ನೆಲ್ಲ ಕಿತ್ತು ಹಾಕಿ ನನ್ನನ್ನು

ಸ್ವಲ್ಪ ಶುದ್ಧಗೊಳಿಸುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯ ಮಾಡ್ತೀನಿ" ಎಂದು ಹೇಳಿತು ಸೇಬಿನ ಗಿಡ.

ಮುದುಕನ ಮಗಳು ಅಂಗಿಯ ತೋಳು ಹಿಂದಕ್ಕೆ ಸರಿಸಿಕೊಂಡು ಕೆಲಸದಲ್ಲಿ ತೊಡಗಿದಳು. ಕಳೆಯನ್ನೆಲ್ಲ ಕಿತ್ತಳು, ಹೆಚ್ಚಿನ ರೆಂಬೆಗಳನ್ನೆಲ್ಲ ಕತ್ತರಿಸಿ ಹಾಕಿ ಗಿಡವನ್ನು ಸವರಿದಳು, ಬುಡದ ಸುತ್ತ ಹೊಸ ಮಣ್ಣುಮರಳು ಹರಡಿದಳು. ಸೇಬಿನ ಗಿಡ ಅವಳಿಗೆ ತುಂಬ ವಂದನೆ ಸಲ್ಲಿಸಿತು. ಹುಡುಗಿ ಮುಂದುವರಿದಳು.

ಹೋಗುತ್ತಾಳೆ, ಹೋಗುತ್ತಾಳೆ, ಅವಳಿಗೆ ಬಾಯಾರುತ್ತೆ. ಒಂದು ಬಾವಿಯ ಬಳಿಗೆ ಹೋಗುತ್ತಾಳೆ. ಬಾವಿ ಹೇಳುತ್ತೆ:

"ಪ್ರೀತಿಯ ಹುಡುಗಿ! ನನ್ನನ್ನು ಸ್ವಲ್ಪ ಶುದ್ಧಗೊಳಿಸುತ್ತೀಯ? ಸ್ವಲ್ಪ ಅಂದಗೊಳಿಸುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯಮಾಡ್ತೀನಿ."

ಹುಡುಗಿ ಬಾವಿಯನ್ನು ಶುದ್ಧಗೊಳಿಸಿದಳು, ಸುತ್ತ ಬೆಣಚುಕಲ್ಲು ಮರಳು ಹರಡಿ ಅಂದಗೊಳಿಸಿದಳು. ಬಾವಿ ಅವಳಿಗೆ ತುಂಬ ವಂದನೆ ಸಲ್ಲಿಸಿತು. ಹುಡುಗಿ ಮುಂದೆ ಹೊರಟಳು.

ಒಂದು ನಾಯಿ ಅವಳ ಕಡೆಗೇ ಓಡಿ ಬಂದಿತು. ಅದು ತುಂಬ ಕೊಳಕಾಗಿತ್ತು. ಮೈಗೆಲ್ಲ ಹುಲ್ಲು ಮಣ್ಣು ಮೆತ್ತಿಕೊಂಡಿತ್ತು.

"ಪ್ರೀತಿಯ ಹುಡುಗಿ! ನನ್ನನ್ನು ಸ್ವಲ್ಪ ಶುಭ್ರಗೊಳಿಸುತ್ತೀಯ? ಪುನಃ ಚೆನ್ನಾಗಿ ಕಾಣುವಂತೆ ಮಾಡುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯ ಮಾಡ್ತೀನಿ" ಎಂದದು ಹೇಳಿತು.

ಹುಡುಗಿ ನಾಯಿಯ ಮೈಯನ್ನು ತಿಕ್ಕಿ ಶುಭ್ರಗೊಳಿಸಿದಳು, ಅದರ ಬಾಲಕ್ಕೆ ಅಂಟಿಕೊಂಡಿದ್ದ ಮುಳ್ಳುಗಳನ್ನು ಕಿತ್ತು ಹಾಕಿದಳು.

"ತುಂಬ ವಂದನೆಗಳು ನಿನಗೆ, ಪ್ರೀತಿಯ ಹುಡುಗಿ!" ಎಂದದು ಹೇಳಿತು.

"ಓಹ್, ಪರವಾಗಿಲ್ಲ. ಇದೇನು ಮಹಾ!" ಎಂದು ಹೇಳಿ ಹುಡುಗಿ ಮುಂದೆ ಹೊರಟಳು.

ನೋಡುತ್ತಾಳೆ – ಅಲ್ಲೊಂದು ಒಲೆ ಇದೆ. ಅದರ ಗಾರೆ ಎಲ್ಲ ಕಿತ್ತು ಬಂದಿದೆ. ಅದರ ಒಡಲೆಲ್ಲ ಸುಟ್ಟು ಕಪ್ಪಗಾಗಿದೆ. ಅದರ ಪಕ್ಕದಲ್ಲಿ ಜೇಡಿಮಣ್ಣಿನ ರಾಶಿ ಇದೆ. ಒಲೆ ಹೇಳಿತು:

"ಪ್ರೀತಿಯ ಹುಡುಗಿ! ನನ್ನನ್ನು ತಿಕ್ಕಿ ಸ್ವಲ್ಪ ಸ್ವಚ್ಛಗೊಳಿಸುತ್ತೀಯ? ಆ ಜೇಡಿಮಣ್ಣು ಮೆತ್ತಿ ಸ್ವಲ್ಪ ಅಂದಗೊಳಿಸುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯ ಮಾಡ್ತೀನಿ!"

ಸರಿ, ಹುಡುಗಿ ಒಲೆಯನ್ನು ತಿಕ್ಕಿ ಸ್ವಚ್ಛಗೊಳಿಸಿದಳು, ಕಪ್ಪು ಗಾರೆಯನ್ನು ಕಿತ್ತು ಹಾಕಿದಳು, ಅದರ ಜಾಗದಲ್ಲಿ ಹೊಸ ಜೇಡಿಮಣ್ಣು ಮೆತ್ತಿದಳು, ಸುತ್ತ ಹೂಗಳನ್ನೂ ಎಲೆಗಳನ್ನೂ ಇರಿಸಿ ಅಂದಗೊಳಿಸಿದಳು. ಒಲೆ ಹುಡುಗಿಗೆ ತುಂಬ ವಂದನೆ ಸಲ್ಲಿಸಿತು. ಹುಡುಗಿ ಮುಂದೆ ಹೊರಟಳು.

ಹೋಗುತ್ತಾಳೆ, ಹೋಗುತ್ತಾಳೆ, ಅವಳಿಗೊಬ್ಬ ಹೆಂಗಸು ಭೇಟಿಯಾಗುತ್ತಾಳೆ.

"ನಮಸ್ಕಾರ, ಹುಡುಗಿ!" ಅವಳು ಹೇಳುತ್ತಾಳೆ.

"ನಮಸ್ಕಾರ, ಕುಶಲವೇ?" ಹುಡುಗಿ ಕೇಳುತ್ತಾಳೆ.

"ಎಲ್ಲಿಗೆ ಹೊರಟೆ ನೀನು?"

"ಎಲ್ಲಾದರೂ ಕೆಲಸ ಸಿಕ್ಕುತ್ತ ಅಂತ ಹುಡುಕಿಕೊಂಡು ಹೊರಟಿದೀನಿ."

"ಹಾಗಾದರೆ ನನ್ನ ಬಳಿಯೇ ಕೆಲಸಕ್ಕೆ ಬಾ!"

"ಆಗಲಿ. ಸಂತೋಷವೇ. ಬರ್‍ತೀನಿ!" ಉತ್ತರಿಸುತ್ತಾಳೆ ಹುಡುಗಿ.

"ನಾನು ಹೇಗೆ ತೋರಿಸಿಕೊಡುತ್ತೇನೋ ಹಾಗೆ ಮಾಡಿದರೆ ನನ್ನ ಮನೆಯಲ್ಲಿ ಕೆಲಸವೇನೂ ನಿನಗೆ ಕಷ್ಟವಾಗದು. ಆಗುತ್ತ?"

"ಯಾಕೆ ಆಗೊಲ್ಲ? ಒಂದು ಸಾರಿ ತೋರಿಸಿಕೊಡಿ. ಆಮೇಲೆ ನಾನೇ ಎಲ್ಲ ತಿಳಿಕೋತೀನಿ."

ಅವರು ಗುಡಿಸಿಲಿಗೆ ಹೋದರು. ಹೆಂಗಸು ಹೇಳಿದಳು:

"ನೋಡು, ಹುಡುಗಿ, ಇಲ್ನೋಡು. ಇಲ್ಲಿ ಕೆಲವು ಮಡಕೆಗಳಿವೆ. ಬೆಳಿಗ್ಗೆ ಹಾಗೂ ಸಾಯಂಕಾಲ ನೀನು ಈ ಮಡಕೆಗಳಲ್ಲಿ ನೀರು ಕಾಯಿಸಬೇಕು. ಆ ನೀರನ್ನು ಒಂದು ಉದ್ದನೆಯ ಬಾನೆಗೆ ಹಾಕಬೇಕು. ಅದಕ್ಕೆ ಸ್ವಲ್ಪ ಹಿಟ್ಟು ಬೆರಸಿ ಕಣಕ ತಯಾರಿಸಬೇಕು. ಆದರೆ ನೋಡು, ಅದು ತುಂಬ ಬಿಸಿಯಾಗಿರಬಾರದು! ಆಮೇಲೆ ಬಾಗಿಲ ಬಳಿ ನಿಂತು ಮೂರು ಬಾರಿ ಗಟ್ಟಿಯಾಗಿ ಶಿಳ್ಳೆ ಹಾಕಬೇಕು. ಆಗ ನಿನ್ನ ಬಳಿಗೆ ನಾನಾ ರೀತಿಯ ಮೃಗಗಳು ಬರುತ್ತವೆ. ಅವಕ್ಕೆ ನೀನು ಚೆನ್ನಾಗಿ, ಹೊಟ್ಟೆ ತುಂಬ, ತಿನ್ನಿಸಬೇಕು. ಆಮೇಲೆ ಅವು ತಮಗೆ ಬೇಕಾದ ಸ್ಥಳಗಳಿಗೆ ಹೊರಟು ಹೋಗುತ್ತವೆ. ನೀನೇನೂ ಅವಕ್ಕೆ ಹೆದರಬೇಕಾಗಿಲ್ಲ. ಅವು ನಿನಗೆ ಏನೂ ಹಾನಿ ಮಾಡವು."

"ಹಾಗೇ ಆಗಲಿ. ನೀವು ಹೇಗೆ ಹೇಳಿದಿರೋ ಹಾಗೇ ಎಲ್ಲವನ್ನೂ ಮಾಡುತ್ತೇನೆ" ಎಂದಳು ಹುಡುಗಿ.

ಅವರು ಸಂಜೆ ಊಟ ಮಾಡಿದರು. ಹುಡುಗಿ ಒಲೆ ಹೊತ್ತಿಸಿದಳು, ನೀರು ಕಾಯಿಸಿದಳು, ಅದನ್ನು ಬಾನೆಗೆ ಸುರಿದಳು, ಅದಕ್ಕೆ ಹಿಟ್ಟು ಬೆರೆಸಿ ಮಿದ್ದು ಕಣಕ ಮಾಡಿದಳು. ಆಮೇಲೆ ಬಾಗಿಲ ಬಳಿ ಹೋಗಿ ನಿಂತು ಮೂರು ಬಾರಿ ಗಟ್ಟಿಯಾಗಿ ಶಿಳ್ಳೆ ಹಾಕಿದಳು – ಹೇಗೆ ಓಡಿ ಬಂದವು ತರಹೇವಾರಿ ಕಾಡು ಮೃಗಗಳು ಅವಳ ಬಳಿಗೆ! ಅವು ಹೊಟ್ಟೆ ತುಂಬ ತಿಂದವು, ಒಂದೊಂದೂ ಒಂದೊಂದು ದಿಕ್ಕಿನಲ್ಲಿ ಚೆದುರಿ ಹೋದವು.

ಹೀಗೆ ಮುದುಕನ ಮಗಳು ಇಡೀ ಒಂದು ವರ್ಷ ಅವಳ ಒಡತಿ ಹೇಗೆ ಹೇಳಿದಳೋ ಹಾಗೇ

ಎಲ್ಲವನ್ನೂ ಮಾಡುತ್ತ ಸೇವೆ ಸಲ್ಲಿಸಿದಳು. ಒಂದು ವರ್ಷ ಮುಗಿದ ಮೇಲೆ ಯಜಮಾನಿ ಮುದುಕನ ಮಗಳಿಗೆ ಹೇಳಿದಳು:

"ಇಲ್ಲಿ ಕೇಳಮ್ಮ, ಹುಡುಗಿ! ನೀನು ನನ್ನ ಮನೆಗೆ ಕೆಲಸಕ್ಕೆ ಬಂದು ಇವತ್ತಿಗೆ ಸರಿಯಾಗಿ ಒಂದು ವರ್ಷವಾಗುತ್ತೆ. ನಿನಗೆ ಇಷ್ಟವಾದರೆ ಇನ್ನಷ್ಟು ಕಾಲ ಇಲ್ಲೇ ಉಳಿ. ಬೇಡವಾದರೆ, ನಿನಗಿಷ್ಟ ಬಂದಂತೆ ಮಾಡು. ನೀನು ನನಗಾಗಿ ತುಂಬ ಚೆನ್ನಾಗಿ ಕೆಲಸ ಮಾಡಿದೆ. ಅದಕ್ಕಾಗಿ ನಿನಗೆ ತುಂಬ ವಂದನೆಗಳು."

ತನಗೆ ಊಟ ವಸತಿ ಕೊಟ್ಟುದಕ್ಕಾಗಿ ಮತ್ತು ಎಲ್ಲ ರೀತಿಯಲ್ಲೂ ಚೆನ್ನಾಗಿ ನೋಡಿಕೊಂಡುದಕ್ಕಾಗಿ ಹುಡುಗಿ ಆ ಹೆಂಗಸಿಗೆ ಕೃತಜ್ಞತೆ ಸೂಚಿಸಿ ಹೀಗೆ ಹೇಳಿದಳು:

"ನನಗೆ ಮನೆಗೆ ಹೋಗೋಣ ಅನ್ನಿಸಿದೆ. ಇದುವರೆವಿಗೂ ಇಟ್ಟುಕೊಂಡುದಕ್ಕಾಗಿ ನಿಮಗೆ ತುಂಬ ವಂದನೆಗಳು, ಒಡತಿ!"

ಹೆಂಗಸು ಅವಳಿಗೆ ಹೇಳಿದಳು:

"ಸರಿ, ಹಾಗೇ ಮಾಡು. ನಿನಗಿಷ್ಟವಾದ ಕುದುರೆಯನ್ನೂ ಗಾಡಿಯನ್ನೂ ಆಯ್ದುಕೋ."

ಆ ಹೆಂಗಸು ಒಂದು ದೊಡ್ಡ ಪೆಟ್ಟಿಗೆಯ ತುಂಬ ನಾನಾ ರೀತಿಯ ಸೊಗಸಾದ ವಸ್ತುಗಳನ್ನು ತುಂಬಿ ಹುಡುಗಿಗೆ ಕೊಟ್ಟಳು. ತಾನೇ ಕಾಡಿನ ಅಂಚಿನವರೆಗೂ ಹೋಗಿ ಅವಳನ್ನು ಬೀಳ್ಕೊಟ್ಟಳು. ಇಬ್ಬರೂ ಪರಸ್ಪರರಿಗೆ ವಿದಾಯ ಹೇಳಿದರು. ಒಡತಿ ತನ್ನ ಮನೆಗೆ ಹಿಂದಿರುಗಿದಳು. ಮುದುಕನ ಮಗಳು ತನ್ನ ಮನೆಯ ಕಡೆಗೆ ಹೊರಟಳು. ಎಲ್ಲ ಇಷ್ಟು ಚೆನ್ನಾಗಿ ಕೊನೆಗಂಡದ್ದು ಅವಳಿಗೆ ಅಮಿತಾನಂದ ತಂದಿತ್ತು.

ದಾರಿಯಲ್ಲಿ ಅವಳು ಹಿಂದೆ ತಾನು ಚೊಕ್ಕಟಗೊಳಿಸಿದ್ದ ಆ ಒಲೆಯ ಸಮೀಪ ಬಂದಳು. ಅದರ ತುಂಬ ಆಗಷ್ಟೆ ಬೇಯಿಸಿದ ಹಸನಾದ ಸೀರೊಟ್ಟಿಗಳಿದ್ದವು. ಅದು ಹೇಳಿತು:

"ಪ್ರೀತಿಯ ಹುಡುಗಿ! ನೀನು ನನ್ನನ್ನು ಶುಭ್ರಗೊಳಿಸಿ ಬಲಪಡಿಸಿದೆ. ಅದಕ್ಕಾಗಿ ತಗೋ, ಇಲ್ಲಿರುವ ಸೀರೊಟ್ಟಿಗಳೆಲ್ಲ ನಿನ್ನವೇ."

ಹುಡುಗಿ ವಂದನೆ ತಿಳಿಸಿ ಒಲೆಯ ಬಳಿ ಹೋದಳೋ ಇಲ್ಲವೋ ಸೀರೊಟ್ಟಿಗಳೆಲ್ಲ ತಾವೇ ಹಾರಿ ಬಂದು ಹುಡುಗಿಯ ಗಾಡಿಯೊಳಗೆ ತುಂಬಿಕೊಂಡವು. ಅವಳು ಒಲೆಗೆ ವಂದನೆ ಹೇಳಿ ಮುಂದೆ ಪ್ರಯಾಣ ಬೆಳೆಸಿದಳು.

ಬರುತ್ತಾಳೆ, ಬರುತ್ತಾಳೆ, ನೋಡುತ್ತಾಳೆ – ಅವಳು ಹಿಂದೆ ಸಹಾಯಮಾಡಿದ ಆ ನಾಯಿ ಅವಳ ಬಳಿಗೆ ಓಡಿ ಬರುತ್ತಿದೆ. ಅದು ತನ್ನ ಹಲ್ಲುಗಳ ಮಧ್ಯೆ ಒಂದು ಸರವನ್ನು ಕಚ್ಚಿ ಹಿಡಿದಿದೆ.

ಎಂತಹ ಸುಂದರವಾದ, ಥಳಥಳಿಸುವ, ಉದ್ದನೆಯ ಸರ! ನಾಯಿ ಗಾಡಿಯ ಬಳಿಗೆ ಓಡಿ ಬಂದು ಹೇಳುತ್ತೆ:

"ಇದು ನಿನಗೆ, ಪ್ರೀತಿಯ ಹುಡುಗಿ! ನೀನು ನನ್ನ ಮೈ ಉಜ್ಜಿ ಶುಭ್ರಗೊಳಿಸಿದುದಕ್ಕಾಗಿ, ನನ್ನ ಬಾಲಕ್ಕೆ ಅಂಟಿಕೊಂಡಿದ್ದ ಮುಳ್ಳುಗಳನ್ನು ಕಿತ್ತು ಹಾಕಿದುದಕ್ಕಾಗಿ!"

ಹುಡುಗಿ ಆ ಸರವನ್ನು ಸ್ವೀಕರಿಸಿ, ನಾಯಿಗೆ ವಂದನೆ ಸಲ್ಲಿಸಿ, ಸಂತಸದಿಂದ ಮುಂದಕ್ಕೆ ಪ್ರಯಾಣ ಮಾಡಿದಳು.

ಬರುತ್ತಾಳೆ, ಅವಳಿಗೆ ಬಾಯಾರಿಕೆಯಾಗುತ್ತೆ. ಸಹಿಸೋಕೇ ಆಗೊಲ್ಲ, ಅಷ್ಟು ಬಾಯಾರಿಕೆ! ತನ್ನಲ್ಲೇ ಹೇಳಿಕೊಳ್ಳುತ್ತಾಳೆ:

"ನಾನು ಹಿಂದೆ ಶುದ್ಧಗೊಳಿಸಿದೆನಲ್ಲ ಆ ಬಾವಿಗೆ ಹೋಗಿ ಒಂದಿಷ್ಟು ನೀರು ಕುಡಿಯೋಣ."

ಅವಳು ಬಾವಿಯ ಬಳಿಗೆ ಹೋದಳು. ಅದರಲ್ಲಿ ಅಂಚಿನವರೆಗೂ ಅತ್ಯಂತ ಸ್ವಚ್ಛವಾದ ನಿರ್ಮಲವಾದ ನೀರು ತುಂಬಿತ್ತು. ಬಾವಿಯ ಪಕ್ಕದಲ್ಲಿ ಒಂದು ಚಿನ್ನದ ಪೀಪಾಯಿ ಹಾಗೂ ಒಂದು ಚಿನ್ನದ ಸೌಟು ಇದ್ದವು.

ಬಾವಿ ಹೇಳಿತು:

"ಬಾ, ಪ್ರೀತಿಯ ಹುಡುಗಿ, ಬಾ! ನೀರು ಕುಡಿ. ಈ ಚಿನ್ನದ ಪೀಪಾಯಿಯೂ ಚಿನ್ನದ ಸೌಟೂ ನಿನ್ನವೇ, ತಗೋ!"

ಹುಡುಗಿ ಕುಡಿಯುತ್ತಾಳೆ. ಅದು ಕೇವಲ ನೀರಾಗಿರಲಿಲ್ಲ, ದ್ರಾಕ್ಷಾರಸವಾಗಿತ್ತು. ಅಂಥ ರುಚಿಕರವಾದ ದ್ರಾಕ್ಷಾರಸವನ್ನು ಅವಳು ಹಿಂದೆಂದೂ ಕುಡಿದಿರಲಿಲ್ಲ. ಅವಳು ಪೀಪಾಯಿಯ ತುಂಬ ಆ ದ್ರಾಕ್ಷಾರಸವನ್ನು ತುಂಬಿಕೊಂಡು, ಸೌಟನ್ನೂ ತೆಗೆದುಕೊಂಡು, ಬಾವಿಗೆ ವಂದನೆ ಸಲ್ಲಿಸಿ ಪ್ರಯಾಣ ಮುಂದುವರಿಸಿದಳು.

ಸ್ವಲ್ಪ ದೂರ ಹೋದ ಮೇಲೆ ನೋಡುತ್ತಾಳೆ – ಎಂಥ ಸುಂದರವಾದ ಸೇಬಿನ ಗಿಡ! ಅವಳು ಹಿಂದೆ ಸಹಾಯಮಾಡಿದ್ದಳಲ್ಲ ಅದೇ ಗಿಡ. ಈಗ ಎಷ್ಟು ಫಲಭರಿತವಾಗಿ ದಟ್ಟವಾಗಿ ಬೆಳೆದು ನಿಂತಿದೆ! ಅದರ ಸೌಂದರ್ಯ ವರ್ಣನಾತೀತ! ಅದರಲ್ಲಿನ ಸೇಬಿನ ಹಣ್ಣುಗಳೆಲ್ಲ ಚಿನ್ನ ಬೆಳ್ಳಿಯವು. ಗಿಡದ ಕೊಂಬೆಗಳು ಹಣ್ಣುಗಳ ಭಾರಕ್ಕೆ ಜಗ್ಗುತ್ತಿವೆ. ಅದು ಹೇಳಿತು:

"ಪ್ರೀತಿಯ ಹುಡುಗಿ! ಈ ಹಣ್ಣುಗಳೆಲ್ಲ ನಿನ್ನವು. ನೀನು ನನ್ನನ್ನು ಸ್ವಚ್ಛಗೊಳಿಸಿ ಸುಂದರಗೊಳಿಸಿದುದಕ್ಕಾಗಿ."

ಹುಡುಗಿ ಹೇಳಿದಳು: "ವಂದನೆಗಳು!"

ಗಿಡದ ಕೆಳಗೆ ಹೋದಳು. ಹಣ್ಣುಗಳೆಲ್ಲ ತುಪತುಪನೆ ತಾವೇ ಉದುರಿ ಹುಡುಗಿಯ ಗಾಡಿಯಲ್ಲಿ ತುಂಬಿಕೊಂಡವು.

ಎಲ್ಲವನ್ನೂ ತೆಗೆದುಕೊಂಡು ಮುದುಕನ ಮಗಳು ಮನೆಯ ಬಳಿ ಬಂದು ಕೂಗಿ ಹೇಳಿದಳು:

"ಅಪ್ಪ! ನೋಡು ಬಾ, ಅಪ್ಪ, ನಾನು ನಿನಗಾಗಿ ಏನೇನು ತಂದಿದೀನಿ ಅಂತ!"

ತಂದೆ ಗುಡಿಸಿಲಿನಿಂದ ಹೊರಬಂದು ನೋಡುತ್ತಾನೆ – ಮಗಳು ಬಂದಿದಾಳೆ. ಅವನಿಗೆ ತುಂಬ ಸಂತೋಷವಾಯಿತು. ಅವಳನ್ನು ಅಪ್ಪಿ ಮುದ್ದಾಡಿದ. ಕೇಳಿದ:

"ಎಲ್ಲಿಗೆ ಹೋಗಿದ್ದೆ, ಮಗಳೇ? ಏನು ಮಾಡಿದೆ?"

"ಕೆಲಸ ಮಾಡಿದೆ, ಅಪ್ಪ" ಅವಳೆಂದಳು. "ಇವೆಲ್ಲವನ್ನೂ ಒಳಕ್ಕೆ ಕೊಂಡೊಯ್ಯಿರಿ!"

ಓಹ್, ಅವೂ ಎಷ್ಟೊಂದು! ಎಂಥೆಂಥ ಸೊಗಸಾದ ವಸ್ತುಗಳು! ಇಡೀ ಗಾಡಿ ತುಂಬ! ಅಷ್ಟೇ ಸಾಲದೆನ್ನುವಂತೆ ಅತ್ಯಂತ ಹೆಚ್ಚಿನ ಬೆಲೆಯ ಸೊಗಸಾದ ಸರ ಬೇರೆ!

ಸಾಮಾನುಗಳನ್ನೆಲ್ಲ ಒಳಕ್ಕೆ ಒಯ್ಯ ತೊಡಗಿದರು. ಒಂದು ಚೆನ್ನಾಗಿದ್ದರೆ ಇನ್ನೊಂದು ಅದಕ್ಕಿಂತ ಚೆನ್ನ. ಮುದುಕನ ಮಗಳು ಇಷ್ಟೊಂದು ಸೊಗಸಾದ ವಸ್ತುಗಳನ್ನು ತಂದುದನ್ನು ಕಂಡು ಮುದುಕಿ ಮುದುಕನನ್ನು ಪೀಡಿಸ ತೊಡಗಿದಳು:

"ಹೋಗು, ನಿನ್ನ ಮಗಳನ್ನು ಎಲ್ಲಿಗೆ ಕರಕೊಂಡು ಹೋಗಿದ್ದೆಯೋ ಅಲ್ಲಿಗೇ ನನ್ನ ಮಗಳನ್ನೂ ಕರೆದುಕೊಂಡು ಹೋಗು!"

ಅವಳು ಅವನನ್ನು ಎಷ್ಟು ಬಲಾತ್ಕರಿಸಿದಳೆಂದರೆ ಅವನು ಹೇಳಿದ:

"ಸರಿ, ಹೇಳು ಅವಳಿಗೆ, ಪ್ರಯಾಣಕ್ಕೆ ಸಿದ್ಧವಾಗು ಅಂತ."

ವಿದಾಯ ಹೇಳಿ ಮುದುಕನೂ ಮುದುಕಿಯ ಮಗಳೂ ಹೊರಟರು. ಕಾಡಿನ ಬಳಿ ಬಂದರು. ಮುದುಕ ಹೇಳಿದ:

"ಇನ್ನು ಮುಂದೆ ನೀನೇ ಹೋಗು, ಮಗಳೇ! ನಾನು ಮನೆಗೆ ಹಿಂದಿರುಗುತ್ತೇನೆ."

"ಆಗಲಿ" ಅವಳೆಂದಳು.

ಅವರು ಅಗಲಿದರು. ಹುಡುಗಿ ಕಾಡಿನಲ್ಲಿ ಹೊರಟಳು. ಮುದುಕ ಮನೆಗೆ ಹಿಂದಿರುಗಿದ.

ಮುದುಕಿಯ ಮಗಳು ಕಾಡಿನಲ್ಲಿ ಹೋಗುತ್ತಾಳೆ, ನೋಡುತ್ತಾಳೆ – ಅಲ್ಲೊಂದು ಸೇಬಿನ ಗಿಡವಿದೆ. ಅದರ ಸುತ್ತಮುತ್ತ ಕಳೆ ಎಷ್ಟು ತುಂಬಿದೆಯೆಂದರೆ ಸೇಬಿನ ಗಿಡವೇ ಕಾಣುತ್ತಿಲ್ಲ, ಅಷ್ಟು!

"ಪ್ರೀತಿಯ ಹುಡುಗಿ! ನನ್ನ ಸುತ್ತಮುತ್ತ ಬೆಳೆದಿರೋ ಈ ಕಳೆಯನ್ನೆಲ್ಲ ಕಿತ್ತು ಹಾಕಿ ನನ್ನನ್ನು ಸ್ವಲ್ಪ ಶುದ್ಧಗೊಳಿಸುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯ ಮಾಡ್ತೀನಿ!" ಎಂದು ಹೇಳಿತು ಸೇಬಿನ ಗಿಡ.

ಹುಡುಗಿ ಉತ್ತರಿಸಿದಳು: “ನನ್ನ ಕೈಯನ್ನು ಕೊಳೆ ಮಾಡಿಕೊಳ್ಳುವುದೆ? ಅದೆಂದೂ ಆಗದು !” ಹಾಗೆಂದು ಅವಳು ಮುಂದೆ ಹೊರಟಳು.

ನೋಡುತ್ತಾಳೆ – ಅಲ್ಲೊಂದು ಬಾವಿ ಇದೆ. ಅದರಲ್ಲಿ ಎಷ್ಟೊಂದು ಕೊಳೆ ತುಂಬಿದೆ ಅಂದರೆ, ನೀರೇ ಕಾಣುತ್ತಿಲ್ಲ, ಅಷ್ಟು.

ಅದು ಹುಡುಗಿಗೆ ಹೇಳುತ್ತೆ: “ಪ್ರೀತಿಯ ಹುಡುಗಿ, ನನ್ನನ್ನು ಸ್ವಲ್ಪ ಶುದ್ಧಗೊಳಿಸುತ್ತೀಯ? ಸ್ವಲ್ಪ ಅಂದಗೊಳಿಸುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯ ಮಾಡ್ತೀನಿ !”

“ಹೋಗಿ, ಹೋಗಿ. ಯಾಕೆ ನೀವು ನನಗೆ ಇಷ್ಟು ಕಾಟ ಕೊಡ್ತೀರ? ಅದೆಂದೂ ಆಗದು ! ನಾನು ಮುಂದೆ ಹೋಗಬೇಕು !”

ಹೀಗೆ ಹೇಳಿ ಮುದುಕಿಯ ಮಗಳು ಮುಂದುವರಿದಳು.

ಹೋಗುತ್ತ ಹೋಗುತ್ತ ಅವಳು ಒಂದು ಒಲೆಯ ಬಳಿಗೆ ಬರುತ್ತಾಳೆ. ಆ ಒಲೆ ಅವಳಿಗೆ ಹೇಳುತ್ತೆ:

“ಪ್ರೀತಿಯ ಹುಡುಗಿ ! ನನ್ನನ್ನು ತಿಕ್ಕಿ ಸ್ವಲ್ಪ ಸ್ವಚ್ಛಗೊಳಿಸುತ್ತೀಯ? ನನ್ನನ್ನು ಅಂದಗೊಳಿಸುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯ ಮಾಡ್ತೀನಿ !”

“ನಾನೇನು ಅಂಥ ಮೂರ್ಖಳೇ ! ನಾನು ನಿನ್ನ ಗೋಡೆ ತಿಕ್ಕಬೇಕೆ? ಅದೆಂದೂ ಆಗದು !” ಹಾಗೆಂದು ಅವಳು ಮುಂದೆ ಹೊರಟಳು.

ನೋಡುತ್ತಾಳೆ – ಒಂದು ನಾಯಿ ಅವಳ ಕಡೆಗೇ ಓಡಿ ಬರುತ್ತಿದೆ. ಅದು ತುಂಬ ಕೊಳಕಾಗಿದೆ. ಮೈಗೆಲ್ಲ ಮಣ್ಣು ಮೆತ್ತಿಕೊಂಡಿದೆ.

“ಪ್ರೀತಿಯ ಹುಡುಗಿ ! ನನ್ನನ್ನು ಸ್ವಲ್ಪ ಶುಭ್ರಗೊಳಿಸುತ್ತೀಯ? ಸ್ವಲ್ಪ ಅಂದಗೊಳಿಸುತ್ತೀಯ? ನಾನೂ ನಿನಗೆ ಎಂದಾದರೂ ಸಹಾಯ ಮಾಡ್ತೀನಿ !”

ಹುಡುಗಿ ಮುಖ ಸೊಟ್ಟಗೆ ಮಾಡಿಕೊಂಡು ಹೇಳಿದಳು:

“ಅಬ್ಬಾ, ಎಂಥ ಮಾತು ನಿನ್ನದು ! ಇಷ್ಟು ಕೊಳಕಾಗಿದೀಯ, ಮತ್ತೆ ನಾನು ನಿನ್ನನ್ನು ಶುದ್ಧಗೊಳಿಸಬೇಕೆ? ಅದೆಲ್ಲ ಆಗದು !”

ಹಾಗೆಂದು ಅವಳು ಮುಂದೆ ಹೋದಳು.

ಅಲ್ಲಿ ಮುದುಕನ ಮಗಳನ್ನು ಸಂಧಿಸಿದ ಹೆಂಗಸೇ ಇವಳನ್ನೂ ಸಂಧಿಸಿದಳು.

“ನಮಸ್ಕಾರ, ಹುಡುಗಿ !” ಅವಳು ಹೇಳಿದಳು.

“ನಮಸ್ಕಾರ. ನಿಮಗೆ ಆರೋಗ್ಯವಿರಲಿ, ಚಿಕ್ಕಮ್ಮ !”

“ಎಲ್ಲಿಗೆ ಹೊರಟೆ?”

"ಎಲ್ಲಾದರೂ ಕೆಲಸ ಸಿಕ್ಕುತ್ತೆ ಅಂತ ಹುಡುಕಿಕೊಂಡು ಹೊರಟೆ, ಚಿಕ್ಕಮ್ಮ."

"ನನ್ನ ಬಳಿಗೇ ಬಾ!"

"ಆಗಲಿ, ಚಿಕ್ಕಮ್ಮ. ಎಂಥ ಕೆಲಸ ನಿಮ್ಮ ಬಳಿ?"

"ಅಷ್ಟೇನೂ ಕಷ್ಟವಿಲ್ಲ, ಮಗಳೇ! ನಾನು ಹೇಳಿದ ಹಾಗೆ ಮಾಡಿದರೆ ಎಲ್ಲ ಸುಲಭವಾಗಿ ಆಗುತ್ತೆ."

"ಯಾಕಾಗೊಲ್ಲ? ಒಂದು ಸಾರಿ ಹೇಳಿಕೊಡಿ, ಎರಡನೆ ಸಾರಿ ನಾನೇ ಮಾಡ್ತೀನಿ."

"ಕೆಲಸ ಹೀಗಿದೆ, ಹುಡುಗಿ" ಎಂದು ಹೇಳಿದಳು ಆ ಹೆಂಗಸು. "ಅಲ್ಲಿ ನೋಡು, ಮಡಕೆಗಳು ಕಾಣುತ್ತವ? ಬೆಳಿಗ್ಗೆ ಹಾಗೂ ಸಾಯಂಕಾಲ ನೀನು ಈ ಮಡಕೆಗಳಲ್ಲಿ ನೀರು ಕಾಯಿಸಬೇಕು. ಆ ನೀರನ್ನು ಒಂದು ಉದ್ದನೆಯ ಬಾನೆಗೆ ಹಾಕಬೇಕು. ಅದಕ್ಕೆ ಸ್ವಲ್ಪ ಹಿಟ್ಟು ಬೆರಸಿ ಕಣಕ ತಯಾರಿಸಬೇಕು. ಆದರೆ ನೋಡು, ಅದು ತುಂಬ ಬಿಸಿಯಾಗಿರಬಾರದು! ಆಮೇಲೆ ಬಾಗಿಲ ಬಳಿ ನಿಂತು ಮೂರು ಬಾರಿ ಗಟ್ಟಿಯಾಗಿ ಶಿಳ್ಳೆ ಹಾಕಬೇಕು. ಆಗ ನಿನ್ನ ಬಳಿಗೆ ನಾನಾ ರೀತಿಯ ಮೃಗಗಳು ಬರುತ್ತವೆ. ಅವಕ್ಕೆ ನೀನು ಚೆನ್ನಾಗಿ, ಹೊಟ್ಟೆ ತುಂಬ, ತಿನ್ನಿಸಬೇಕು. ಆಮೇಲೆ ಅವು ತಮಗೆ ಬೇಕಾದ ಸ್ಥಳಗಳಿಗೆ ಹೊರಟು ಹೋಗುತ್ತವೆ. ಅಂದ ಹಾಗೇ, ನೀನೇನೂ ಅವುಗಳಿಗೆ ಹೆದರಬೇಕಾದ್ದಿಲ್ಲ. ಅವು ನಿನಗೇನೂ ಹಾನಿ ಮಾಡವು. ಈ ಕೆಲಸ ಮಾಡಬಲ್ಲೆಯಾ?"

"ಮಾಡಬಲ್ಲೆ!" ಎಂದಳು ಮುದುಕಿಯ ಮಗಳು.

ಹೀಗೆ ಅವರು ಮಾತುಕತೆ ನಡೆಸಿ ಒಪ್ಪಂದಕ್ಕೆ ಬಂದರು. ಸಂಜೆಯಾಯಿತು. ಮುದುಕಿಯ ಮಗಳು ಒಲೆ ಹೊತ್ತಿಸಿದಳು, ನೀರು ತುಂಬಿದ ಮಡಕೆಗಳನ್ನು ಅದರ ಮೇಲಿರಿಸಿದಳು. ನೀರು ಕುದಿಯ ತೊಡಗಿದಾಗ ಅದನ್ನು ಒಂದು ದೊಡ್ಡ ಬಾನೆಗೆ ಸುರಿದಳು. ಆಮೇಲೆ ಅದಕ್ಕೆ ಅಲ್ಲಿದ್ದ ಇಡೀ ಹಿಟ್ಟನ್ನು ಹಾಕಿದಳು. ಅದು ಮೆತ್ತಗಿನ ಕಣಕವಾಗುವ ಬದಲು ಒಂದು ಗಟ್ಟಿ ಮುದ್ದೆಯಾಯಿತು. ಬಾಗಿಲ ಬಳಿ ನಿಂತು ಒಂದು, ಎರಡು, ಮೂರು ಬಾರಿ ಶಿಳ್ಳೆ ಹಾಕಿದಳು... ನಾನಾ ರೀತಿಯ ಮೃಗಗಳು ಬಂದು ನೆರೆಯ ತೊಡಗಿದವು. ಅವು ನಾ ಮುಂದು ತಾ ಮುಂದು ಅನ್ನುತ್ತ ಆಹಾರ ತಿನ್ನಲು ಬಾನೆಯ ಕಡೆಗೆ ಧಾವಿಸಿದವು. ಬಾಯಿ ಹಾಕಿದವು, ತಕ್ಷಣವೇ ನೆಲದ ಮೇಲೆ ಪಂಜಗಳನ್ನು ಮೇಲೆ ಮಾಡಿಕೊಂಡು ಬಿದ್ದವು. ಎಲ್ಲವೂ ಹಾಗೆಯೇ ಬಿದ್ದವು – ಸುಟ್ಟು ಸತ್ತು ಬಿದ್ದವು.

ಎಲ್ಲ ಪ್ರಾಣಿಗಳೂ ತಿಂದು ಮಲಗಿ ಮತ್ತೆ ಏಳದೇ ಇದ್ದುದನ್ನು ಕಂಡು ಮುದುಕಿಯ ಮಗಳು ಒಡತಿಯ ಬಳಿಗೆ ಹೋಗಿ ಹೇಳಿದಳು:

"ಏನು, ಒಡತಿ, ನಿಮ್ಮ ಪ್ರಾಣಿಗಳೆಲ್ಲ ವಿಚಿತ್ರವಾದವು. ಎಲ್ಲವೂ ತಿಂದವು, ಮಲಗಿದವು,

ಮತ್ತೆ ಏಳುತ್ತಲೇ ಇಲ್ಲವಲ್ಲ!"

"ಯಾಕೆ ಏಳುತ್ತಿಲ್ಲ?" ಎಂದು ಒಡತಿ ಕೂಗಿ ಹೇಳಿ ಬಾನೆಯ ಕಡೆಗೆ ಓಡಿದಳು.

ನೋಡುತ್ತಾಳೆ – ಎಲ್ಲವೂ ನಿರ್ಜೀವವಾಗಿ ಬಿದ್ದಿವೆ. ಅವಳು ಕೈ ಮೇಲೆ ತಲೆ ಹೊತ್ತುಕೊಂಡು ಅರಚಿದಳು:

"ಅಯ್ಯೋ, ದೇವರೇ! ಅಯ್ಯೋ, ಭಗವಂತ! ಏನಮ್ಮ, ನೀನು ಏನು ಮಾಡಿಬಿಟ್ಟೆ! ಅವನ್ನೆಲ್ಲ ಸಾಯಿಸಿ ಬಿಟ್ಟೆಯಲ್ಲ!"

ಅವಳು ಗೋಳಾಡಿದಳು, ಅತ್ತಳು. ಆದರೆ ಅದು ಏನೂ ಸಹಾಯವಾಗಲಿಲ್ಲ. ಸತ್ತ ಪ್ರಾಣಿಗಳನ್ನೆಲ್ಲ ಒಂದು ಪೆಟ್ಟಿಗೆಯಲ್ಲಿ ತುಂಬಿ ಬೀಗ ಹಾಕಿ ಇರಿಸಿದಳು.

ಮುದುಕಿಯ ಮಗಳ ಒಂದು ವರ್ಷದ ಅವಧಿ ಮುಗಿಯಿತು. ಒಡತಿ ಅವಳಿಗೆ ಒಂದು ಬಡಕಲು ಕುದುರೆಯನ್ನೂ ಒಂದು ಮುರುಕಲು ಬಂಡಿಯನ್ನೂ ಕೊಟ್ಟಳು. ಆ ಬಂಡಿಯೊಳಗೆ ಸತ್ತ ಪ್ರಾಣಿಗಳ ಪೆಟ್ಟಿಗೆಯನ್ನಿರಿಸಿ ಹುಡುಗಿಯನ್ನು ಕಾಡಿಗೆ ಕಳಿಸಿಕೊಟ್ಟಳು.

ಮುದುಕಿಯ ಮಗಳು ಹಿಂದೆ ತಾನು ಸಂಧಿಸಿದ್ದ ಆ ಒಲೆಯ ಬಳಿಗೆ ಬಂದಳು. ಅವಳಿಗೆ ತುಂಬ ಹಸಿವಾಯಿತು. ಒಲೆಯಲ್ಲಿ ತಟ್ಟೆಗಳಲ್ಲಿ ತುಂಬ ಸೀರೊಟ್ಟಿಗಳಿದ್ದವು – ಚೆನ್ನಾಗಿದ್ದವು, ಘಮಘಮಿಸುತ್ತಿದ್ದವು. ಮುದುಕಿಯ ಮಗಳು ಅವುಗಳಲ್ಲಿ ಒಂದನ್ನು ಎತ್ತಿಕೊಂಡಳೋ ಇಲ್ಲವೋ ಅದು ಪುಟನೆಗೆದುಕೊಂಡು ಮತ್ತೆ ಒಲೆಯೊಳಕ್ಕೇ ಹೋಗಿ ಬಿದ್ದಿತು. ಒಲೆಯ ಬಾಗಿಲು ಮುಚ್ಚಿಕೊಂಡಿತು. ಒಲೆ ಹೇಳಿತು:

"ಏಯ್, ಹುಡುಗಿ, ನೀನು ನನ್ನನ್ನು ಶುದ್ಧಗೊಳಿಸಲಿಲ್ಲ. ನಾನು ನಿನಗೇಕೆ ಸೀರೊಟ್ಟಿ ಕೊಡಬೇಕು?"

ಹುಡುಗಿ ಅತ್ತಳು, ಮುಂದೆ ಹೊರಟಳು.

ಬಾವಿಯ ಬಳಿಗೆ ಬಂದಳು. ತುಂಬ ಬಾಯಾರಿಕೆ ಆಯಿತು. ನೋಡುತ್ತಾಳೆ – ಬಾವಿಯ ತುಂಬ, ಅಂಚಿನವರೆಗೂ, ಸೀನೀರು ತುಂಬಿದೆ. ಅವಳು ಬೇಗ ಅದರ ಬಳಿಗೆ ಓಡಿದಳು. ಆದರೆ ಅವಳು ಹತ್ತಿರ ಹೋದಳೋ ಇಲ್ಲವೋ ಬಾವಿ ಇದ್ದಕ್ಕಿದ್ದಂತೆ ಒಣಗಿತು. ಸಣ್ಣ ಪಿಸುಧ್ವನಿಯಲ್ಲಿ ಹೇಳಿತು:

"ಏಯ್, ಹುಡುಗಿ! ನೀನು ನನ್ನನ್ನು ಶುದ್ಧಗೊಳಿಸಿ ಅಂದಗೊಳಿಸಲು ಇಷ್ಟಪಡಲಿಲ್ಲ. ಈಗ ನಿನಗೆ ನೀರೂ ಇಲ್ಲ!"

ಹುಡುಗಿ ಅತ್ತಳು, ಮುಂದೆ ಹೋದಳು.

ಅವಳು ಸೇಬಿನ ಗಿಡದ ಬಳಿಗೆ ಬಂದಳು. ಗಿಡದ ತುಂಬ ಹಣ್ಣುಗಳು ತೂಗಿ ಬಿದ್ದಿವೆ. ಎಲ್ಲವೂ

ಚೆನ್ನಾದ ಹಣ್ಣುಗಳು – ಬೆಳ್ಳಿಯ ಹಣ್ಣುಗಳು, ಚಿನ್ನದ ಹಣ್ಣುಗಳು ! ಅವನ್ನು ನೋಡಿ ಹುಡುಗಿ ಅಂದುಕೊಂಡಳು :

"ಈ ಕೆಲವು ಸೇಬಿನ ಹಣ್ಣುಗಳನ್ನು ಅಮ್ಮನಿಗೆ ಬಳುವಳಿಯಾಗಿ ಕೊಟ್ಟರೆ ಚೆನ್ನಾಗಿರುತ್ತೆ."

ಹಾಗೆಂದುಕೊಂಡು ಅವಳು ಸೇಬಿನ ಗಿಡದ ಬಳಿಗೆ ಹೋದಳಷ್ಟೆ ತಕ್ಷಣವೇ ಸೇಬಿನ ಗಿಡ ತನ್ನ ಕೊಂಬೆಗಳನ್ನೆಲ್ಲ ಮೇಲಕ್ಕೆ ಮಾಡಿಕೊಂಡು ಬಿಟ್ಟಿತು. ಅದು ಹೇಳಿತು:

"ಏಯ್, ಹುಡುಗಿ ! ನನ್ನ ಸುತ್ತ ಬೆಳೆದಿದ್ದ ಕಳೆ ತೆಗೆದು ಹಾಕಿ ಸ್ವಚ್ಛಗೊಳಿಸಲು ನೀನು ಇಷ್ಟ ಪಡಲಿಲ್ಲ. ಈಗ ಸೇಬಿನ ಹಣ್ಣುಗಳೂ ನಿನಗಿಲ್ಲ !"

ಮುದುಕಿಯ ಮಗಳು ಅತ್ತಳು. ಮುಂದಕ್ಕೆ ಹೋದಳು.

ನೋಡುತ್ತಾಳೆ – ನಾಯಿಯೊಂದು ತನ್ನ ಬಳಿಗೇ ಓಡಿ ಬರುತ್ತಿದೆ. ಅದರ ಕತ್ತಿನ ಸುತ್ತ ಒಂದು ಸೊಗಸಾದ ಸರವಿದೆ – ಎಷ್ಟು ಸುಂದರವಾಗಿದೆ, ಹೇಗೆ ಥಳಥಳ ಅಂತ ಹೊಳೆಯುತ್ತಿದೆ, ಎಷ್ಟು ಉದ್ದವಾಗಿದೆ ! ಹುಡುಗಿ ಗಾಡಿಯಿಂದ ಇಳಿದು ಆ ನಾಯಿಯನ್ನು ಹಿಡಿದುಕೊಳ್ಳಲು ಓಡಿದಳು. ಅದರ ಸರವನ್ನು ತೆಗೆದುಕೊಳ್ಳಲು ಅವಳು ಇಚ್ಛಿಸಿದ್ದಳು. ನಾಯಿ ಅವಳಿಗೆ ಹೇಳಿತು:

"ಏಯ್, ಹುಡುಗಿ, ನನ್ನ ಮೈ ಶುಭ್ರಗೊಳಿಸಿ ಅಂದಗೊಳಿಸಲು ನೀನು ಇಚ್ಛಿಸಲಿಲ್ಲ. ಈ ಸರವೂ ನಿನಗೆ ಸೇರೊಲ್ಲ !"

ಹಾಗೆಂದು ಅದು ಓಡಿ ಹೋಯಿತು. ಮುದುಕಿಯ ಮಗಳು ಅಳುತ್ತ ಮನೆಯ ಕಡೆಗೆ ನಡೆದಳು.

ಮನೆ ತಲುಪಿದಳು. ಹೊರಗಿನಿಂದಲೇ ಮುದುಕಿಯನ್ನೂ ಮುದುಕನನ್ನೂ ಕೂಗಿ ಕರೆದು ಹೇಳುತ್ತಾಳೆ:

"ಬನ್ನಿ, ನಾನು ತಂದಿರುವ ಸಂಪತ್ತನ್ನೆಲ್ಲ ನೋಡಿ, ಬನ್ನಿ !"

ಮುದುಕನೂ ಮುದುಕಿಯೂ ಗುಡಿಸಿಲಿನಿಂದ ಹೊರ ಬಂದರು. ನೋಡುತ್ತಾರೆ – ಮಗಳು ಬಂದಿದ್ದಾಳೆ ! ಅವರಿಗೆ ತುಂಬ ಸಂತೋಷವಾಯಿತು. ಅವಳನ್ನು ಗುಡಿಸಿಲಿನೊಳಕ್ಕೆ ಕರೆದುಕೊಂಡು ಹೋದರು. ಪೆಟ್ಟಿಗೆಯನ್ನೂ ಒಳಕ್ಕೆ ಹೊತ್ತು ತಂದರು. ಪೆಟ್ಟಿಗೆ ತೆರೆದು ನೋಡುತ್ತಾರೆ – ಅದರ ತುಂಬ ಸತ್ತ ಹಾವುಗಳು, ಹಲ್ಲಿಗಳು ಹಾಗೂ ಕಪ್ಪೆಗಳು ! ಮುದುಕಿ ಹೇಗೆ ಚೀರಿದಳು:

"ಮಗಳೇ, ಏನಿದು ನೀನು ತಂದಿರೋದು ?"

ಆಗ ಮುದುಕಿಯ ಮಗಳು ತನಗೆ ಆದ ಅನುಭವವನ್ನೆಲ್ಲ ವಿವರಿಸಿ ತಿಳಿಸಿದಳು. ಮುದುಕಿ ಹೇಳಿದಳು :

"ಹೋಗಲಿ ಬಿಡು. ನೀನು ಮನೆಯಲ್ಲೇ ಕುಳಿತಿರೋದು ಒಳ್ಳೆಯದು. ಏನು ಮಾಡೋಕೆ

ಆಗುತ್ತೆ – ನಿನ್ನ ಅದೃಷ್ಟವೇ ಅಂಥದು ! ಅವಳು ಎಷ್ಟೊಂದು ಸಂಪತ್ತು ತಂದಳು. ಆದರೆ ನೀನು ಈ ಸತ್ತ ಹಾವು ಕಪ್ಪೆಗಳನ್ನಷ್ಟೆ ತಂದಿದೀಯ ! ಸದ್ಯಕ್ಕೆ ನೀನು ಜೀವದಿಂದ ವಾಪಸಾದೆಯಲ್ಲ, ಅಷ್ಟೇ ಸಾಕು !"

ಹೀಗೆ ಅವರು ವಾಸಿಸುತ್ತಿದ್ದಾರೆ. ಬ್ರೆಡ್ಡು ಉಪ್ಪು ತಿಂದುಕೊಂಡು ಜೀವಿಸುತ್ತಿದ್ದಾರೆ. ನಾನೂ ಅಲ್ಲಿಗೆ ಹೋಗಿದ್ದೆ. ಜೇನು ಮದ್ಯ ಕುಡಿದೆ. ಅದು ಬಾಯಿಯ ಪಕ್ಕದಲ್ಲೇ ಹರಿದು ಹೋಯಿತು. ಬಾಯಿಯೊಳಕ್ಕೆ ಒಂದು ತೊಟ್ಟೂ ಬೀಳಲಿಲ್ಲ. ಮುದುಕನ ಮಗಳು ಮದುವೆಯಾದಳು. ಆದರೆ ಮುದುಕಿಯ ಮಗಳು ಇದುವರೆವಿಗೂ ಒಂಟಿಯಾಗಿಯೇ ಉಳಿದಿದ್ದಾಳೆ.

ಸಾಕು ತಂದೆ

ಒಮ್ಮೆ ಮೂವರು ಸೋದರರು ವಾಸಿಸುತ್ತಿದ್ದರು. ಅವರು ತಮ್ಮ ತಂದೆತಾಯಿಯರನ್ನು ಎಳೆಯ ವಯಸ್ಸಿನಲ್ಲೇ ಕಳೆದುಕೊಂಡಿದ್ದರು. ಮನೆ ಇಲ್ಲ, ಮಠ ಇಲ್ಲ, ಹೊಲ ಇಲ್ಲ, ಬೆಳೆ ಇಲ್ಲ. ಅನಾಥರಾಗಿದ್ದ ಅವರು ಒಂದು ದಿನ ಕೆಲಸ ಹುಡುಕಿಕೊಂಡು ಹೊರಟರು. ಹೋಗುತ್ತ ಯೋಚಿಸುತ್ತಾರೆ: "ಅಯ್ಯೋ, ಯಾರಾದರೂ ಒಳ್ಳೆಯ ಒಡೆಯ ಸಿಕ್ಕಿದರೆ ಎಷ್ಟು ಚೆನ್ನಾಗಿರುತ್ತೆ! ಕೆಲಸ ಮಾಡಿಕೊಂಡು ಹೊಟ್ಟೆ ಹೊರೆದುಕೊಳ್ಳಬಹುದು!" ನೋಡುತ್ತಾರೆ – ಒಬ್ಬ ಮುದುಕ ಬರುತ್ತಿದ್ದಾನೆ. ಹಣ್ಣುಹಣ್ಣು ಮುದುಕ. ಬಿಳಿ ಗಡ್ಡ ಮಂಡಿಯವರೆಗೂ ಇಳಿಬಿದ್ದಿದೆ. ಈ ಮುದುಕ ಮೂವರು ಸೋದರರನ್ನೂ ನಿಲ್ಲಿಸಿ ಕೇಳಿದ:

"ಎಲ್ಲಿಗೆ ಹೊರಟಿರಿ, ಮಕ್ಕಳೇ?"

ಅವರು ಉತ್ತರಿಸಿದರು:

"ಕೆಲಸ ಹುಡುಕಿಕೊಂಡು ಹೊರಟಿದ್ದೇವೆ."

"ಯಾಕೆ ನಿಮ್ಮ ಬಳಿ ಹೊಲ-ಕಾಣಿ ಏನೂ ಇಲ್ಲವೇ?"

"ಇಲ್ಲ" ಅವರೆಂದರು. "ಯಾರಾದರೂ ಒಳ್ಳೆಯ ಒಡೆಯ ಸಿಕ್ಕಿದರೆ ನಾವು ಅವನಿಗೆ ಶ್ರದ್ಧೆಯಿಂದ ಸೇವೆ ಸಲ್ಲಿಸುತ್ತೇವೆ, ಅವನನ್ನು ನಮ್ಮ ಸ್ವಂತ ತಂದೆಯೆಂದೇ ಕಂಡುಕೊಳ್ಳುತ್ತೇವೆ."

ಮುದುಕ ಸ್ವಲ್ಪ ಹೊತ್ತು ಯೋಚಿಸಿ ಹೇಳಿದ:

"ಹಾಗಾದರೆ, ನೀವು ನನಗೆ ಮಕ್ಕಳಾಗಿ, ನಾನು ನಿಮಗೆ ತಂದೆಯಾಗುತ್ತೇನೆ. ಆಗಬಹುದೆ? ನಾನು ನಿಮ್ಮನ್ನು ದೊಡ್ಡವರನ್ನಾಗಿ ಬೆಳೆಸುತ್ತೇನೆ. ಪ್ರಾಮಾಣಿಕ ಜೀವನ ನಡೆಸುವುದನ್ನು, ಅಂತ

ರಂಗ ಶುದ್ಧಿಯಿಂದ ಬಾಳಿ ಬದುಕುವುದನ್ನು ಹೇಳಿಕೊಡುತ್ತೇನೆ. ಆದರೆ ನೀವು ನಾನು ಹೇಳಿದ ಹಾಗೆ ಕೇಳಬೇಕಷ್ಟೆ."

ಸೋದರರು ಒಪ್ಪಿಕೊಂಡು ಆ ಮುದುಕನ ಹಿಂದೆ ಹೊರಟರು. ಅವರು ದಟ್ಟವಾದ ಕಾಡುಗಳನ್ನೂ ಅಗಲವಾದ ಹೊಲಗದ್ದೆಗಳನ್ನೂ ದಾಟಿಕೊಂಡು ಹೋದರು. ಹೋಗುತ್ತಾರೆ, ಹೋಗುತ್ತಾರೆ. ನೋಡುತ್ತಾರೆ – ಒಂದು ಮನೆ ಕಂಡುಬರುತ್ತೆ. ಎಂಥ ಅಚ್ಚುಕಟ್ಟಾದ, ಗಾಳಿ ಬೆಳಕಿನಿಂದ ಕೂಡಿದ ಮನೆ! ಸುತ್ತ ಸುಂದರವಾದ ತೋಟ. ತೋಟದ ತುಂಬ ಘಮಘಮಿಸುವ ಬಣ್ಣಬಣ್ಣದ ಹೂಗಳು. ಪಕ್ಕದಲ್ಲೇ ಚೆರ್ರಿ ಹಣ್ಣಿನ ತೋಟ. ಆ ತೋಟದಲ್ಲಿ ಒಬ್ಬ ಹುಡುಗಿ – ಆ ಹೂಗಳಂತೆಯೇ ಸುಂದರಳಾದ, ಉಲ್ಲಾಸಯುತಳಾದ, ಕಂಗೊಳಿಸುವ ಹುಡುಗಿ. ಅವಳನ್ನು ಕಂಡೊಡನೇ ಹಿರಿಯ ಸೋದರ ಹೇಳಿದ:

"ಈ ಹುಡುಗಿ ನನ್ನ ಹೆಂಡತಿಯಾದರೆ ಎಷ್ಟು ಚೆನ್ನ! ಸ್ವಂತ ಹೊಲ, ಹೆಚ್ಚಿನ ಸಂಖ್ಯೆಯಲ್ಲಿ ಸ್ವಂತ ದನಕರು ಇದ್ದರೆ ಎಷ್ಟು ಚೆನ್ನ!"

ಮುದುಕ ಅವನಿಗೆ ಹೇಳಿದ:

"ಅದಕ್ಕೇನಂತೆ. ಹೋಗಿ ಕೇಳೋಣ. ನಿನಗೆ ಹೆಂಡತಿ, ಹೊಲ, ದನಕರುಗಳು ಎಲ್ಲ ಸಿಕ್ಕಂತಾಗುತ್ತೆ. ಸಂತೋಷದಿಂದ ಜೀವಿಸಿಕೊಂಡಿರುವಂತೆ. ಆದರೆ ಜೀವನದಲ್ಲಿ ಋಜು ಮಾರ್ಗವನ್ನು ಮಾತ್ರ ಮರೆಯಬೇಡ."

ಅವರು ಹೋದರು. ಕೇಳಿದರು, ಒಪ್ಪಿಗೆಯಾಯಿತು. ಸಂಭ್ರಮದ ಮದುವೆಯೂ ನಡೆಯಿತು. ಹಿರಿಯ ಸೋದರ ಒಡೆಯನಾಗಿ ತನ್ನ ಎಳೆಯ ಹೆಂಡತಿಯೊಂದಿಗೆ ಆ ಮನೆಯಲ್ಲೇ ಉಳಿದ.

ಮುದುಕನೂ ಇನ್ನಿಬ್ಬರು ಸೋದರರೂ ಮುಂದೆ ನಡೆದರು. ದಟ್ಟವಾದ ಕಾಡುಗಳನ್ನೂ ಅಗಲವಾದ ಹೊಲಗಳನ್ನೂ ದಾಟಿಕೊಂಡು ಹೋದರು. ಹೋಗುತ್ತಾರೆ, ಹೋಗುತ್ತಾರೆ. ನೋಡುತ್ತಾರೆ – ಒಂದು ಮನೆ ಕಂಡುಬರುತ್ತೆ. ಚೆನ್ನಾದ, ಬೆಳಕಿನಿಂದ ಕೂಡಿದ ಮನೆ. ಮನೆಯ ಪಕ್ಕದಲ್ಲಿ ಒಂದು ಕೊಳ. ಕೊಳದ ಬಳಿಯೇ ಒಂದು ಮಿಲ್. ಮನೆಯ ಸಮೀಪದಲ್ಲಿ ಚೆಲುವೆಯಾದ ಒಬ್ಬ ಹುಡುಗಿ ಏನೋ ಕೆಲಸ ಮಾಡುತ್ತಿದ್ದಾಳೆ. ಮಧ್ಯಮ ಸೋದರ ಅವಳನ್ನು ಕಂಡೊಡನೆಯೇ ಹೇಳಿದ:

"ಈ ಹುಡುಗಿ ನನ್ನ ಹೆಂಡತಿಯಾದರೆ ಎಷ್ಟು ಚೆನ್ನ! ಜೊತೆಗೆ ನನಗೆ ಸ್ವಂತ ಮಿಲ್ಲು, ಕೊಳ ಇರುವುದೂ ಒಳ್ಳೆಯದು. ನಾನು ಮಿಲ್ಲಿನಲ್ಲಿ ಕುಳಿತು ಗೋಧಿ ಹಿಟ್ಟು ಮಾಡುತ್ತೇನೆ. ಸುಖದ ತೃಪ್ತಿಯ ಬಾಳು ನಡೆಸಬಹುದು!"

ಮುದುಕ ಹೇಳಿದ:

"ಅದಕ್ಕೇನಂತೆ, ಮಗು. ನಿನಗಿಷ್ಟವಾದರೆ ಅದು ಹಾಗೇ ಆಗುತ್ತೆ!"

ಅವರು ಮನೆಯ ಒಳ ಹೋದರು. ಹುಡುಗಿಯೊಂದಿಗೆ ಮಾತುಕತೆ ನಡೆಸಿದರು. ಸಂಭ್ರಮದ ಮದುವೆಯೂ ಆಯಿತು. ಈಗ ಮಧ್ಯಮ ಸೋದರ ತನ್ನ ಎಳೆಯ ಹೆಂಡತಿಯೊಂದಿಗೆ ಆ ಮನೆಯಲ್ಲೇ ಉಳಿದ. ಮುದುಕ ಅವನಿಗೆ ಹೇಳಿದ:

"ಸರಿ, ಮಗು, ಸುಖದಿಂದ ಬಾಳು. ಆದರೆ ಋಜು ಮಾರ್ಗವನ್ನು ಮಾತ್ರ ಮರೆಯಬೇಡ."

ಅವರು – ಕಿರಿಯ ಸೋದರ ಮತ್ತು ಅವನ ಸಾಕು ತಂದೆ – ಮುಂದೆ ನಡೆದರು. ಹೋದರು, ಹೋದರು, ನೋಡುತ್ತಾರೆ – ಒಂದು ಬಡ ಗುಡಿಸಿಲು ಕಾಣುತ್ತೆ. ಅದರಿಂದ ಒಬ್ಬ ಹುಡುಗಿ ಹೊರಬರುತ್ತಾಳೆ. ಉಷಸ್ಸಿನಂತೆ ಸೊಬಗಿನಿಂದ ಕೂಡಿದ್ದಾಳೆ. ಆದರೆ ಬಡವಿ. ಚಿಂದಿ ಬಟ್ಟೆ ತೊಟ್ಟಿದ್ದಾಳೆ. ಅವಳನ್ನು ಕಂಡ ಕಿರಿಯ ಸೋದರ ಹೇಳುತ್ತಾನೆ:

"ಈ ಹುಡುಗಿ ನನ್ನ ಹೆಂಡತಿಯಾದರೆ ಎಷ್ಟು ಚೆನ್ನ! ನಾವು ಒಟ್ಟಿಗೆ ದುಡಿದು ಏನು ಸಂಪಾದಿಸುತ್ತೇವೋ ಅದನ್ನು ನಮಗಿಂತ ಬಡವರಾದವರೊಂದಿಗೆ ಹಂಚಿಕೊಂಡು ಬಾಳಬಹುದು."

ಮುದುಕ ಹೇಳಿದ:

"ಅದು ನಿನ್ನಿಚ್ಛೆಯಾದರೆ, ಹಾಗೆಯೇ ಆಗಲಿ, ಮಗು! ಆದರೆ ಋಜು ಮಾರ್ಗವನ್ನು ಮಾತ್ರ ಮರೆಯಬೇಡ."

ಅವನು ಮೂರನೆಯ ಸೋದರನ ವಿವಾಹವನ್ನೂ ನೆರವೇರಿಸಿ ತನ್ನ ದಾರಿ ಹಿಡಿದು ಹೋದ.

ಹೀಗೆ ಮೂವರು ಸೋದರರರೂ ಜೀವನ ನಡೆಸಿಕೊಂಡು ಹೋದರು. ಹಿರಿಯ ಮಗ ತುಂಬ ಶ್ರೀಮಂತನಾದ, ತನಗಾಗಿ ಹೊಸ ಮನೆ ಕಟ್ಟಿಕೊಂಡ. ಬೇಕಾದಷ್ಟು ಚಿನ್ನ ಗುಡ್ಡೆ ಹಾಕಿದ. ಅವನ ಯೋಚನೆಯೆಲ್ಲ ಇನ್ನಷ್ಟು ಮತ್ತಷ್ಟು ಚಿನ್ನ ಗುಡ್ಡೆ ಹಾಕಬೇಕು ಅನ್ನುವುದಷ್ಟೆ ಆಗಿತ್ತು. ಬಡವರಿಗೆ ಸಹಾಯ ಮಾಡುವ ಮಾತಿನ ಸೊಲ್ಲೇ ಇಲ್ಲ. ಅವರನ್ನು ಕಂಡರೆ ಬೈದು ಅಟ್ಟುತ್ತಿದ್ದ!

ಮಧ್ಯಮ ಸೋದರನೂ ಏಳಿಗೆ ಪಡೆದ. ತನ್ನ ಮಿಲ್ಲಿನಲ್ಲಿ ಕೆಲಸ ಮಾಡಲು ಅನೇಕ ಕೆಲಸಗಾರರನ್ನು ನೇಮಿಸಿಕೊಂಡ. ತಾನೇ ಸ್ವಲ್ಪವೂ ಕೆಲಸ ಮಾಡುತ್ತಿರಲಿಲ್ಲ. ಸದಾ ಮಲಗಿರುವುದು, ತಿನ್ನುವುದು, ಕುಡಿಯುವುದು, ಆಜ್ಞಾಪಿಸುವುದು ಅಷ್ಟೆ.

ಕಿರಿಯ ಸೋದರ ಸರಳ ಸಾಮಾನ್ಯ ಬಾಳುವೆ ನಡೆಸುತ್ತಿದ್ದ. ಮನೆಯಲ್ಲಿ ಏನಾದರೂ ಇದ್ದರೆ ಇತರರೊಂದಿಗೆ ಹಂಚಿಕೊಂಡು ಅನುಭೋಗಿಸುವುದು. ಏನೂ ಇಲ್ಲದಿದ್ದರೆ, ಪರವಾಗಿಲ್ಲ ಬೇಡ ಅಂದುಕೊಳ್ಳುತ್ತಿದ್ದ. ಸ್ವಲ್ಪವೂ ಅಸೂಯೆ ಪಡುತ್ತಿರಲಿಲ್ಲ.

ಬಿಳಿ ಗಡ್ಡದ ಮುದುಕ, ಆ ಸಾಕು ತಂದೆ, ಜಗತ್ತಿನಲ್ಲಿ ಸುತ್ತುತ್ತ ಹೋದ. ಕೊನೆಗೊಮ್ಮ

ತನ್ನ ಸಾಕು ಮಕ್ಕಳು ಹೇಗೆ ಬಾಳುತ್ತಿದ್ದಾರೆ. ಋಜು ಮಾರ್ಗ ಬಿಟ್ಟು ಹೋಗಿಲ್ಲ ತಾನೆ, ಎಂದು ನೋಡ ಬಯಸಿದ. ಅವನು ಮುದುಕ ಭಿಕ್ಷುಕನ ಹಾಗೆ ವೇಷ ಮರೆಸಿಕೊಂಡು ಚಿಂದಿ ಬಟ್ಟೆ ಉಟ್ಟು ಹಿರಿಯ ಮಗನ ಬಳಿಗೆ ಹೋದ. ಅಂಗಳಕ್ಕೆ ಹೋಗಿ ತಗ್ಗಿದ ನಡುಗುವ ಧ್ವನಿಯಲ್ಲಿ ಕೇಳಿದ:

"ಈ ಮುದುಕ ಭಿಕ್ಷುಕನಿಗೆ ಒಂದಿಷ್ಟು ಏನಾದರೂ ಭಿಕ್ಷೆ ಕೊಡುವಿರಾ?"

ಮಗ ಹೇಳಿದ:

"ನೀನೇನೂ ಅಷ್ಟು ಮುದುಕನಲ್ಲ. ಭಿಕ್ಷೆ ಬೇಡೋಕೆ ನಾಚಿಕೆಯಾಗೊಲ್ವೆ! ಬೇಕಾದರೆ ಕೆಲಸ ಮಾಡು! ನಾನೇ ಈಚೆಗಷ್ಟೇ ನನ್ನ ಕಾಲ ಮೇಲೆ ನಿಲ್ಲುವಂತಾಗಿದ್ದೇನೆ. ಹೋಗು, ಹೋಗಾಚೆ!"

ಆದರೆ ಅವನ ಬಳಿ ಸಂಪತ್ತು ಪೆಟ್ಟಿಗೆಗಳಲ್ಲಿ ತುಂಬಿ ತುಳುಕುತ್ತಿತ್ತು. ಹೊಸ ಮನೆಗಳನ್ನು ಕಟ್ಟಿಕೊಂಡಿದ್ದ, ಉಗ್ರಾಣದ ತುಂಬ ಸಾಮಾನುಗಳಿದ್ದವು, ತಿನ್ನಲು ಬೇಕಾದಷ್ಟು ಆಹಾರವಿತ್ತು. ದುಡ್ಡಂತೂ ಎಣಿಸಲಾಗದಷ್ಟಿತ್ತು. ಆದರೂ ಬಡವರಿಗೆ ಕಿಂಚಿತ್ತೂ ಸಹಾಯ ಮಾಡುತ್ತಿರಲಿಲ್ಲ!

ಮುದುಕ ಅವನಿಂದ ಹೊರಟ. ಒಂದು ವೆರ್ಸ್ಟ್ ದೂರ ಹೋಗಿ ತನ್ನ ಸಾಕು ಮಗನ ಮನೆ ಹಾಗೂ ಹೊಲದ ಕಡೆಗೊಮ್ಮೆ ತಿರುಗಿ ನೋಡಿದ. ಕೂಡಲೇ ಅವೆಲ್ಲ ಸುಟ್ಟು ಬೂದಿಯಾದವು!

ಮುದುಕ ಮಧ್ಯಮ ಸೋದರನ ಬಳಿಗೆ ಹೋದ. ಹೋಗಿ ನೋಡುತ್ತಾನೆ – ಅವನ ಮನೆ, ಮಿಲ್ಲು, ಕೊಳ, ಹೊಲ, ಎಲ್ಲ ಚೆನ್ನಾಗಿವೆ. ಅವನು ಮಿಲ್‌ನಲ್ಲಿ ಕುಳಿತಿದ್ದ. ಮುದುಕ ಬಾಗಿ ನಡುಗುವ ಧ್ವನಿಯಲ್ಲಿ ಕೇಳಿದ:

"ಪುಣ್ಯವಂತರೇ, ನನಗೆ ಒಂದು ಹಿಡಿ ಹಿಟ್ಟು ಕೊಡ್ತೀರ? ನಾನೊಬ್ಬ ಮುದಿ ಭಿಕ್ಷುಕ. ತಿನ್ನಲು ಏನೂ ಇಲ್ಲ."

"ನನಗೇ ಸಾಕಷ್ಟಿಲ್ಲ, ನಿನಗೆಂಥದು ಕೊಡಲಿ! ನಿನ್ನಂಥ ಅಲೆಮಾರಿಗಳು ಎಷ್ಟು ಮಂದಿಯೋ! ನಿಮಗೆಲ್ಲ ಕೊಟ್ಟು ಪೂರೈಸುವುದು ಎಲ್ಲಿ ಸಾಧ್ಯ?" ಅವನೆಂದ.

ಮುದುಕ ಅವನಿಂದಲೂ ಹೊರಟ. ಸ್ವಲ್ಪ ದೂರ ಹೋಗಿ ಹಿಂದಿರುಗಿ ನೋಡಿದ – ಅಲ್ಲಿದ್ದ ಮನೆ ಮಿಲ್ಲು ಎಲ್ಲ ಹೇಗೆ ಹೊತ್ತಿಕೊಂಡು ಉರಿದು ಬೂದಿಯಾದವು!

ಇನ್ನೂ ಭಿಕ್ಷುಕನ ವೇಷದಲ್ಲಿದ್ದಂತೆಯೇ ಮುದುಕ ಕಿರಿಯ ಮಗನ ಬಳಿಗೆ ಹೋದ. ಅಲ್ಲಿ ಕಿರಿಯ ಮಗ ಬಡತನದಲ್ಲಿ ಪುಟ್ಟ ಮನೆಯಲ್ಲಿ ವಾಸಿಸುತ್ತಿದ್ದ. ಚಿಕ್ಕದಾಗಿದ್ದರೂ ಮನೆ ಚೊಕ್ಕಟವಾಗಿತ್ತು.

"ಸಜ್ಜನರೇ, ಈ ಮುದುಕ ಭಿಕ್ಷುಕನಿಗೆ ಒಂದು ತುಂಡು ರೊಟ್ಟಿ ಕೊಡುತ್ತೀರ?"

ಕಿರಿಯ ಸೋದರ ಅವನಿಗೆ ಹೇಳುತ್ತಾನೆ:

"ಮನೆಯ ಒಳಗೆ ಹೋಗು, ಅಜ್ಜ. ಅಲ್ಲಿ ನಿನಗೆ ಊಟ ಹಾಕ್ತಾರೆ. ದಾರಿಗೆ ಬುತ್ತಿಯನ್ನೂ

ಕಟ್ಟಿ ಕೊಡ್ತಾರೆ."

ಮುದುಕ ಮನೆಯ ಒಳಗೆ ಹೋದ. ಮನೆಯೊಡತಿ ಅವನನ್ನು ನೋಡಿದಳು – ಅವನ ಬಟ್ಟೆ ಎಲ್ಲ ಎಷ್ಟು ಚಿಂದಿಚಿಂದಿಯಾಗಿದೆ! ತಕ್ಷಣವೇ ಒಳಗಿನಿಂದ ಹೊಸ ಬಟ್ಟೆ ತಂದುಕೊಟ್ಟಳು. ಅವನು ಅದನ್ನು ಉಟ್ಟುಕೊಂಡ. ಅವನು ಈ ಬಟ್ಟೆ ತೊಡುತ್ತಿದ್ದಾಗ ಅವನ ಎದೆಯ ಮೇಲೆ ಒಂದು ದೊಡ್ಡ ಗಾಯ ಇದ್ದುದನ್ನು ಮನೆಯೊಡತಿಯೂ ಅವಳ ಪತಿಯೂ ಕಂಡರು. ಕೂಡಲೇ ಮುದುಕನನ್ನು ಕುರ್ಚಿಯ ಮೇಲೆ ಕೂರಿಸಿದರು. ಅವನಿಗೆ ಹೊಟ್ಟೆ ತುಂಬ ತಿನ್ನಲು ಕುಡಿಯಲು ಕೊಟ್ಟರು. ಅನಂತರ ಅವನನ್ನು ಕೇಳಿದರು:

"ಹೇಳು, ಅಜ್ಜ, ನಿನ್ನ ಎದೆಯ ಮೇಲೆ ತುಂಬ ದೊಡ್ಡ ಗಾಯ ಇರುವಂತಿದೆಯಲ್ಲ. ಅದು ಹೇಗಾಯಿತು?"

"ಹೌದು, ನನ್ನ ಎದೆಯ ಮೇಲೆ ದೊಡ್ಡ ಗಾಯ ಇದೆ. ಅದರಿಂದ ನಾನು ಬೇಗನೆಯೇ ಸಾಯಲಿದ್ದೇನೆ. ಇನ್ನು ನನಗೆ ಜೀವದಿಂದಿರಲು ಒಂದೇ ಒಂದು ದಿನ ಅಷ್ಟೆ ಉಳಿದಿರೋದು."

"ಅಯ್ಯೋ, ಪಾಪ!" ಎಂದಳು ಹೆಂಡತಿ. "ಈ ಗಾಯಕ್ಕೆ ಯಾವ ಮದ್ದೂ ಇಲ್ಲವೇ?"

"ಇದೆ" ಎಂದ ಅವನು. "ಒಂದು ಮದ್ದು ಇದೆ. ಅದನ್ನು ಯಾರು ಬೇಕಾದರೂ ಕೊಡಬಹುದು. ಆದರೆ ಯಾರೂ ಕೊಡುತ್ತಿಲ್ಲ, ಅಷ್ಟೆ."

ಗಂಡ ಕೇಳಿದ:

"ಯಾಕೆ ಕೊಡುತ್ತಿಲ್ಲ? ಹೇಳು, ಏನದು ಮದ್ದು?"

"ಅದು ಬಹಳ ಕಷ್ಟದ್ದು! ಯಾವುದೇ ಮನೆಯ ಮಾಲೀಕ ತನ್ನ ಮನೆಯನ್ನೂ ಅದರಲ್ಲಿರುವ ಎಲ್ಲ ವಸ್ತುಗಳನ್ನೂ ಸುಟ್ಟು ಹಾಕಿ ಅದರಿಂದ ಬರುವ ಬೂದಿಯನ್ನು ನನ್ನ ಗಾಯಕ್ಕೆ ಹಚ್ಚಿದರೆ ಆಗ ಗಾಯ ವಾಸಿಯಾಗುತ್ತೆ, ನಾನು ಇನ್ನಷ್ಟು ಕಾಲ ಬಾಳಬಹುದು."

ಕಿರಿಯ ಸೋದರ ಯೋಚನೆ ಮಾಡಿದ. ತುಂಬ ಹೊತ್ತು ಯೋಚನೆ ಮಾಡಿದ. ಆಮೇಲೆ ಹೆಂಡತಿಯನ್ನು ಕೇಳಿದ: "ಏನಂತೀಯ, ನೀನು?"

"ನನಗೇನು ಅನಿಸುತ್ತೇಂದರೆ, ಮನೆಯನ್ನಾದರೆ ನಾವು ಇನ್ನೊಂದು ಕಟ್ಟಿಕೊಳ್ಳಬಹುದು. ಮನುಷ್ಯ ಸತ್ತ ಮೇಲೆ ಮತ್ತೆ ಬದುಕಲಾರ" ಎಂದಳು ಅವಳು.

"ಸರಿ, ಹಾಗೇ ಆಗಲಿ" ಎಂದ ಅವಳ ಗಂಡ. "ಮಕ್ಕಳನ್ನೆಲ್ಲ ಹೊರಗೆ ಒಯ್ಯಿ."

ಅವರು ಮಕ್ಕಳನ್ನು ಹೊರಗೆ ಕಳುಹಿಸಿದರು. ತಾವೇ ಹೊರ ಬಂದರು. ತನ್ನ ಮನೆಯನ್ನೂ ಸಂಪತ್ತನ್ನೂ ಸುಟ್ಟು ಹಾಕುವುದು ಕಿರಿಯ ಸೋದರನಿಗೆ ದುಃಖಕರವೇ ಆಗಿತ್ತು. ಆದರೆ ಆ ಭಿಕ್ಷುಕನ ಸ್ಥಿತಿ ಇನ್ನೂ ಹೆಚ್ಚು ದುಃಖಕರವಾಗಿತ್ತು. ಅವನು ಕೊಳ್ಳಿ ತೆಗೆದುಕೊಂಡು ಮನೆಗೆ ಬೆಂಕಿ

ಹಚ್ಚಿದ. ಮನೆ ಎಲ್ಲ ಸುಟ್ಟು ಬೂದಿಯಾಗಿ ಕೆಳಕ್ಕೆ ಬಿದ್ದಿತು. ಆದರೆ ನೋಡುತ್ತಾರೆ – ಅದರ ಸ್ಥಳದಲ್ಲಿ ಒಂದು ಹೊಸ, ಬೆಳಕಿನಿಂದ ಕೂಡಿದ, ಎತ್ತರವಾದ ಮನೆ ನಿಂತಿದೆ !

ಅಜ್ಜ ನಿಂತು ತನ್ನ ಗಡ್ಡದೊಳಗೇ ಮುಸಿಮುಸಿ ನಗುತ್ತಿದ್ದ.

"ನೋಡು, ಮಗು. ನೀವು ಮೂವರು ಸೋದರರಲ್ಲಿ ನೀನೊಬ್ಬನೇ ಋಜು ಮಾರ್ಗ ಬಿಟ್ಟು ಅಡ್ಡ ಸರಿದಿಲ್ಲ, ಅನ್ನುವುದನ್ನು ನಾನೀಗ ಕಂಡೆ. ನೀನು ಯಾವತ್ತೂ ಸುಖ ಸಂತೋಷಗಳಿಂದ ಬಾಳು !"

ಆಗ ಕಿರಿಯ ಸೋದರನಿಗೆ ತಿಳಿಯಿತು ಆ ಭಿಕ್ಷುಕ ತನ್ನ ಸಾಕು ತಂದೆ ಅಂತ. ಅವನನ್ನು ಅಪ್ಪಿಕೊಳ್ಳಲು ಧಾವಿಸಿದ. ಆದರೆ ಆ ಮುದುಕ ಆಗಲೇ ಅಂತರ್ಧಾನನಾಗಿದ್ದ.

ಬುದ್ಧಿವಂತ ಹುಡುಗಿ

ಒಂದಾನೊಂದು ಕಾಲದಲ್ಲಿ ಇಬ್ಬರು ಸೋದರರು ವಾಸಿಸುತ್ತಿದ್ದರು. ಒಬ್ಬ ಬಡವ, ಇನ್ನೊಬ್ಬ ಶ್ರೀಮಂತ. ಬಡವನ ಬಳಿ ಏನೇನೂ ಇರಲಿಲ್ಲ. ಮಕ್ಕಳಿಗೆ ಹಾಲು ಕೊಡಲೂ ಅವನಿಗೆ ಶಕ್ಯವಿರಲಿಲ್ಲ. ಅವನ ದುಸ್ಥಿತಿಯನ್ನು ಕಂಡು ಶ್ರೀಮಂತ ಸೋದರ ಮರುಗಿದ. ಅವನಿಗಾಗಿ ಒಂದು ಹಸುವನ್ನು ಕೊಡುತ್ತ ಹೇಳಿದ:

"ತಗೋ ಇದನ್ನು ಉಪಯೋಗಿಸಿಕೋ. ಇದಕ್ಕೆ ದುಡ್ಡೇನೂ ಕೊಡಬೇಡ. ಬದಲು ನನ್ನ ಬಳಿ ಸ್ವಲ್ಪ ಕಾಲ ಕೆಲಸ ಮಾಡು."

ಬಡವ ಸೋದರ ಶ್ರೀಮಂತ ಸೋದರನ ಬಳಿ ಕೆಲಸ ಮಾಡಿದ, ಸಾಲ ತೀರಿಸಿದ. ಆಗ ಶ್ರೀಮಂತ ಸೋದರನಿಗೆ ಹಸು ಹೊರಟು ಹೋಯಿತಲ್ಲ ಎಂದು ದುಃಖವಾಯಿತು. ಅವನು ಹೇಳಿದ:

"ನನ್ನ ಹಸುವನ್ನು ನನಗೆ ಕೊಟ್ಟು ಬಿಡು."

ಬಡವ ಸೋದರ ಹೇಳಿದ: "ಅಲ್ಲಪ್ಪ. ಅದಕ್ಕೆ ಬದಲು ನಾನು ನಿನ್ನ ಬಳಿ ಕೆಲಸ ಮಾಡಲಿಲ್ಲವೇ?"

"ಏನು ಮಹಾ ನೀನು ಮಾಡಿದ್ದು ಕೆಲಸ! ಬೆಕ್ಕು ಅತ್ತ ಹಾಗೆ! ನನ್ನ ಹಸು ನೋಡು. ಎಷ್ಟು ಚೆನ್ನಾಗಿದೆ! ಕೊಟ್ಟುಬಿಡು, ಕೊಟ್ಟುಬಿಡು!"

ಇಷ್ಟು ಕೆಲಸ ಮಾಡಿಯೂ ಫಲವಿಲ್ಲದೆ ಹೋಗುತ್ತದಲ್ಲ ಎಂದು ಬಡವ ಸೋದರನಿಗೆ ದುಃಖವಾಯಿತು. ಅವನಿಗೆ ಹಸುವನ್ನು ಹಿಂದಿರುಗಿಸುವುದು ಇಷ್ಟವಾಗಲಿಲ್ಲ. ಅವರು ವ್ಯಾಜ್ಯ

ತೀರ್ಮಾನಕ್ಕಾಗಿ ಧಣಿಯ ಬಳಿ ಹೋದರು. ಇವರ ಜಗಳ ತೀರ್ಮಾನಿಸಲು, ಯಾರು ತಪ್ಪು ಯಾರು ಸರಿ ಎಂದು ಕಂಡುಹಿಡಿಯಲು, ಧಣಿ ಯಾಕೆ ತಲೆ ಕೆಡಿಸಿಕೊಳ್ಳುತ್ತಾನೆ!

"ಯಾರು ನನ್ನ ಒಗಟಿಗೆ ಸರಿಯಾದ ಉತ್ತರ ಹೇಳುತ್ತಾರೋ ಅವರಿಗೆ ಹಸು" ಅವನೆಂದ.

"ಹೇಳಿ, ಮಹಾ ಸ್ವಾಮಿ!"

"ಕೇಳಿ: ಯಾವುದು ಈ ಜಗತ್ತಿನಲ್ಲಿ ಎಲ್ಲಕ್ಕಿಂತ ಹೆಚ್ಚು ಹೊಟ್ಟೆ ತುಂಬಿಸುವುದು, ಯಾವುದು ಎಲ್ಲಕ್ಕಿಂತ ಹೆಚ್ಚು ವೇಗವಾಗಿ ಓಡುವುದು, ಯಾವುದು ಎಲ್ಲಕ್ಕಿಂತ ಹೆಚ್ಚು ಸುಖ ನೀಡುವುದು? ನಾಳೆ ಬನ್ನಿ – ಉತ್ತರ ಹೇಳಿ."

ಸೋದರರು ಮನೆಗಳಿಗೆ ಹಿಂದಿರುಗಿದರು. ಶ್ರೀಮಂತ ಸೋದರ ಯೋಚಿಸಿದ: "ಅಯ್ಯೋ, ಇದೆಂಥ ಒಗಟು ಇದು. ಇದು ಒಗಟು ಅಲ್ಲವೇ ಅಲ್ಲ! ಹೊಟ್ಟೆ ತುಂಬಿಸೋದು ಹಂದಿ ಮಾಂಸ, ಜೋರಾಗಿ ಓಡೋದು ಬೇಟೆ ನಾಯಿ, ಸುಖ ಕೊಡೋದು ಹಣ! ಹಸು ನನ್ನದಾಗುತ್ತೆ!"

ಬಡವ ಸೋದರ ತನ್ನ ಮನೆಗೆ ಹೋದ. ಯೋಚನೆ ಮಾಡಿದ, ಮಾಡಿದ. ಉತ್ತರ ಹೊಳೆಯಲೇ ಇಲ್ಲ. ತಲೆ ತಗ್ಗಿಸಿ ದುಃಖಿಸುತ್ತ ಕುಳಿತ. ಅವನಿಗೊಬ್ಬ ಮಗಳಿದ್ದಳು, ಮರೂಸ್ಯ ಅಂತ. ಅವಳು ತಂದೆ ಮುಖ ಬಾಡಿದ್ದುದನ್ನು ಕಂಡು ಕೇಳಿದಳು:

"ಏನಪ್ಪ, ಏನಾಯಿತು? ಯಾಕೆ ಹೀಗೆ ದುಃಖಿಸುತ್ತ ಕುಳಿತೆ? ಧಣಿ ಏನು ಹೇಳಿದರು?"

"ಧಣಿ ನಮಗೆ ಭಾರಿ ಒಗಟನ್ನೇ ಕೊಟ್ಟಿದ್ದಾರೆ – ತಲೆ ತಿನ್ನುವಂತಹುದು."

"ಏನದು ಒಗಟು?"

"ಯಾವುದು ಎಲ್ಲಕ್ಕಿಂತ ಹೆಚ್ಚು ಹೊಟ್ಟೆ ತುಂಬಿಸುವುದು, ಯಾವುದು ಎಲ್ಲಕ್ಕಿಂತ ಹೆಚ್ಚು ವೇಗವಾಗಿ ಓಡುವುದು, ಯಾವುದು ಎಲ್ಲಕ್ಕಿಂತ ಹೆಚ್ಚು ಸುಖ ನೀಡುವುದು, ಅಂತ."

"ಅಯ್ಯೋ, ಅಪ್ಪ! ಇದಕ್ಕೆ ಯಾಕೆ ಹೀಗೆ ದುಃಖಿಸುತ್ತ ಕುಳಿತೆ? ಎಲ್ಲಕ್ಕಿಂತ ಹೆಚ್ಚು ಹೊಟ್ಟೆ ತುಂಬಿಸುವುದು ಭೂಮಿ ತಾಯಿ. ಅದೇ ಅಲ್ಲವೇ ನಮ್ಮನ್ನೆಲ್ಲ ಪೋಷಿಸುತ್ತಿರುವುದು, ನಮಗೆ ತಿನ್ನಲು ಕುಡಿಯಲು ಕೊಡುತ್ತಿರುವುದು? ಎಲ್ಲಕ್ಕಿಂತ ಹೆಚ್ಚು ವೇಗವಾಗಿ ಓಡುವುದೆಂದರೆ ಮನಸ್ಸು. ಮನಸ್ಸಿನಲ್ಲಿ ಯೋಚಿಸಿಕೊಂಡು ನೀನು ಎಲ್ಲಿಗೆ ಬೇಕಾದರೂ ಕ್ಷಣ ಮಾತ್ರದಲ್ಲಿ ಹೋಗಬಹುದು. ಎಲ್ಲಕ್ಕಿಂತ ಹೆಚ್ಚು ಸುಖ ಕೊಡುವುದೆಂದರೆ ನಿದ್ರೆ. ನಿದ್ರೆಯಲ್ಲಿ ಮನುಷ್ಯನಿಗೆ ಎಂಥ ಸುಖ ಸಿಗುತ್ತೆ – ಅವನು ಎಲ್ಲವನ್ನೂ ತೊರೆಯುತ್ತಾನೆ, ಎಲ್ಲವನ್ನೂ ಮರೆಯುತ್ತಾನೆ."

"ಹೌದಲ್ಲವೇ? ನೀನು ಹೇಳಿದ್ದು ಸರಿ, ಮಗಳೇ! ನಾನು ಇದನ್ನೇ ಧಣಿಯ ಮುಂದೆ ಹೇಳ್ತೀನಿ."

ಮಾರನೆಯ ದಿನ ಇಬ್ಬರು ಸೋದರರೂ ಧಣಿಯ ಬಳಿಗೆ ಬಂದರು. ಧಣಿ ಕೇಳಿದ:

"ಹುಂ, ಏನು? ಒಗಟಿಗೆ ಉತ್ತರ ಕಂಡುಹಿಡಿದಿರಾ?"

ಶ್ರೀಮಂತ ಸೋದರ ಬೇಗ ಮುಂದೆ ಬಂದ. ತಾನೇ ಮೊದಲು ಉತ್ತರ ಹೇಳಿ ಹಸುವನ್ನು ಗಿಟ್ಟಿಸಿಕೊಂಡು ಬಿಡಬೇಕು ಅಂತ. ಅವನು ಹೇಳಿದ:

"ಎಲ್ಲಕ್ಕಿಂತ ಹೆಚ್ಚು ಹೊಟ್ಟೆ ತುಂಬಿಸುವುದು, ಧಣಿಗಳೇ, ನಿಮ್ಮ ರೊಪ್ಪದಲ್ಲಿರುವ ಹಂದಿಗಳು, ಎಲ್ಲಕ್ಕಿಂತ ಹೆಚ್ಚು ವೇಗವಾಗಿ ಓಡುವುದು ನಿಮ್ಮ ಬೇಟೆನಾಯಿಗಳು, ಎಲ್ಲಕ್ಕಿಂತ ಹೆಚ್ಚು ಸುಖ ನೀಡುವುದು ಹಣ."

"ಉಹೂಂ, ಉಹೂಂ. ಎಲ್ಲ ತಪ್ಪು!" ಎಂದ ಧಣಿ. "ನಿನ್ನ ಉತ್ತರ ಏನು?"

"ನಾನು ಹೇಳೋದು ಏನೂಂದರೆ, ಧಣಿಗಳೇ, ಭೂಮಿ ತಾಯಿಗಿಂತ ಹೆಚ್ಚು ಹೊಟ್ಟೆ ತುಂಬಿಸೋದು ಬೇರೆ ಯಾವುದೂ ಇಲ್ಲ. ಅದೇ ಎಲ್ಲರನ್ನೂ ಪೋಷಿಸುತ್ತಿರುವುದು, ಎಲ್ಲರಿಗೂ ತಿನ್ನಲು ಕುಡಿಯಲು ಕೊಡುತ್ತಿರುವುದು."

"ಭೇಷ್, ಭೇಷ್! ಸರಿಯಾಗಿ ಹೇಳಿದೆ. ಎಲ್ಲಕ್ಕಿಂತ ವೇಗವಾಗಿ ಹೋಗೋದು ಯಾವುದು?"

"ಮನಸ್ಸು, ಮಹಾ ಸ್ವಾಮಿ. ಮನಸ್ಸಿನಲ್ಲಿ ಯೋಚಿಸಿಕೊಂಡು ನಾವು ಎಲ್ಲಿಗೆ ಬೇಕಾದರೂ ಕ್ಷಣಮಾತ್ರದಲ್ಲಿ ಹೋಗಬಹುದು."

"ಸರಿಯಾಗಿ ಹೇಳಿದೆ! ಎಲ್ಲಕ್ಕಿಂತ ಹೆಚ್ಚು ಸುಖ ಕೊಡೋದು ಯಾವುದು?"

"ನಿದ್ರೆ, ಮಹಾ ಸ್ವಾಮಿ. ನಿದ್ರೆಯಲ್ಲಿ ಮನುಷ್ಯನಿಗೆ ಎಂಥ ಸುಖ ಸಿಗುತ್ತೆ – ಅವನು ಎಲ್ಲವನ್ನೂ ತೊರೆಯುತ್ತಾನೆ, ಎಲ್ಲವನ್ನೂ ಮರೆಯುತ್ತಾನೆ."

"ಎಲ್ಲ ಸರಿಯಾಗಿ ಹೇಳಿದೆ!" ಎಂದ ಧಣಿ. "ಹಸು ನಿನ್ನದು. ಆದರೆ ಹೇಳು – ಉತ್ತರ ಎಲ್ಲ ನೀನೇ ಕಂಡುಹಿಡಿದೆಯೋ, ಅಥವಾ ಬೇರೆ ಯಾರಾದರೂ ನಿನಗೆ ಸಹಾಯ ಮಾಡಿದರೋ?"

"ಹೌದು, ಧಣಿಗಳೇ, ನನಗೊಬ್ಬ ಮಗಳಿದಾಳೆ, ಮರೂಸ್ಯ ಅಂತ. ಅವಳು ನನಗೆ ಹೇಳಿಕೊಟ್ಟಳು."

ಧಣಿಗೆ ಕೋಪ ಬಾತು.

"ಹೌದಾ? ನಾನು ಎಷ್ಟು ಬುದ್ಧಿವಂತ. ಅವಳು ಒಬ್ಬ ಸಾಮಾನ್ಯ ಹುಡುಗಿ. ನನ್ನ ಒಗಟಿಗೆ ಉತ್ತರ ಹೇಳಿಬಿಟ್ಟಳಲ್ಲ! ತಾಳು, ತಾಳು! ಇಲ್ನೋಡು ಇಲ್ಲಿ ಹತ್ತು ಬೇಯಿಸಿದ ಮೊಟ್ಟೆಗಳಿವೆ. ಇವನ್ನು ನಿನ್ನ ಮಗಳಿಗೆ ಕೊಡು. ಅವಳು ಇವುಗಳ ಮೇಲೆ ಒಂದು ಕೋಳಿ ಕೂರಿಸಿ ಒಂದೇ ರಾತ್ರಿಯಲ್ಲಿ ಇವುಗಳಿಂದ ಹತ್ತು ಕೋಳಿ ಮರಿಗಳು ಹೊರಬರುವಂತೆ ಮಾಡಬೇಕು, ಅವು ದೊಡ್ಡದಾಗಿ ಬೆಳೆಯಬೇಕು, ಅವಳು ಅವುಗಳಲ್ಲಿ ಮೂರನ್ನು ಬೆಂಕಿಯಲ್ಲಿ ಸುಟ್ಟು ನನ್ನ ಬೆಳಗಿನ ಉಪಾಹಾರಕ್ಕೆ ತಿನ್ನಲು ಸಿದ್ಧವಾಗಿ ಇರಿಸಬೇಕು. ನಾನು ಬೆಳಿಗ್ಗೆ ಎದ್ದ ಕೂಡಲೇ ನೀನು ಅದನ್ನು ನನಗೆ

ತಂದು ಕೊಡಬೇಕು. ನಾನು ಕಾಯುತ್ತಿರುತ್ತೀನಿ. ಇದನ್ನು ಮಾಡದೆ ಹೋದರೆ ನಿನಗೇ ಕೇಡು."

ಬಡವ ಮನೆಗೆ ಹೋದ, ಅಳುತ್ತ ಕೂತ. ಮಗಳು ಬರುತ್ತಾಳೆ, ಕೇಳುತ್ತಾಳೆ:

"ಯಾಕಪ್ಪ ಅಳುತಿದೀಯ?"

"ಅಳದೆ ಏನು ಮಾಡಲಿ, ಮಗಳೆ! ನೋಡು ಧಣಿ ನಿನಗೆ ಈ ಹತ್ತು ಬೇಯಿಸಿದ ಮೊಟ್ಟೆಗಳನ್ನು ಕೊಟ್ಟಿದಾರೆ. ನೀನು ಇವುಗಳ ಮೇಲೆ ಕೋಳಿ ಕೂರಿಸಿ ಒಂದೇ ರಾತ್ರಿಯಲ್ಲೇ ಈ ಮೊಟ್ಟೆಗಳೆಲ್ಲ ಒಡೆದು ಮರಿಗಳು ಹೊರಬರುವಂತೆ ಮಾಡಬೇಕಂತೆ, ಅವು ದೊಡ್ಡದಾಗಿ ಬೆಳೀಬೇಕಂತೆ, ಆಮೇಲೆ ನೀನು ಅವುಗಳಲ್ಲಿ ಮೂರನ್ನು ಸುಟ್ಟು ಭಕ್ಷ್ಯ ತಯಾರಿಸಬೇಕಂತೆ. ನಾನು ನಾಳೆ ಬೆಳಿಗ್ಗೆ ಅದನ್ನು ಅವರ ಉಪಾಹಾರಕ್ಕೆ ತಗೊಂಡು ಹೋಗಿ ಕೊಡಬೇಕಂತೆ."

ಹುಡುಗಿ ನಸುನಕ್ಕು, ಅಂಬಲಿ ತುಂಬಿದ ಮಡಕೆಯೊಂದನ್ನು ತೆಗೆದುಕೊಂಡು ಹೇಳಿದಳು:

"ಅಪ್ಪ, ಈ ಅಂಬಲಿಯ ಮಡಕೆಯನ್ನು ಧಣಿಗಳಿಗೆ ತೆಗೆದುಕೊಂಡು ಹೋಗಿ ಕೊಡು. ಅವರು ಒಂದು ತುಂಡು ಭೂಮಿಯನ್ನು ಉತ್ತು ಅದರಲ್ಲಿ ಈ ಅಂಬಲಿಯನ್ನು ಬಿತ್ತಿ, ಗೋಧಿ ಬೆಳೆ ತೆಗೆದು, ಕಟಾವು ಮಾಡಿ, ಕಾಳು ಒಕ್ಕಿ, ಅವರು ಕಳಿಸಿಕೊಟ್ಟಿರುವ ಈ ಮೊಟ್ಟೆಗಳು ಒಡೆದು ಮರಿಯಾದ ಕೂಡಲೇ ಅವಕ್ಕೆ ತಿನ್ನಲು ಕೊಡಲು ಅನುವಾಗುವಂತೆ ಆ ಕಾಳುಗಳನ್ನು ನನಗೆ ಕಳಿಸಿಕೊಡಬೇಕು, ಅಂತ ಹೇಳು."

ಬಡವ ಸೋದರ ಮಗಳು ಹೇಳಿದಂತೆಯೇ ಮಾಡಿದ. ಅಂಬಲಿಯ ಮಡಕೆಯನ್ನು ಧಣಿಗೆ ತಲುಪಿಸಿ ಮಗಳು ಹೇಳಿದಂತೆಯೇ ಪದ-ಪದ ಎಲ್ಲವನ್ನೂ ಹೇಳಿದ.

ಧಣಿ ಆ ಅಂಬಲಿಯನ್ನು ನೋಡಿದ, ಮತ್ತೆ ನೋಡಿದ. ಆಮೇಲೆ ಅದನ್ನು ತನ್ನ ನಾಯಿಗಳ ಮುಂದೆ ಚೆಲ್ಲಿದ. ಅನಂತರ ಅವನು ಎಲ್ಲಿಂದಲೋ ಅಗಸೆ ಗಿಡದ ಒಂದು ದಿಂಡನ್ನು ತಂದು ಆ ಬಡವ ಸೋದರನ ಮುಂದೆ ಹಿಡಿದು ಹೇಳಿದ:

"ಈ ದಿಂಡನ್ನು ನಿನ್ನ ಮಗಳಿಗೆ ಕೊಡು. ಅವಳಿಗೆ ಹೇಳು. ಇದನ್ನು ನೆನಸಿ, ಒಣಗಿಸಿ, ಹಿಂಜಿ ನೂಲು ತೆಗೆದು ಅದರಿಂದ ನೂರು ಗಜ ಬಟ್ಟೆ ನೇಯಬೇಕು. ಅಂತ... ಮಾಡದೆ ಇದ್ದರೆ ನಿನಗೆ ಕಷ್ಟ ತಪ್ಪದು."

ಬಡವ ಸೋದರ ಮನೆಗೆ ಹೋಗಿ ಮತ್ತೆ ಅಳುತ್ತ ಕೂತ. ಮಗಳು ಬಂದು ಕೇಳುತ್ತಾಳೆ:

"ಯಾಕಪ್ಪ ಅಳುತಿದೀಯ?"

"ನೋಡಮ್ಮ, ಧಣಿಗಳು ನಿನಗೆ ಈ ಅಗಸೆ ಗಿಡದ ದಿಂಡು ಕಳಿಸಿಕೊಟ್ಟಿದಾರೆ. ನೀನು ಇದನ್ನು ನೆನಸಿ, ಒಣಗಿಸಿ, ಹಿಂಜಿ ನೂಲು ತೆಗೆದು ಅದರಿಂದ ನೂರು ಗಜ ಬಟ್ಟೆ ನೇಯಬೇಕಂತೆ."

ಮರೂಸ್ಯ ಒಂದು ಚಾಕುವನ್ನು ತೆಗೆದುಕೊಂಡು ಹೊರ ಹೋಗಿ ಒಂದು ಗಿಡದಿಂದ ಅವರ

ಅತ್ಯಂತ ತೆಳುವಾದ ರೆಂಬೆಯನ್ನು ಕಡಿದುಕೊಂಡು ಬಂದಳು. ಅದನ್ನು ಅಪ್ಪನಿಗೆ ಕೊಟ್ಟು ಹೇಳಿದಳು:

"ಅಪ್ಪ, ಈ ರೆಂಬೆಯನ್ನು ಧಣಿಗಳಿಗೆ ಕೊಟ್ಟು ಇದರಿಂದ ಒಂದು ಹಿಕ್ಕಣಿಕೆ ಹಾಗೂ ಹಂಜಿಗೋಲನ್ನು ಮಾಡಿಕೊಡುವಂತೆ ಹೇಳು. ಅದರ ಸಹಾಯದಿಂದ ನಾನು ನೂಲು ನೂತು ಅವರಿಗೆ ಬಟ್ಟೆ ನೇಯ್ದು ಕೊಡುತ್ತೇನೆ."

ಬಡವ ಸೋದರ ರೆಂಬೆಯನ್ನು ಧಣಿಗೆ ಕೊಂಡೊಯ್ದು ಕೊಟ್ಟು ಮಗಳು ಏನು ಹೇಳಿದಳೋ ಅದೆಲ್ಲವನ್ನೂ ಹೇಳಿದ. ಧಣಿ ನೋಡಿದ, ನೋಡಿದ, ಆ ರೆಂಬೆಯನ್ನು ಪಕ್ಕಕ್ಕೆ ಎಸೆದ. ಆಮೇಲೆ ಯೋಚಿಸಿದ: "ಓಹೋ, ಇವಳನ್ನು ಮೋಸಗೊಳಿಸುವುದು ಸಾಧ್ಯವಿಲ್ಲ. ಇವಳು ಎಲ್ಲರಂತಲ್ಲ ಎಂದು ಕಾಣಿಸುತ್ತೆ!" ಆಮೇಲೆ ತುಂಬ ತುಂಬ ಯೋಚನೆ ಮಾಡಿ ಆ ಬಡವನಿಗೆ ಹೇಳಿದ:

"ಹೋಗಿ ಹೇಳು ನಿನ್ನ ಮಗಳಿಗೆ: ಅವಳು ನನ್ನ ಮನೆಗೆ ಅತಿಥಿಯಾಗಿ ಬರಬೇಕು. ಹೇಗೆ ಅಂದರೆ, ನಡೆದುಕೊಂಡೂ ಬರಬಾರದು, ಸವಾರಿಮಾಡಿಕೊಂಡೂ ಬರಬಾರದು, ಬರಿಗಾಲಲ್ಲೂ ಇರಬಾರದು ಬೂಟನ್ನೂ ತೊಟ್ಟಿರಬಾರದು, ನನಗಾಗಿ ಕಾಣಿಕೆ ತರಲೂ ಬೇಕು ತರದೆ ಇರಲೂ ಬೇಕು. ಅವಳು ಇದನ್ನು ಮಾಡದೆ ಹೋದರೆ ಅವಳಿಗೆ ಕೇಡು ತಪ್ಪದು."

ಅಪ್ಪ ಮನೆಗೆ ಹೋಗಿ ಅಳುತ್ತ ಕುಳಿತ. ಮಗಳು ಬಂದಳು. ಅವನು ಅವಳಿಗೆ ಹೇಳಿದ:

"ಈಗ ಏನು ಮಾಡುತಿ, ಮಗಳೇ? ಧಣಿ ಹೀಗೆ ಆಜ್ಞೆ ಮಾಡಿದಾರೆ." ಹಾಗೆಂದು ಅವನು ಅವಳಿಗೆ ಎಲ್ಲವನ್ನೂ ಹೇಳಿದ.

ಮರೂಸ್ಯ ಹೇಳಿದಳು: "ನೀನೇನೂ ದುಃಖಿಸಬೇಡ, ಅಪ್ಪ. ಎಲ್ಲ ಸರಿಯಾಗಿ ಆಗುತ್ತೆ. ಹೋಗಿ ನನಗೆ ಒಂದು ಜೀವಂತ ಮೊಲವನ್ನು ಕೊಂಡುಕೊಂಡು ಬಾ."

ಅಪ್ಪ ಹೋಗಿ ಜೀವಂತ ಮೊಲವನ್ನು ಕೊಂಡು ತಂದ. ಮರೂಸ್ಯ ತಕ್ಷಣವೇ ಧಣಿಯ ಮನೆಗೆ ಹೊರಡಲು ಸಿದ್ಧಳಾಗ ತೊಡಗಿದಳು. ಮೊದಲು ಒಂದು ಕಾಲಿಗೆ ಒಂದು ಹರಕು ಬೂಟು ತೊಟ್ಟಳು, ಇನ್ನೊಂದು ಕಾಲನ್ನು ಬರಿದಾಗಿಯೇ ಬಿಟ್ಟಳು. ಒಂದು ಜಾರುಬಂಡಿ ತಂದು ಅದಕ್ಕೆ ಒಂದು ಹೋತ ಕಟ್ಟಿದಳು. ಆಮೇಲೆ ಒಂದು ಗುಬ್ಬಚ್ಚಿಯನ್ನು ಹಿಡಿದು ಇಟ್ಟುಕೊಂಡಳು. ಇಷ್ಟು ಮಾಡಿದ ಮೇಲೆ ಅವಳು ಮೊಲವನ್ನು ಕಂಕುಳಲ್ಲಿ ಇರಿಸಿಕೊಂಡಳು. ಗುಬ್ಬಚ್ಚಿಯನ್ನು ಕೈಯಲ್ಲಿ ಹಿಡಿದುಕೊಂಡಳು. ಒಂದು ಕಾಲನ್ನು ಜಾರುಬಂಡಿಯಲ್ಲಿರಿಸಿದಳು. ಇನ್ನೊಂದನ್ನು ನೆಲದ ಮೇಲಿರಿಸಿದಳು – ಒಂದು ಕಾಲನ್ನು ಹೋತ ಒಯ್ದರೆ ಇನ್ನೊಂದು ನಡೆದುಕೊಂಡು ಹೋಗುತ್ತೆ. ಈ ರೀತಿ ಅವಳು ಧಣಿಯ ಮನೆಗೆ ಬಂದಳು. ಅಂಗಳದಲ್ಲೇ ಅವಳನ್ನು ಕಂಡ ಧಣಿ ತಾನು ಸೋತೆನೆಂದು ತಿಳಿದ. ಅವನಿಗೆ ಕೋಪ ಬಂದಿತು. ತನ್ನ ಸೇವಕರಿಗೆ ಕೂಗಿ ಹೇಳಿದ:

"ನಾಯಿಗಳನ್ನು ಅವಳ ಮೇಲೆ ಛೂಬಿಡಿ!"

ಅವರು ಅವಳನ್ನು ಬೇಟೆನಾಯಿಗಳಿಂದ ನಾಶಗೊಳಿಸಲು ಯತ್ನಿಸಿದರು. ಆದರೆ ಅವಳು ಮೊಲವನ್ನು ಹೊರ ಬಿಟ್ಟಳು. ಬೇಟೆನಾಯಿಗಳು ಅವಳ ಮೇಲೆ ಬೀಳುವ ಬದಲು ಆ ಮೊಲವನ್ನು ಅಟ್ಟಿಸಿಕೊಂಡು ಹೋದವು. ಆಗ ಅವಳು ಮಹಲಿನೊಳಗೆ ಧಣಿಯ ಬಳಿಗೆ ಹೋಗಿ ಬಾಗಿ ವಂದಿಸಿ ಹೇಳಿದಳು:

"ನೋಡಿ, ಧಣಿಗಳೇ, ನಿಮ್ಮಲ್ಲಿಗೆ ಅತಿಥಿಯಾಗಿ ಬಂದಿದ್ದೇನೆ. ನಿಮಗೆ ಈ ಗುಬ್ಬಚ್ಚಿಯನ್ನು ಕಾಣಿಕೆಯಾಗಿ ತಂದಿದ್ದೇನೆ."

ಧಣಿ ಗುಬ್ಬಚ್ಚಿಯನ್ನು ತೆಗೆದುಕೊಳ್ಳ ಬಯಸಿ ಕೈ ನೀಡಿದ. ಅವಳು ಅದನ್ನು ಬಿಟ್ಟು ಬಿಟ್ಟಳು. ಓಹ್, ಅದು ಪುರ್ರ್ ಎಂದು ತೆರೆದ ಕಿಟಕಿಯಿಂದ ಆಚೆಗೆ ಹಾರಿ ಹೋಯಿತು.

ಅದೇ ಸಮಯಕ್ಕೆ ಸರಿಯಾಗಿ ಇಬ್ಬರು ರೈತರು ಧಣಿಯ ಬಳಿಗೆ ತಮ್ಮ ಜಗಳದ ನ್ಯಾಯ ತೀರ್ಮಾನಕ್ಕಾಗಿ ಬಂದರು. ಧಣಿ ಅವರನ್ನು ಕೇಳಿದ:

"ಏನು ಬಂದಿರಿ, ಸಜ್ಜನರೇ? ಏನು ಸಮಾಚಾರ?"

ಅವರಲ್ಲೊಬ್ಬ ಹೇಳಿದ: "ಅದು ಹೀಗೆ, ಮಹಾ ಸ್ವಾಮಿಗಳೇ! ನಾವಿಬ್ಬರೂ ಹೊಲದಲ್ಲೇ ಮಲಗಿ ರಾತ್ರಿ ಕಳೆದೆವು. ಬೆಳಿಗ್ಗೆ ಏಳುತ್ತಲೇ ನೋಡುತ್ತೇವೆ–ನನ್ನ ಕುದುರೆ ಮರಿ ಹಾಕಿದೆ!"

ಎರಡನೆಯ ವ್ಯಕ್ತಿ ಹೇಳಿದ: "ಅದು ಸುಳ್ಳು, ಮಹಾಪ್ರಭು! ಮರಿ ಹಾಕಿದುದು ನನ್ನ ಕುದುರೆ. ನೀವೇ ತೀರ್ಮಾನ ಹೇಳಿ, ಧಣಿಗಳೇ!"

ಧಣಿ ತುಂಬ ತುಂಬ ಯೋಚನೆ ಮಾಡಿದ. ಆಮೇಲೆ ಹೇಳಿದ:

"ಕುದುರೆಮರಿಯನ್ನೂ ನಿಮ್ಮ ಎರಡು ಕುದುರೆಗಳನ್ನೂ ಇಲ್ಲಿಗೆ ಕರತನ್ನಿ. ಯಾವ ಕುದುರೆಯ ಬಳಿಗೆ ಮರಿ ಓಡಿ ಹೋಗುತ್ತೋ ಅದೇ ಅದರ ತಾಯಿ."

ಎರಡು ಕುದುರೆಗಳನ್ನೂ ತಂದು ದೂರದೂರದಲ್ಲಿ ಕಟ್ಟಿ ಹಾಕಿದರು. ಆಮೇಲೆ ಮರಿಯನ್ನು ತಂದು ಅವುಗಳ ಮಧ್ಯದಲ್ಲಿರಿಸಿದರು. ಇಬ್ಬರು ರೈತರೂ ಮರಿ ತಮ್ಮ ತಮ್ಮ ಕುದುರೆಯ ಬಳಿಯೇ ಹೋಗಲೆಂದು ಆ ಮರಿಯನ್ನು ಎಷ್ಟು ಪುಸಲಾಯಿಸಿದರು! ಆದರೆ ಆ ಮರಿಗೆ ಯಾವ ಕಡೆಗೆ ಹೋಗಬೇಕೆಂಬುದೇ ತಿಳಿಯದಾಯಿತು. ಬೇರೆ ಯಾವುದೋ ಕಡೆಗೆ ಓಡಿ ಹೋಯಿತು. ಎಲ್ಲರೂ ಗೊಂದಲಕ್ಕೊಳಗಾದರು. ಈಗೇನು ಮಾಡುವುದು? ಆ ಮರಿ ಯಾರದೆಂದು ಹೇಗೆ ತೀರ್ಮಾನಿಸುವುದು? ಆಗ ಮರೂಸ್ಯ ಮುಂದೆ ಬಂದು ಹೇಳಿದಳು:

"ನೀವು ಹೀಗಲ್ಲ, ಬೇರೆ ರೀತಿಯಲ್ಲಿ ಮಾಡಿ. ಕುದುರೆಮರಿಯನ್ನು ಒಂದು ಜಾಗದಲ್ಲಿ

ಕಟ್ಟಿ ಹಾಕಿ. ಎರಡು ಕುದುರೆಗಳನ್ನೂ ಬಿಚ್ಚಿ ಬಿಟ್ಟು ಬಿಡಿ. ಯಾವ ಕುದುರೆ ಮರಿಯ ಬಳಿಗೆ ಓಡಿ ಹೋಗುತ್ತದೋ ಅದೇ ಅದರ ತಾಯಿ."

ಹಾಗೆಯೇ ಮಾಡಲಾಯಿತು. ಕುದುರೆಗಳನ್ನು ಬಿಚ್ಚಿ ಬಿಡಲಾಯಿತು. ಕುದುರೆಮರಿಯನ್ನು ತಂದು ಅವುಗಳ ಮುಂದೆ ಕಟ್ಟಿ ಹಾಕಲಾಯಿತು. ಒಂದು ಕುದುರೆ ಅದರ ಬಳಿಗೆ ಓಡಿ ಹೋಯಿತು. ಇನ್ನೊಂದು ನಿಂತಲ್ಲೇ ನಿಂತಿದ್ದಿತು.

ಈಗ ಧಣಿಗೆ ತಿಳಿಯಿತು ಅವಳು ಎಂತಹ ಬುದ್ಧಿವಂತೆ ಅಂತ. ಅವಳನ್ನು ಯಾವ ರೀತಿಯಲ್ಲೂ ಅವನು ಸೋಲಿಸದಾಗಿದ್ದ. ಅವಳನ್ನು ಶಾಂತಿಯಿಂದ ಮನೆಗೆ ಹೋಗಲು ಬಿಟ್ಟುಕೊಟ್ಟ.

ಸತ್ಯ ಹಾಗೂ ಅಸತ್ಯ

ಇಬ್ಬರು ಸೋದರರು ವಾಸಿಸುತ್ತಿದ್ದರು. ಒಬ್ಬ ಧನಿಕ. ಇನ್ನೊಬ್ಬ ಬಡವ. ಒಂದು ಸಾರಿ ಅವರು ಸಂಧಿಸಿದರು. ವಾಗ್ವಾದದಲ್ಲಿ ತೊಡಗಿದರು. ಬಡವ ಸೋದರ ಹೇಳಿದ: "ಈ ಪ್ರಪಂಚದಲ್ಲಿ ಎಷ್ಟು ಕಷ್ಟಕಾರ್ಪಣ್ಯಗಳಿವೆ. ಆದರೂ ಸತ್ಯದಲ್ಲಿ ಜೀವನ ನಡೆಸುವುದೇ ಲೇಸು !"

ಧನಿಕ ಹೇಳಿದ: "ಈ ಕಾಲದಲ್ಲಿ ನೀನು ಎಲ್ಲಿ ಸತ್ಯವನ್ನು ಕಾಣ್ತೀಯ? ಇಲ್ಲಪ್ಪ. ಈ ಪ್ರಪಂಚದಲ್ಲಿ ಸತ್ಯ ಅನ್ನೋದೇ ಇಲ್ಲ. ಈಗ ಎಲ್ಲೆಲ್ಲೂ ಕಾಣುವುದು ಒಂದೇ – ಅಸತ್ಯ. ಅಸತ್ಯದಲ್ಲಿ ಬಾಳುವುದೇ ಲೇಸು !"

ಬಡವ ತನ್ನ ವಾದವನ್ನೇ ಸಮರ್ಥಿಸಿದ: "ಇಲ್ಲ, ಅಣ್ಣ, ಸತ್ಯದಲ್ಲಿ ಬಾಳುವುದೇ ಲೇಸು !"

ಆಗ ಧನಿಕ ಹೇಳಿದ: "ಆಗಲಿ. ಪಣ ಕಟ್ಟೋಣ. ಜನರ ಬಳಿಗೆ ಹೋಗಿ ಕೇಳೋಣ. ಯಾರು ಸಿಕ್ಕಿದರೆ ಅವರನ್ನು ಕೇಳೋಣ. ಹೀಗೆ ಮೂರು ಮಂದಿಯನ್ನು ಕೇಳೋಣ. ಅವರು ನಿನ್ನ ಪರವಾಗಿ ಹೇಳಿದರೆ ನನ್ನ ಆಸ್ತಿ ಎಲ್ಲ ನಿನ್ನದು. ಅವರು ನನ್ನ ಪರವಾಗಿ ಹೇಳಿದರೆ ಆಗ ನಿನ್ನ ಆಸ್ತಿಯನ್ನೆಲ್ಲ ನಾನು ತೆಗೆದುಕೊಳ್ಳುತ್ತೇನೆ. ಆಗಬಹುದಾ?"

ಬಡವ ಹೇಳಿದ: "ಆಗಲಿ !"

ಇಬ್ಬರೂ ಮಾರ್ಗದಲ್ಲಿ ಹೊರಟರು. ಹೋಗ್ತಾರೆ, ಹೋಗ್ತಾರೆ. ಅವರಿಗೆ ಒಬ್ಬ ವ್ಯಕ್ತಿ ಸಿಕ್ಕಿದ. ಅವನು ಕೆಲಸದಿಂದ ಹಿಂದಿರುಗುತ್ತಿದ್ದ. ಅವರು ಅವನನ್ನು ನಿಲ್ಲಿಸಿದರು: "ನಮಸ್ಕಾರ, ಸಜ್ಜನನೇ !"

"ನಮಸ್ಕಾರ !"

"ನಾವು ನಿನ್ನನ್ನು ಒಂದು ಪ್ರಶ್ನೆ ಕೇಳಬೇಕೂಂತ..."

"ಕೇಳಿ ! ಕೇಳಿ !"

"ಈ ಪ್ರಪಂಚದಲ್ಲಿ ಹೇಗೆ ಬಾಳುವುದು ಉತ್ತಮ: ಸತ್ಯದಲ್ಲೋ ಅಥವಾ ಅಸತ್ಯದಲ್ಲೋ ?"

"ಅಯ್ಯೋ, ಪುಣ್ಯಾತ್ಮರಾ !" ಎಂದು ಹೇಳಿದ ಆ ವ್ಯಕ್ತಿ. "ನೀವು ಈ ಕಾಲದಲ್ಲಿ ಸತ್ಯವನ್ನು ಎಲ್ಲಿ ಕಾಣ್ತೀರ? ನೋಡಿ, ನಾನು ಎಷ್ಟು ದುಡಿದರೂ ಎಲ್ಲ ನಿಷ್ಫಲ. ಸಿಗೋ ಅಲ್ಪ ಜೀತದಲ್ಲೂ ಒಡೆಯ ಬೇರೆ ಒಂದಷ್ಟು ಕದೀತಾನೆ. ಹೀಗಿರುವಾಗ ಸತ್ಯದಲ್ಲಿ ಎಲ್ಲಿ ಬಾಳೋದು ! ಸತ್ಯದಲ್ಲಿ ಬಾಳೋದಕ್ಕಿಂತ ಅಸತ್ಯದಲ್ಲಿ ಬಾಳೋದೇ ಉತ್ತಮ !"

"ನೋಡಿದೆಯಾ, ತಮ್ಮ" ಅಂದ ಧನಿಕ ಸೋದರ. "ನನ್ನ ಮಾತು ನಿಜ ಅನ್ನೋದಕ್ಕೆ ನಿನಗೆ ಮೊದಲ ಪುರಾವೆ."

ಬಡವನ ಮುಖ ಸಪ್ಪಗಾಯಿತು. ಅವರು ಮುಂದೆ ಹೋದರು. ಅವರಿಗೆ ಒಬ್ಬ ವರ್ತಕ ಸಿಕ್ಕಿದ.

"ನಮಸ್ಕಾರ, ವರ್ತಕ ಶ್ರೇಷ್ಠ !"

"ನಮಸ್ಕಾರ !"

"ನಾವು ನಿಮ್ಮನ್ನು ಒಂದು ಪ್ರಶ್ನೆ ಕೇಳಬೇಕೂಂತ..."

"ಕೇಳಿ, ಕೇಳಿ !"

"ಈ ಪ್ರಪಂಚದಲ್ಲಿ ಹೇಗೆ ಬಾಳುವುದು ಉತ್ತಮ: ಸತ್ಯದಲ್ಲೋ ಅಥವಾ ಅಸತ್ಯದಲ್ಲೋ ?"

"ಅಯ್ಯೋ, ಪುಣ್ಯಾತ್ಮರಾ ! ಈ ಕಾಲದಲ್ಲಿ ಸತ್ಯದಿಂದ ಬಾಳೋದು ಎಲ್ಲಿ ಸಾಧ್ಯ ? ಮಾರಾಟ ಮಾಡಬೇಕಾದರೆ ನೂರು ಬಾರಿ ಸುಳ್ಳು ಹೇಳಬೇಕಾಗುತ್ತೆ, ನೂರು ಬಾರಿ ವಂಚನೆ ಮಾಡ ಬೇಕಾಗುತ್ತೆ. ಇಲ್ಲದಿದ್ದರೆ ಮಾರಾಟವನ್ನೇ ಮಾಡೋಕಾಗೊಲ್ಲ."

ಹಾಗೆಂದು ಅವನು ಮುಂದೆ ಹೊರಟ.

"ನೋಡಿದೆಯಾ, ತಮ್ಮ, ಎರಡನೆಯ ಪುರಾವೆ ನನ್ನ ಮಾತಿಗೆ" ಎಂದ ಧನಿಕ.

ಬಡವನ ಮನಸ್ಸು ಇನ್ನಷ್ಟು ಕುಂದಿತು. ಅವರು ಮುಂದೆ ಹೋದರು.

ಹೋಗುತ್ತಾರೆ, ಹೋಗುತ್ತಾರೆ, ಕೊನೆಗೆ ಒಬ್ಬ ಸಾಹುಕಾರನನ್ನು ಸಂಧಿಸುತ್ತಾರೆ.

"ನಮಸ್ಕಾರ, ಸ್ವಾಮಿ !"

"ನಮಸ್ಕಾರ !"

"ನಾವು ನಿಮ್ಮನ್ನು ಒಂದು ಮಾತು ಕೇಳಬೇಕೂಂತ..."

"ಕೇಳಿ, ಕೇಳಿ !"

"ಈ ಪ್ರಪಂಚದಲ್ಲಿ ಹೇಗೆ ಬಾಳುವುದು ಉತ್ತಮ: ಸತ್ಯದಲ್ಲೋ ಅಥವಾ ಅಸತ್ಯದಲ್ಲೋ?"

"ಅಯ್ಯೋ, ಪುಣ್ಯಾತ್ಮರಾ! ಈ ಪ್ರಪಂಚದಲ್ಲಿ ಸತ್ಯ ಅನ್ನೋದಾದರೂ ಎಲ್ಲಿದೆ? ಸತ್ಯದಲ್ಲಿ ಬಾಳೋಕೆ ಎಂದಿಗೂ ಆಗದು. ನಾನೇನಾದರೂ ಸತ್ಯದಲ್ಲಿ ಬಾಳಿದ್ದರೆ, ಹೀಗೆ..."

ಅವನು ತನ್ನ ಮಾತು ಮುಗಿಸಲೇ ಇಲ್ಲ, ಮುಂದೆ ಹೋದ.

"ನೋಡಿದೆಯಾ, ತಮ್ಮ! ನಡಿ, ಮನೆಗೆ ಹೋಗೋಣ" ಎಂದ ಧನಿಕ. "ನಿನ್ನ ಆಸ್ತಿಯುನ್ನೆಲ್ಲ ನನಗೆ ಕೊಡು!"

ಬಡವ ಮನೆಗೆ ಹೋದ. ಅವನು ದುಃಖಾಕ್ರಾಂತನಾದ. ಧನಿಕ ಅಣ್ಣ ಬಂದ. ತನ್ನ ಬಡ ತಮ್ಮನ ಖಾಲಿ ಮನೆಯೊಂದನ್ನು ಬಿಟ್ಟು ಅವನಲ್ಲಿದ್ದ ಎಲ್ಲ ಆಸ್ತಿಯನ್ನೂ ಕೊಂಡೊಯ್ದ.

"ನೀನು ಸ್ವಲ್ಪ ಕಾಲ ಬೇಕಾದರೆ ಇಲ್ಲೇ ವಾಸವಾಗಿರು. ಮನೆ ಸದ್ಯಕ್ಕೆ ನನಗೆ ಬೇಡ. ಆಮೇಲೆ ಎಲ್ಲಾದರೂ ಬೇರೆ ಕಡೆಗೆ ಹೋಗುವಿಯಂತೆ" ಎಂದ ಆ ಧನಿಕ ಸೋದರ.

ಹೀಗೆ ದುಃಖಭರಿತನಾಗಿ ತಲೆ ತಗ್ಗಿಸಿ ತನ್ನ ಕುಟುಂಬದೊಂದಿಗೆ ಬಡವ ಸೋದರ ಮನೆಯಲ್ಲಿ ಕುಳಿತ. ಮನೆಯಲ್ಲಿ ತಿನ್ನಲು ಒಂದು ಚೂರು ರೊಟ್ಟಿಯೂ ಇಲ್ಲ. ಕೆಲಸಕ್ಕೂ ಎಲ್ಲಿಗೂ ಹೋಗುವ ಹಾಗಿಲ್ಲ – ಆ ವರ್ಷ ಸುಗ್ಗಿ ಬೇರೆ ಏನೇನೂ ಚೆನ್ನಾಗಿರಲಿಲ್ಲ. ಬಡತನದ ಬವಣೆ ಸಹಿಸಲಸಾಧ್ಯವಾಗಿತ್ತು... ಮಕ್ಕಳು ಅಳುತ್ತಿದ್ದರು... ಅವನು ಒಂದು ಅಳತೆಪಾತ್ರೆ ತೆಗೆದುಕೊಂಡು ತನ್ನ ಧನಿಕ ಅಣ್ಣನ ಮನೆಗೆ ಹೋದ.

"ಅಣ್ಣ! ಈ ಅಳತೆಪಾತ್ರೆಯಲ್ಲಿ ಒಂದಿಷ್ಟು ಏನಾದರೂ ಹಿಟ್ಟು ಕೊಡು. ನಮಗೆ ತಿನ್ನೋಕೆ ಏನೂ ಇಲ್ಲ. ಮಕ್ಕಳು ಹಸಿವಿನಿಂದ ಅಳುತ್ತಿದಾರೆ!"

ಅವನು ಹೇಳಿದ: "ನಿನ್ನ ಒಂದು ಕಣ್ಣು ಕೊಡು. ನಿನಗೆ ಒಂದು ಅಳತೆ ಹಿಟ್ಟು ಕೊಡುತ್ತೇನೆ."

ಬಡವ ಯೋಚಿಸಿದ, ಯೋಚಿಸಿದ. ವಿಧಿಯಿಲ್ಲದೆ ಒಪ್ಪಿಕೊಂಡ.

"ಹುಂ. ತಗೋ ನನ್ನ ಒಂದು ಕಣ್ಣು. ಏನನ್ನಾದರೂ ಒಂದಿಷ್ಟು ತಿನ್ನಲು ಕೊಡು. ದೇವರಿಗೆ ಪ್ರೀತಿಯಾಗಲಿ!"

ಧನಿಕ ಬಡವನ ಒಂದು ಕಣ್ಣು ಕಳಚಿಕೊಂಡು ಅವನಿಗೆ ಒಂದು ಅಳತೆ ಹುಳು ಹತ್ತಿದ ಹಿಟ್ಟು ಕೊಟ್ಟ. ಅದನ್ನು ತೆಗೆದುಕೊಂಡು ಬಡವ ತನ್ನ ಮನೆಗೆ ಹೋದ. ಹೆಂಡತಿ ಅವನನ್ನು ನೋಡಿದ್ದೇ ಕೂಗಿಕೊಂಡಳು:

"ಏನು ಮಾಡಿಬಿಟ್ಟೆ ನೀನು? ಎಲ್ಲಿ ನಿನ್ನ ಕಣ್ಣು?"

"ಓಹ್, ಏನು ಮಾಡೋದು? ಅಣ್ಣ ತೆಗೆದುಕೊಂಡ!"

ಹಾಗೆಂದು ಅವನು ಅವಳಿಗೆ ಎಲ್ಲವನ್ನೂ ವಿವರಿಸಿದ. ಎಲ್ಲರೂ ಕೂತು ಅತ್ತರು. ಆಮೇಲೆ

ಜೀವನ ನಡೆಸಿಕೊಂಡು ಹೋದರು. ಅವನು ತಂದ ಹಿಟ್ಟನ್ನೇ ತಿಂದುಕೊಂಡು ಜೀವಿಸುತ್ತಿದ್ದರು.

ಒಂದು ವಾರವೋ ಏನೋ ಕಳೆಯಿತು. ಒಂದು ಅಳತೆ ಹಿಟ್ಟು ಎಷ್ಟು ದಿವಸ ಬರುತ್ತೆ? ಬರಿದಾಯಿತು. ಬಡವ ಮತ್ತೆ ಅಳತೆಪಾತ್ರೆ ಹಿಡಿದುಕೊಂಡು ಸೋದರನ ಬಳಿಗೆ ಹೋದ.

"ಪ್ರೀತಿಯ ಅಣ್ಣಾ, ಒಂದಿಷ್ಟು ಹಿಟ್ಟು ಕೊಡು ! ನೀನು ಕೊಟ್ಟಿದ್ದೆಲ್ಲ ಮುಗಿದು ಹೋಯಿತು."

"ನಿನ್ನ ಇನ್ನೊಂದು ಕಣ್ಣನ್ನೂ ಕಳಚಿಕೊಡು. ಇನ್ನೊಂದು ಅಳತೆ ಹಿಟ್ಟು ತಗೊಂಡು ಹೋಗು !"

"ಅದು ಹೇಗೆ ಸಾಧ್ಯ, ಅಣ್ಣಾ? ಕಣ್ಣಿಲ್ಲದೆ ಈ ಪ್ರಪಂಚದಲ್ಲಿ ವಾಸಮಾಡೋದು ಹೇಗೆ? ಒಂದನ್ನಾಗಲೇ ತೆಗೆದುಕೊಂಡಿದೀಯಲ್ಲ. ದಯವಿಟ್ಟು ಇನ್ನೂ ಒಂದು ಅಳತೆ ಹಿಟ್ಟು ಸುಮ್ಮನೆ ಕೊಡು !"

"ಇಲ್ಲ. ಸುಮ್ಮನೆ ನಾನು ಕೊಡೋದಿಲ್ಲ. ಕಣ್ಣು ಕಳಚಿಕೊಡು. ಆಗಷ್ಟೆ ಇನ್ನೊಂದು ಅಳತೆ ಹಿಟ್ಟು ನಿನಗೆ ಕೊಡುತ್ತೇನೆ."

ಬಡವನಿಗೆ ತುಂಬ ದುಃಖವಾಯಿತು. ಆದರೆ ಮಾಡುವುದೇನು? "ಸರಿ" ಅವನೆಂದ. "ಕಳಚಿಕೋ, ಇನ್ನೊಂದು ಕಣ್ಣನ್ನೂ. ದೇವರಿಗೆ ಪ್ರೀತಿಯಾಗಲಿ !"

ಧನಿಕ ಸೋದರ ಅವನ ಇನ್ನೊಂದು ಕಣ್ಣನ್ನೂ ಕಳಚಿಕೊಂಡು ಇನ್ನೊಂದು ಅಳತೆ ಹಿಟ್ಟು ಕೊಟ್ಟ. ಕುರುಡ ಅದನ್ನು ತೆಗೆದುಕೊಂಡು ಮನೆಯ ಕಡೆಗೆ ತಿರುಗಿದ. ಬೇಲಿಯ ಕಟಕಟೆಯನ್ನೇ ಹಿಡಿದುಕೊಂಡು ತಡವರಿಸಿಕೊಂಡು ಹೇಗೋ ಮನೆಯವರೆಗೂ ಬಂದ. ಹಿಟ್ಟನ್ನೂ ಹೊತ್ತು ತಂದ. ಹೆಂಡತಿ ಅವನನ್ನು ಕಂಡವಳೇ ಸಿಡಿಲು ಬಡಿದವಳಂತಾದಳು.

"ಏನು ನೀನು? ಎಂಥ ದುಃಖ ತಂದುಕೊಂಡೆಯಲ್ಲ! ಕಣ್ಣಿಲ್ಲದೆ ಜೀವಿಸುವುದು ಹೇಗೆ? ನಾವು ಹಿಟ್ಟಿಲ್ಲದೆಯೇ ಹೇಗೋ ಇದ್ದುಕೊಂಡಿರಬಹುದಿತ್ತು. ಆದರೆ ಈಗ..."

ಅಳುತ್ತಾಳೆ, ಗೋಳಾಡುತ್ತಾಳೆ. ಅವಳ ಆಕ್ರಂದನವನ್ನು ಮಾತುಗಳಲ್ಲಿ ವರ್ಣಿಸಿ ತಿಳಿಸುವುದು ಸಾಧ್ಯವಿಲ್ಲ.

ಕುರುಡ ಹೇಳಿದ: "ಅಳಬೇಡ ಕಣೇ ! ಏನು ಈ ಪ್ರಪಂಚದಲ್ಲಿ ನಾನೊಬ್ಬನೇಯೇ ಕಣ್ಣಿಲ್ಲದೆ ಇರುವವನು ! ಎಷ್ಟೋ ಮಂದಿ ಕುರುಡರಿದ್ದಾರೆ. ಅವರೆಲ್ಲ ದೃಷ್ಟಿ ಇಲ್ಲದೆ ಜೀವಿಸುತ್ತಿಲ್ಲವೇ?"

ಸರಿ, ಅವರು ಹೀಗೇ ಸ್ವಲ್ಪ ಕಾಲ ತಳ್ಳಿದರು. ಅವನು ತಂದಿದ್ದ ಆ ಹಿಟ್ಟೂ ಮುಗಿಯಿತು. ಒಂದು ಅಳತೆ ಹಿಟ್ಟು ಇಡೀ ಕುಟುಂಬಕ್ಕೆ ಎಷ್ಟು ಕಾಲ ಬರುತ್ತೆ !

"ಈಗ ಏನು ಮಾಡೋದು?" ಕುರುಡ ಹೆಂಡತಿಗೆ ಹೇಳಿದ. "ಇನ್ನು ಅಣ್ಣನ ಬಳಿಗೆ ನಾನು ಹೋಗಲಾರೆ. ಈಗ ಹೀಗೆ ಮಾಡು. ಹಳ್ಳಿಯ ಬೀದಿಯ ಪಕ್ಕದಲ್ಲಿ ಒಂದು ದೊಡ್ಡ ಪೊಪ್ಲಾರ್ ಮರ ಇದೆಯಲ್ಲ, ಅದರ ಕೆಳಗೆ ನನ್ನನ್ನು ಕರೆದುಕೊಂಡು ಹೋಗಿ ಕೂರಿಸು. ಅಲ್ಲೇ

ನನ್ನನ್ನು ಇಡೀ ದಿನ ಬಿಟ್ಟಿರು. ಸಾಯಂಕಾಲ ಬಂದು ಮನೆಗೆ ಕರೆದುಕೊಂಡು ಹೋಗು. ದಾರಿಯಲ್ಲಿ ಹೋಗುವವರೂ ಬರುವವರೂ ಯಾರಾದರೂ ಬಹುಶಃ ಒಂದೊಂದು ಚೂರು ರೊಟ್ಟಿ ಭಿಕ್ಷೆಯಾಗಿ ಕೊಡಬಹುದು." ಹೆಂಡತಿ ಹಾಗೆಯೇ ಮಾಡಿ ತಾನೇ ಮನೆಗೆ ಹಿಂದಿರುಗಿದಳು.

ಈ ವ್ಯಕ್ತಿ ಅಲ್ಲಿ ಹೀಗೆ ಕುಳಿತಿದ್ದ. ಯಾರು ಯಾರೋ ಅವನಿಗೆ ಚೂರುಪಾರು ಭಿಕ್ಷೆ ನೀಡಿದರು. ಸಾಯಂಕಾಲವಾಯಿತು. ಹೆಂಡತಿ ಬರಲೇ ಇಲ್ಲ. ಅವನಿಗೆ ಕೂತುಕೂತು ಸಾಕಾಯಿತು. ಒಬ್ಬನೇ ಮನೆಗೆ ಹೋಗಲು ಬಯಸಿದ. ಎದ್ದು ಹೊರಟ. ಆದರೆ ತಪ್ಪು ತಿರುಗಿದ. ಹೋದ, ಹೋದ. ಅವನಿಗೇ ಗೊತ್ತಿಲ್ಲ ಎಲ್ಲಿಗೆ ಹೋಗುತ್ತಿದ್ದ ಅಂತ. ಕೂಡಲೇ ಅವನಿಗೆ ಕೇಳಿಸಿತು – ಹತ್ತಿರದಲ್ಲೇ ಕಾಡಿನ ಮರ್ಮರ ಶಬ್ದ. ಅಯ್ಯೋ, ಹಾಗಾದರೆ ಇಡೀ ರಾತ್ರಿ ಕಾಡಿನಲ್ಲೇ ಕಳೆಯಬೇಕು ! ಅವನಿಗೆ ಕಾಡು ಪ್ರಾಣಿಗಳ ಭಯವಾಯಿತು. ಹತ್ತಿರದಲ್ಲೇ ಇದ್ದ ಓಕ್ ಮರ ಹತ್ತಿ ಕುಳಿತ.

ಸುಮಾರು ಮಧ್ಯರಾತ್ರಿಯಾಗಿರಬೇಕು ಆಗ ಆ ಸ್ಥಳಕ್ಕೆ, ಅದೇ ಮರದ ಕೆಳಕ್ಕೆ, ಕೆಲವು ದುಷ್ಟ ಶಕ್ತಿಗಳು – ಪಿಶಾಚಿಗಳು – ತಮ್ಮ ನಾಯಕನೊಂದಿಗೆ ಬಂದವು. ನಾಯಕ-ಪಿಶಾಚಿ ಉಳಿದವುಗಳನ್ನು ಅವು ಏನೇನು ಅನಿಷ್ಟ ಕೆಲಸಗಳನ್ನು ಮಾಡಿದವು ಎಂದು ವಿಚಾರಿಸ ತೊಡಗಿತು. ಒಂದು ಪಿಶಾಚಿ ಹೇಳಿತು:

"ನಾನು ಏನು ಮಾಡಿದೆ ಅಂದರೆ – ಒಬ್ಬ ಅಣ್ಣ ಅವನ ತಮ್ಮನಿಂದ ಎರಡು ಅಳತೆ ಹಿಟ್ಟಿಗೆ ಬದಲು ಜೀವಂತ ಕಣ್ಣುಗಳನ್ನೇ ಕಿತ್ತುಕೊಳ್ಳೋ ಹಾಗೆ ಮಾಡಿದೆ."

ನಾಯಕ-ಪಿಶಾಚಿ ಹೇಳಿತು: "ಚೆನ್ನಾದ ಕೆಲಸ ಮಾಡಿದೆ. ಆದರೂ ಅದೇನೂ ಪೂರ್ತಿ ಚೆನ್ನಾಗಲಿಲ್ಲ !"

"ಅದು ಹೇಗೆ?"

"ಕಣ್ಣು ಕಳೆದುಕೊಂಡ ಆ ಕುರುಡ ತನ್ನ ಕಣ್ಣುಗಳಿಗೆ ಈ ಮರದ ಕೆಳಗೆ ಹುಲ್ಲಿನ ಮೇಲೆ ಹರಡಿರುವ ಇಬ್ಬನಿಯನ್ನು ಹಚ್ಚಿಕೊಂಡರೆ ಅವನಿಗೆ ಮತ್ತೆ ದೃಷ್ಟಿ ಬಂದು ಬಿಡುತ್ತೆ !"

"ಅದು ಯಾರಿಗೆ ಗೊತ್ತು? ಅದನ್ನು ಯಾರು ಕೇಳಿದಾರೆ?"

"ಸರಿ. ನೀನು ಏನು ಮಾಡಿದೆ?" ಎಂದು ನಾಯಕ–ಪಿಶಾಚಿ ಇನ್ನೊಂದು ಪಿಶಾಚಿಯನ್ನು ಕೇಳಿತು.

"ನಾನು ಒಂದು ಹಳ್ಳಿಯಲ್ಲಿದ್ದ ನೀರನ್ನೆಲ್ಲ ಒಣಗಿಸಿ ಬಿಟ್ಟೆ. ಅಲ್ಲಿ ಒಂದು ಹನಿ ನೀರನ್ನೂ ಬಿಡಲಿಲ್ಲ. ಅಲ್ಲಿನ ಜನ ಈಗ ನೀರನ್ನು ಮೂವತ್ತು-ನಾಲ್ವತ್ತು ವೆರ್ಸ್ಟ್ ದೂರದಿಂದ ತರಬೇಕು. ಅನೇಕರು ಬಾಯಾರಿಕೆಯಿಂದ ಸಾಯ್ತಿದಾರೆ."

"ಚೆನ್ನಾದ ಕೆಲಸಮಾಡಿದೆ. ಆದರೂ ಅದೇನೂ ಪೂರ್ತಿ ಚೆನ್ನಾಗಲಿಲ್ಲ!"

"ಅದು ಹೇಗೆ?"

"ಹಳ್ಳಿಯ ಹತ್ತಿರದಲ್ಲೇ ಇರೋ ನಗರದಲ್ಲಿ ಒಂದು ಬಂಡೆ ಇದೆ. ಅದನ್ನು ಯಾರಾದರೂ ಪಕ್ಕಕ್ಕೆ ಸರಿಸಿದರೆ, ಅದರ ಕೆಳಗಿನಿಂದ ನೀರು ಚಿಮ್ಮಿ ಬರುತ್ತೆ. ಸುತ್ತಮುತ್ತ ಎಲ್ಲ ಹರಡಿಕೊಳ್ಳುತ್ತೆ!"

"ಅದು ಯಾರಿಗೆ ಗೊತ್ತು? ಅದನ್ನು ಯಾರು ಕೇಳಿದಾರೆ?"

"ಸರಿ, ನೀನು ಏನು ಮಾಡಿದೆ?" ಎಂದು ನಾಯಕ-ಪಿಶಾಚಿ ಮೂರನೆಯದನ್ನು ಕೇಳಿತು.

"ಒಂದಾನೊಂದು ರಾಜ್ಯದಲ್ಲಿ ರಾಜನಿಗೆ ಒಬ್ಬಳೇ ಒಬ್ಬ ಮಗಳಿದಾಳೆ. ನಾನು ಅವಳನ್ನು ಕುರುಡಳನ್ನಾಗಿ ಮಾಡಿಬಿಟ್ಟೆ. ಯಾವ ಔಷಧಿಯೂ ಅವಳನ್ನು ಗುಣಪಡಿಸೋಕೆ ಆಗೋಲ್ಲ."

"ಚೆನ್ನಾದ ಕೆಲಸ ಮಾಡಿದೆ. ಆದರೂ ಅದೇನೂ ಪೂರ್ತಿ ಚೆನ್ನಾಗಲಿಲ್ಲ!"

"ಅದು ಹೇಗೆ?"

"ಈ ಮರದ ಕೆಳಗಿರೋ ಇಬ್ಬನಿಯನ್ನು ಅವಳ ಕಣ್ಣಿಗೆ ಹಚ್ಚಿದರೆ ಅವಳಿಗೆ ದೃಷ್ಟಿ ಮತ್ತೆ ಬಂದು ಬಿಡುತ್ತೆ!"

"ಅದು ಯಾರಿಗೆ ಗೊತ್ತು? ಅದನ್ನು ಯಾರು ಕೇಳಿದಾರೆ?"

ಮನುಷ್ಯ ಮರದ ಮೇಲೆ ಕುಳಿತು ಇವೆಲ್ಲವನ್ನೂ ಕೇಳಿಸಿಕೊಂಡ. ಆ ಪಿಶಾಚಿಗಳು ಹೊರಟು ಹೋದ ಮೇಲೆ ಅವನು ಆ ಮರದ ಕೆಳಗಿದ್ದ ಇಬ್ಬನಿಯಿಂದ ತನ್ನ ಕಣ್ಣುಗಳನ್ನು ಉಜ್ಜಿಕೊಂಡ – ತಕ್ಷಣವೇ ಅವನಿಗೆ ದೃಷ್ಟಿ ಬಂದಿತು. ಆಗ ಅವನು ತನ್ನಲ್ಲೇ ಹೇಳಿಕೊಂಡ: "ಈಗ ಹೋಗಿ ಜನರಿಗೆ ಸಹಾಯ ಮಾಡ್ತೀನಿ." ಆ ಮರದ ಕೆಳಗಿದ್ದ ಒಂದಿಷ್ಟು ಇಬ್ಬನಿಯನ್ನು ತೊಗಟೆಯಲ್ಲಿ ಸಂಗ್ರಹಿಸಿಕೊಂಡು ಅವನು ಹೊರಟ.

ಅವನು ಯಾವ ಹಳ್ಳಿಯಲ್ಲಿ ನೀರೆಲ್ಲ ಇಂಗಿ ಹೋಗಿತ್ತೋ ಆ ಹಳ್ಳಿಗೆ ಬಂದ. ನೋಡ್ತಾನೆ – ಅಲ್ಲೊಬ್ಬ ಮುದುಕಿ ಹೋಗ್ತಿದಾಳೆ. ಅವಳು ಒಂದು ಅಡ್ಡೆಯಲ್ಲಿ ಒಂದು ಬಕೆಟ್ ಇಟ್ಟುಕೊಂಡು ನೀರು ಹೊತ್ತುಕೊಂಡು ಹೋಗ್ತಿದಾಳೆ. ಅವನು ಅವಳ ಬಳಿಗೆ ಹೋಗಿ ಕೇಳಿದ:

"ಅಜ್ಜಿ, ನನಗೆ ಬಾಯಾರಿಕೆ. ಸ್ವಲ್ಪ ನೀರು ಕೊಡ್ತೀಯ ಕುಡಿಯೋಕೆ!"

"ಅಯ್ಯೋ, ಮಗು, ಏನು ಹೇಳ್ತೀಯ? ನಾನು ಈ ನೀರನ್ನು ಮೂವತ್ತು ವೆರ್ಸ್ಟ್ ದೂರದಿಂದ ಹೊತ್ತು ತರುತ್ತಿದೀನಿ. ಇದರಲ್ಲೂ ಅರ್ಧ ಎಲ್ಲ ಆಗಲೇ ತುಳುಕಿ ಚೆಲ್ಲಿ ಹೋಗಿದೆ. ನನ್ನ ಕುಟುಂಬವೋ ದೊಡ್ಡದು. ನೀರಿಲ್ಲದೆ ಸಾಯ್ತಾರೆ!"

"ನಾನು ನಿಮ್ಮ ಹಳ್ಳಿಗೇ ಬರುತ್ತಿದೀನಿ, ಅಜ್ಜಿ. ಎಲ್ಲರಿಗೂ ನೀರು ಸಿಗೋ ಹಾಗೆ ಮಾಡ್ತೀನಿ."

ಅವಳು ಅವನಿಗೆ ಕುಡಿಯಲು ಸ್ವಲ್ಪ ನೀರು ಕೊಟ್ಟಳು. ಅವಳಿಗೆ ಎಷ್ಟು ಆನಂದವಾಯಿತು ಅಂದರೆ ತಕ್ಷಣವೇ ಹಳ್ಳಿಗೆ ಓಡಿ ಹೋಗಿ ಎಲ್ಲರಿಗೂ ಈ ವ್ಯಕ್ತಿಯ ವಿಷಯ ಹೇಳಿದಳು. ಕೆಲವರು ನಂಬಿದರು, ಕೆಲವರು ನಂಬಲಿಲ್ಲ. ಆದರೂ ಎಲ್ಲರೂ ಅವನನ್ನು ಸಂಧಿಸಲು ಓಡೋಡಿ ಬಂದರು. ಅವನಿಗೆ ಬಾಗಿ ನಮಸ್ಕರಿಸಿದರು: "ಸತ್ಪುರುಷನೇ, ನಮ್ಮನ್ನು ಈ ಕ್ರೂರ ಸಾವಿನಿಂದ ರಕ್ಷಿಸು !"

"ಆಗಲಿ" ಅವನೆಂದ. "ಆದರೆ ನೀವು ನನಗೆ ಸಹಾಯ ಮಾಡಬೇಕು. ನನ್ನನ್ನು ನಿಮ್ಮ ಹಳ್ಳಿಗೆ ಸಮೀಪವಿರುವ ನಗರಕ್ಕೆ ಕರೆದುಕೊಂಡು ಹೋಗಿ."

ಅವರು ಅವನನ್ನು ಅಲ್ಲಿಗೆ ಕರೆದೊಯ್ದರು. ಅವನು ಅಲ್ಲಿ ಹುಡುಕ ತೊಡಗಿದ – ಆ ಬಂಡೆಯನ್ನು ಕಂಡುಹಿಡಿದ. ಎಲ್ಲರೂ ಸೇರಿ ಅದನ್ನು ಪಕ್ಕಕ್ಕೆ ಸರಿಸಿದರು. ಅದರ ಕೆಳಗಿನಿಂದ ನೀರು ಚಿಮ್ಮಿ ಹೊರಬಂತು. ಹ್ಯಾಗೆ ಹರಿದುಕೊಂಡು ಬಂತು – ಎಲ್ಲ ಬಾವಿಗಳೂ ಎಲ್ಲ ಕೊಳಗಳೂ ಎಲ್ಲ ಹೊಂಡಗಳೂ ನೀರಿನಿಂದ ತುಂಬಿಕೊಂಡವು ! ಜನರಿಗೆ ಭಾರಿ ಸಂತೋಷವಾಯಿತು. ಆ ವ್ಯಕ್ತಿಗೆ ತಮ್ಮ ಕೃತಜ್ಞತೆ ಸಲ್ಲಿಸಿದರು. ಅವನಿಗೆ ಬೇಕಾದಷ್ಟು ಹಣ ಮತ್ತಿತರ ವಸ್ತುಗಳನ್ನು ಕೊಟ್ಟರು. ಅವನು ಕುದುರೆ ಏರಿ ಮುಂದೆ ಹೊರಟ. ದಾರಿಯಲ್ಲಿ ಎಲ್ಲರನ್ನೂ, ರಾಜಕುಮಾರಿ ಹಾಸಿಗೆ ಹಿಡಿದು ಮಲಗಿರುವ ರಾಜ್ಯ ಎಲ್ಲಿದೆ, ಎಂದು ವಿಚಾರಿಸುತ್ತ ಹೋದ. ದೀರ್ಘ ಕಾಲವೋ ಸ್ವಲ್ಪ ಕಾಲವೋ ಪ್ರಯಾಣ ಮಾಡಿಕೊಂಡು ಅವನು ಅಂತೂ ಆ ರಾಜ್ಯ ತಲುಪಿದ. ರಾಜನ ಅರಮನೆಗೆ ಹೋಗಿ ಅಲ್ಲಿದ್ದ ಭಟರನ್ನು ಕೇಳಿದ: "ನಿಮ್ಮ ರಾಜನ ಮಗಳಿಗೆ ಮೈ ಚೆನ್ನಾಗಿಲ್ಲ ಅಂತ ಕೇಳಿದೆ. ನಾನು ಅವಳನ್ನು ಗುಣಪಡಿಸಬಲ್ಲೆ !"

"ಅಯ್ಯೋ, ನಿನಗೆಲ್ಲಿ ಆಗುತ್ತೆ ! ಮಹಾಮಹಾ ಪಂಡಿತರಿಗೇ ಅವಳನ್ನು ಗುಣಪಡಿಸಲು ಆಗಲಿಲ್ಲ. ನಿನ್ನ ಕೈಲೂ ಏನೂ ಮಾಡೋಕೆ ಆಗೊಲ್ಲ."

"ಆದರೂ ರಾಜನಿಗೆ ವಿಷಯ ತಿಳಿಸಿ !"

ಅವರಿಗೆ ಇಷ್ಟವಿರಲಿಲ್ಲ. ಆದರೂ ಅವನು ಹಟ ಹಿಡಿದ: "ನೀವು ಹೋಗಿ ತಿಳಿಸಿ ಬಿಡಿ. ಅಷ್ಟೇ ಸಾಕು !"

ಅವರು ಹೋಗಿ ತಿಳಿಸಿದರು. ರಾಜ ಅವನನ್ನು ಅರಮನೆಯ ಒಳಗೆ ಬರುವಂತೆ ಹೇಳಿದ.

"ನೀನು ನನ್ನ ಮಗಳನ್ನು ಗುಣಪಡಿಸಬಲ್ಲೆಯಾ ?" ರಾಜ ಕೇಳಿದ.

"ಬಲ್ಲೆ" ಉತ್ತರಿಸಿದ.

"ಸರಿ, ಪ್ರಯತ್ನ ಮಾಡು. ನಿನಗೆ ಏನು ಬೇಕೋ ಎಲ್ಲ ಕೊಡುತ್ತೇನೆ."

ಅವನು ರಾಜಕುಮಾರಿ ಮಲಗಿದ್ದ ಕೋಣೆಗೆ ಹೋದ. ತಾನು ತಂದಿದ್ದ ಇಬ್ಬನಿಯನ್ನು ಅವಳ ಕಣ್ಣಿಗೆ ತಿಕ್ಕಿದ. ತಕ್ಷಣವೇ ಅವಳಿಗೆ ದೃಷ್ಟಿ ಬಂದಿತು. ರಾಜನಿಗೆ ಎಷ್ಟು ಮಹದಾನಂದವಾಯಿತು. ಹೇಳಿ ತಿಳಿಸುವುದು ಸಾಧ್ಯವಿಲ್ಲ! ರಾಜ ಅವನಿಗೆ ಎಷ್ಟು ಸಂಪತ್ತನ್ನು ಬಳುವಳಿಯಾಗಿ ನೀಡಿದನೆಂದರೆ, ಅವನು ಅವುಗಳನ್ನು ಅನೇಕ ಬಂಡಿಗಳಲ್ಲಿ ತುಂಬಿಕೊಂಡು ಸಾಗಿಸಬೇಕಾಯಿತು.

ಈಮಧ್ಯೆ ಅವನ ಹೆಂಡತಿ ತುಂಬ ದುಃಖಿಸಿದಳು, ಗೋಳಾಡಿದಳು. ಗಂಡ ಎಲ್ಲಿ ಅನ್ನುವುದೇ ಅವಳಿಗೆ ತಿಳಿಯದು. ಅವನು ಆಗಲೇ ಈ ಪ್ರಪಂಚದಲ್ಲಿ ಇಲ್ಲ ಎಂದೇ ಭಾವಿಸಿಕೊಂಡಿದ್ದಳು. ಆಗ ಇದ್ದಕ್ಕಿದ್ದಂತೆ ಅವನು ಬರುತ್ತಾನೆ. ಕಿಟಕಿಯ ಬಳಿ ನಿಂತು ಕೂಗುತ್ತಾನೆ: "ಹೆಂಡತಿ, ಬಾಗಿಲು ತೆರೆ!"

ಅವನ ಧ್ವನಿಯಿಂದ ತನ್ನ ಪತಿ ಬಂದನೆಂದು ಅವಳು ತಿಳಿದಳು. ತುಂಬ ಸಂತೋಷಪಟ್ಟಳು. ಓಡಿ ಹೋಗಿ ಬಾಗಿಲು ತೆರೆದಳು. ಅವನನ್ನು ಒಳಕ್ಕೆ ಕರೆದೊಯ್ದಳು. ಅವನಿನ್ನೂ ಕುರುಡ ಎಂದೇ ಅವಳ ಭಾವನೆ.

"ದೀಪ ಹಚ್ಚು!" ಅವನು ಹೇಳಿದ.

ಅವಳು ದೀಪ ಹಚ್ಚಿದಳು. ಅವನನ್ನು ನೋಡಿದ್ದೇ ಕೈ ಚಪ್ಪಾಳೆ ತಟ್ಟಿದಳು – ದೃಷ್ಟಿ ಬಂದಿದೆ! "ಓಯ್, ದೇವರೇ! ಎಷ್ಟು ಚೆನ್ನಾಗಿ ಆಗಿಬಿಟ್ಟಿದ್ದೀಯ! ಹೇಗಾಯಿತು ಇದೆಲ್ಲ? ಹೇಳು!"

"ತಾಳು, ಹೆಂಡತಿ. ಮೊದಲು ನಾನು ತಂದಿರುವ ಸಂಪತ್ತನ್ನೆಲ್ಲ ಒಳಕ್ಕೆ ತರೋಣ."

ಎಷ್ಟೊಂದು ಸಂಪತ್ತನ್ನು ಒಳ ತಂದರು. ಇದರ ಮುಂದೆ ಅವನ ಧನಿಕ ಸೋದರನ ಸಂಪತ್ತು ತೃಣ ಸಮಾನ!

ಅವರು ಶ್ರೀಮಂತರಾಗಿ ಜೀವನ ನಡೆಸ ತೊಡಗಿದರು. ಧನಿಕ ಸೋದರನಿಗೆ ಈ ವಿಷಯ ತಿಳಿಯಿತು. ಅವನು ಓಡೋಡಿ ಬಂದ: "ಇದು ಹೇಗೆ ಹೀಗೆ, ತಮ್ಮ? ನೀನು ಹೇಗೆ ಮತ್ತೆ ದೃಷ್ಟಿ ಪಡೆದೆ, ಹೇಗೆ ಇಷ್ಟು ಶ್ರೀಮಂತನಾದೆ?"

ಅವನು ಎಲ್ಲವನ್ನೂ ರಹಸ್ಯವಾಗಿಡದೆ ವಿವರಿಸಿ ತಿಳಿಸಿದ.

ಈಗ ಆ ಧನಿಕ ಅಣ್ಣನಿಗೆ ತಾನೂ ಇನ್ನಷ್ಟು ಸಂಪತ್ತು ಪಡೆಯಬೇಕೆಂದು ಆಸೆಯಾಯಿತು. ರಾತ್ರಿಯಾದಾಗ ಯಾರಿಗೂ ಕಾಣದಂತೆ ಅದೇ ಕಾಡಿಗೆ ಹೋಗಿ ಅದೇ ಮರದ ಮೇಲೆ ಹತ್ತಿ ಕುಳಿತ. ಮಧ್ಯ ರಾತ್ರಿ ಪಿಶಾಚಿಗಳು ತಮ್ಮ ನಾಯಕ-ಪಿಶಾಚಿಯೊಂದಿಗೆ ಬಂದವು. ಅವು ತಮ್ಮಲ್ಲೇ ಮಾತನಾಡಿಕೊಂಡವು:

"ಏನಿದು? ಯಾರೂ ಕೇಳಿಸಿಕೊಂಡಿಲ್ಲ. ಯಾರಿಗೂ ತಿಳಿದಿಲ್ಲ. ಆದರೂ ಆಗಲೇ ಕುರುಡ

ಸೋದರನಿಗೆ ದೃಷ್ಟಿ ಬಂತು. ಬಂಡೆಯ ಕೆಳಗಿನಿಂದ ನೀರು ಹರಿದು ಬರುತ್ತಿದೆ, ರಾಜಕುಮಾರಿ ಮತ್ತೆ ಆರೋಗ್ಯವಂತಳಾಗಿದ್ದಾಳೆ! ಯಾರೋ ನಮ್ಮ ಮಾತನ್ನು ಕದ್ದು ಕೇಳುತ್ತಿರಬಹುದೆ? ಹುಡುಕಿ ನೋಡೋಣ!"

ಅವು ಹುಡುಕ ತೊಡಗಿದವು. ಮರ ಹತ್ತಿದವು. ಅಲ್ಲಿ ಕುಳಿತಿದಾನೆ ಧನಿಕ ಸೋದರ! ಅವು ಅವನನ್ನು ಹಿಡಿದು ತುಂಡುತುಂಡು ಮಾಡಿದವು.

ಓದುಗರಿಗೆ

ಈ ಕೃತಿಯ ಅನುವಾದ, ಮುದ್ರಣ ಹಾಗೂ ರಚನೆ ಕುರಿತು ನಿಮ್ಮ ಅಭಿಪ್ರಾಯ ಅಭಿಲಾಷೆಗಳನ್ನು ತಿಳಿಸಿ ನಮಗೆ ಪತ್ರ ಬರೆದಲ್ಲಿ ನಾವು ಉಪಕೃತರು.

ನಮ್ಮ ವಿಳಾಸ:

Raduga Publishers
17, Zubovsky Boulevard,
Moscow, USSR

ನಮ್ಮ ಪ್ರತಿಗಳು ದೊರೆಯುವ ಸ್ಥಳ:

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್,
ಬಿಆರ್‌ಸಿ ಕಾಂಪ್ಲೆಕ್ಸ್
ಎಸ್‌ಸಿ ರೋಡ್
ಬೆಂಗಳೂರು – 560009

ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ,
ಬೆಂಗಳೂರು – 560001

ಕೆಂಪೇಗೌಡ ಸರ್ಕಲ್,
ಬೆಂಗಳೂರು – 560009

ಕೆಎಸ್‌ಆರ್ ರೋಡ್,
ಮಂಗಳೂರು – 575001